ಶುಕ್ರವಾರ, ಮೇ 5, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ನಟಿ ರೀಷ್ಮಾ ನಾಣಯ್ಯ 'ಮಚ್‌ಲಕ್ಷ್ಮಿ'ಯಾಗಿ ಇದೀಗ ಧ್ರುವ ಸರ್ಜಾ ಜೊತೆಗೆ 'KD' ಅಂಗಳಕ್ಕೆ ಇಳಿದಿದ್ದಾರೆ

ಭ್ರಷ್ಟಾಚಾರ ರೇಟ್ ಕಾರ್ಡ್

2019 - 2023

ಸಿಎಂ ಹುದ್ದೆ	₹2500 ಕೋಟಿ
ಮಂತ್ರಿಗಳ ಹುದ್ದೆ	₹500 ಕೋಟಿ

ನೇಮಕಾತಿ ಮತ್ತು ವರ್ಗಾವಣೆ ದರ

ಕೆಎಸ್‌ಡಿಎಲ್	₹5 ಕೋಟಿ – ₹15 ಕೋಟಿ
ಇಂಜಿನಿಯರ್	₹1 ಕೋಟಿ – ₹5 ಕೋಟಿ
ಸಬ್ ರಿಜಿಸ್ಟ್ರಾರ್	₹50 ಲಕ್ಷ – ₹5 ಕೋಟಿ
ಬೆಸ್ಕಾಂ	₹1 ಕೋಟಿ
ಪಿಎಸ್‌ಐ	₹80 ಲಕ್ಷ
ಸಹಾಯಕ ಪ್ರಾಧ್ಯಾಪಕ	₹50 ಲಕ್ಷ – ₹70 ಲಕ್ಷ
ಉಪನ್ಯಾಸಕ	₹30 ಲಕ್ಷ – ₹50 ಲಕ್ಷ
ಎಫ್‌ಡಿಎ	₹30 ಲಕ್ಷ
ಸಹಾಯಕ ಇಂಜಿನಿಯರ್	₹30 ಲಕ್ಷ
ಬಮುಲ್	₹25 ಲಕ್ಷ
ಪಿಡಬ್ಲ್ಯುಡಿ ಸಹಾಯಕ ಇಂಜಿನಿಯರ್	₹10 ಲಕ್ಷ
ಪೊಲೀಸ್ ಪೇದೆ	₹10 ಲಕ್ಷ

ಹುದ್ದೆಗಳ ದರ

ಬಿಡಿಎ ಆಯುಕ್ತ	₹10 ಕೋಟಿ – ₹15 ಕೋಟಿ
ಕೆಪಿಎಸ್‌ಸಿ ಅಧ್ಯಕ್ಷ	₹5 ಕೋಟಿ – ₹15 ಕೋಟಿ
ಡಿಸಿ ಮತ್ತು ಎಸ್‌ಪಿ	₹5 ಕೋಟಿ – ₹15 ಕೋಟಿ
ಉಪಕುಲಪತಿ	₹5 ಕೋಟಿ – ₹10 ಕೋಟಿ
ಎಸಿ ಮತ್ತು ತಹಸೀಲ್ದಾರ್	₹50 ಲಕ್ಷ – ₹3 ಕೋಟಿ

ಸರ್ಕಾರದ ಡೀಲ್‌ಗಳು % ಶೇಕಡಾ

ಸರ್ಕಾರದ ಡೀಲ್‌ಗಳು	ಶೇಕಡಾ
ಕೋವಿಡ್ ಕಿಟ್ ಪೂರೈಕೆ	75%
ಪಿಡಬ್ಲ್ಯುಡಿ ಗುತ್ತಿಗೆಗಳು	40%
ಮಠಕ್ಕೆ ಅನುದಾನ	30%
ಉಪಕರಣಗಳ ಪೂರೈಕೆ	40%
ಮೊಟ್ಟೆ ಪೂರೈಕೆ	30%
ರಸ್ತೆ ಗುತ್ತಿಗೆಗಳು	40%

ಕಳೆದ ನಾಲ್ಕೇ ವರ್ಷಗಳಲ್ಲಿ 40% ಸರ್ಕಾರ ಕನ್ನಡಿಗರಿಂದ

₹1,50,000 ಕೋಟಿಗೂ

ಹೆಚ್ಚು ಹಣ ಲೂಟಿ ಮಾಡಿದೆ. ಇದೇ ಗತಿಯಲ್ಲಿ ಸಾಗಿದರೆ ನಮ್ಮ ರಾಜ್ಯವೇ ನಾಶವಾಗುತ್ತೆ.

ಈ ಲೂಟಿಯನ್ನ ನಿಲ್ಲಿಸಿ!

ಬದಲಾವಣೆಗೆ, ಅಭಿವೃದ್ಧಿಗೆ ಹಾಗೂ ಪ್ರಗತಿಗೆ ನಿಮ್ಮ ಮತ ನೀಡಿ.

ಕಾಂಗ್ರೆಸ್‌ಗೆ ಮತ ನೀಡಿ.

ಕೈ ಬಟನ್ ಒತ್ತಿ ಕಾಂಗ್ರೆಸ್ ಗೆಲ್ಲಿಸಿ

ಗೃಹಲಕ್ಷ್ಮಿ – ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಗೃಹ ಜ್ಯೋತಿ – ನಿಮ್ಮ ಮನೆಗೆ 200 ಯೂನಿಟ್ ವಿದ್ಯುತ್ ಪ್ರತಿ ತಿಂಗಳು ಉಚಿತ

ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

ಅನ್ನಭಾಗ್ಯ – 10kg ಬಡವರಿಗೆ ಪ್ರತಿ ತಿಂಗಳು ತಲಾ 10kg ಅಕ್ಕಿ ಉಚಿತ

ಉಚಿತ ಪ್ರಯಾಣ ನಮ್ಮ ಪ್ರಮಾಣ – ಮಹಿಳೆಯರಿಗೆ ಬಸ್ ಸಂಚಾರ ಉಚಿತ

ರಾಜಾಜಿ ನಗರ, ಆರ್‌.ಆರ್ ನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಎಸ್‌.ರವಿಪ್ರಕಾಶ್, ವಿಜಯಕುಮಾರ್ ಎಸ್‌.ಕೆ.** ಅವರು ನಡೆಸಿದ ಕಿರು ಸಂದರ್ಶನಗಳು ಇಲ್ಲಿವೆ.

ಎಸ್‌.ಸುರೇಶ್‌ಕುಮಾರ್ (ಬಿಜೆಪಿ)

● ಜನ ಯಾವ ಕಾರಣಕ್ಕಾಗಿ ನಿಮಗೆ ಮತ ನೀಡಬೇಕು ?

ನಾನು ಸ್ಥಳೀಯ ಅಭ್ಯರ್ಥಿ. ಜನರಿಗೆ ಬೇಕೆಂದಾಗ, ಅವರ ಸಮಸ್ಯೆಗಳನ್ನು ಪರಿಹರಿಸಲು ತಕ್ಷಣಕ್ಕೆ ಸಿಗುತ್ತೇನೆ. ಕ್ಷೇತ್ರದ ಜನರು ಇಷ್ಟು ವರ್ಷಗಳ ಕಾಲ ನನ್ನನ್ನು ನೋಡಿದ್ದಾರೆ ಮತ್ತು ಅಭಿವೃದ್ಧಿ ಕೆಲಸಗಳನ್ನೂ ಗುರುತಿಸಿದ್ದಾರೆ. ‘ಜಂಟಲ್‌ಮನ್’ ಎಂದೇ ಜನ ನನ್ನನ್ನು ಕರೆಯುತ್ತಾರೆ. ಎಂದೂ ಯಾರ ಜತೆಗೂ ಕೆಟ್ಟದಾಗಿ ನಡೆದುಕೊಂಡವನೂ ಅಲ್ಲ. ಕ್ಷೇತ್ರದ ಜನರನ್ನು ಪ್ರತಿನಿಧಿಸಲು ಎಲ್ಲ ಯೋಗ್ಯತೆಗಳನ್ನೂ ಹೊಂದಿದ್ದೇನೆ.

● ಗೆಲ್ಲುವ ವಿಶ್ವಾಸವಿದೆಯೇ? ಇದ್ದರೆ ಕಾರಣಗಳೇನು?

ಬಿಜೆಪಿ ಎರಡು ಬಾರಿಯೂ ಬಹುಮತ ಪಡೆದಿರಲಿಲ್ಲ. ಈ ಬಾರಿ ಬಿಜೆಪಿಗೆ ಬಹುಮತ ನೀಡಬೇಕು ಎಂಬ ತೀರ್ಮಾನ ಮಾಡಿದ್ದಾರೆ. ನಮ್ಮ ಸರ್ಕಾರ ಹಲವು ಉತ್ತಮ ಕೆಲಸಗಳನ್ನು ಮಾಡಿದ್ದು, ರಾಜ್ಯದ ಅಭಿವೃದ್ಧಿಗೆ ವೇಗ ಕೊಟ್ಟಿದೆ. ಕೇಂದ್ರದಲ್ಲಿ ಮೋದಿ ಸರ್ಕಾರ ಹಲವು ಉತ್ತಮ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅದನ್ನು ಜಾರಿ ಮಾಡಲು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಬೇಕಾಗುತ್ತದೆ. ಕ್ಷೇತ್ರದಲ್ಲಿ ಉತ್ತಮ ಕ್ರೀಡಾಂಗಣ, ಈಜುಕೊಳದ ಬೇಡಿಕೆಗಳಿವೆ. ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಲು ಮತ್ತು ಕೊಳಗೇರಿಗಳ ಜನರಿಗೆ ಹಕ್ಕು ಪತ್ರ ವಿತರಿಸುವ ಉದ್ದೇಶವಿದೆ.



● ನಿಮ್ಮ ಎದುರಾಳಿಗಳು ಯಾರು?

ಎಲ್ಲ ಪಕ್ಷಗಳ ಅಭ್ಯರ್ಥಿಗಳನ್ನು ಸಮಾನವಾಗಿ, ಗೌರವದಿಂದ ಕಾಣುತ್ತೇನೆ.

ಪುಟ್ಟಣ್ಣ (ಕಾಂಗ್ರೆಸ್)

● ಜನ ಯಾವ ಕಾರಣಕ್ಕಾಗಿ ನಿಮಗೆ ಮತ ನೀಡಬೇಕು ?

ವಿಧಾನ ಪರಿಷತ್ ಸದಸ್ಯನಾಗಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿದ್ದೇನೆ. ಅಲ್ಲದೇ, ನಾನು ಓಡಾಡಿ ಬೆಳೆದ ಕ್ಷೇತ್ರವೂ ಹೌದು. 35 ವರ್ಷಗಳಿಂದ ಇಲ್ಲಿದ್ದೇನೆ. ಇಲ್ಲಿ ನೂರಾರು ಸಮಸ್ಯೆಗಳಿವೆ. ಒಳಚರಂಡಿ, ಡಾಂಬರ್ ಕಾಣದ ರಸ್ತೆಗಳು, ಕುಡಿಯುವ ನೀರಿನ ಕೊರತೆ, ಹೈಟೆನ್ಷನ್ ವೈರ್‌ಗಳ ಸಮಸ್ಯೆ ಹೀಗೆ ಸಾಲು ಸಾಲು ಸಮಸ್ಯೆಗಳಿವೆ. ಇಲ್ಲಿ ಏನೂ ಅಭಿವೃದ್ಧಿ ಆಗಿಲ್ಲ. ಇಲ್ಲಿನ ಶಾಸಕರು ಸಚಿವರಾಗಿದ್ದರೂ ಏನೂ ಮಾಡಿಲ್ಲ. ಇವೆಲ್ಲವನ್ನೂ ಸರಿಪಡಿಸಲು ಬದ್ಧನಾಗಿದ್ದೇನೆ. ಅದಕ್ಕಾಗಿ ಮತ ಹಾಕಬೇಕು.

● ಗೆಲ್ಲುವ ವಿಶ್ವಾಸವಿದೆಯೇ? ಇದ್ದರೆ ಕಾರಣಗಳೇನು?

ಕ್ಷೇತ್ರದಲ್ಲಿ ಶಾಸಕರ ವಿರುದ್ಧ ಆಡಳಿತ ವಿರೋಧಿ ಅಲೆ ಇದೆ. ಜನ ಬದಲಾವಣೆ ಬಯಸುತ್ತಿದ್ದಾರೆ. ಪಕ್ಷದ ಐದು ಗ್ಯಾರಂಟಿಗಳ ಬಗ್ಗೆ ಜನ ಆಕರ್ಷಿತರಾಗಿದ್ದಾರೆ. ಒಳ್ಳೆಯ ಅಭ್ಯರ್ಥಿ ಸ್ಪರ್ಧಿಸಿದ್ದಾರೆ ಎಂಬ ಭಾವನೆ ಜನರಲ್ಲಿ ಇದೆ. ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ, ಜೈನ ಹೀಗೆ ಎಲ್ಲ ಸಮುದಾಯದವರು ನನ್ನನ್ನು ಬೆಂಬಲಿಸಿದ್ದಾರೆ. ನನ್ನ ಪರ ಸಹಾನುಭೂತಿ ಇದೆ.

● ನಿಮ್ಮ ಎದುರಾಳಿ ಯಾರು?

ಸುರೇಶ್ ಕುಮಾರ್ ಅವರೇ ನನ್ನ ಎದುರಾಳಿ. ಈ ಹಿಂದೆ ಅವರನ್ನು ಎದುರಿಸಲು ಸಮರ್ಥರು ಕಣದಲ್ಲಿ ಇರಲಿಲ್ಲ. ನಾಲ್ಕು ಬಾರಿ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದರಿಂದ ಅವರು ಪೈಪೋಟಿ ನೀಡಲು ಸಾಧ್ಯವಾಗಲಿಲ್ಲ. ಈ ಬಾರಿ ನನ್ನನ್ನು ಕ್ಷೇತ್ರದ ಜನ ಒಪ್ಪಿದ್ದಾರೆ.

ಡಾ. ಆಂಜನಪ್ಪ ಟಿ.ಎಚ್. (ಜೆಡಿಎಸ್)

● ಜನ ಯಾವ ಕಾರಣಕ್ಕಾಗಿ ನಿಮಗೆ ಮತ ನೀಡಬೇಕು ?

ನಮ್ಮ ಪಕ್ಷದ ವತಿಯಿಂದ ಪಂಚರತ್ನ ಯೋಜನೆಯನ್ನು ಪ್ರಕಟಿಸಲಾಗಿದೆ. ಇದು ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಮಾಡುವ ಅತ್ಯುತ್ತಮ ಯೋಜನೆಯಾಗಿದೆ. ವಿಶೇಷವಾಗಿ ಶಿಕ್ಷಣ, ಆರೋಗ್ಯ ವ್ಯವಸ್ಥೆ ಸುಧಾರಣೆಯ ಕುರಿತು ಒಳ್ಳೆಯ ಅಂಶಗಳಿವೆ. ಕ್ಷೇತ್ರದಲ್ಲಿ ಇವೆಲ್ಲವನ್ನೂ ತರುವ ಉದ್ದೇಶವಿದೆ. ಕ್ಷೇತ್ರದಲ್ಲಿ ನಾನೊಬ್ಬ ಉತ್ತಮ ವೈದ್ಯನೆಂಬ ಹೆಸರಿದೆ. ಕೋವಿಡ್ ಕಾಲದಲ್ಲೂ ಕ್ಷೇತ್ರದ ಜನರಿಗಾಗಿ ಸಾಕಷ್ಟು ಕೆಲಸ ಮಾಡಿದ್ದೇವೆ. ಯುಟ್ಯೂಬ್ ಮೂಲಕವೂ ಆರೋಗ್ಯದ ಕುರಿತು ಉತ್ತಮ ಮಾಹಿತಿ ನೀಡುತ್ತಿರುತ್ತೇನೆ. ಹೀಗಾಗಿ ಕ್ಷೇತ್ರದಲ್ಲಿ ಜನಾನುರಾಗಿ ಆಗಿದ್ದೇನೆ.



● ಗೆಲ್ಲುವ ವಿಶ್ವಾಸವಿದೆಯೇ? ಇದ್ದರೆ ಕಾರಣಗಳೇನು?

ನಾನು ಮನೆ ಮನೆಗೆ ಹೋಗಿ ಮತವನ್ನು ಯಾಚಿಸುತ್ತಿದ್ದೇನೆ. ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ. ಎಚ್‌.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಕೈಗೊಂಡ ಕಾರ್ಯಕ್ರಮಗಳು ಮತ್ತು ಈ ಬಾರಿ ಪಂಚರತ್ನದಲ್ಲಿ ಪ್ರಕಟಿಸಿರುವ ಯೋಜನೆಗಳ ಬಗ್ಗೆ ಮತದಾರರು ತೃಪ್ತರಾಗಿದ್ದಾರೆ. ಹೀಗಾಗಿ ನನ್ನನ್ನು ಗೆಲ್ಲಿಸಬೇಕು ಎಂದು ಮನವಿ ಮಾಡುತ್ತೇನೆ.

● ನಿಮ್ಮ ಎದುರಾಳಿ ಯಾರು?

ಕಣದಲ್ಲಿ 8– 10 ಜನ ಇದ್ದಾರೆ. ಯಾರನ್ನೂ ಎದುರಾಳಿ ಎನ್ನಲಾರೆ. ನನ್ನನ್ನು ಗೆಲ್ಲಿಸಿ ಸೇವೆ ಮಾಡಲು ಅವಕಾಶ ನೀಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಬೇರೆಯವರ ಬಗ್ಗೆ ಮಾತನಾಡುವುದಿಲ್ಲ. ಯಾರ ಬಗ್ಗೆಯೂ ದೂರುವುದಿಲ್ಲ.

ಮುನಿರತ್ನ (ಬಿಜೆಪಿ)

‘ಸೋಲಿಸಲು ಇದು ಕನಕಪುರ ಅಲ್ಲ’

● ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಜನ ಅಭಿವೃದ್ಧಿಗೆ ಮತ ನೀಡುತ್ತಿದ್ದಾರೆ. 11 ಶಾಲೆಗಳನ್ನು ಹೈಟೆಕ್ ಆಗಿ ನಿರ್ಮಿಸುತ್ತಿದ್ದೇವೆ. ಅವುಗಳನ್ನು ಕೇಂದ್ರೀಯ ವಿದ್ಯಾಲಯ ಅಥವಾ ಸೈನಿಕ ಶಾಲೆಗಳಲ್ಲಿ ವಿಲೀನಗೊಳಿಸಲು ಕೇಂದ್ರ ಸಚಿವರ ಜತೆ ಮಾತನಾಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ 25 ಸಾವಿರ ಮಕ್ಕಳಿಗೆ ಈ ಶಾಲೆಯಲ್ಲಿ ಶಿಕ್ಷಣ ಕೊಡಿಸಬೇಕು ಎಂಬುದು ನನ್ನ ಕನಸು. ಮೇಲ್ಸೇತುವೆ, ಆಸ್ಪತ್ರೆ, ಉದ್ಯಾನ ಅಭಿವೃದ್ಧಿ ಕಾರ್ಯಗಳು ಮುಂದುವರಿಯಲಿವೆ.

● ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂತದ್ದು?

ನನಗೆ ಎದುರಾಳಿಯಾಗಿ ಜೆಡಿಎಸ್ ಪಕ್ಷದಿಂದ ಸ್ಪರ್ಧೆ ಇದೆ. ಡಾ.ನಾರಾಯಣಸ್ವಾಮಿ ಒಳ್ಳೆಯ ವ್ಯಕ್ತಿ ಎಂಬ ಕಾರಣಕ್ಕೆ ಅವರ ಬಗ್ಗೆ ಜನರ ಒಲವು ಹೆಚ್ಚಿದೆ. ಆದ್ದರಿಂದ ಜೆಡಿಎಸ್ ಮತ್ತು ಬಿಜೆಪಿ ನಡುವೆಯೇ ನೇರ ಸ್ಪರ್ಧೆ ಇದೆ. ನನ್ನ ಪರವಾಗಿ ಮತದಾರರು ಇದ್ದಾರೆ, ತೀರ್ಪನ್ನು ಕಾದು ನೋಡೋಣ.

● ಕಾಂಗ್ರೆಸ್ ಅಭ್ಯರ್ಥಿ ಜತೆಗೆ ನಿಮ್ಮನ್ನು ಸೋಲಿಸಲು ಸಂಸದ ಡಿ.ಕೆ.ಸುರೇಶ್ ನಿಂತಿದ್ದಾರೆ. ಏನಂತಿರಿ?

ಗೆಲ್ಲಿಸಲು, ಸೋಲಿಸಲು ರಾಜರಾಜೇಶ್ವರಿನಗರದಲ್ಲಿ ಜೀತದಾಳುಗಳಿಲ್ಲ. ಮತದಾರ ದೇವರುಗಳು ತೀರ್ಪು ಏನಿದೆಯೋ ಗೊತ್ತಿಲ್ಲ. ಜನ ಜೀತದಾಳುಗಳಾಗಿದ್ದರೆ ಇವರು ಹೇಳಿದಂತೆ ಕೇಳುತ್ತಿದ್ದರು. ಆಗ ನನ್ನನ್ನು ಸೋಲಿಸುತ್ತೇನೆ ಎಂದು ಹೇಳಬಹುದು. ಇದು ಕನಕಪುರ ಅಲ್ಲ, ಬೆಂಗಳೂರು. ಇಲ್ಲಿ ಶಾಂತಿ ನೆಲೆಸಿದೆ, ಇದನ್ನು ಕೆ.ಜೆ. ಹಳ್ಳಿ –ಡಿ.ಜೆ.ಹಳ್ಳಿ ಮಾಡಬಾರದು.

ಕುಸುಮಾ ಎಚ್. (ಕಾಂಗ್ರೆಸ್)

‘ಜನ ಬದಲಾವಣೆ ಬಯಸುತ್ತಿದ್ದಾರೆ’

● ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ನಾನೊಬ್ಬ ಶಿಕ್ಷಕಿಯಾಗಿ ಶಿಕ್ಷಣಕ್ಕೆ ಆದ್ಯತೆ ನೀಡುತ್ತೇನೆ. ನಮ್ಮ ಕ್ಷೇತ್ರದಲ್ಲಿ ಸರ್ಕಾರಿ ಪ್ರೌಢಶಾಲೆಗಳೇ ಇಲ್ಲ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಲು ಗ್ರಂಥಾಲಯಗಳಿಲ್ಲ. ಒಂದೇ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಇಲ್ಲ. ಚುನಾವಣೆಯಲ್ಲಿ ಗೆದ್ದ ನಂತರ ಇವುಗಳ ನಿರ್ಮಾಣಕ್ಕೆ ಮೊದಲ ಆದ್ಯತೆ. ಕೈಗೆಟುಕುವ ದರದಲ್ಲಿ ಮೂಲ ಸೌಕರ್ಯ ಕಲ್ಪಿಸಬೇಕು. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಮತದಾರರ ಗುರುತಿನ ಚೀಟಿ, ರೇಷನ್ ಕಾರ್ಡ್ ಪಡೆಯಲು 10 ರಿಂದ 15 ಬಾರಿ ಕಚೇರಿ ಅಲೆದಾಡುವ ಸ್ಥಿತಿ ಇದೆ. ಇವುಗಳನ್ನು ತಪ್ಪಿಸಿ ಎಲ್ಲಾ ಸೌಲಭ್ಯ ಒಂದೇ ಕಡೆ ದೊರೆಯುವಂತೆ ಬ್ಲಾಕ್ ಮಟ್ಟದಲ್ಲಿ ಕೇಂದ್ರಗಳನ್ನು ತೆರೆಯುವ ಉದ್ದೇಶ ಇದೆ. ಪರಿಸರ ಮತ್ತು ಕೆರೆ ಸಂರಕ್ಷಣೆಗಳ ಬಗ್ಗೆಯೂ ಆದ್ಯತೆ ನೀಡಲಾಗುವುದು.

● ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂತದ್ದು?

ಪ್ರಚಾರಕ್ಕೆ ಹೋದ ಕಡೆಗಳಲ್ಲಿ ಜನ ಪ್ರೀತಿ ಮತ್ತು ಗೌರವದಿಂದ ಕಾಣುತ್ತಿದ್ದಾರೆ. ಉಪಚುನಾವಣೆಯಲ್ಲಿ ಪ್ರಚಾರಕ್ಕೆ 15 ದಿನ ಮಾತ್ರ ಅವಕಾಶ ಸಿಕ್ಕಿತ್ತು. ದೊಡ್ಡ ಕ್ಷೇತ್ರವಾಗಿದ್ದರಿಂದ ಎಲ್ಲರನ್ನು ತಲುಪಲು ಸಾಧ್ಯವಾಗಿರಲಿಲ್ಲ. ಈಗ ಎರಡೂವರೆ ವರ್ಷಗಳಿಂದ ಜನರೊಟ್ಟಿಗೆ ಇದ್ದು ವಿಶ್ವಾಸ ಗಳಿಸಿದ್ದೇನೆ. 40 ಸಾವಿರಕ್ಕೂ ಹೆಚ್ಚು ಮನೆಗೆ ಭೇಟಿ ನೀಡಿದ್ದೇನೆ. ಜನ ಬದಲಾವಣೆ ಬಯಸುತ್ತಿದ್ದಾರೆ. ನಾನು ಗೆಲುವುದು ಗ್ಯಾರಂಟಿ.

● ನಿಮ್ಮ ನಿಜವಾದ ಎದುರಾಳಿ ಯಾರು?

ಪ್ರಮುಖವಾಗಿ ಬಿಜೆಪಿ ಅಭ್ಯರ್ಥಿಯೇ ನನ್ನ ಎದುರಾಳಿ.

ಡಾ.ನಾರಾಯಣಸ್ವಾಮಿ (ಜೆಡಿಎಸ್)

‘ಬೇರೆಯವರ ಅಬ್ಬರವಿದ್ದರೂ ಮತ ಜೆಡಿಎಸ್‌ಗೆ’

● ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಜೆಡಿಎಸ್ ನೀಡಿರುವ ಪಂಚರತ್ನ ಯೋಜನೆಗಳು ನಮ್ಮ ಪಕ್ಷಕ್ಕೆ ಮತ ತರಲಿವೆ. ಈ ಕ್ಷೇತ್ರದಲ್ಲಿ ಆರ್ಥಿಕವಾಗಿ ದುರ್ಬಲವಾದ ಜನ ಇದ್ದಾರೆ. 10 ಸಾವಿರ ಮನೆಗಳನ್ನು ಕೊಟ್ಟಿಕೊಟ್ಟರೆ ನಮ್ಮ ಬದುಕು ಸಾರ್ಥಕ ಎಂದು ಭಾವಿಸಿದ್ದೇನೆ. ಕ್ಷೇತ್ರದಲ್ಲಿ ಕೇಂದ್ರೀಯ ವಿದ್ಯಾಲಯ ಇಲ್ಲ. ಅದನ್ನು ತಂದರೆ ಐದು ವರ್ಷಗಳಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಗುಣಮಟ್ಟದ ಶಿಕ್ಷಣ ಪಡೆಯುತ್ತಾರೆ. 20 ವರ್ಷಗಳಲ್ಲಿ ಅವರ ಜೀವನ ಮಟ್ಟ ಬದಲಾಗಲಿದೆ. ಆ ಮೂಲಕ ಮಾದರಿ ಕ್ಷೇತ್ರವನ್ನಾಗಿಸುವ ಗುರಿ ಇದೆ.

● ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂತದ್ದು?

ಕ್ಷೇತ್ರದಲ್ಲಿ ಯಾವುದೇ ಮೂಲೆಗೂ ಹೋದರೂ ಜನ ಬೆಂಬಲ ದೊರಕುತ್ತಿದೆ. ಎಚ್‌.ಡಿ.ಕುಮಾರಸ್ವಾಮಿ ಅವರ ಪರವಾದ ಅಲೆ ಕೂಡ ಇದೆ. ಮೈಸೂರು, ಮಂಡ್ಯ, ಹಾಸನ, ಚಿಕ್ಕಬಳ್ಳಾಪುರ ಸೇರಿ ಜೆಡಿಎಸ್ ಪ್ರಬಲವಾಗಿರುವ ಜಿಲ್ಲೆಗಳ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರದಲ್ಲಿದ್ದಾರೆ. ಎದುರಾಳಿಗಳು ಎಷ್ಟೇ ಅಬ್ಬರದ ಪ್ರಚಾರ ನಡೆಸಿದರೂ ಮತಗಳು ಜೆಡಿಎಸ್‌ಗೆ ಬರಲಿವೆ. ಪ್ರಾದೇಶಿಕ ಪಕ್ಷಕ್ಕೆ ಅಧಿಕಾರ ನೀಡಲು ಜನ ಸಂಕಲ್ಪ ಮಾಡಿದ್ದಾರೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಎರಡೂ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳೂ ಎದುರಾಳಿಗಳು.

ಗೋವಿಂದರಾಜನಗರ: ಪ್ರಿಯಕೃಷ್ಣ ಎದುರು ಸೋಮಣ್ಣ ‘ನಾಮಬಲ’ದ ಪೈಪೋಟಿ

• ವಿ.ಎಸ್‌. ಸುಬ್ರಹ್ಮಣ್ಯ

ಬೆಂಗಳೂರು: ವಸತಿ ಸಚಿವ ವಿ. ಸೋಮಣ್ಣ ಮತ್ತು ರಾಜ್ಯದ ಅತ್ಯಂತ ಸಿರಿವಂತ ರಾಜಕಾರಣಿಗಳಲ್ಲಿ ಒಬ್ಬರಾದ ಮಾಜಿ ಶಾಸಕ ಪ್ರಿಯಕೃಷ್ಣ ಮಧ್ಯದ ಸಾಂಪ್ರದಾಯಿಕ ಜಿದ್ದಾಜಿದ್ದಿಯ ಕಣವಾಗಿದ್ದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದಲ್ಲಿ ಬಿಜೆಪಿಯ ರಾಜಕೀಯ ತಂತ್ರಗಾರಿಕೆಯಿಂದಾಗಿ ಈ ಬಾರಿ ಕೊನೆ ಕ್ಷಣದಲ್ಲಿ ಚಿತ್ರಣ ಬದಲಾಗಿದೆ. ಸೋಮಣ್ಣ ‘ನಾಮಬಲ’ದ ನೆರವಿನಲ್ಲಿ ಪ್ರಿಯಕೃಷ್ಣ ಅವರನ್ನು ಎದುರಿಸುವ ಕಸರತ್ತು ನಡೆಸುತ್ತಿದೆ.

ಒಕ್ಕಲಿಗರು, ಕುರುಬರು, ಹಿಂದುಳಿದ ವರ್ಗಗಳ ಇತರ ಸಮುದಾಯಗಳು, ಪರಿಶಿಷ್ಟರು ಮತ್ತು ಮುಸ್ಲಿಂ ಮತಗಳು ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಹಳೆಯ ಬಿನ್ನಿಪೇಟೆ ಕ್ಷೇತ್ರದ ಭಾಗವಾಗಿದ್ದ ಗೋವಿಂದರಾಜನಗರದಲ್ಲಿ ಅಭಿವೃದ್ಧಿ ಮತ್ತು ಜಾತಿ ಎರಡೂ ಚುನಾವಣಾ ರಾಜಕಾರಣದಲ್ಲಿ ನಿರ್ಣಾಯಕ ಎನಿಸಿವೆ.

2009ರ ಉಪ ಚುನಾವಣೆಯಿಂದ ಈ ಕ್ಷೇತ್ರ ಎಂ. ಕೃಷ್ಣಪ್ಪ ಕುಟುಂಬದ ಮತ್ತು ವಿ. ಸೋಮಣ್ಣ ಮಧ್ಯದ ಜಿದ್ದಾಜಿದ್ದಿಯ ಕಣವಾಯಿತು. ಉಪ ಚುನಾವಣೆಯಲ್ಲಿ ಕೃಷ್ಣಪ್ಪ ಪುತ್ರ ಪ್ರಿಯಕೃಷ್ಣ ಕಾಂಗ್ರೆಸ್ ಅಭ್ಯರ್ಥಿಯಾದರು. ಸಚಿವರಾಗಿದ್ದ ಸೋಮಣ್ಣ ಸೋಲು ಕಂಡರು.

2013ರ ಚುನಾವಣೆಯಲ್ಲಿ ಸೋಮಣ್ಣ ಕ್ಷೇತ್ರ ಬದಲಿಸಿ ವಿಜಯನಗರಕ್ಕೆ ಹೋದರು. ಆಗ ಬಿಜೆಪಿಯ ಎಚ್‌. ರವೀಂದ್ರ ಎದುರು ಪ್ರಿಯಕೃಷ್ಣ ಗೆಲುವು ಸಾಧಿಸಿದ್ದರು. 2018ರ ಚುನಾವಣೆಯಲ್ಲಿ ಪುನಃ ಗೋವಿಂದ ರಾಜನಗರಕ್ಕೆ ಬಂದ ಸೋಮಣ್ಣ ಪ್ರಿಯ ಕೃಷ್ಣ ಅವರನ್ನು ಮಣಿಸಿದ್ದರು. ಈ ಚುನಾವಣೆಯಲ್ಲಿ ಪುನಃ ಮುಖಾಮುಖಿಯಾಗಲು ಇಬ್ಬರೂ ಸಿದ್ಧತೆ ನಡೆಸಿದ್ದರು. ಸೋಮಣ್ಣ ಅವರನ್ನು ವರುಣ ಮತ್ತು ಚಾಮರಾಜನಗರ ಕ್ಷೇತ್ರಕ್ಕೆ ಕಳುಹಿಸಿರುವ ಬಿಜೆಪಿ ವರಿಷ್ಠರು, ಬಿಬಿಎಂಪಿ ಮಾಜಿ ಸದಸ್ಯ ಕೆ. ಉಮೇಶ್ ಶೆಟ್ಟಿ ಅವರನ್ನು ಕಣಕ್ಕಿಳಿಸಿದ್ದಾರೆ.

ಆರ್‌. ಪ್ರಕಾಶ್

ಉಮೇಶ್ ಶೆಟ್ಟಿ

ಪ್ರಿಯಕೃಷ್ಣ

ಪ್ರಿಯಕೃಷ್ಣ– ಉಮೇಶ್ ಶೆಟ್ಟಿ ನಡುವೆ ನೇರ ಹಣಾಹಣಿ ಇದೆ. ಜೆಡಿಎಸ್‌ನ ಆರ್‌. ಪ್ರಕಾಶ್ ಇಬ್ಬರ ಮಧ್ಯದ ಪೈಪೋಟಿಯಲ್ಲಿ ಮತ ಕಸಿಯಲು ಪ್ರಯತ್ನಿಸುತ್ತಿದ್ದಾರೆ. ಎಎಪಿಯ ಅಂಜನಾ ಗೌಡ, ಕರ್ನಾಟಕ ರಾಷ್ಟ್ರ ಸಮಿತಿಯ ಬಿ.ಆರ್‌. ಶಶಿಕುಮಾರ್ ಸೇರಿದಂತೆ ಒಟ್ಟು 14 ಮಂದಿ ಕಣದಲ್ಲಿದ್ದಾರೆ.

ಒಂದೂವರೆ ವರ್ಷದಿಂದಲೇ ಚುನಾವಣಾ ತಯಾರಿ ಆರಂಭಿಸಿದ್ದ ಪ್ರಿಯಕೃಷ್ಣ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ಪ್ರಮುಖ ನಾಯಕರನ್ನು ಹಲವು ಬಾರಿ ಕ್ಷೇತ್ರಕ್ಕೆ ಕರೆತಂದು ಕಾರ್ಯಕ್ರಮ ನಡೆಸಿದ್ದರು. ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಬಿಜೆಪಿಯ ಹಲವರನ್ನು ಕಾಂಗ್ರೆಸ್‌ಗೆ ಸೆಳೆದು ಪಕ್ಷದ ಬಲ ಹೆಚ್ಚಿಸಿಕೊಂಡಿದ್ದರು.



ಫಲಿತಾಂಶದ ಹಿನ್ನೋಟ

2008	2009	2013	2018
ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್	ಬಿಜೆಪಿ

ಎರಡು ಅವಧಿಯಲ್ಲಿ ಮಾಡಿದ್ದ ಕೆಲಸಗಳು, ಕೋವಿಡ್ ಸಂಕಷ್ಟದ ಅವಧಿಯಲ್ಲಿ ಹಾಗೂ ಶಿಕ್ಷಣ, ಆರೋಗ್ಯ ಮತ್ತಿತರ ಕಾರಣಗಳಿಗೆ ವೈಯಕ್ತಿಕವಾಗಿ ನೀಡಿದ ನೆರವು ಚುನಾವಣೆಯಲ್ಲಿ ಲಾಭ ತಂದುಕೊಡಬಹುದು ಎಂಬುದು ‘ಕೈ’ ಅಭ್ಯರ್ಥಿಯ ನಿರೀಕ್ಷೆ. ‘ಶಾಸಕನಾಗಿ ಭ್ರಷ್ಟಾಚಾರಕ್ಕೆ ಇಳಿಯುವುದಿಲ್ಲ; ಜನರಿಗೆ ಕಿರುಕುಳ ನೀಡುವುದಿಲ್ಲ ಎಂಬುದಷ್ಟೇ ಜನ ನಮ್ಮನ್ನು ಬೆಂಬಲಿಸಲು ಸಾಕು’ ಎಂಬ ವಿಶ್ವಾಸದಲ್ಲಿದ್ದಾರೆ ಅವರು.

ಎರಡು ಅವಧಿಗೆ ಬಿಬಿಎಂಪಿ ಸದಸ್ಯನಾಗಿ ತಾನು ಮಾಡಿದ್ದ ಕೆಲಸಗಳು ಹಾಗೂ 5 ವರ್ಷಗಳ ಅವಧಿಯಲ್ಲಿ ಸೋಮಣ್ಣ ನೇತೃತ್ವದಲ್ಲಿ ನಡೆದ ಅಭಿವೃದ್ಧಿ ಕೆಲಸಗಳೇ ತಮ್ಮನ್ನು ಗೆಲುವಿನ ದಡ ಮುಟ್ಟಿಸುತ್ತವೆ ಎಂಬುದು ಉಮೇಶ್ ಶೆಟ್ಟಿ ನಂಬಿಕೆ. ‘ಸೋಮಣ್ಣ ನಾಮಬಲವೇ ನನಗೆ ಶ್ರೀರಕ್ಷೆ’ ಎಂದು ಅವರು ಹೇಳುತ್ತಾರೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಸೋಮಣ್ಣ ಒಮ್ಮೆ ಮಾತ್ರ ಇಲ್ಲಿ ಪ್ರಚಾರಕ್ಕೆ ಬಂದಿದ್ದಾರೆ. ಜೆಡಿಎಸ್ ಅಭ್ಯರ್ಥಿ ಒಕ್ಕಲಿಗರ ಮತಗಳನ್ನು ಕಸಿದರೆ ಗೆಲುವು ಸಾಧ್ಯವಾಗಬಹುದು ಎಂಬ ಲೆಕ್ಕಾಚಾರವೂ ಬಿಜೆಪಿಯಲ್ಲಿದೆ.

ವಸತಿ ಸಚಿವರ ‘ರಾಜಕೀಯ ವಲಸೆ’ ಇಲ್ಲಿ ಬಿಜೆಪಿಯನ್ನು ತುಸು ಇಕ್ಕಟ್ಟಿಗೆ ಸಿಲುಕಿಸಿದೆ. ಸೋಮಣ್ಣ, ಅವರ ಕುಟುಂಬ ಕ್ಷೇತ್ರದಲ್ಲಿ ತೆಗೆದುಕೊಳ್ಳಬಹುದಾದ ನಿಲುವು ಹಾಗೂ ಜೆಡಿಎಸ್ ವರಿಷ್ಠರ ‘ಸಂದೇಶ’ ಕೂಡ ಫಲಿತಾಂಶ ನಿರ್ಧರಿಸುವ ಅಂಶವಾಗಲಿವೆ.

ಬೊಮ್ಮನಹಳ್ಳಿ ಕ್ಷೇತ್ರ: ಬಿಜೆಪಿ ಮಣಿಸಲು ‘ಒಕ್ಕಲಿಗ’ ಅಸ್ತ್ರ ಪ್ರಯೋಗ

ಮೊದಲ ಗೆಲುವಿಗೆ ಕಾಂಗ್ರೆಸ್ ಕಸರತ್ತು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸತತ ಮೂರು ಅವಧಿ ಗೆಲುವು ಪಡೆದು, ಕ್ಷೇತ್ರದ ಮೇಲೆ ಬಿಗಿ ಹಿಡಿತ ಸಾಧಿಸಿರುವ ಬಿಜೆಪಿ ಮಣಿಸಲು ‘ಒಕ್ಕಲಿಗ’ ಅಸ್ತ್ರ ಪ್ರಯೋಗಿಸಿರುವ ಕಾಂಗ್ರೆಸ್, ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಇದೇ ಮೊದಲ ಬಾರಿ ಪ್ರಬಲ ಸ್ಪರ್ಧೆ ಒಡ್ಡಿದೆ.

ಸತೀಶ್ ರೆಡ್ಡಿ

2008ರಿಂದ ನಡೆದ ಮೂರು ಚುನಾವಣೆಗಳಲ್ಲೂ ಅಭ್ಯರ್ಥಿಗಳನ್ನು ಬದಲಾಯಿಸುತ್ತಲೇ ಬಂದಿರುವ ಕಾಂಗ್ರೆಸ್, ಈ ಬಾರಿಯೂ ಹೊಸ ಮುಖಕ್ಕೆ ಟಿಕೆಟ್ ನೀಡಿದ್ದರೂ, ಸುಮಾರು 90 ಸಾವಿರದಷ್ಟಿರುವ ಒಕ್ಕಲಿಗ ಮತಗಳನ್ನು ಸೆಳೆಯಲು ಆ ಸಮಾಜದ ಪ್ರಭಾವಿ ಮುಖಂಡ, ಅದೇ ಕ್ಷೇತ್ರದ ಉಮಾಪತಿ ಎಸ್‌. ಗೌಡ ಅವರನ್ನು ಕಣಕ್ಕೆ ಇಳಿಸಿರುವುದು ಪ್ರಬಲ ಪೈಪೋಟಿಗೆ ಕಾರಣವಾಗಿದೆ.

ಉಮಾಪತಿ ಗೌಡ

ಸಾಕ್ಷಾತ್ ಸಮೀಕ್ಷೆ

ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದ ಭಾಗವಾಗಿದ್ದ ಬೊಮ್ಮನಹಳ್ಳಿ 2008ರಲ್ಲಿ ಹೊಸ ಕ್ಷೇತ್ರವಾಗಿ ಉದಯಿಸಿತ್ತು. ಆ ವರ್ಷ ಬಿಜೆಪಿಯ ಎಂ.ಸತೀಶ್ ರೆಡ್ಡಿ ಕಾಂಗ್ರೆಸ್‌ನ ಕುಪೇಂದ್ರ ರೆಡ್ಡಿ ಅವರನ್ನು 13,640 ಮತಗಳ ಅಂತರದಿಂದ ಸೋಲಿಸಿದ್ದರು. 2013ರಲ್ಲಿ ಸಿ.ನಾಗಭೂಷಣ ಅವರನ್ನು 25,852 ಹಾಗೂ 2018ರಲ್ಲಿ ಸುಷ್ಮಾ ರಾಜಗೋಪಾಲ ರೆಡ್ಡಿ ಅವರನ್ನು 47,162 ಮತಗಳ ಅಂತರದಿಂದ ಪರಾಭವಗೊಳಿಸುವ ಮೂಲಕ ಹ್ಯಾಟ್ರಿಕ್ ಗೆಲುವು ಪಡೆದಿದ್ದರು.



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಬೊಮ್ಮನಹಳ್ಳಿ	ಬಿಜೆಪಿ	ಬಿಜೆಪಿ	ಬಿಜೆಪಿ

ಪ್ರತಿ ಚುನಾವಣೆಯಲ್ಲೂ ಸೋಲಿನ ಅಂತರ ಹೆಚ್ಚುತ್ತಲೇ ಹೋಗಿದ್ದು, ಕಾಂಗ್ರೆಸ್ ನಿದ್ದೆಗೆಡಿಸಿತ್ತು. ಸೋಲಿನ ಸರಪಳಿ ಕಳಚಲು ಹಾಗೂ ಒಮ್ಮೆಯಾದರೂ ಗೆಲುವು ಪಡೆಯಲು ಕಾಂಗ್ರೆಸ್ ಕೊನೆಗೂ ಪ್ರಬಲ ಅಭ್ಯರ್ಥಿ ಕಣಕ್ಕೆ ಇಳಿಸಿದೆ. ಇದೇ ಮೊದಲ ಬಾರಿ ಬಿಜೆಪಿ ಎದುರು ಪ್ರಬಲ ಸ್ಪರ್ಧೆ ಏರ್ಪಟ್ಟಿರುವುದನ್ನು ನೋಡುತ್ತಿದ್ದೇವೆ ಎನ್ನುವುದು ಕ್ಷೇತ್ರದ ಹಲವು ಮತದಾರರ ಅಭಿಪ್ರಾಯ.

ಕ್ಷೇತ್ರದಲ್ಲಿ ಬಿಎಸ್‌ಪಿಯಿಂದ ಉಮಾಪತಿ ಬಾಬು, ಜೆಡಿಎಸ್‌ನಿಂದ ಎನ್‌.ನಾರಾಯಣ ರಾಜು, ಎಎಪಿಯಿಂದ ಸೀತಾರಾಮ್ ಗುಂಡಪ್ಪ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ನಂದಾ ರೆಡ್ಡಿ, ಉತ್ತಮ ಪ್ರಜಾಕೀಯ ಪಕ್ಷದಿಂದ ಆರ್‌.ಮಮತಾ ಸೇರಿದಂತೆ 14 ಅಭ್ಯರ್ಥಿಗಳು ಕಣದಲ್ಲಿದ್ದರೂ, ಕಾಂಗ್ರೆಸ್–ಜೆಡಿಎಸ್ ಮಧ್ಯೆ ನೇರ ಪೈಪೋಟಿ ಇದೆ.

ಬಿಎಸ್‌ಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ಹೆಸರು ಒಂದೇ ಆಗಿರುವುದರಿಂದ ಮತಗಳ ವಿಭಜನೆಯಾಗಬಹುದು ಎಂಬ ಲೆಕ್ಕಾಚಾರವನ್ನು ಬಿಜೆಪಿ ಮಾಡುತ್ತಿದೆ. ’ಜನರು ಹೆಸರಿನ ಜತೆಗೆ ಚಿಹ್ನೆಯನ್ನೂ ನೋಡುತ್ತಾರೆ. ಹಸ್ತದ ಚಿಹ್ನೆ ಎಲ್ಲರಿಗೂ ಗೊತ್ತಿರುವ ಕಾರಣ ಗೊಂದಲವಾಗದು‘ ಎನ್ನುವುದು ಕಾಂಗ್ರೆಸ್ ನಂಬಿಕೆ. ಹಾಗೆಯೇ, ಬಿಜೆಪಿಯಿಂದ ಹೊರ ಬಂದು ಜೆಡಿಎಸ್ ಸೇರಿರುವ ಬಿಬಿಎಂಪಿ ಸದಸ್ಯ ನಾರಾಯಣ ರಾಜು ಬಿಜೆಪಿ ಮತ ವಿಭಜಿಸದಂತೆ ಬಿಜೆಪಿ ತಂತ್ರಗಾರಿಕೆ ಮಾಡುತ್ತಿದೆ.

ಬಿಜೆಪಿ ಸಾಂಪ್ರದಾಯಿಕ ಮತಗಳನ್ನು ನಂಬಿಕೊಂಡಿದ್ದರೆ, ಕಾಂಗ್ರೆಸ್ ಪರಿಶಿಷ್ಟ ಜಾತಿ, ಪಂಗಡಗಳು, ಮುಸ್ಲಿಂ, ಒಕ್ಕಲಿಗ ಹಾಗೂ ಹಿಂದುಳಿದ ವರ್ಗದ ಮತಗಳ ಕ್ರೋಡೀಕರಣಕ್ಕೆ ಕೈ ಹಾಕಿದೆ. ಎರಡೂ ಪಕ್ಷಗಳ ಅಭ್ಯರ್ಥಿಗಳು, ಅವರ ಬೆಂಬಲಿಗರು ಕ್ಷೇತ್ರದಲ್ಲಿ ಅಬ್ಬರದ ಪ್ರಚಾರದಲ್ಲಿ ತೊಡಗಿದ್ದರೂ, ಎರಡೂ ಪಕ್ಷಗಳ ರಾಷ್ಟ್ರೀಯ, ರಾಜ್ಯ ನಾಯಕರು ಕ್ಷೇತ್ರದತ್ತ ಮುಖ ಮಾಡಿಲ್ಲ. ಪ್ರಧಾನಿ ಮೋದಿ ರೋಡ್ ಶೋ ನಂತರ ಇನ್ನಷ್ಟು ಲಾಭ ತರಬಹುದು ಎಂಬ ಆಶಯ ಬಿಜೆಪಿ ಕಾರ್ಯಕರ್ತರದ್ದು.

ಕ್ಷೇತ್ರದಲ್ಲಿನ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಘನತ್ಯಾಜ್ಯ ಸಂಗ್ರಹಗಾರದಿಂದ ಸ್ಥಳೀಯ ಕೆರೆಗಳು ಕಲುಷಿತವಾಗಿವೆ. ಮಳೆ ಬಂದರೆ ಇಡೀ ಕ್ಷೇತ್ರ ಜಲಾವೃತವಾಗುತ್ತದೆ. ರಸ್ತೆಗಳು ಹಾಳಾಗಿವೆ. ಇಂತಹ ಸಮಸ್ಯೆಗಳಿಗೆ ಮುಕ್ತಿ ದೊರಕಿಸಲು ಒಮ್ಮೆ ಅವಕಾಶ ಕೊಡಿ ಎನ್ನುವುದು ಕಾಂಗ್ರೆಸ್ ಮನವಿ. ಈಗಾಗಲೇ ಕೈಗೊಂಡಿರುವ ಅಭಿವೃದ್ಧಿ ಕಾರ್ಯ ಮುಗಿಸಲು ಇನ್ನೊಂದು ಬಾರಿ ಅವಕಾಶ ಕೊಡಿ, ಎಲ್ಲ ಸಮಸ್ಯೆಗೂ ಪರಿಹಾರ ದೊರಕುತ್ತದೆ ಎನ್ನುವುದು ಬಿಜೆಪಿ ವಿನಂತಿ.

ಸೋನಿಯಾ ನಾಳೆ ಪ್ರಚಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ನಾಲ್ಕು ವರ್ಷಗಳ ಬಳಿಕ ಮೊದಲ ಬಾರಿಗೆ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ಅವರು ಪಕ್ಷದ ಅಭ್ಯರ್ಥಿಗಳ ಪರವಾಗಿ ಹುಬ್ಬಳ್ಳಿಯಲ್ಲಿ ಶನಿವಾರ ಪ್ರಚಾರ ನಡೆಸಲಿದ್ದಾರೆ.

ಸೋನಿಯಾ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಶಿವಾಜಿನಗರದಲ್ಲಿ ಭಾನುವಾರ ರ‍್ಯಾಲಿ ನಡೆಸಲಿದ್ದಾರೆ.

ಚುನಾವಣಾ ಅಧಿಸೂಚನೆ ಪ್ರಕಟವಾದ ಬಳಿಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರು ಇಲ್ಲಿಯವರೆಗೆ 43 ರ‍್ಯಾಲಿಗಳು ಹಾಗೂ 13 ರೋಡ್‌ಶೋಗಳನ್ನು ನಡೆಸಿದ್ದಾರೆ. ಯುವಜನರು ಹಾಗೂ ಮಹಿಳೆಯರೊಂದಿಗೆ ಆರು ಸಂವಾದಗಳನ್ನು ನಡೆಸಿದ್ದಾರೆ. ಕಾರ್ಯಕರ್ತರ ಜತೆಗಿನ ಐದು ಸಭೆಗಳಲ್ಲಿ ಭಾಗಿಯಾಗಿದ್ದಾರೆ.

2019ರ ಲೋಕಸಭಾ ಚುನಾವಣೆಯ ಬಳಿಕ ಸೋನಿಯಾ ಗಾಂಧಿ ಅವರು ಆರೋಗ್ಯದ ಕಾರಣಕ್ಕೆ ಯಾವುದೇ ಸಾರ್ವಜನಿಕ ರ‍್ಯಾಲಿಗಳಲ್ಲಿ ಭಾಗವಹಿಸಿಲ್ಲ. ‘ಭಾರತ್ ಜೋಡೊ ಯಾತ್ರೆ’ ಮಂಡ್ಯಕ್ಕೆ ಬಂದಾಗ (2022ರ ಅಕ್ಟೋಬರ್ 6) ಅವರು ರಾಹುಲ್ ಜತೆಗೆ ಹೆಜ್ಜೆ ಹಾಕಿದ್ದರು.

ಮಾಯಾವತಿ ಪ್ರಚಾರ ಇಂದು

ಬೆಂಗಳೂರು: ‘ವಿಧಾನಸಭೆ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷದಿಂದ (ಬಿಎಸ್‌ಪಿ) ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪರವಾಗಿ ನಾಯಕಿ ಮಾಯಾವತಿ ಅವರು ಶುಕ್ರವಾರ ಮತಯಾಚಿಸಲಿದ್ದಾರೆ’ ಎಂದು ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ತಿಳಿಸಿದರು.

‘ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಮೇ 5ರಂದು ನಡೆಯುವ ರಾಜ್ಯಮಟ್ಟದ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪುಲಕೇಶಿನಗರದ ಬಿಎಸ್‌ಪಿ ಅಭ್ಯರ್ಥಿ ಅಖಂಡ ಶ್ರೀನಿವಾಸಮೂರ್ತಿ, ಗಾಂಧಿನಗರ ವಿಧಾನಸಭೆ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಅವರು ಬಿಎಸ್‌ಪಿ ಬೆಂಬಲಿತ ಅಭ್ಯರ್ಥಿಗಳ ಪರವಾಗಿಯೂ ಮತಯಾಚನೆ ಮಾಡಲಿದ್ದಾರೆ’ ಎಂದು ತಿಳಿಸಿದ್ದಾರೆ.

ಎಲ್ಲೆಡೆ ಅಭ್ಯರ್ಥಿಗಳಿಂದ ಬಿರುಸಿನ ಪ್ರಚಾರ

ಬೆಂಗಳೂರು: ಬಹಿರಂಗ ಪ್ರಚಾರಕ್ಕೆ ನಾಲ್ಕು ದಿನ ಮಾತ್ರ ಬಾಕಿ ಇದ್ದು, ಅಭ್ಯರ್ಥಿಗಳು ಬಿಡುವಿಲ್ಲದೆ ಮನೆ ಮನಗಳನ್ನು ತಲುಪಲು ಪ್ರಯತ್ನಿಸುತ್ತಿದ್ದಾರೆ.

ಬೆಳಿಗ್ಗೆಯಿಂದಲೇ ಪ್ರಚಾರ ಆರಂಭಿಸುತ್ತಿರುವ ಅಭ್ಯರ್ಥಿಗಳು, ವಾಯು ವಿಹಾರಕ್ಕೆ ತೆರಳಿದ್ದವರನ್ನು ಭೇಟಿ ಮಾಡಿ ಮತ ಕೇಳುತ್ತಿದ್ದಾರೆ. ಪಾರ್ಕ್‌ಗಳು, ಅಂಗಡಿ ಮುಂಗಟ್ಟುಗಳು, ಜನ ಸೇರುವ ಸ್ಥಳಗಳನ್ನು ಗುರುತಿಸಿಕೊಂಡು ಮತ ಯಾಚಿಸುತ್ತಿದ್ದಾರೆ.

ಸಂಜೆ ನಂತರ ಹಲವೆಡೆ ಮಳೆ ಸುರಿದಿದ್ದರಿಂದ ಪ್ರಚಾರಕ್ಕೆ ತೆರಳಲು ಸಾಧ್ಯವಾಗದೆ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಪರದಾಡಬೇಕಾಯಿತು.

ಹಂಪಿನಗರದಲ್ಲಿ ಪ್ರಚಾರದಲ್ಲಿದ್ದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೃಷ್ಣಪ್ಪ ಅವರಿಗೆ ಸ್ಥಳೀಯರು ಸನ್ಮಾನ ಮಾಡಲು ಮುಂದಾದರು. ಈ ವೇಳೆ ಅಲ್ಲೇ ಇದ್ದ ಮಕ್ಕಳಿಗೆ ಪೇಟ ತೊಡಿಸಿ ಹಾರ ಹಾಕಿದ ಕೃಷ್ಣಪ್ಪ, ಶುಭ ಹಾರೈಸಿದರು(ಎಡಚಿತ್ರ). ಹೆಬ್ಬಾಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಟ್ಟಾ ಜಗದೀಶ್ ಪರವಾಗಿ ಅವರ ತಂದೆ ಕಟ್ಟಾ ಸುಬ್ರಮಣ್ಯ ನಾಯ್ಡು ಸಂಜಯ್ ನಗರದಲ್ಲಿ ಬುಧವಾರ ಮತಯಾಚಿಸಿದರು. ಬಿಜೆಪಿ ಮುಖಂಡ ಬಿ.ನಾರಾಯಣಗೌಡ, ಮಂಡಲ ಅಧ್ಯಕ್ಷ ಅಜಯ್ ಸುಭಾಷ್ ಇದ್ದರು –ಪ್ರಜಾವಾಣಿ ಚಿತ್ರಗಳು

ಪ್ರಧಾನಿ ಭೇಟಿ: ಪರ್ಯಾಯ ರಸ್ತೆ ಬಳಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಸಂಜೆ ನಗರಕ್ಕೆ ಬರಲಿದ್ದು, ಅವರ ಸಂಚಾರಕ್ಕಾಗಿ ಕೆಲ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಓಡಾಟ ನಿರ್ಬಂಧಿಸಲಾಗಿದೆ.

ಹಳೇ ವಿಮಾನ ನಿಲ್ದಾಣ ರಸ್ತೆ, ಕೇಂಬ್ರಿಡ್ಜ್ ಬಡಾವಣೆ ರಸ್ತೆ, ಇಂದಿರಾನಗರ 100 ಅಡಿ ರಸ್ತೆ, ಅರಳಿಕಟ್ಟೆ, ಎಎಸ್‌ಸಿ ಕೇಂದ್ರ, ಟ್ರಿನಿಟಿ ವೃತ್ತ, ರಾಜಭವನ ರಸ್ತೆ, ಎಂ.ಜಿ.ರಸ್ತೆ, ಡಿಕೆನ್ಸನ್ ರಸ್ತೆ, ಮಣಿಪಾಲ್ ಸೆಂಟರ್, ಕಬ್ಬನ್ ರಸ್ತೆ, ಬಿಆರ್‌ವಿ ಜಂಕ್ಷನ್, ಸಿಟಿಒ ಜಂಕ್ಷನ್ ಹಾಗೂ ಇನ್ಫೆಂಟ್ರಿ ರಸ್ತೆಯಲ್ಲಿ ಮೋದಿ ಸಂಚರಿಸಲಿದ್ದಾರೆ.

‘ಪ್ರಧಾನಿ ಸಂಚರಿಸುವ ರಸ್ತೆಗಳಲ್ಲಿ ಸಂಜೆ 5.30 ರಿಂದ 7ರವರೆಗೆ ಸಾರ್ವಜನಿಕ ವಾಹನಗಳ ಸಂಚಾರ ತಡೆಯಲಾಗುವುದು. ಹೀಗಾಗಿ, ಸಾರ್ವಜನಿಕರು ಪರ್ಯಾಯ ರಸ್ತೆ ಬಳಸಬೇಕು’ ಎಂದು ಸಂಚಾರಿ ಪೊಲೀಸರು ಕೋರಿದ್ದಾರೆ.

ರಾಜನಾಥ್ ಸಿಂಗ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಉರಿಗೌಡ, ನಂಜೇಗೌಡ ಹೆಸರು ಪ್ರಸ್ತಾಪಿಸುವ ಮೂಲಕ ಕೋಮು ಸೌಹಾರ್ದಕ್ಕೆ ಧಕ್ಕೆ ತಂದಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಗೆ ದೂರು ನೀಡಿದ್ದಾರೆ.

ಮೈಸೂರಿನ ವಿವೇಕಾನಂದ ವೃತ್ತ ಹಾಗೂ ಮಂಡ್ಯ ತಾಲ್ಲೂಕಿನ ಕೊತ್ತತ್ತಿಯಲ್ಲಿ ಬಿಜೆಪಿ ಏ.29ರಂದು ಆಯೋಜಿಸಿದ್ದ ರ‍್ಯಾಲಿಗಳಲ್ಲಿ ಮಾತನಾಡಿದ್ದ ಅವರು, ಬ್ರಿಟಿಷರು ಹಾಗೂ ಟಿಪ್ಪು ಮಧ್ಯೆ ನಡೆದ ಯುದ್ಧದಲ್ಲಿ ಮಂಡ್ಯದ ಯೋಧರು ಟಿಪ್ಪು ಕೊಂದಿದ್ದರು ಎಂದು ಉಲ್ಲೇಖಿಸಿದ್ದಾರೆ. ಇದು ಹಿಂದು ಹಾಗೂ ಮುಸ್ಲಿಮರ ಮಧ್ಯೆ ದ್ವೇಷ ಬಿತ್ತುವ ಹೇಳಿಕೆ.

ಶ್ರೀರಂಗಪಟ್ಟಣದ ಬಿಜೆಪಿ ಅಭ್ಯರ್ಥಿ ಎಸ್‌. ಸಚ್ಚಿದಾನಂದ ಅವರು ಸಹ ಧರ್ಮಾಂಧ ಟಿಪ್ಪು ಆಂಜನೇಯ ದೇವಸ್ಥಾನ ಕೆಡವಿ ಆ ಸ್ಥಳದಲ್ಲಿ ಮಸೀದಿ ನಿರ್ಮಿಸಿದ್ದ. ಮರಳಿ ಅದೇ ಸ್ಥಳದಲ್ಲಿ ಆಂಜನೇಯ ಮಂದಿರ ಕಟ್ಟಲು ಸಹಕರಿಸಬೇಕು ಎಂದು ರಾಜಾನಾಥ್ ಸಿಂಗ್ ಅವರಿಗೆ ವೇದಿಕೆಯಲ್ಲೇ ಮನವಿ ಮಾಡಿರುವುದು. ಹಿಂದು ಮತದಾರರನ್ನು ಓಲೈಸಲು, ಕೋಮು ಸೌಹಾರ್ದ ಪ್ರಚೋದಿಸಲು ಮಾಡಿದ ಕೃತ್ಯ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ. ಹಾಗಾಗಿ, ಅವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

‘ಉಚಿತ ಕೊಡುಗೆ ಅನುಚಿತವಲ್ಲ, ಅಂತಿಮವೂ ಅಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡ ಜನರ ಬದುಕಿಗೆ ಭದ್ರತೆ ಒದಗಿಸುವ ಯಾವುದೇ ಉಚಿತ ಕೊಡುಗೆಗಳು ಅನುಚಿತವಲ್ಲ, ಅಂತಿಮವೂ ಅಲ್ಲ. ಜನರು ತಮ್ಮ ಅನ್ನವನ್ನು ತಾವೇ ಪಡೆದುಕೊಳ್ಳುವಂತಹ ಸ್ವಾವಲಂಬಿ ಯೋಜನೆಗಳನ್ನು ರಾಜಕೀಯ ಪಕ್ಷಗಳು ರೂಪಿಸಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹಿಸಿದ್ದಾರೆ.

ಬರಗೂರು ರಾಮಚಂದ್ರಪ್ಪ

‘ವಿವಿಧ ಪಕ್ಷ ಹಾಗೂ ಸರ್ಕಾರಗಳು ಜನರಿಗೆ ಉಚಿತ ಕೊಡುಗೆಗಳನ್ನು ನೀಡುವ ಕುರಿತು ರಾಜ್ಯ ಮತ್ತು ದೇಶದಲ್ಲಿ ಚರ್ಚೆಯಾಗುತ್ತಿದೆ. ಇದು, ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುವುದಾಗಿ ವಾದಿಸಲಾಗುತ್ತಿದೆ. ಸ್ವತಃ ಪ್ರಧಾನಿಯವರೇ ಈ ವಾದ ಮಂಡಿಸಿದ್ದರೂ ರಾಜ್ಯ ಬಿಜೆಪಿ ಉಚಿತ ಕೊಡುಗೆಗಳ ಭರವಸೆ ನೀಡಿರುವುದು ದ್ವಂದ್ವ ನೀತಿಯಾಗಿದ್ದರೆ, ಕಾಂಗ್ರೆಸ್ ಯಾವುದೇ ದ್ವಂದ್ವವಿಲ್ಲದೆ ಭರಪೂರ ಭರವಸೆಗಳನ್ನು ನೀಡಿದೆ’ ಎಂದಿದ್ದಾರೆ.

‘ಉಚಿತ ಕೊಡುಗೆಗಳು ಮೊದಲಿನಿಂದಲೂ ಇದೆ. ದೇವರಾಜ ಅರಸು ಆಡಳಿತಾವಧಿಯಲ್ಲಿ ವಿಧವಾ ಮಾಸಾಶನ, ವೃದ್ಧಾಪ್ಯ ಮಾಸಾಶನ, ಋಣ ಪರಿಹಾರ ಕಾಯ್ದೆ ಮುಂತಾದ ‘ಕೊಡುಗೆ’ಗಳನ್ನು ನೀಡಿದ್ದರೂ ಆರ್ಥಿಕ ಶಕ್ತಿ ಕುಂದಿಲ್ಲವೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದರು. ತಮಿಳು ನಾಡಿನಲ್ಲಿ ಸಾಕಷ್ಟು ಉಚಿತ ಕೊಡುಗೆಗಳು ಜಾರಿಯಾಗಿದ್ದರೂ ಆರ್ಥಿಕ ಹಿಂಜರಿತವಾಗಿಲ್ಲ. ನಮ್ಮ ರಾಜ್ಯದ ಎಲ್ಲ ಪಕ್ಷಗಳ ಸರ್ಕಾರಗಳೂ ಉಚಿತ ಕೊಡುಗೆಗಳಿಗೆ ಹೊರತಾಗಿಲ್ಲ. ಕೇಂದ್ರವು ರೈತರ ಖಾತೆಗೆ ₹ 6 ಸಾವಿರ ಹಾಕಿದ್ದು ಉಚಿತ ಕೊಡುಗೆಯೇ ಆಗಿದೆ. ಆದರೆ, ಕೇಂದ್ರವೇ ಕೊಡುಗೆ ವಿರುದ್ಧ ವಾದಿಸುತ್ತಿರುವುದು ವಿಪರ್ಯಾಸ’ ಎಂದಿದ್ದಾರೆ.

ಶುಕ್ರವಾರ, ಮೇ 5, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 124 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
'ದಿ ಕೇರಳ ಸ್ಟೋರಿ' 32,000 ಯುವತಿಯರ ಮತಾಂತರ ಅದೆಷ್ಟು ಸತ್ಯ?

ಸರ್ಕಾರಿ ಆಸ್ಪತ್ರೆಗಳಲ್ಲಿಲ್ಲ ಕೋವಿಡ್ ಲಸಿಕೆ 5

ಬುದ್ಧ ಪೂರ್ಣಿಮೆಯ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
61,749	18,255	81.78



ಬೆಂಗಳೂರಿನಲ್ಲಿ ಪ್ರಧಾನಿ ಮೋದಿ, ರಾಹುಲ್ – ಪ್ರಿಯಾಂಕಾ ಕಾರ್ಯಕ್ರಮ

'ನೀಟ್' ದಿನವೇ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಬಳಿಕ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮಹತ್ವದ್ದಾದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಇದೇ 7ರಂದು (ಭಾನುವಾರ) ನಡೆಯಲಿದೆ. ರಾಜಕೀಯ ಪಕ್ಷಗಳು ಅದೇ ದಿನ ಚುನಾವಣಾ ಪ್ರಚಾರ ಕಾರ್ಯಕ್ರಮಗಳನ್ನೂ ವಿವಿಧೆಡೆ ಆಯೋಜಿಸಿವೆ.

ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಕನಿಷ್ಠ ಎರಡು ತಾಸು ಮೊದಲೇ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕಾಗುತ್ತದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ನಗರ- ಪಟ್ಟಣಗಳಲ್ಲಿ ಪರೀಕ್ಷೆ ನಡೆಯಲಿದೆ. ವಿಶೇಷ ಭದ್ರತಾ ವ್ಯವಸ್ಥೆ ಇರುವ ರಾಜಕೀಯ ನೇತಾರರ ರೋಡ್ ಶೋ, ಪ್ರಚಾರ ಸಭೆ, ರ‍್ಯಾಲಿ ಇದೇ ಸಮಯದಲ್ಲಿ ನಡೆಯಲಿವೆ. ವಿಶೇಷ ಭದ್ರತಾ ವ್ಯವಸ್ಥೆ ಕೈಗೊಳ್ಳಲು ನಾಯಕರು ಸಾಗುವ ಮಾರ್ಗಗಳನ್ನು ಸಾಮಾನ್ಯವಾಗಿ ಮೂರ್ನಾಲ್ಕು ಗಂಟೆ ಮೊದಲೇ ಬಂದ್ ಮಾಡಲಾಗುತ್ತದೆ. ಪರೀಕ್ಷೆ ಎದುರಿಸುವ ಸವಾಲನ್ನು ಒಡಲೊಳಗೆ ಇಟ್ಟುಕೊಂಡ ಮಕ್ಕಳು, ಈ ಅಡೆತಡೆಗಳನ್ನು ದಾಟಿ ಪರೀಕ್ಷಾ ಕೇಂದ್ರಗಳನ್ನು ಮುಟ್ಟುವುದಕ್ಕೆ ಕಷ್ಟ ಪಡಬೇಕಾಗುತ್ತದೆ ಎಂದು ಪೋಷಕರು ಅಳಲು ತೋಡಿಕೊಂಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ರೋಡ್ ಶೋ ನಡೆಸಲಿದ್ದಾರೆ. ಈಗ ನಿಗದಿಯಾಗಿರುವಂತೆ, ಬ್ರಿಗೇಡ್ ರಸ್ತೆಯ ಯುದ್ಧ ಸ್ಮಾರಕದ (ಒಪೆರಾ ಹೌಸ್ ವೃತ್ತ) ಬಳಿಯಿಂದ ಅವರ ರೋಡ್ ಶೋ ಶುರುವಾಗಲಿದೆ. ಅದು ಮಲ್ಲೇಶ್ವರದ ಸರ್ಕಲ್ ಮಾರಮ್ಮ ವೃತ್ತದಲ್ಲಿ ಮುಕ್ತಾಯಗೊಳ್ಳಲಿದೆ. ಮೋದಿಯವರ ರೋಡ್ ಶೋ ಯಾವ್ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಸಾಗಲಿದೆ ಎಂಬ ನಿಖರ ಮಾಹಿತಿಯನ್ನು ಪ್ರಧಾನಿ ಕಾರ್ಯಾಲಯ ಇನ್ನೂ ಬಿಡುಗಡೆ ಮಾಡಿಲ್ಲ.

10 ಗಂಟೆಗೆ ರೋಡ್ ಶೋ ಆರಂಭವಾದರೆ ಅದು ಸಾಗುವ ಮಾರ್ಗವನ್ನು ಕನಿಷ್ಠ ಎರಡು ಗಂಟೆ ಮೊದಲೇ ವಿಶೇಷ ರಕ್ಷಣಾ ಪಡೆ (ಎಸ್‌ಪಿಜಿ) ತನ್ನ ಕಣ್ಗಾವಲಿನಲ್ಲಿ ಇಡುತ್ತದೆ. ರೋಡ್ ಶೋಗೆ ಯಾವುದೇ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ, ವಿಶೇಷ ಭದ್ರತಾ ವ್ಯವಸ್ಥೆ ಮಾಡಲಾಗುತ್ತದೆ. ರೋಡ್ ಶೋ ಸಾಗುವ ಮುಖ್ಯಮಾರ್ಗಕ್ಕೆ ಸಂಪರ್ಕಿಸುವ ಎಲ್ಲ ಉಪ ಹಾಗೂ ಕಿರು ಮಾರ್ಗಗಳಲ್ಲಿ ಬ್ಯಾರಿಕೇಡ್ ಹಾಕಿ, ನಿರ್ಬಂಧ ವಿಧಿಸಲಾಗುತ್ತದೆ.

11ನೇ ಪುಟ ನೋಡಿ

ಮೇ **7**	ನೀಟ್ ಪರೀಕ್ಷೆ
ಮಧ್ಯಾಹ್ನ **2**ರಿಂದ ಸಂಜೆ **5.20**	ಪರೀಕ್ಷೆಯ ಸಮಯ
ಬೆಳಿಗ್ಗೆ **11.45**	ಪರೀಕ್ಷಾರ್ಥಿಗಳು ಕೇಂದ್ರದಲ್ಲಿರಬೇಕಾದ ಸಮಯ
1 ಲಕ್ಷಕ್ಕೂ ಹೆಚ್ಚು	ಬೆಂಗಳೂರಿನಲ್ಲಿ ಪರೀಕ್ಷೆ ಬರೆಯುವವರು
499	ರಾಜ್ಯದ ಒಟ್ಟು ಪರೀಕ್ಷಾ ಕೇಂದ್ರಗಳು

ರೋಡ್ ಶೋ; ರ‍್ಯಾಲಿ

ಪ್ರಧಾನಿ ನರೇಂದ್ರ ಮೋದಿ
- ಶನಿವಾರ ಬೆಳಿಗ್ಗೆ 10ಕ್ಕೆ ಬೆಂಗಳೂರಿನ ಹೊಸ ತಿಪ್ಪಸಂದ್ರದ ಕೆಂಪೇಗೌಡರ ಪ್ರತಿಮೆ ಬಳಿ ರೋಡ್ ಶೋ ಆರಂಭ– ಬ್ರಿಗೇಡ್ ರಸ್ತೆಯ ಯುದ್ಧ ಸ್ಮಾರಕದವರೆಗೆ
- ಭಾನುವಾರ ಬೆಳಿಗ್ಗೆ ಬೆಂಗಳೂರಿನ ಬ್ರಿಗೇಡ್ ರಸ್ತೆಯಿಂದ ಮಲ್ಲೇಶ್ವರದ ಸರ್ಕಲ್ ಮಾರಮ್ಮ ದೇವಸ್ಥಾನ

ಕಾಂಗ್ರೆಸ್‌ನ ಪ್ರಿಯಾಂಕಾ ರಾಹುಲ್ ಜೋಡಿ
- ಮ.12.30ಕ್ಕೆ ದಕ್ಷಿಣಕನ್ನಡದ ಮೂಲ್ಕಿಯಲ್ಲಿ ಪ್ರಚಾರ ಸಭೆ
- ಬೆಂಗಳೂರಿನ ಮಹದೇವಪುರದಲ್ಲಿ ಪ್ರಚಾರ, ಶಿವಾಜಿನಗರದಲ್ಲಿ ಬಹಿರಂಗ ಸಭೆ

ಗೃಹ ಸಚಿವ ಅಮಿತ್ ಶಾ
- ವಿಜಯಪುರದಲ್ಲಿ ರೋಡ್ ಶೋ

ಮೋದಿ ವಿರುದ್ಧ ಕಾಂಗ್ರೆಸ್ ದೂರು

ರ‍್ಯಾಲಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹನುಮಂತನ ಜಪ ಮಾಡಿರುವುದರ ವಿರುದ್ಧ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಕಾಂಗ್ರೆಸ್ ಗುರುವಾರ ದೂರು ನೀಡಿದೆ.

ಪ್ರಣಾಳಿಕೆಯಲ್ಲಿ ಬಜರಂಗದಳ ಸಂಘಟನೆಯನ್ನು ನಿಷೇಧಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ಈ ವಿಷಯವನ್ನು ಪ್ರಸ್ತಾಪಿಸಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಪ್ರಧಾನಿ, ಮೇ 2ರಂದು ಹೊಸಪೇಟೆಯಲ್ಲಿ ನಡೆದ ರ‍್ಯಾಲಿಯಲ್ಲಿ 'ಆಂಜನೇಯನಿಗೆ ಬೀಗ ಹಾಕುತ್ತೀರಾ' ಎಂದು ಪ್ರಶ್ನಿಸಿದ್ದರು. ಬುಧವಾರ ನಡೆದ ಮೂರು ಭಾಷಣಗಳಲ್ಲೂ ಮೋದಿ 'ಜೈ ಬಜರಂಗಬಲಿ' ಎಂದು ಘೋಷಣೆ ಕೂಗಿದ್ದರು.

'ಮೋದಿ ಅವರು ಪ್ರಚಾರದಲ್ಲಿ ಹಿಂದೂ ದೇವರ ಹೆಸರು ಹೇಳುವುದನ್ನು ನಿರ್ಬಂಧಿಸಬೇಕು' ಎಂದು ದೂರಿನಲ್ಲಿ ಕಾಂಗ್ರೆಸ್ ಕೋರಿದೆ.

ಉದ್ಯೋಗದಾತರ ಮೊತ್ತದಿಂದಲೇ ಇಪಿಎಸ್‌ಗೆ ಶೇ 1.16 ದೇಣಿಗೆ

ನವದೆಹಲಿ (ಪಿಟಿಐ): ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯ (ಇಪಿಎಫ್‌ಒ) ಪಿಂಚಣಿ ಯೋಜನೆಯ ಅಡಿಯಲ್ಲಿ ಹೆಚ್ಚಿನ ಪಿಂಚಣಿ ಬಯಸುವವರ ಮೂಲವೇತನದ ಶೇಕಡ 1.16ರಷ್ಟು ದೇಣಿಗೆಯನ್ನು ಉದ್ಯೋಗದಾತರು ನೀಡುವ ಮೊತ್ತದಿಂದ ಭರಿಸಿಕೊಳ್ಳಲಾಗುತ್ತದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

'ಉದ್ಯೋಗದಾತರು ಪಿಎಫ್‌ಗೆ ನೀಡುವ ಶೇ 12ರಷ್ಟು ಮೊತ್ತದಿಂದಲೇ ಶೇ 1.16ರಷ್ಟು ಹೆಚ್ಚುವರಿ ಕೊಡುಗೆಯನ್ನು ಭರಿಸಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ಬುಧವಾರ ಹೊರಡಿಸಿದ ಪ್ರಕಟಣೆಯಲ್ಲಿ ಸಚಿವಾಲಯ ಹೇಳಿದೆ.

ಈಗಿರುವ ನಿಯಮಗಳ ಅನ್ವಯ, ನೌಕರರ ಪಿಂಚಣಿ ನಿಧಿಗೆ (ಇಪಿಎಸ್) ಕೇಂದ್ರ ಸರ್ಕಾರವು ನೌಕರರ ₹15 ಸಾವಿರದವರೆಗಿನ ಮೂಲ ವೇತನದ ಶೇಕಡ 1.16ರಷ್ಟು ಮೊತ್ತವನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತಿದೆ. ಮೂಲ ವೇತನವು ₹15 ಸಾವಿರಕ್ಕಿಂತ ಹೆಚ್ಚಿದ್ದರೆ, ಅದಕ್ಕೆ ಅನುಗುಣವಾಗಿ ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಈಗ ಜೂನ್ 26ರವರೆಗೆ ಅವಕಾಶ ಕಲ್ಪಿಸಲಾಗಿದೆ. ₹15 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ಮೂಲವೇತನದ ಶೇ 1.16ರಷ್ಟು ಮೊತ್ತವನ್ನು ಇಪಿಎಸ್‌ಗೆ ಭರಿಸುವವರು ಯಾರು ಎಂಬುದು ಈವರೆಗೆ ಸ್ಪಷ್ಟವಾಗಿರಲಿಲ್ಲ.

ತಮ್ಮ ಮೂಲವೇತನದ ಆಧಾರದಲ್ಲಿ (ಅಂದರೆ, ₹15 ಸಾವಿರಕ್ಕಿಂತ ಹೆಚ್ಚಿನ ಮೂಲವೇತನ) ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸುವವರು ಈ ಶೇ 1.16ರಷ್ಟು ಮೊತ್ತವನ್ನು ತಮ್ಮಿಂದ ಇಪಿಎಸ್‌ಗೆ ಕೊಡಬೇಕಾಗಿಲ್ಲ. ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಈ ತೀರ್ಮಾನವು ಪೂರ್ವಾನ್ವಯವಾಗಿ ಜಾರಿಗೆ ಬರಲಿದೆ ಎಂದು ಸಚಿವಾಲಯ ಹೇಳಿದೆ.

ಮೂಲವೇತನವು ₹15 ಸಾವಿರಕ್ಕಿಂತ ಹೆಚ್ಚಿದ್ದರೆ, ಹೆಚ್ಚಿನ ಮೊತ್ತಕ್ಕೆ ಸಂಬಂಧಿಸಿದ ಶೇ 1.16ರಷ್ಟು ಮೊತ್ತವನ್ನು ನೌಕರರೇ ಭರಿಸಬೇಕು ಎಂಬುದು ಕಾನೂನಿನ ಆಶಯಕ್ಕೆ ಮೀರಿದ್ದು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಮಣಿಪುರ ಉದ್ವಿಗ್ನ: 6 ಸಾವು, 'ಕಂಡಲ್ಲಿ ಗುಂಡು' ಆದೇಶ

ಇಂಫಾಲ್ (ಪಿಟಿಐ/ಎಎಫ್‌ಪಿ): ಮಣಿಪುರದ ಬಹುಸಂಖ್ಯಾತ ಮೈತೇಯಿ ಸಮುದಾಯ ಮತ್ತು ಬುಡಕಟ್ಟು ಸಮುದಾಯಗಳ ನಡುವೆ ಬುಧವಾರ ರಾತ್ರಿ ಸಂಘರ್ಷ ನಡೆದಿದೆ. 8 ಜಿಲ್ಲೆಗಳಲ್ಲಿ ಹಿಂಸಾಚಾರ ಭುಗಿಲೆದ್ದಿದೆ. 6 ಮಂದಿ ಮೃತಪಟ್ಟಿದ್ದಾರೆ.

ರಾಜಧಾನಿ ಇಂಫಾಲ್‌ನ ಕೆಲವೆಡೆ ಹಿಂಸೆ, ಬೆಂಕಿಹಚ್ಚುವ ಘಟನೆಗಳು ಗುರುವಾರ ನಡೆದವು. ಗಲಭೆಯನ್ನು ನಿಯಂತ್ರಿಸುವುದಕ್ಕಾಗಿ ಸರ್ಕಾರವು 'ಕಂಡಲ್ಲಿ ಗುಂಡು' ಆದೇಶ ನೀಡಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ ಸಂದರ್ಭದಲ್ಲಿ 'ಕಂಡಲ್ಲಿ ಗುಂಡು' ಪ್ರಯೋಗಿಸಲು ಸೂಚಿಸಲಾಗಿದೆ.

ಎಂಟು ಜಿಲ್ಲೆಗಳಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಭದ್ರತೆಗೆ ಸೇನೆ, ಅಸ್ಸಾಂ ರೈಫಲ್‌ನ 55 ತುಕಡಿಗಳು, ಸಿಆರ್‌ಪಿಎಫ್‌ನ 15 ತುಕಡಿಗಳನ್ನು ಕರೆಸಿದ್ದು, ಆಯಕಟ್ಟಿನ ಕಡೆಗಳಲ್ಲಿ ನಿಯೋಜಿಸಲಾಗಿದೆ. ಗಲಭೆ ವೇಳೆ ವಿವಿಧೆಡೆ ಅಂಗಡಿ, ಮಳಿಗೆಗಳಲ್ಲಿ ದಾಂದಲೆ ನಡೆಸಿ ಬೆಂಕಿ ಹಚ್ಚಲಾಗಿದೆ.

ಇನ್ನೊಂದು ಸುದ್ದಿ 11

ದೆಹಲಿಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಚಿನ್ನದ ದರ

ನವದೆಹಲಿ (ಪಿಟಿಐ): ದೆಹಲಿಯ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ಗುರುವಾರ ತಲುಪಿತು. ಚಿನ್ನದ ದರ 10 ಗ್ರಾಂಗೆ ₹940ರಷ್ಟು ಹೆಚ್ಚಾಗಿ ದಾಖಲೆಯ ₹62,020ರಂತೆ ಮಾರಾಟ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಬುಧವಾರ ತಡರಾತ್ರಿ ಏರಿಕೆ ಕಂಡಿದ್ದರಿಂದ ದೇಶದಲ್ಲಿಯೂ ಚಿನ್ನದ ದರ ಏರಿಕೆ ಕಂಡಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಬೆಳ್ಳಿ ಧಾರಣೆ ಕೆ.ಜಿಗೆ ₹660 ರಷ್ಟು ಏರಿಕೆ ಕಂಡು ₹76,700ಕ್ಕೆ ತಲುಪಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 2,039 ಡಾಲರ್ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ 25.50 ಡಾಲರ್‌ನಂತೆ ಗರಿಷ್ಠ ಮಟ್ಟದಲ್ಲಿ ಮಾರಾಟ ಆಯಿತು.

ಎಷ್ಟ್ ಐತಿ ಪಾಳಿ... ಹುಬ್ಬಳ್ಳಿ ಸಮೀಪದ ಬ್ಯಾಹಟ್ಟಿ ಗ್ರಾಮದಲ್ಲಿ ನೀರಿನ ಅಭಾವ ತಲೆದೋರಿದ್ದು, ನೀರು ಪಡೆಯಲು ಗುರುವಾರ ಇಟ್ಟಿದ್ದ ಕೊಡಗಳ ಸರದಿ
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಪದಕ, ಪ್ರಶಸ್ತಿ ವಾಪಸ್ ಕುಸ್ತಿಪಟುಗಳ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಂತರ್ ಮಂತರ್‌ನ ಧರಣಿ ಸ್ಥಳದಲ್ಲಿ ಬುಧವಾರ ರಾತ್ರಿ ಘರ್ಷಣೆಯ ವೇಳೆ ಪೊಲೀಸ್ ವರ್ತನೆಯಿಂದ ನೊಂದ ಕುಸ್ತಿಪಟುಗಳಾದ ವಿನೇಶಾ ಫೋಗಟ್ ಹಾಗೂ ಬಜರಂಗ್ ಪೂನಿಯಾ ಅವರು ತಮ್ಮ ಪದಕಗಳು ಹಾಗೂ ಪ್ರಶಸ್ತಿಗಳನ್ನು ಸರ್ಕಾರಕ್ಕೆ ಹಿಂತಿರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಇಂತಹ ಅವಮಾನಕ್ಕೆ ಒಳಗಾದ ಬಳಿಕ ಈ ಗೌರವಗಳನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದೂ ಅವರು ಹೇಳಿದ್ದಾರೆ. 'ಪೊಲೀಸರು ನಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಗೆದ್ದ ಪದಕಗಳಿಗೆ ಬೆಲೆ ಎಲ್ಲಿದೆ. ನಾವು ಸಾಮಾನ್ಯ ಜೀವನ ನಡೆಸುತ್ತೇವೆ. ಎಲ್ಲ ಪದಕ ಹಾಗೂ ಪ್ರಶಸ್ತಿಗಳನ್ನು ಭಾರತ ಸರ್ಕಾರಕ್ಕೆ ಹಿಂತಿರುಗಿಸುತ್ತೇವೆ' ಎಂದು ಬಜರಂಗ್ ಹೇಳಿದರು.

'ನಾವು ಪದ್ಮಶ್ರೀ ಪುರಸ್ಕೃತರು ಎಂಬುದನ್ನು ಗಮನಿಸದೆಯೇ ಪೊಲೀಸರು ನಮ್ಮನ್ನು ತಳ್ಳಿದರು, ನಿಂದಿಸಿದರು, ಕೆಟ್ಟದಾಗಿ ವರ್ತಿಸಿದರು. ಸಾಕ್ಷಿ ಮಲಿಕ್ ಅವರಿಗೂ ಈ ಅನುಭವ ಆಗಿದೆ' ಎಂದು ಅವರು ತಿಳಿಸಿದರು.

ವಿನೇಶಾ, ಸಾಕ್ಷಿ ಮತ್ತು ಬಜರಂಗ್ – ಈ ಮೂವರೂ 'ಖೇಲ್‌ರತ್ನ' ಪಡೆದವರು. 2017ರಲ್ಲಿ ಸಾಕ್ಷಿ, 2019ರಲ್ಲಿ ಬಜರಂಗ್ ಪದ್ಮಶ್ರೀ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ.

ಇನ್ನಷ್ಟು ಸುದ್ದಿಗಳು 12

ಅಡುಗೆ ಎಣ್ಣೆ ಬೆಲೆ ಇಳಿಸಿದ ಮದರ್ ಡೇರಿ

ನವದೆಹಲಿ (ಪಿಟಿಐ): ಮದರ್ ಡೇರಿ 'ಧಾರಾ' ಬ್ರ್ಯಾಂಡ್ ಅಡಿಯಲ್ಲಿ ಮಾರಾಟ ಮಾಡುವ ಅಡುಗೆ ಎಣ್ಣೆಗಳ ಗರಿಷ್ಠ ಮಾರಾಟ ಬೆಲೆಯನ್ನು (ಎಂಆರ್‌ಪಿ) ಪ್ರತಿ ಲೀಟರ್‌ಗೆ ₹ 15ರಿಂದ ₹ 20ರವರೆಗೆ ಕಡಿತ ಮಾಡಿದೆ. ಈ ಇಳಿಕೆಯು ತಕ್ಷಣದಿಂದಲೇ ಜಾರಿಗೆ ಬರುತ್ತಿದೆ. ಅಡುಗೆ ಎಣ್ಣೆಗಳ ಬೆಲೆಯು ಜಾಗತಿಕ ಮಾರುಕಟ್ಟೆಯಲ್ಲಿ ಇಳಿಕೆ ಕಂಡಿರುವ ಕಾರಣ, ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆ ಇಳಿಕೆ ಮಾಡಲಾಗಿದೆ.

ಪರಿಷ್ಕೃತ ಎಂಆರ್‌ಪಿ ಇರುವ ಅಡುಗೆ ಎಣ್ಣೆಗಳು ಮುಂದಿನ ವಾರ ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ.

10ನೇ ಪುಟ ನೋಡಿ

ಪ್ರಜಾ ಮತ
ಜನತಂತ್ರದ ಹಬ್ಬ
ಕನಕಪುರ 'ಬಂಡೆ' ಒಡೆಯಲು 'ಅಶೋಕ' ಡೈನಮೈಟ್? 7
ಮುಳುಗಡೆ ಜಿಲ್ಲೆಯಲ್ಲಿ ತೇಲುವವರು ಯಾರು? 6

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಹೆಣ್ಣು ಸಿಗದವರಿಗೆ ಮದುವೆ ಮಾಡಿಸುತ್ತೇವೆ'

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ರಾಷ್ಟ್ರೀಯ ಪಕ್ಷಗಳು ಮತದಾರರ ಓಲೈಕೆಗಾಗಿ ಭರವಸೆಗಳ ಮಹಾಪೂರವನ್ನೇ ಹರಿಸುತ್ತಿವೆ. ಜಿಲ್ಲೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿರುವ ಇಬ್ಬರು ಸಹೋದರರು, 'ನಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿದರೆ, ವಿವಾಹವಾಗದ ಮತ್ತು ಹೆಣ್ಣು ಸಿಗದವರಿಗೆ ಮದುವೆ ಮಾಡಿಸುತ್ತೇವೆ' ಎಂಬ ಭರವಸೆಯನ್ನು ಪ್ರಣಾಳಿಕೆಯಲ್ಲಿ ಸೇರಿಸಿರುವುದು ಎಲ್ಲರ ಗಮನ ಸೆಳೆದಿದೆ.

ಅರಭಾವಿ ಕ್ಷೇತ್ರದಿಂದ ಗುರುಪುತ್ರ ಕುಳ್ಳೂರ, ಗೋಕಾಕ ಮತ್ತು ಹುಕ್ಕೇರಿ ಕ್ಷೇತ್ರಗಳಿಂದ ಅವರ ಸಹೋದರ ಪುಂಡಲಿಕ ಚುನಾವಣಾ ಅಖಾಡಕ್ಕಿಳಿದಿದ್ದಾರೆ. ಅವರು ತಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ 'ವಧು-ವರರಿಗೆ ಮದುವೆ ಭಾಗ್ಯ ಯೋಜನೆ-2023 ಗ್ಯಾರಂಟಿ' ಎಂದು ಘೋಷಿಸಿದ್ದಾರೆ. ಈ ಪ್ರಣಾಳಿಕೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ನಾನು ಚುನಾವಣೆಗೆ ಸ್ಪರ್ಧಿಸುವ ಮುನ್ನ, ಕ್ಷೇತ್ರದ ಜನರ ಸಮಸ್ಯೆಗಳನ್ನು ಆಲಿಸಿದ್ದೆ. ಆಗ, ಬಡವರು, ರೈತರ ಮಕ್ಕಳಿಗೆ ಮದುವೆಯಾಗಲು ಹೆಣ್ಣು ಕೊಡುತ್ತಿಲ್ಲ ಎಂದು ಹಲವರು ಬೇಸರ ವ್ಯಕ್ತಪಡಿಸಿದರು. ಹಾಗಾಗಿ, ನನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅದನ್ನೇ ಮೊದಲ ಭರವಸೆಯನ್ನಾಗಿಸಿದ್ದೇನೆ' ಎಂದು ಬಿ.ಎಸ್‌ಸಿ ಪದವೀಧರ ಗುರುಪುತ್ರ 'ಪ್ರಜಾವಾಣಿ'ಗೆ ತಿಳಿಸಿದರು.

> **ನಾನು ಮತ್ತು ಸಹೋದರ 3 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದೇವೆ. ಉತ್ತಮ ಸ್ಪಂದನೆಯಿದೆ. ವಿವಾಹ ಆಗದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ**
> **ಗುರುಪುತ್ರ ಕುಳ್ಳೂರ,** ಪಕ್ಷೇತರ ಅಭ್ಯರ್ಥಿ, ಅರಭಾವಿ ಕ್ಷೇತ್ರ

11ನೇ ಪುಟ ನೋಡಿ



ಲುಲು ಫ್ಯಾಶನ್ ವೀಕ್ ಇಂದಿನಿಂದ

ಬೆಂಗಳೂರು: ಲುಲು ಮಾಲ್‌ನಲ್ಲಿ ಮೇ 5ರಿಂದ 7ರ ವರೆಗೆ 'ಲುಲು ಫ್ಯಾಶನ್ ವೀಕ್' ನಡೆಯಲಿದೆ. ಇದರಲ್ಲಿ ಹಲವಾರು ಬ್ರ್ಯಾಂಡ್‌ಗಳ ಬೇಸಿಗೆ ಬಟ್ಟೆಗಳ ಪ್ರದರ್ಶನ ನಡೆಯಲಿದೆ.

ಈ ಕಾರ್ಯಕ್ರಮವನ್ನು ಫ್ಲೈಯಿಂಗ್ ಮಷಿನ್ ಸಹಯೋಗದೊಂದಿಗೆ ಅಮೇರಿಕನ್ ಬಟ್ಟೆ ಕಂಪನಿ ಲೆವಿಸ್ ಪ್ರಸ್ತುತ ಪಡಿಸುತ್ತಿದೆ. ಫ್ಯಾಷನ್ ಫೋರಂ ಫ್ಯಾಷನ್, ಮನರಂಜನೆ ಮತ್ತು ಚಿಲ್ಲರೆ ಉದ್ಯಮಗಳ ವೃತ್ತಿಪರರನ್ನು ಇಲ್ಲಿ ಒಟ್ಟುಗೂಡಿಸಲಾಗುತ್ತಿದೆ. ಫ್ಯಾಶನ್ ರಂಗದಲ್ಲಿನ ಇತ್ತೀಚಿನ ಟ್ರೆಂಡ್‌ಗಳನ್ನು ರಾಜ್ಯದ ಜನರಿಗೆ ಪರಿಚಯಿಸುವುದು ಲುಲು ಫ್ಯಾಶನ್ ವೀಕ್‌ನ ಮುಖ್ಯ ಉದ್ದೇಶವಾಗಿದೆ.

ಉತ್ತಮ ಉಡುಪುಗಳ ಬ್ರ್ಯಾಂಡ್‌ಗಳು ಪ್ರಸ್ತುತ ಪಡಿಸುವವರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಸೆಲೆಬ್ರೆಟಿಗಳು ಫ್ಯಾಶನ್ ಬಟ್ಟೆಗಳನ್ನು ಧರಿಸುವುದರೊಂದಿಗೆ ನೃತ್ಯ ಮಾಡಲಿದ್ದಾರೆ. ಈ ಕಾರ್ಯಕ್ರಮವನ್ನು ಸೆಲೆಬ್ರಿಟಿ ಸ್ಟೈಲಿಸ್ಟ್ ರಾಜೇಶ್ ಶೆಟ್ಟಿ ವಹಿಸಲಿದ್ದಾರೆ.

ಸುಧಾ, ಮಯೂರ ಓದಿರಿ

ಮತ ದತ್ತಾಂಶ ಮಾರಾಟ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ದತ್ತಾಂಶ ಮಾರಾಟ ಪ್ರಕರಣವನ್ನು ಭೇದಿಸಿರುವ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು, ಪ್ರಮುಖ ಆರೋಪಿ ಎನ್ನಲಾದ ಸೆಂಥಿಲ್ ಎಂಬವರನ್ನು ತಮಿಳುನಾಡಿನಲ್ಲಿ ಬಂಧಿಸಿದ್ದಾರೆ.

'ಸೈಬರ್ ಅಪರಾಧ ಹಿನ್ನೆಲೆಯುಳ್ಳ ಸೆಂಥಿಲ್, ಮತದಾರರು ಹಾಗೂ ಇತರೆ ದತ್ತಾಂಶವನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದ. ಈತನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣವೊಂದರಲ್ಲಿ ಸೆಂಥಿಲ್‌ನನ್ನು ಬಂಧಿಸಿದ್ದ ಪೊಲೀಸರು, ಜೈಲಿಗೆ ಕಳುಹಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಈತ, ತಮಿಳುನಾಡಿನಲ್ಲಿ ನೆಲೆಸಿದ್ದ. ವ್ಯವಸ್ಥಿತ ಜಾಲ ರೂಪಿಸಿಕೊಂಡು ದತ್ತಾಂಶ ಮಾರಾಟಕ್ಕೆ ಇಳಿದಿದ್ದ. ಈತನ ಬಗ್ಗೆ ಮಾಹಿತಿ ಸಂಗ್ರಹಿಸಿ ತಮಿಳುನಾಡಿನಲ್ಲಿ ಬಂಧಿಸಲಾಗಿದೆ. ಆರೋಪಿ ಸೆಂಥಿಲ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಜಾಲತಾಣದಲ್ಲಿ ದತ್ತಾಂಶ: 'ಕರ್ನಾಟಕ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳ ಮತದಾರರ ದತ್ತಾಂಶವನ್ನು ಆರೋಪಿ ಸಂಗ್ರಹಿಸಿದ್ದ. ಮತದಾರರ ಹೆಸರು, ಮೊಬೈಲ್ ಸಂಖ್ಯೆ, ವಿಳಾಸ ಹಾಗೂ ಇತರೆ ಮಾಹಿತಿ ಆರೋಪಿ ಬಳಿ ಇರುವುದು ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೆಂಥಿಲ್ ಹಾಗೂ ಇತರರು ಸೇರಿಕೊಂಡು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ್ದಾರೆ. ಅದರ ಮೂಲಕ ದತ್ತಾಂಶವನ್ನು ಸಂಗ್ರಹಿಸಿಟ್ಟಿದ್ದಾರೆ. 'ವೋಟರ್ಸ್ ಡಾಟಾ ಡಾಟ್ ಇನ್' ಜಾಲತಾಣದಲ್ಲಿ ದತ್ತಾಂಶ ಅಪ್‌ಲೋಡ್ ಮಾಡಿ ಮಾರಾಟಕ್ಕೆ ಇರಿಸಿದ್ದರು' ಎಂದಿವೆ.

ಕಾಲ್ ಸೆಂಟರ್ ಸಿಬ್ಬಂದಿಗೆ ಕಮಿಷನ್

'2023ರ ಚುನಾವಣೆಯಲ್ಲಿ ನಿಮ್ಮ ಕ್ಷೇತ್ರದ ದತ್ತಾಂಶವನ್ನು ಕೇವಲ ₹ 25,000ಕ್ಕೆ ಖರೀದಿಸಿ, ಗೆಲುವು ನಿಮ್ಮದಾಗಿಸಿಕೊಳ್ಳಿ' ಎಂಬುದಾಗಿ ಮೊಬೈಲ್ ನಂಬರ್ ಸಮೇತ ಆರೋಪಿಗಳು ಜಾಹೀರಾತು ನೀಡುತ್ತಿದ್ದರು. ಯಾರಾದರೂ ಕರೆ ಮಾಡಿದರೆ, ಕಾಲ್ ಸೆಂಟರ್ ಸಿಬ್ಬಂದಿಗೆ ಕರೆ ಹೋಗುತ್ತಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಕರೆಗೆ ಸ್ಪಂದಿಸುತ್ತಿದ್ದ ಸಿಬ್ಬಂದಿ, ₹ 25 ಸಾವಿರ ಹಣ ಪಡೆದುಕೊಂಡು ಜಾಲತಾಣದ ಯೂಸರ್ ಐಡಿ ನೀಡುತ್ತಿದ್ದರು. ಅದೇ ಹಣ ಸೆಂಥಿಲ್ ಹಾಗೂ ಇತರರಿಗೆ ಹೋಗುತ್ತಿತ್ತು. ಕಾಲ್ ಸೆಂಟರ್ ಸಿಬ್ಬಂದಿಗೆ ಕಮಿಷನ್ ಬರುತ್ತಿತ್ತು' ಎಂದು ತಿಳಿಸಿವೆ.

ಗುರುತಿನ ಚೀಟಿ ಸಂಗ್ರಹ: ಮಹಿಳೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮನೆಗೆ ಹೋಗಿ ಮತದಾನ ಗುರುತಿನ ಚೀಟಿ ಹಾಗೂ ಆಧಾರ್ ಸಂಗ್ರಹಿಸುತ್ತಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ವಶಕ್ಕೆ ಪಡೆದಿದ್ದ ಭಾರತಿನಗರ ಠಾಣೆ ಪೊಲೀಸರು, ವಿಚಾರಣೆ ನಡೆಸಿ ಬಿಟ್ಟು ಕಳುಹಿಸಿದ್ದಾರೆ.

'ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಮಕಾನ್ ರಸ್ತೆಯಲ್ಲಿರುವ ಕೆಲ ಮನೆಗಳಿಗೆ ಹೋಗಿದ್ದ ಮಮ್ತಾಜ್ ಬೇಗಂ ಎಂಬುವವರು ಮತದಾರರ ಬಳಿಯ ಮತದಾನ ಗುರುತಿನ ಚೀಟಿ ಹಾಗೂ ಆಧಾರ್ ಸಂಗ್ರಹಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಚುನಾವಣಾಧಿಕಾರಿಗಳ ತಂಡ ಸ್ಥಳಕ್ಕೆ ಹೋಗಿ ವಿಚಾರಣೆ ನಡೆಸಿತ್ತು. ಅಧಿಕಾರಿಗಳು ನೀಡಿರುವ ದೂರು ಆಧರಿಸಿ ಮಹಿಳೆ ವಿರುದ್ಧ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಮ್ತಾಜ್ ಅವರ ಬಳಿ ನಾಲ್ಕು ಮತದಾನ ಗುರುತಿನ ಚೀಟಿ ಹಾಗೂ ನಾಲ್ಕು ಆಧಾರ್ ಪತ್ತೆಯಾಗಿವೆ. ಅವುಗಳನ್ನು ಜಪ್ತಿ ಮಾಡಲಾಗಿದೆ. 'ಹಬ್ಬದ ಉಡುಗೊರೆ ನೀಡುವ ಸಲುವಾಗಿ ಗುರುತಿನ ಚೀಟಿ ಸಂಗ್ರಹಿಸುತ್ತಿದ್ದೆ' ಎಂಬುದಾಗಿ ಮಹಿಳೆ ತಿಳಿಸಿದ್ದಾರೆ. ಅವರ ಹೇಳಿಕೆ ದಾಖಲಿಸಿಕೊಂಡು, ಬಿಟ್ಟು ಕಳುಹಿಸಲಾಗಿದೆ' ಎಂದು ತಿಳಿಸಿದರು.

'ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವಾಗ ಮತದಾನ ಗುರುತಿನ ಚೀಟಿ ಸಂಗ್ರಹಿಸುವುದು ಕಾನೂನು ಬಾಹಿರ. ಹೀಗಾಗಿ, ಮಹಿಳೆ ವಿರುದ್ಧ ಸದ್ಯಕ್ಕೆ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನಂತೆ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

₹1 ಸಾವಿರ ಆಮಿಷ: 'ಮತದಾನ ಗುರುತಿನ ಚೀಟಿ ನೀಡಿದವರಿಗೆ ತಲಾ ₹ 1 ಸಾವಿರ ನೀಡುವುದಾಗಿ ಮಹಿಳೆ ಆಮಿಷವೊಡ್ಡಿರುವ ಮಾಹಿತಿ ಇದೆ. ಆದರೆ, ಮಹಿಳೆ ಬಳಿ ಯಾವುದೇ ಹಣ ಪತ್ತೆಯಾಗಿಲ್ಲ' ಎಂದು ಪೊಲೀಸರು ತಿಳಿಸಿದರು.

ಬಸವನಗುಡಿಯ ವಿಧಾನಸಭೆ ಕ್ಷೇತ್ರದ ಐಟಿಐ ಲೇಔಟ್‌ನಲ್ಲಿರುವ ಹರಕೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬಿಜೆಪಿ ಬೆಂಬಲಿಗರು ಗುರುವಾರ ಹನುಮಾನ್ ಚಾಲೀಸಾ ಪಠಣ ಮಾಡಿದರು –ಪ್ರಜಾವಾಣಿ ಚಿತ್ರ

₹ 7.92 ಕೋಟಿ ಮೌಲ್ಯದ ಸ್ವತ್ತು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ರಾಜ್ಯದ ವಿವಿಧೆಡೆ ಗುರುವಾರ ನಡೆಸಿದ ಕಾರ್ಯಾಚರಣೆಗಳಲ್ಲಿ ₹ 83.41 ಲಕ್ಷ ನಗದು ಸೇರಿದಂತೆ ₹ 7.92 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

'₹ 2.63 ಕೋಟಿ ಮೌಲ್ಯದ 91,054 ಲೀಟರ್ ಮದ್ಯ, ₹ 48.11 ಲಕ್ಷ ಮೌಲ್ಯದ 95.54 ಕೆ.ಜಿ. ಮಾದಕವಸ್ತು, ₹ 2.76 ಕೋಟಿ ಮೌಲ್ಯದ 5.55 ಕೆ.ಜಿ. ಚಿನ್ನ, ₹ 1.21 ಕೋಟಿ ಮೌಲ್ಯದ ಉಚಿತ ಕೊಡುಗೆಗಳನ್ನು ಗುರುವಾರ ವಶಪಡಿಸಿಕೊಳ್ಳಲಾಗಿದೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಮಗಳ ಭೇಟಿಗೆ ತಂದೆಗೆ ಅವಕಾಶ ನೀಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಂಡ ನನ್ನನ್ನು ತ್ಯಜಿಸಿದ ನಂತರ ಎರಡು ಮದುವೆಯಾಗಿದ್ದಾನೆ. ಮಗಳನ್ನು ನೋಡಲು ಒಮ್ಮೆಯೂ ಬರಲಿಲ್ಲ. ಇಂತಹ ಮನುಷ್ಯನಿಗೆ ತನ್ನ ಮಗಳನ್ನು ಭೇಟಿ ಮಾಡುವ ಹಕ್ಕು ನೀಡಬಾರದು' ಎಂಬ ಮಹಿಳೆಯೊಬ್ಬರ ವಾದವನ್ನು ತಿರಸ್ಕರಿಸಿರುವ ಹೈಕೋರ್ಟ್, ಮಗಳನ್ನು ಭೇಟಿ ಮಾಡಲು ತಂದೆಗೆ ಅನುಮತಿ ನೀಡುವ ಮೂಲಕ ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಎತ್ತಿಹಿಡಿದಿದೆ.

ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಲೋಕ್ ಆರಾಧೆ ಮತ್ತು ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ಪೀಠ ಈ ಕುರಿತಂತೆ ಆದೇಶಿಸಿದೆ.

'ಮಗಳು ತಂದೆಯ ಆರೈಕೆ, ಪ್ರೀತಿ ಮತ್ತು ವಾತ್ಸಲ್ಯವನ್ನು ಕಾಣಬೇಕಿದೆ. ಅದಕ್ಕಾಗಿ ಶಾಲೆಗೆ ರಜೆಯಿದ್ದ ಸಂದರ್ಭದಲ್ಲಿ ಭೇಟಿ ಮಾಡುವ ಮತ್ತು ತನ್ನ ಮನೆಗೆ ಕರೆದುಕೊಂಡು ಹೋಗಲು ತಂದೆಗೆ ಅನುಮತಿ ನೀಡಿ ಕೌಟುಂಬಿಕ ನ್ಯಾಯಾಲಯ ಆದೇಶಿಸಿದೆ. ಮಗಳ ಭೇಟಿಯ ಹಕ್ಕನ್ನು ವಿಚ್ಛೇದಿತ ಪತಿಗೆ ದಯಪಾಲಿಸಿದರೆ, ಕ್ಷೇಮವಾಗಿರುವ ಮಗುವಿನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಈ ಆತಂಕವನ್ನು ಪರಿಗಣಿಸಿಯೇ ಕೌಟುಂಬಿಕ ನ್ಯಾಯಾಲಯ ಮಗಳ ಶಾಶ್ವತ ಸುಪರ್ದಿಯನ್ನು ತಾಯಿಗೆ ನೀಡಿದೆ ಮತ್ತು ತಂದೆಗೆ ಕೇವಲ ಭೇಟಿಯ ಹಕ್ಕನ್ನು ನೀಡಿದೆ. ಹೀಗಾಗಿ, ಕೌಟುಂಬಿಕ ನ್ಯಾಯಾಲಯ ನೀಡಿರುವ ಆದೇಶದಲ್ಲಿ ಮಧ್ಯ ಪ್ರವೇಶಿಸುವ ಅಗತ್ಯವಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

ನಗರದಲ್ಲಿ ಇಂದು

ಬುದ್ಧ ಜಯಂತಿ: ಬೆಳಿಗ್ಗೆ 9ಕ್ಕೆ ಬುದ್ಧ ವಂದನೆ, ಉದ್ಘಾಟನೆ: ಎನ್. ಮಹೇಶಬಾಬು, ಉಪನ್ಯಾಸ: ಮಹದೇವ ಕಲ್ಲೇರಪುರ, ಅಧ್ಯಕ್ಷತೆ: ಸಿ.ಬಿ. ಹೊನ್ನಸಿದ್ಧಾರ್ಥ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಬಾಬಾಸಾಹೇಬ್ ಡಾ.ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜ್ಞಾನಭಾರತಿ ಆವರಣ, ಮಧ್ಯಾಹ್ನ 3

'ದ ಗ್ಲೋರಿ ದಟ್ ವಾಸ್ ದ ಒಡೆಯರ್ಸ್ ಆಫ್ ಮೈಸೂರು' ಪುಸ್ತಕ ಬಿಡುಗಡೆ: ಅತಿಥಿಗಳು: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಗುರುರಾಜ ಕರಜಗಿ, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ: ಜ್ಞಾನ ದೀಪಿಕಾ ಎಜುಕೇಷನ್ ಟ್ರಸ್ಟ್, ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿಯ ಸಭಾಂಗಣ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10.30

ಯದುವೀರ್

ಸಂಸ್ಥಾಪನಾ ದಿನಾಚರಣೆ, ಶತಮಾನೋತ್ಸವ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಜಿ. ಅಬ್ದುಲ್ ಬಷೀರ್, ಅಧ್ಯಕ್ಷತೆ: ಮಹೇಶ ಜೋಶಿ, 'ಶತಮಾನೋತ್ಸವ' ದತ್ತಿ ಪುರಸ್ಕೃತರು: ಮನು ಬಳಿಗಾರ, 'ಗೌರಮ್ಮ ಗಂಗಾಧರಯ್ಯ ಸಿಬ್ಬಂದಿ ಸೇವಾ' ದತ್ತಿ ಪುರಸ್ಕೃತರು: ಎನ್. ಕೃಷ್ಣಮೂರ್ತಿ, ಎ. ಅಮರನಾಥ್, ನ. ಚಕ್ರಪಾಣಿ, ಕೆ. ರಾಮೇಗೌಡ, 'ರಮಾದೇವಿ ವಿಶ್ವೇಶ್ವರಯ್ಯ' ದತ್ತಿ ಪುರಸ್ಕೃತರು: ಎಚ್. ಮಂಜುಳಾ, 'ಕನ್ನಡ ಅಸ್ಮಿತೆ, ಕನ್ನಡ ಸಾಹಿತ್ಯ ಪರಿಷತ್ತು' ಕುರಿತು ಉಪನ್ಯಾಸ: ಎಂ.ಎಲ್. ಶಂಕರಲಿಂಗಪ್ಪ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ 11

ಬಸವ ಮತ್ತು ಬುದ್ಧ ಜಯಂತಿ: ಅತಿಥಿಗಳು: ಪಿ.ವಿ. ನಾರಾಯಣ, ನಿರ್ಮಲ್‌ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಭಾರತ್ ವಿದ್ಯಾ ಸಂಸ್ಥೆ, ಬಿ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಜಯನಗರ, ಬೆಳಿಗ್ಗೆ 11

'ಶ್ರೀಕೃಷ್ಣ ಸಂಧಾನ' ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ಎಚ್.ಎಸ್. ಗೋವಿಂದೇಗೌಡ, ಅಧ್ಯಕ್ಷತೆ: ರಂಗಶ್ರೀ ರಂಗಸ್ವಾಮಿ, ಆಶಾ ಸದ್ಗುರು, ಸಂಗೀತ ನಿರ್ದೇಶನ: ಕಲ್ಲೂರು ಶ್ರೀನಿವಾಸ್, ಆಯೋಜನೆ: ಆಶಾ ಸದ್ಗುರು ಸಾಂಸ್ಕೃತಿಕ ಕಲಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 12

ವೆಂಕಟಾಚಲಪತಿ ಅವರ 'ನನ್ನ ಜೀವನ ಶಿಲ್ಪ' ಆತ್ಮಕಥನ ಬಿಡುಗಡೆ: ಪ್ರಸನ್ನ, ಪುಸ್ತಕದ ಕುರಿತು: ಕೆ.ವಿ. ಸುಬ್ರಮಣ್ಯಂ, ಅತಿಥಿ: ಕರುಣಾಮೂರ್ತಿ ಎನ್., ಅಧ್ಯಕ್ಷತೆ: ವಿಜಯಾ, ಉಪಸ್ಥಿತಿ: ವೆಂಕಟಾಚಲಪತಿ, ಆಯೋಜನೆ: ಸ್ಟುಡಿಯೋ 94, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

ಪ್ರಸನ್ನ

ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಶ್ರೀರಾಮೇಗೌಡ, 'ಕನ್ನಡದ ಅಸ್ಮಿತೆ–ಕನ್ನಡ ಸಾಹಿತ್ಯ ಪರಿಷತ್ತು' ಕುರಿತು ಉಪನ್ಯಾಸ: ಶ್ರ.ದೇ. ಪಾರ್ಶ್ವನಾಥ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ, ಶ್ರೀಕೃಷ್ಣರಾಜ ಪರಿಷ್ಮಂದಿರದ ಕಟ್ಟಡ, ಚಾಮರಾಜಪೇಟೆ, ಸಂಜೆ 5.30

ಚೈತನ್ಯ ಸಂಜೆ–857: ಅಧ್ಯಕ್ಷತೆ: ದಿಬ್ಬೂರು ಎಸ್. ಗಿರೀಶ್, 'ನಗೆಯ ಮಾರಿತಂದೆಯ ನಗಿಸುವ ಕಾಯಕ' ಕುರಿತು ಉಪನ್ಯಾಸ: ಶಿವಕುಮಾರ್ ಎ.ಆರ್., ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ರೇಣುಕಾ ಶಂಕರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್ ಕಾಲೇಜು ಸಭಾಂಗಣ, ಜಯನಗರ, ಸಂಜೆ 5.30

ಪ್ರವಚನ ವಾಹಿನಿ: ಸತ್ಯನಾರಾಯಣ ಸ್ವಾಮಿ ಸಾಮೂಹಿಕ ಪೂಜೆ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

CONNECT

R.E.S. POLYTECHNIC
Estd: 1986 - Recognised by Govt. of Karnataka & AICTE
Visit us for ADMISSIONS & CAREER GUIDANCE
JOIN DIPLOMA IN: Computer Science, Civil, Mechanical, Automobile, Electrical, Electronics, Fashion Tech, Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-23401

GRAND AKSHAYA — RK DEVELOPERS
Limited PLOTS SALE
90% LOAN AVAILABLE
LUXURY Independent Plots
Avani Shringeri Nagar
74831 41526

BUSINESS LOANS
We Arrange Business Loans of Rs. 5 Lakhs to Rs. 500 crore From Leading NBFC/Banks, Collateral Properties also can be arranged for eligible Companies
Contact: 70906 69996
www.wonfinsolutions.com

ಶ್ರವಣ ದೋಷ?
NOW IN (OMBR LAYOUT)
signia Be Brilliant
GRAND OPENING
5th MAY 2023
SPECIAL OFFER WEEK
Styletto AX | Pure Charge&Go AX | Insio Charge&Go AX | Pure 312 AX
BHARATHI ENTERPRISES
SPEECH & HEARING CENTRE
No.624/1, Shop No. 3, 5th Main, B.Channasandra Main Road, Kasturi Nagar, OMBR Layout, Bengaluru - 43.
Phone : 080-42108445, Mobile : 9686664867 / 9901487270
Email: bharathihearing@gmail.com | www.bharathihearingcarecentre.com

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಸಿಎನ್–04–2023–ಆರ್‌ಟಿ
ದಿನಾಂಕ : 28–04–2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ತುಮಕೂರು – ಚಿತ್ರದುರ್ಗ – ದಾವಣಗೆರೆ ಸೆಕ್ಷನ್‌ನ ತಿಮ್ಮರಾಜನಹಳ್ಳಿ ನಿಲ್ದಾಣದಲ್ಲಿ ಹೊಸ ನಿಲ್ದಾಣ ಕಟ್ಟಡಗಳು, ಪ್ಲಾಟ್‌ಫಾರಂಗಳು, ಪಿಎಫ್ ಶೆಲ್ಟರ್ ಮತ್ತು ಇತರ ಪ್ರಯಾಣಿಕ ಸೌಕರ್ಯಗಳ ಉದ್ದೇಶಿತ ನಿರ್ಮಾಣಕ್ಕಾಗಿ ವಿದ್ಯುತ್ ಸರಬರಾಜು ಮತ್ತು ಬೆಳಕಿನ ವ್ಯವಸ್ಥೆಗಳು ಹಾಗೂ ಊರುಕೆರೆಯಿಂದ ತಿಮ್ಮರಾಜನಹಳ್ಳಿಯ ನಡುವೆ ಸಂಚಾರ ಸೌಕರ್ಯಗಳಿಗಾಗಿ ಬೆಳಕಿನ ವ್ಯವಸ್ಥೆಗಳನ್ನು ಒಳಗೊಂಡಂತೆ ಹಾಲಿ ಇರುವ ಹೆಚ್‌ಟಿ / ಎಲ್‌ಟಿ ವಿದ್ಯುತ್ ಮಾರ್ಗ ಹೊಂದಿಕೆಯ ಮಾರ್ಪಾಡು / ಸ್ಥಳಾಂತರ.	ರೂ. 2,80,85,682.44

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–05–2023 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ / ಸಿಎನ್ ಬೆಂಗಳೂರು ದಂಡು
ಪಿಯುಬಿ/62/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಟೆಂಡರ್ ಪ್ರಕಟಣೆ ಸಂ. ಇಸಿಎನ್–ಟಿಆರ್‌ಡಿ–01–2023
ದಿನಾಂಕ : 01–05–2023

ಕೆಲಸದ ಹೆಸರು	ಅಂದಾಜು ಮೌಲ್ಯ
ಯಲಹಂಕ ಟ್ರ್ಯಾಕ್ಷನ್ ಉಪನಿಲ್ದಾಣದಲ್ಲಿ 21.6/30.5 ಎಂವಿಎ 220ಕೆವಿ/27ಕೆವಿ ಟ್ರ್ಯಾಕ್ಷನ್ ಪರಿವರ್ತಕದ ಮರುಸ್ಥಾಪನೆ.	ರೂ. 1,19,74,918.72/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26–05–2023 ರಂದು 11:00 ಗಂಟೆವರೆಗೆ
ಟೆಂಡರ್ ಪ್ರಕಟಣೆ ಸಂ. ಇಸಿಎನ್–ಟಿಆರ್‌ಡಿ–09–2023
ದಿನಾಂಕ : 28–04–2023

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ದಂಡು ನಿಲ್ದಾಣದ ಪುನರಾಭಿವೃದ್ಧಿ ಯೋಜನೆಯ ಭಾಗವಾಗಿ ಬೆಂಗಳೂರು ದಂಡು ಯಾರ್ಡ್‌ನಲ್ಲಿ (ಡೆಮು ಶೆಡ್ ಭಾಗ) ಓಹೆಚ್‌ಇ ಮಾರ್ಪಾಡುಗಳು.	ರೂ. 61,98,072/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–05–2023 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ / ಸಿಎನ್ ಬೆಂಗಳೂರು ದಂಡು
ಪಿಯುಬಿ/66/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2023–24/04
ದಿನಾಂಕ : 25–04–2023

ಕೆಲಸದ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್) ಅಶೋಕಪುರಂ – ಅಶೋಕಪುರಂ ಯಾರ್ಡ್ ಮರುರೂಪಿಸುವಿಕೆಗಾಗಿ ಹೆಚ್ಚುವರಿ ಕಾಮಗಾರಿಗಳ ಅವಶ್ಯಕತೆ.	ರೂ. 37,24,851/–

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2023–24/05
ದಿನಾಂಕ : 25–04–2023

ಕೆಲಸದ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್) ಎಸ್‌ಎಸ್‌ಇ/ಇ/ಎಎಸ್‌ಕೆ ವ್ಯಾಪ್ತಿಗಾಗಿ ಒಂದು ವರ್ಷದ ಅವಧಿಗೆ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ)	ರೂ. 17,00,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17–05–2023 ರಂದು 11:00 ಗಂಟೆಯವರೆಗೆ
ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2023–24/06
ದಿನಾಂಕ : 29–04–2023

ಕೆಲಸದ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್) ಮೈಸೂರು – ಹಾಸನ ಸೆಕ್ಷನ್‌ನಲ್ಲಿ ಮೈಸೂರು ವಿಭಾಗದ ಸಾಗರಕಟ್ಟೆ, ಕೃಷ್ಣರಾಜನಗರ, ಹೊಸ ಅಗ್ರಹಾರ, ಅಕ್ಕಿಹೆಬ್ಬಾಳು, ಮಂದಗೆರೆ, ಹೊಳೆ ನರಸೀಪುರ, ಮಾವಿನಕೆರೆ ನಿಲ್ದಾಣಗಳಲ್ಲಿ ಹಳೆಯದಾಗಿರುವ ಸಿಗ್ನಲಿಂಗ್ ಗೇರ್‌ಗಳ ಬದಲಾವಣೆ.	ರೂ. 27,67,080/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–05–2023 ರಂದು 11:00 ಗಂಟೆಯವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಮೈಸೂರು
ಪಿಯುಬಿ/61/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

General

General

UNLOCK THE Value of your Mortgaged/NPA Land with our short-term funding. We specialize in releasing Residential, Commercial and Industrial Land, Which We then sell at Best Market Price. www.vernadevelopers.com 9353128035, 9916310226

REAL ESTATE SELLING

Sites

Kengeri

SITE FOR SALE
BBMP 'A' Katha @ Rs.3999/-Sft
Near Hemmigepura just 6Km from Kengeri Metro station & BGS Hospital. Ready to build with all basic amenities
Call: 9008005029 7829000837

Intl Airport Road

SALE 10000 to 55000 sft 'North' facing 180feet width @ 1600/-sft Bangalore North, Sugata Main Road, Hunsamaranahalli Call VERNA DEVELOPERS, MG.Road, 9916310226/ 9844056596. www.vernadevelopers.com

Rajajinagar

SITE for sale 30X40 East Facing Rs.18000/- Sqft Milk Colony A Block Rajajinagar JAYAKUMAR: 8884255563

Flat

Malleshwaram

SALE 3BHK apartment 1755sqft Renaissance Park-3, Malleshwaram West. Finalprice 1.85 crores with 2 carparking. 9342139450

General

South

FREE HOLD 650 Sft in Chamarajpet - off 5th Main Road- for sale. Expected price 1.3 Crores. Slightly negotiable. Contact9739004452. No brokers please.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PUBLIC NOTICE

PUBLIC NOTICE
The general public is hereby informed that my clients Mr. Kushal Bhambhani, Mrs Deepa Bhambhani, Taruna Khurana, Jayashree Khurana, Devaki Khurana are intending to purchase below mentioned schedule property from it's owner namely Mr. Abhinand Sreenivasa Iyer S/o Sreenivasa harohalli Venkateesh Iyer residing at #391, Manjunatha Nilaya, 7th cross, M S R Nagar, Mathikere, Bengaluru - 560054. If any body is having any objection, claims, interest, disputes, for the above intended sake transaction he/ she / they may contact the undersigned with documentary proof substantiated his/ her/ their objections, claims, interests, details, dispute/s within 14 days from the date of this publication, failing which my clients will proceed to complete the sale transaction with the above owner as if there are no third party claims/objections/ disputes in respect of the schedule property and thereafter no claim/ objections/disputes will be entertained.
SCHEDULE OF THEPROPERTY
All that piece and parcel of the property site no. 27, Jaladarshini layout, New BEL road, Bangalore north taluk, Bangalore site measuring 30ft. East to West and 50+51/2 feet North to South Bounded East By : Site No.48, West By : 30 Feet Road, North By : Site No.28, South By: Site No.26 Including A Residential House Property Measuring 83.6127 Sq Mtrs
Sd/- by: Kushal Bhambhani, Deepa Bhambhani, Taruna Khurana, Jayashree Khurana, Devaki Khurana
Advocate - K. Smitha
589, 8th Cross, 9th Main, Coffeeboard Layout, Kempapura Hebbal Bangalore - 560024
Phone No. 9945520983.

JOB OPPORTUNITIES

Teachers/ Professors

VISHWABHARATHI PUBLIC HIGH SCHOOL No. 142, 1st A Main Road, Shakthi Garden Moodalpalya, Nagarbhavi 1st Stage, Bangalore- 560072. REQUIRED TEACHERS for Kannada, Social Science, Mathematics Physical Education, BA, BSc, B.Ed for Primary and high school. Contact immediately: 7406535818/ 9739395399.

PERSONAL

Change of Name

CHANGE OF NAME
I, VIGNESH S.M. R/@. No. 1/2, Ground Floor, 8th G Street, 1st Cross, Jogupalya, Halasuru, H.A.L. 2nd Stage, Bangalore- 560008, have changed my minor daughter's name from AYESHA SUDESH NAIK to DITHYA VIGNESH MAPSEKAR, vide affidavit dated 04.05.2023 before Notary K. Venkateshan, Bengaluru.

I, ASHA BALU @ ASHA JENNIFER, W/o Parthasarathy Govindarajan, R/a #514, 2nd phase, 7th block Rajendranagar, Koramangala, Bengaluru- 47, declare that both the above names pertain to me and henceforth I shall be known as ASHA BALU vide affidavit dated 03.05.2023 before Notary S.I. Balaguru, Bangalore.

CHANGE OF NAME
I, JAMALE JAHAN FIRDOUSE ARA alias J J FIRDOUSE ARA R/@ Flat No. 101, Park View Renaissance, HBR Layout, 2nd Stage, Shampura, Bengaluru-560032, have changed my name to FIRDOUSE ARA vide affidavit dated 04.05.2023 before Notary A.Gerard, Bangalore. Henceforth, I shall be called FIRDOUSE ARA only

WE, RAMESH Mokirala and Surekha Vinjamuri Venkata R/o.A-206, Pride Apartments, Billekahalli, Bannerghatta Road, Bangalore- 560076 have changed our son's name from SRI PRAYAG SHARMA MOKIRALA to PRAYAG SHARMA MOKIRALA vide affidavit dated 05-09-2017 before notary L.Puttaraju, Bangalore

I, DHEERAJ KUMAR.N R/o.No.01/79/2, 3rd Cross, Behind BWSSB Water Tank, Srinivasanagara, Sunkadakatte, Bangalore North 560091.have changed my name from DHEERAJ KUMAR to DHEERAJ KUMAR.N, vide affidavit dated:02-5-2023 before Notary MAMATHA.N.K., Bengaluru.

CHANGE OF NAME
I, HENRY WILLIAM DEVAKUMAR R/@. No. 26, 2nd Cross, N.K. Palya, "A" Street, Tasker Town, Shivajinagar, Bangalore- 560051, have changed my name to HENRY. D vide affidavit dated 28.04.2023 before Notary K. Venkateshan, Bengaluru. Henceforth I shall be know as HENRY. D only

CHANGE OF NAME
I, SANTOSH KUMAR. R/@. # 403, Siri Sai Enclave, 1st 'A' Cross, Canara Bank Colony, Chikkalasandra, Bengaluru- 560061 have changed my daughter's name from BHOOMIKA to BHOOMIKA KHOT vide affidavit dated 04.05.2023 before Notary L. Gopalakrishna, Bengaluru. Henceforth she shall be called BHOOMIKA KHOT only

I, TRIVENI D/o. Ashavatha Rao R/o#148, 6th Cross 2nd Main, BHCS Layout, Chikkalasandra Bangalore- 560061 Have Changed My Name to TRIVENI ASHAVATHA RAO Vide Affidavit Dated 02-05-2023 Before Notary K.S.Giridhar, Bangalore.

I ESHWARAPPA Y S/o Yallappa, residing at 39, Kodipalli, Yadiyur, Mittemari, Chikkaballapur, Karnataka- 561207, have changed the name of minor Son Nehan E aged 1 years and he shall hereafter be known as Adhvik E for all purposes in future.

I, T.J.NIJAGUNA GOWDA, R/at No.134, 1st H Cross, 1st Block Nagarbhavi 2nd Stage, Near Zen Park, Bangalore-560072 have changed my minor daughter's name from ADHYA to AADHYA N GOWDA vide affidavit dated:27-4-2023 before Notary H.R.KARUNAKARA, Bengaluru.

Lost

DOCUMENT LOST
I, Rudrambike R W/o Rajanna, R/@ Gangenapura, Soluru Hobli, Magadi Taluk, Bengaluru Rural Dist. have lost my original sale deed schedule id. No. NGB1-00505/ 2007-08. dt.13-04-2007 Nagarbhavi sub-register assesment No. 11/1A, Building No.47, while shifting the house. Finders Please contact 9902707081

DOCUMENT LOST
I, Mrs. KUSUMA SIRISHA PALISETTI, W/o Palisetti Krishna Mohan, Residing at #4123, Prestige White Meadows, Whitefield, Bengaluru-560066, have lost original gift deed document No-1490/2013, book-I,dated 26-03-2013, Registered at Tallarevu in Andhra Pradesh if found shall contact: Advocate VEENA.J, Mob: 9980174366

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH ಪ್ರಜಾವಾಣಿ Classifieds Education Special
SPECIAL RATES FOR Admission Notice, Education Success, Congratulation Ads
For More Details Contact: 9731810277 | 9901641752, 9845114560 | 9886213331, 080-45557163 | 45557164
Email: dhclassifieds@deccanherald.co.in

IN THE COURT OF THE HON'BLE XXXIX ADDITIONAL CITY CIVIL JUDGE AT BENGALURU
P & S. C. No. 102/2023
PETITIONER: Smt. Rajalakshmi Radhakrishna, W/o A N Radakrishna Aged about 58 years, R/at #128/1, Sri Mookambika Nilaya, 4th Main, JP Nagar, Phase, Bengaluru - 560078.
-V/s-
RESPONDENT: -NIL-
NOTICE
Whereas the above-named Petitioner has made petition to this court under section 372 of Indian Succession Act for the grant of Succession Certificate in favour of the Petitioner herein in respect of schedule mentioned below. The below mentioned schedule was held by Late Sri. Devaraiah M V and his wife Smt. Sharadamma who expired/passed away on 07/12/2020 and 13/05/2012 respectively, the Petitioner is a distant relative and she along with her husband had taken care of Late Sri. Devaraiah M V and his wife Smt. Sharadamma including their bank transactions till their demise. Interested parties are hereby called upon to appear before this Court in person or through a pleader duly instructed on 20th Day of June 2023 at or 11:00 a.m., inform to show cause against the petitioner, failing wherein the appearance will be heard and decided as Ex-parte.
SCHEDULE - I
DEBTS
Serial Number: NIL
Name of Debtor: NIL
Amount of Debts including Interest on date of application for certificate: NIL
Description and date of instrument if any, by which the debt is secured: NIL
SCHEDULE - II
ASSETS/DEPOSITS
Joint S/B accounts maintained by Late Sri. Devaraiah.
SL NO.: 1
ASSETS/DEPOSITS: Full and Final Settlement of Bank Account in Bank of Baroda Sarakki Branch, having A/C No. 74150100011998
NOMINEE NAMES AND DATE OF NOMINATION: NIL
APPROXIMATE VALUE ON DATE OF PETITION: As on 06/01/22 Rs. 7,61,384/- (Rupees Seven Lakhs Sixty-One Thousand Three Hundred and Eighty-Four Only)
SL NO.: 2
ASSETS/DEPOSITS: Full and Final Settlement of Postal Office Account, JP Nagar Branch, bearing A/C No. 2411577065
NOMINEE NAMES AND DATE OF NOMINATION: NIL
APPROXIMATE VALUE ON DATE OF PETITION: As on 02/09/2020 Rs. 4,83,967/- (Rupees Four Lakhs Eighty-Three Thousand Nine Hundred and Sixty-Seven Only)
Total: Rs. 12,45,351/-
(Rupees Twelve Lakhs Forty Five Thousand Three Hundred and Fifty One Only)
Given under my hand and seal of the Court on 20-04-2023.
By order of the Court, Assistant Registrar, City Civil Court, Bengaluru.

ಬನ್ನೀ ಲೆಕ್ಕಾಚಾರ ಮಾಡೋಣ

65 ವರ್ಷಕ್ಕೂ	Vs	3½ ವರ್ಷಕ್ಕೂ
ಅಲ್ಲಿ ಭ್ರಷ್ಟಾಚಾರದ ದಾಖಲೆ		ಇಲ್ಲಿ ದಾಖಲೆ ವೇಗದಲ್ಲಿ ಅಭಿವೃದ್ಧಿ
ಅಲ್ಲಿ ಅಸುರಕ್ಷತೆಯ ದಾಖಲೆ		ಇಲ್ಲಿ ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮ
ಅಲ್ಲಿ ಪರಿವಾರವೇ ಉದ್ಧಾರ		ಇಲ್ಲಿ ಕರ್ನಾಟಕವೇ ಪರಿವಾರ
ಅಲ್ಲಿ ಜಾತಿ ಮತದ ತುಷ್ಟೀಕರಣ		ಇಲ್ಲಿ ಎಲ್ಲರ ಜೊತೆಗೂಡಿ ವಿಕಾಸದ ಸಂತುಷ್ಟೀಕರಣ
ಅಲ್ಲಿ ಸ್ವದೇಶದ ಮೇಲೆ ಸಂದೇಹ		ಇಲ್ಲಿ ದೇಶದ ಶಕ್ತಿಯ ಬಗ್ಗೆ ಅಭಿಮಾನ
ಅಲ್ಲಿ ಅವರೊಂದಿಗೆ , ಅವರ ಬಾವ - ಬಾಮೈದರ ಜೊತೆ ಕೆಲವು ಭಯೋತ್ಪಾದಕರು		ಇಲ್ಲಿ ಮೋದಿಯವರೊಂದಿಗೆ, ದೇಶದ ಬಡವರು, ಯುವಕರು, ಮಹಿಳೆಯರು ಮತ್ತು ದೇಶದ ಪ್ರತಿಯೊಬ್ಬ ಸ್ವಾಭಿಮಾನಿ
ಅಲ್ಲಿ ಮೋದಿಯವರು ಹಾಗೂ ನಮ್ಮ ಸಂಸ್ಕೃತಿ ಮತ್ತು ನಂಬಿಕೆಯ ವಿರೋಧ		ಇಲ್ಲಿ ದೇಶದ ಕೀರ್ತಿ ಪತಾಕೆಯನ್ನು ಪ್ರಪಂಚದಲ್ಲೆಡೆ ಹಾರಿಸಿದ ಮೋದಿ
ಆವತ್ತು ಯಾವುದೇ ಪರ್ಯಾಯ ಇರಲಿಲ್ಲ		ಇವತ್ತು ನರೇಂದ್ರ ಮೋದಿಯವರ ಸದೃಢ ಡಬಲ್ ಎಂಜಿನ್ ಸರ್ಕಾರ
ಅಲ್ಲಿ ಇವತ್ತಿಗೂ ಹಂಚುತ್ತಿರುವುದು 65 ವರ್ಷದ ಹಳೆಯ ಭರವಸೆ		ಇಲ್ಲಿ ನಡೀತಾ ಇರೋದು ಮುಂದಿನ 25 ವರ್ಷಕ್ಕೆ ನವ ಕರ್ನಾಟಕದ ತಯಾರಿ

ಡಬಲ್ ಎಂಜಿನ್ ಸರ್ಕಾರ

ಕರ್ನಾಟಕದ ಅಭಿವೃದ್ಧಿಯ ಸಾಕಾರ

ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ

Published by BJP, Karnataka

ಕಮಲದ ಬಟನ್ ಒತ್ತಿ ಬಿ.ಜೆ.ಪಿ. ಗೆಲ್ಲಿಸಿ

'ಧೀರ ಸಾಮ್ರಾಟ'ನಿಗೆ ಆ್ಯಕ್ಷನ್ ಪ್ರಿನ್ಸ್ ಸಾಥ್

ಅದ್ವಿತಿ ಶೆಟ್ಟಿ

ಧ್ರುವ ಸರ್ಜಾ

ರಾಕೇಶ್ ಬಿರಾದಾರ್, ಅದ್ವಿತಿ ಶೆಟ್ಟಿ ಅಭಿನಯದ 'ಧೀರಸಾಮ್ರಾಟ್' ಚಿತ್ರದ 'ಏನ್ ಚಂದ ಕಾಣಿಸ್ತಾವಳೆ' ಹಾಡನ್ನು ನಟ ಧ್ರುವಸರ್ಜಾ ಇತ್ತೀಚೆಗೆ ಬಿಡುಗಡೆ ಮಾಡಿದರು.

ಖಾಸಗಿ ವಾಹಿನಿಯಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವ ಪವನ್‌ಕುಮಾರ್(ಪಚ್ಚಿ) ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. 'ಸಿನಿಮಾವು ಅಣ್ಣ ಚಿರಂಜೀವಿ ಸರ್ಜಾ ಹುಟ್ಟುಹಬ್ಬದಂದು ಸೆಟ್ಟೇರಬೇಕಾಗಿತ್ತು, ಕಾರಣಾಂತರದಿಂದ ಮುಂದಕ್ಕೆ ಹೋಯಿತು. ನಾನು 'ಅದ್ದೂರಿ' ಮಾಡಿದಾಗ ಹೊಸಬನಾಗಿದ್ದೆ. ಅಂದಿನಿಂದ ನಿರ್ದೇಶಕ ಪವನ್ ಪರಿಚಯ. ನಮ್ಮದು ಹೋಗೋ ಬಾರೋ ಗೆಳೆತನ. ಈಗ ಅವರ ನಿರ್ದೇಶನದ ಮೊದಲ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಹೊಸಬರಿಗೆ ಉತ್ತೇಜನ ನೀಡಿ. ಅವರಲ್ಲೂ ಪ್ರತಿಭೆ ಎನ್ನುವುದು ಇರುತ್ತದೆ. ಇಂತಹವರನ್ನು ಬೆಳೆಸಿದರೆ ಇವರ ಕಲೆಗೆ ಬೆಲೆ ಕೊಟ್ಟಂತೆ ಆಗುತ್ತದೆ' ಎಂದು ಧ್ರುವ ಸರ್ಜಾ ಗೆಳೆಯನ ಪ್ರಯತ್ನಕ್ಕೆ ಶುಭ ಕೋರಿದರು.

ಹೊಸಬರೇ ಸೇರಿಕೊಂಡು ಸಿದ್ದಪಡಿಸಿರುವ ಚಿತ್ರ ತೆರೆಗೆ ಬರುವ ಹಂತ ತಲುಪಿದೆ. 'ಕುಟುಂಬ ಸಮೇತ ನೋಡಬಹುದಾದ ಸಸ್ಪೆನ್ಸ್ ಥ್ರಿಲ್ಲರ್ ಕಥೆಯನ್ನು ಹೊಂದಿದೆ. ಐದು ಧೀರ ಹುಡುಗರ ಗೆಳೆತನ ಹೇಗಿರುತ್ತೆ ಎಂಬುದನ್ನು ಹೇಳಲಾಗಿದೆ. ಕೊನೆತನಕ ಕುತೂಹಲ ಉಳಿಸಿಕೊಳ್ಳಲಿದ್ದು, ಕ್ಲೈಮಾಕ್ಸ್‌ನಲ್ಲಿ ಪ್ರೇಕ್ಷಕರನ್ನು ಸೀಟಿನ ತುದಿಗೆ ಬರುವಂತೆ ಮಾಡುತ್ತದೆ' ಎಂದು ನಿರ್ದೇಶಕ ಪವನ್ ಚಿತ್ರದ ಕುರಿತು ವಿವರಿಸಿದರು.

ತನ್ವಿ ಪ್ರೊಡಕ್ಷನ್ ಹೌಸ್ ಚಿತ್ರವನ್ನು ನಿರ್ಮಿಸುತ್ತಿದೆ. ಶೋಭರಾಜ್, ನಾಗೇಂದ್ರಅರಸು, ಬಲರಾಜವಾಡಿ, ರಮೇಶ್ ಭಟ್ ಮುಂತಾದವರು ನಟಿಸಿದ್ದಾರೆ. ರಾಘವ್ ಸುಭಾಷ್ ಸಂಗೀತ ಸಂಯೋಜಿಸಿದ್ದಾರೆ. ಬೆಂಗಳೂರು, ಕನಕಪುರ, ನೆಲಮಂಗಲ ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ. ❖

'KD' ಲೋಕದಲ್ಲಿ 'ಮಚ್‌ಲಕ್ಷ್ಮಿ'

ರೀಷ್ಮಾ ನಾಣಯ್ಯ

ಪ್ರಜಾವಾಣಿ ನೋಡಿಯೊ — ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಲಾಷ ಪಿ.ಎಸ್.

● ಶಿಕ್ಷಣದ ಜೊತೆಗೆ ಸಿನಿಮಾ ಪಯಣ ಹೇಗೆ ಸಾಗುತ್ತಿದೆ?

'ಏಕ್ ಲವ್ ಯಾ' ಸಿನಿಮಾ ಆರಂಭವಾದಾಗ ನಾನಿನ್ನೂ ಪದವಿಪೂರ್ವ ಕಾಲೇಜಿನಲ್ಲಿದ್ದೆ. ಆ ಸಿನಿಮಾ ಬಿಡುಗಡೆಯಾದಾಗ ನನಗೆ 18 ವರ್ಷ. ಶಿಕ್ಷಣದ ಜೊತೆಗೆ ಸಿನಿಮಾ ಪಯಣ ಆರಂಭಿಕ ಹಂತದಲ್ಲಿ ಸವಾಲೆನಿಸುತ್ತಿತ್ತು. ಪ್ರಸ್ತುತ ನಾನು ಜ್ಯೋತಿ ನಿವಾಸ್ ಕಾಲೇಜಿನಲ್ಲಿ ಬಿ.ಎ ಪತ್ರಿಕೋದ್ಯಮ ಶಿಕ್ಷಣ ಪಡೆಯುತ್ತಿದ್ದು, ಅಂತಿಮ ವರ್ಷದ ವಿದ್ಯಾರ್ಥಿನಿ. ಚಿತ್ರೀಕರಣದ ಸಮಯ ಹೊಂದಿಸಿಕೊಂಡು ಶಿಕ್ಷಣವನ್ನೂ ಮುಂದುವರಿಸುತ್ತಿದ್ದೇನೆ. ನಿರ್ದೇಶಕರಾದ ಪ್ರೇಮ್ ಹಾಗೂ ನನ್ನ ಇತರೆ ಚಿತ್ರದ ನಿರ್ದೇಶಕರಿಂದ ಯಾವುದೇ ಒತ್ತಡ ನನ್ನ ಮೇಲೆ ಇಲ್ಲ. ಶಿಕ್ಷಣ, ಪರೀಕ್ಷೆಗಳಿಗೆ ಅವರು ಪ್ರಾಶಸ್ತ್ಯ ನೀಡಿ, ಚಿತ್ರೀಕರಣದ ದಿನಾಂಕಗಳನ್ನು ನಿಗದಿಪಡಿಸುತ್ತಿದ್ದಾರೆ. ಜೊತೆಗೆ ಪ್ರಾಧ್ಯಾಪಕರೂ ನನ್ನ ಸಿನಿಪಯಣಕ್ಕೆ ಅಷ್ಟೇ ಬೆಂಬಲವನ್ನು ನೀಡುತ್ತಿದ್ದಾರೆ. ಸದ್ಯ ಉಪೇಂದ್ರ ಅವರು ನಿರ್ದೇಶಿಸುತ್ತಿರುವ 'ಯುಐ' ಹಾಗೂ ಪ್ರೇಮ್ ಅವರ 'KD' ಚಿತ್ರದ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದೇನೆ. ಹೀಗಾಗಿ ಶಿಕ್ಷಣ–ಸಿನಿಮಾ ಎನ್ನುವ ಎರಡೂ ಪಯಣ ಇದೀಗ ಸುಲಭವಾಗಿದೆ.

> 'ಏಕ್ ಲವ್ ಯಾ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟ ನಟಿ ರೀಷ್ಮಾ ನಾಣಯ್ಯ ಸಿನಿ ಬ್ಯಾಂಕ್ ಹಿಗ್ಗುತ್ತಿದೆ. ನಟ ಉಪೇಂದ್ರ ಆ್ಯಕ್ಷನ್ ಕಟ್ ಹೇಳುತ್ತಿರುವ 'ಯುಐ' ಬಳಿಕ 'ಜೋಗಿ' ಖ್ಯಾತಿಯ ಪ್ರೇಮ್ ನಿರ್ದೇಶಿಸುತ್ತಿರುವ **'KD'**ಯ 'ಮಚ್‌ಲಕ್ಷ್ಮಿ'ಯಾಗಿ ರೀಷ್ಮಾ ಸೆಟ್‌ಗೆ ಪ್ರವೇಶಿಸಿದ್ದಾರೆ.

● ನಿಮ್ಮ ಸಿನಿಗ್ರಾಫ್, ಸಿನಿ ಬ್ಯಾಂಕ್ ಹಿಗ್ಗುತ್ತಲೇ ಇದೆ...

ಇದು ನನ್ನ ಪುಣ್ಯ. ಕಿರಿಯ ವಯಸ್ಸಿನಲ್ಲೇ ಬಣ್ಣದ ಲೋಕಕ್ಕೆ ಹೆಜ್ಜೆ ಇಡುತ್ತೇನೆ ಎಂದು ಕನಸೂ ಕಂಡಿರಲಿಲ್ಲ. ಈ ಕ್ಷೇತ್ರಕ್ಕೆ ಹೆಜ್ಜೆ ಇಟ್ಟ ಬಳಿಕ ನನ್ನನ್ನು ಪ್ರೇಕ್ಷಕರು ಒಪ್ಪಿಕೊಳ್ಳುತ್ತಾರೆಯೇ ಎನ್ನುವ ಭಯವೂ ಇತ್ತು. ಅದೃಷ್ಟ ನನ್ನ ಜೊತೆಗಿತ್ತು ಎನ್ನಬಹುದು. 'ಏಕ್ ಲವ್ ಯಾ' ಸಿನಿಮಾ ಬಿಡುಗಡೆಯಾದ ಬಳಿಕ ನನ್ನನ್ನು ಹಲವರು 'ಅನಿತಾ' ಎಂದೇ ಕರೆಯುತ್ತಾರೆ. ಸಿನಿಮಾದಲ್ಲಿ ನಟಿಸುವ ಭಾಗ್ಯ ಎಲ್ಲರಿಗೂ ಸಿಗುವುದಿಲ್ಲ. ಅದೂ ಮೊದಲ ಸಿನಿಮಾವೇ ಖ್ಯಾತ ನಿರ್ದೇಶಕರ ಜೊತೆಯಾದ ಮೇಲೆ ಅವಕಾಶಗಳ ಸುರಿಮಳೆಯೇ ಆಗಿದೆ. 'ಬಾನದಾರಿಯಲ್ಲಿ', 'ಯುಐ' ಹೀಗೆ ಒಳ್ಳೆಯ ಕಥೆಗಳಿರುವ ಸಿನಿಮಾಗಳು ನನಗೆ ದೊರೆಯುತ್ತಿವೆ. ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದ ನನಗೆ ಪ್ರೇಮ್ ಹಾಗೂ ರಕ್ಷಿತಾ ಅವರೇ ಗಾಡ್‌ಫಾದರ್‌ಗಳು. ಹೀಗಾಗಿ ಹೊಸ ಅವಕಾಶಗಳು ದೊರೆತಾಗ ಅವರ ಬಳಿ ಚರ್ಚಿಸುತ್ತೇನೆ. ಅವರ ಮಾರ್ಗದರ್ಶನ ನನಗೆ ಇದ್ದೇ ಇದೆ.

● 'KD'ಗೆ ನೀವು 'ಮಚ್‌ಲಕ್ಷ್ಮಿ'ಯಾಗಿದ್ದು ಹೇಗೆ?

ಪ್ರೇಮ್ ಅವರು 'KD' ಸಿನಿಮಾವನ್ನು ಘೋಷಿಸಿದಾಗಲಿನಿಂದಲೂ ಹೀರೊಯಿನ್ ಯಾರು? ಹಾಲಿವುಡ್‌ನಿಂದ, ಬಾಲಿವುಡ್‌ನಿಂದ ಯಾರನ್ನಾದರೂ ಆಯ್ಕೆ ಮಾಡುತ್ತೀರಾ? ಎನ್ನುವ ಪ್ರಶ್ನೆಯನ್ನು ಆಗಾಗ್ಗೆ ಕೇಳುತ್ತಿದ್ದೆ. ಇದಕ್ಕೆ ಅವರು 'ಹೌದೌದು ಅಲ್ಲಿಂದಲೇ ಬರ್ತಾರೆ' ಎಂದು ಹೇಳುತ್ತಿದ್ದರು. ಒಮ್ಮೆ ಲುಕ್ ಟೆಸ್ಟ್‌ಗಾಗಿ ನನ್ನನ್ನೇ ಕರೆದರು. ನಾನು ಮೊದಲಿಗೆ ಅವರನ್ನು ನಂಬಿರಲಿಲ್ಲ. ನಾನೇ ಹೀರೊಯಿನ್ ಅಂದಾಗ, 'ಇಂಥ ಬಿಗ್ ಪ್ರಾಜೆಕ್ಟ್‌ನಲ್ಲಿ ನಟಿಸುವ ಅವಕಾಶ ನನಗೆ ಸಿಕ್ಕಿತೇ' ಎಂದು ಆಶ್ಚರ್ಯವಾಯಿತು. ನಾನು ಹಿಂದೆಂದೂ ಕಾಣಿಸಿಕೊಳ್ಳದ ರೀತಿ ಈ ಸಿನಿಮಾದಲ್ಲಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನ ಪಾತ್ರದ ಹೆಸರು 'ಮಚ್‌ಲಕ್ಷ್ಮಿ'. ಪ್ರತಿ ಪಾತ್ರದ ಲುಕ್ ವಿಚಾರದಲ್ಲಿ ಪ್ರೇಮ್ ಅವರು ಬಹಳ ಕಠಿಣ. 'ಮಚ್‌ಲಕ್ಷ್ಮಿ' ಲುಕ್‌ಗಾಗಿ ಸುಮಾರು ಒಂದು ತಿಂಗಳು ಟ್ರಯಲ್ ನಡೆಸಿದ್ದೇವೆ. ಪ್ರತಿ ದಿನವೂ ಒಂದಲ್ಲಾ ಒಂದು ಬದಲಾವಣೆ ಆಗುತ್ತಲೇ ಇತ್ತು. ಇಷ್ಟು ಸಮಯ ನೀಡಿ ಶೂಟಿಂಗ್ ನಡೆಸಿದ ಫಲಿತಾಂಶ ಜನರ ಮುಂದಿದೆ. ಚಿತ್ರದ ಚಿತ್ರೀಕರಣ ನಡೆಯುತ್ತಿದ್ದು, 15 ದಿನಗಳಿಂದ ಧ್ರುವ ಸರ್ಜಾ ಅವರ ಜೊತೆಗೆ ನನ್ನ ಭಾಗದ ಶೂಟಿಂಗ್ ನಡೆಯುತ್ತಿದೆ.

● 'KD'ಯಂಥ ಬಿಗ್ ಪ್ರಾಜೆಕ್ಟ್ ಮೂಲಕ ಪ್ಯಾನ್ ಇಂಡಿಯಾ ಲೋಕಕ್ಕೆ ಹೆಜ್ಜೆ ಇಡುತ್ತಿದ್ದೀರಿ..

ನನ್ನ ಮೇಲಿನ ಜವಾಬ್ದಾರಿ ಹೆಚ್ಚಿದೆ. 'ಏಕ್ ಲವ್ ಯಾ'ಗೆ ಹೋಲಿಸಿದರೆ ಇದೊಂದು ಮೆಗಾ ಪ್ರಾಜೆಕ್ಟ್. ಪ್ರೇಮ್ ಅವರು ನನ್ನ ನಟನೆಯ ಮೇಲೆ ನಂಬಿಕೆ ಇಟ್ಟು, ಈ ಪಾತ್ರ ನೀಡಿದ್ದಾರೆ ಎಂದರೆ ನನ್ನಲ್ಲಿ ಆ ಪಾತ್ರವನ್ನು ಅವರು ನೋಡಿದ್ದಾರೆ. ಸಿನಿಮಾದೊಳಗೆ ಶೇ 100ಕ್ಕೆ ನೂರು ನಾನು ಒಳಗೊಳ್ಳುತ್ತಿದ್ದೇನೆ. ನನ್ನಲ್ಲಿರುವ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಲು ಈ ಸಿನಿಮಾದಲ್ಲೂ ಅಗಾಧ ಅವಕಾಶವಿದೆ. ಅದನ್ನು ನಾನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದ್ದೇನೆ. ಜೊತೆಗೆ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್ ಅವರಂಥ ಹೆಸರಾಂತ ಕಲಾವಿದರ ದಂಡೇ ಇಲ್ಲಿದೆ. ಇಷ್ಟು ಬೇಗ ಸಿನಿರಂಗದ ದಿಗ್ಗಜರ ಜೊತೆ ಕೆಲಸ ಮಾಡುತ್ತೇನೆ ಎಂದು ಊಹಿಸಿರಲಿಲ್ಲ. ಇವೆಲ್ಲವೂ ನನಸಾದ ಕ್ಷಣವಿದು.

● ಮೊದಲ ಪ್ರಾಜೆಕ್ಟ್ ಹಾಗೂ 'KD' ಶೂಟಿಂಗ್ ಅನುಭವ..

'ಏಕ್ ಲವ್ ಯಾ' ಸಿನಿಮಾ ಶೂಟಿಂಗ್ ಸಂದರ್ಭದಲ್ಲಿ ಪ್ರಯಾಣವೇ ಹೆಚ್ಚಿತ್ತು. ಊಟಿ, ಉತ್ತರ ಭಾರತ ಹೀಗೆ ಹಲವು ಕಡೆ ಚಿತ್ರೀಕರಣ ನಡೆದಿದೆ. 'KD' ಸಂಪೂರ್ಣವಾಗಿ ಸೆಟ್‌ನೊಳಗೇ ನಡೆಯುವ ಚಿತ್ರ. 'KD' ಸೆಟ್ ಅತ್ಯಂತ ದೊಡ್ಡ ಸೆಟ್. ಅದರೊಳಗೆ ಮೊದಲ ಹೆಜ್ಜೆ ಇಟ್ಟಾಗ ಆ ಲೋಕ ನೋಡಿ ನಾನಂತೂ ಆಶ್ಚರ್ಯಪಟ್ಟಿದ್ದೆ. ❖

'ರೋನಿ' ಮೊದಲ ನೋಟ!

ನಟ ಧರ್ಮ ಕೀರ್ತಿರಾಜ್, ತಿಲಕ್ ಮುಖ್ಯಭೂಮಿಕೆಯಲ್ಲಿರುವ 'ರೋನಿ' ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಗೊಂಡಿದೆ. ಚಿತ್ರಕ್ಕೆ ಕಿರಣ್ ಆರ್.ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಎಂ.ರಮೇಶ್ ಹಾಗೂ ಪವನ್‌ಕುಮಾರ್ ನಿರ್ಮಾಣದ ಚಿತ್ರಕ್ಕೆ 'ದ ಹಂಟರ್' ಎಂಬ ಅಡಿಬಹರವಿದೆ. ಧರ್ಮ ಕೀರ್ತಿರಾಜ್ ನಾಯಕ. ಮುಂಬೈ ಮೂಲದ ರುತ್ವಿ ಪಟೇಲ್ ನಾಯಕಿ. ಮುಖ್ಯ ಪಾತ್ರದಲ್ಲಿ ತಿಲಕ್ ನಟಿಸಿದ್ದಾರೆ.

'ಶ್ರೀಮಂತ ಹುಡುಗಿ ಮನೆಯಲ್ಲಿರುವ ಮೂವತ್ತು ಕೋಟಿ ರೂಪಾಯಿ ದರೋಡೆ ಆಗುತ್ತದೆ. ಅದರ ತನಿಖೆ ನಡುವೆ ಎರಡು ಕೊಲೆಗಳು ನಡೆಯುತ್ತವೆ. ಕೊಲೆ ಮಾಡಿದವರು ಯಾರು? ಎಂಬುದರ ಸುತ್ತ ಕಥೆ ಸಾಗುತ್ತದೆ' ಎಂದು ಚಿತ್ರತಂಡ ಹೇಳಿದೆ. ಕೀರ್ತಿರಾಜ್, ರಘು ಪಾಂಡೇಶ್ವರ್, ಮುಂತಾದವರು ನಟಿಸಿದ್ದಾರೆ. ಆಕಾಶ್ ಪರ್ವ ಸಂಗೀತ ಸಂಯೋಜಿಸಿದ್ದು, ಛಾಯಾಗ್ರಹಣ ವೀನಸ್ ನಾಗರಾಜಮೂರ್ತಿ ಅವರದ್ದು. ಬೆಂಗಳೂರು, ಮಂಗಳೂರಿನಲ್ಲಿ ಚಿತ್ರೀಕರಣ ನಡೆಸಲಾಗಿದೆ. ❖

ರುತ್ವಿ ಪಟೇಲ್

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಸಿನಿ ಸಮ್ಮಾನ: ಪ್ರತಿಕ್ರಿಯೆಗಳು

'ಪ್ರಜಾವಾಣಿ ಸಿನಿ ಸಮ್ಮಾನ'ಕ್ಕೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಬೆಂಬಲವಾಗಿ ನಿಂತಿವೆ. 2022ರಲ್ಲಿ ಬಿಡುಗಡೆಯಾದ ಸಿನಿಮಾಗಳ ಮಾಹಿತಿ ನೀಡುವುದರಿಂದ ಹಿಡಿದು, ಚಿತ್ರರಂಗದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಿಂದ ಸಮ್ಮಾನದ ಆಯ್ಕೆಗಾಗಿ ಮತದಾನ ಮಾಡಿಸುವವರೆಗೆ ಈ ಸಂಸ್ಥೆಗಳ ನೆರವು ಸ್ಮರಣೀಯ. ಮೊದಲ ಬಾರಿಗೆ 'ಪ್ರಜಾವಾಣಿ'ಯು ಸಿನಿ ಸಮ್ಮಾನ ಪ್ರಾರಂಭಿಸುತ್ತಿರುವುದರ ಕುರಿತು ಉಭಯ ಮಂಡಳಿಗಳ ಅಧ್ಯಕ್ಷರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಸಮ್ಮಾನದ ಪರಿಪಾಟ ಮುಂದುವರಿಯಲಿ

'ಪ್ರಜಾವಾಣಿ'ಯಂತಹ ಸಂಸ್ಥೆಯು ಸಿನಿ ಸಮ್ಮಾನ ಪ್ರಾರಂಭಿಸುತ್ತಿರುವುದು ಖುಷಿಯ ವಿಚಾರ. ಈ ಸಂಗತಿಯನ್ನು ಚಿತ್ರರಂಗದ ನಿರ್ದೇಶಕರು, ಕಲಾವಿದರ ಜತೆ ಪ್ರಸ್ತಾಪಿಸಿದಾಗ ಎಲ್ಲರೂ ಸಂತಸ ವ್ಯಕ್ತಪಡಿಸಿದರು. ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳನ್ನು ಆಯ್ಕೆ ಮಾಡುವಾಗ ಕೆಲವು ನಿಯಮಗಳನ್ನು ಪಾಲಿಸುತ್ತಾರೆ. ಸುಖಾಸುಮ್ಮನೆ ಆಯ್ಕೆ ಮಾಡುವುದಿಲ್ಲ. 'ಪ್ರಜಾವಾಣಿ' ಕೂಡ ತನ್ನದೇ ಆದ ರೀತಿಯಲ್ಲಿ ಸಂಕೀರ್ಣವಾದರೂ ಪಾರದರ್ಶಕವಾದ ಪ್ರಕ್ರಿಯೆಯನ್ನು ಅನುಸರಿಸುತ್ತಿದೆ. ಕಲಾವಿದರು, ತಂತ್ರಜ್ಞರನ್ನು ಒಳಗೊಂಡು ಆಯ್ಕೆ ಮಾಡುತ್ತಿರುವುದು ಎಂಥವರೂ ಒಪ್ಪುವಂತಹ ಸಂಗತಿ. ಹೀಗಾಗಿ ರಾಜ್ಯ, ರಾಷ್ಟ್ರ ಪ್ರಶಸ್ತಿಗಳು ಸಿನಿಮಾದವರಿಗೆ ಸಿಕ್ಕಾಗ ಆಗುವಷ್ಟೆ ಹೆಮ್ಮೆ ಈ ಸಮ್ಮಾನ ದೊರೆತಾಗಲೂ ಆಗಲಿದೆ. ಸಮ್ಮಾನದ ಮೂಲಕ ಪ್ರತಿಭಾವಂತರನ್ನು ಗುರುತಿಸುವ ಈ ಪರಿಪಾಟ ಮುಂದುವರಿಯಲಿ ಎಂದು ಹಾರೈಸುವೆ.

ಭಾ.ಮ. ಹರೀಶ್, ಅಧ್ಯಕ್ಷ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ಅದ್ಭುತವಾದ ಆಲೋಚನೆ

ಇದು ಅದ್ಭುತವಾದ, ಗುಣಮಟ್ಟದ ಆಲೋಚನೆ. ನಮ್ಮ ನಾಡಿನಲ್ಲಿ ಯಾವುದೇ ಸುದ್ದಿಯ ಪ್ರಸ್ತಾಪ ಬಂದಾಗಲೂ, ಅದು ನಿಜವೇ ಎಂದು ಖಾತರಿಪಡಿಸಿಕೊಳ್ಳಲು 'ಪ್ರಜಾವಾಣಿ'ಯ ಕಡೆಗೆ ನೋಡುತ್ತೇವೆ. ಅದೇ ಘನತೆ ಈ ಸಮ್ಮಾನಕ್ಕೂ ಇದೆ. ಇಂತಹ ಕಾರ್ಯಕ್ರಮವನ್ನು prajavani@75ರ ಹೊತ್ತಿನಲ್ಲಿ ಹಮ್ಮಿಕೊಳ್ಳುತ್ತಿರುವುದು ಇನ್ನೊಂದು ಗಮನಾರ್ಹ ಸಂಗತಿ. ಆರಂಭದಿಂದಲೂ ಚಿತ್ರರಂಗವನ್ನು ಪತ್ರಿಕೆ ಗೌರವದಿಂದ ನಡೆಸಿಕೊಂಡು ಬಂದಿದೆ. ಈಗ ಸಮ್ಮಾನ ನೀಡುವ ನಿರ್ಧಾರ ಮಾಡಿರುವುದು ದೊಡ್ಡ ಸಾಹಸವೇ ಸರಿ. ಜನರಿಗೂ ತುಂಬಾ ನಿರೀಕ್ಷೆ ಇದೆ. ಸಮ್ಮಾನಕ್ಕೆ ಆಯ್ಕೆ ಮಾಡುತ್ತಿರುವ ಪ್ರಕ್ರಿಯೆಯೇ ಅದ್ಭುತವಾಗಿದೆ. ತಮ್ಮ ತಮ್ಮ ಕೆಲಸದಲ್ಲಿ ನಿರತರಾದ ಯೋಗರಾಜ ಭಟ್, ಪ್ರಕಾಶ್ ರೈ ಅವರಂತಹ ಖ್ಯಾತನಾಮರನ್ನೂ ಮುಖ್ಯ ತೀರ್ಪುಗಾರರನ್ನಾಗಿ ಒಳಗೊಂಡಿರುವುದು ಉತ್ತಮ ಕ್ರಮ. ಬದ್ಧತೆ ಇರುವ ಪತ್ರಿಕೆಯ ಸಮ್ಮಾನ ಪ್ರತಿವರ್ಷ ನಡೆಯಲಿ ಎಂದು ಬಯಸುತ್ತೇನೆ.

ಕೃಷ್ಣೆಗೌಡ, ಅಧ್ಯಕ್ಷ, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ

ರಾಜ್ ಬಿ. ಶೆಟ್ಟಿ, ಕೌಸ್ತುಭ ಮಣಿ, ಶಿವರಾಜ್ ಕುಮಾರ್, ಅರ್ಜುನ್ ಜನ್ಯ, ರಮೇಶ್ ರೆಡ್ಡಿ

'45' ರಲ್ಲಿ ಉಪೇಂದ್ರ, ಶಿವರಾಜ್ ಕುಮಾರ್

ಶಿವರಾಜಕುಮಾರ್, ಉಪೇಂದ್ರ, ರಾಜ್ ಬಿ. ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿರುವ '45' ಚಿತ್ರೀಕರಣ ಮೈಸೂರಿನಲ್ಲಿ ಪ್ರಾರಂಭಗೊಂಡಿದೆ. ಚಿತ್ರದ ಮೊದಲ ದೃಶ್ಯಕ್ಕೆ ಗೀತಾ ಶಿವರಾಜಕುಮಾರ್ ಕ್ಲಾಪ್ ಮಾಡುವ ಮೂಲಕ ಚಾಲನೆ ನೀಡಿದರು. '45' ಚಿತ್ರವನ್ನು ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಎಂ. ರಮೇಶ್ ರೆಡ್ಡಿ ನಿರ್ಮಿಸುತ್ತಿದ್ದು, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಈ ಚಿತ್ರಕ್ಕೆ ಅವರೇ ಕಥೆ-ಚಿತ್ರಕಥೆ ಬರೆದು ಸಂಗೀತ ಸಂಯೋಜಿಸಿದ್ದು, ಸತ್ಯ ಹೆಗಡೆ ಛಾಯಾಗ್ರಹಣ ಮಾಡುತ್ತಿದ್ದಾರೆ. ಅನಿಲ್ ಕುಮಾರ್ ಸಂಭಾಷಣೆ ಬರೆದಿದ್ದು, ಕೆ.ಎಂ. ಪ್ರಕಾಶ್ ಅವರ ಸಂಕಲನ ಈ ಚಿತ್ರಕ್ಕಿದೆ.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಿವರಾಜಕುಮಾರ್, 'ಇದೊಂದು ಫಿಲಾಸಫಿಕಲ್ ಎಂಟರ್‌ಟೈನರ್ ಚಿತ್ರ. ಕಳೆದ ಒಂದು ವರ್ಷದಿಂದ ಈ ಚಿತ್ರದ ಸಿದ್ಧತೆ ನಡೆದಿತ್ತು. ಅರ್ಜುನ್ ಜನ್ಯ ಕಥೆ ಹೇಳಿದಾಗ ತುಂಬಾ ಇಷ್ಟವಾಗಿತ್ತು. ಆ ನಂತರ ಅನಿಮೇಶನ್ ರೂಪದಲ್ಲಿ ಚಿತ್ರವನ್ನು ತೋರಿಸಿದ್ದಾರೆ. ಅವರೊಬ್ಬ ಪ್ರತಿಭಾವಂತ. ಈ ಸಿನಿಮಾದ ನಂತರ ಭಾರತದ ಟಾಪ್ ನಿರ್ದೇಶಕರ ಸಾಲಿನಲ್ಲಿ ಅರ್ಜುನ್ ಜನ್ಯ ಕೂಡ ಒಬ್ಬರಾಗುತ್ತಾರೆ ಎಂಬ ನಂಬಿಕೆಯಿದೆ. ತುಂಬಾ ಪ್ರಬುದ್ಧವಾಗಿರುವ ಪಾತ್ರ ಈ ಚಿತ್ರದಲ್ಲಿದೆ' ಎಂದರು.

'ಸಾಮಾನ್ಯವಾಗಿ ನಟರಿಗೆ ನಿರ್ದೇಶಕರು ಚಿತ್ರದ ಕಥೆ ಹೇಳಿದರೆ, ಅರ್ಜುನ್ ಜನ್ಯ ನನಗೆ ಚಿತ್ರವನ್ನೇ ತೋರಿಸಿದರು. ಅವರು ಈ ಚಿತ್ರಕ್ಕೆ ಮಾಡಿಕೊಂಡ ತಯಾರಿ ಅದ್ಭುತ. ಒಬ್ಬ ನಟನಾಗಿ, ಪ್ರೇಕ್ಷಕನಾಗಿ ಸಿನಿಮಾದ ಬಗ್ಗೆ ಸಾಕಷ್ಟು ಕುತೂಹಲ ಮತ್ತು ನಿರೀಕ್ಷೆಯಿದೆ' ಎನ್ನುತ್ತಾರೆ ನಟ ರಾಜ್ ಬಿ. ಶೆಟ್ಟಿ.

ನಿರ್ಮಾಪಕ ರಮೇಶ್ ರೆಡ್ಡಿ ಅವರಿಗೆ ಅರ್ಜುನ್ ಜನ್ಯ ಹೇಳಿದ ಕಥೆ ಬಹಳ ಇಷ್ಟವಾಯಿತಂತೆ. 'ಚಿತ್ರ ಘೋಷಣೆಯಾಗಿ ಹಲವು ತಿಂಗಳಾದರೂ ನಿಧಾನಕ್ಕೆ ಸಾಗುತ್ತಿತ್ತು. ಈ ಬಗ್ಗೆ ಅರ್ಜುನ್ ಜನ್ಯ ಅವರನ್ನು ಕೇಳಿದಾಗ, ಅವರು ಅನಿಮೇಶನ್ ಮೂಲಕ ಸಿನಿಮಾ ತೋರಿಸಿದರು. ನಾವು ಅಂದುಕೊಂಡಿರುವುದಕ್ಕಿಂತ ಸಿನಿಮಾ ಚೆನ್ನಾಗಿ ಬರುತ್ತದೆ ಎಂಬ ನಂಬಿಕೆಯಿದೆ' ಎಂದರು ರಮೇಶ್ ರೆಡ್ಡಿ.

'ಶಿವಣ್ಣ ಅವರಿಗೆ ಕಥೆ ಹೇಳಿದಾಗ, ನೀವೇ ಈ ಸಿನಿಮಾ ಮಾಡಿ ಎಂದು ಹುರಿದುಂಬಿಸಿದರು. ಈ ಚಿತ್ರದ ಮೂಲಕ ಒಂದು ದೊಡ್ಡ ಫಿಲಾಸಫಿಯನ್ನು ಸರಳ ರೀತಿಯಲ್ಲಿ, ಕ್ಲಾಸ್ ಮತ್ತು ಮಾಸ್ ಆಗಿ ಹೇಳುವ ಪ್ರಯತ್ನ ಮಾಡುತ್ತಿದ್ದೇನೆ' ಎಂದು ಅರ್ಜುನ್ ಜನ್ಯ ತಿಳಿಸಿದರು. '45' ಚಿತ್ರಕ್ಕೆ 80 ದಿನಗಳ ಕಾಲ ಬೆಂಗಳೂರು, ಮೈಸೂರು ಮುಂತಾದ ಕಡೆ ಚಿತ್ರೀಕರಣ ನಡೆಯಲಿದೆ. ಕನ್ನಡವಲ್ಲದೆ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲೂ ಮೂಡಿಬರುತ್ತಿರುವ ಈ ಚಿತ್ರವನ್ನು 2024ರಲ್ಲಿ ಬಿಡುಗಡೆ ಮಾಡುವುದಕ್ಕೆ ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ❖

ಸಿನಿಮಾ ನಿರ್ಮಾಣಕ್ಕಿಳಿದ ನಿವೇದಿತಾ ಶಿವರಾಜ್‌ಕುಮಾರ್

ನಿರ್ಮಾಪಕಿ, ದಿವಂಗತ ಪಾರ್ವತಮ್ಮ ರಾಜ್‌ಕುಮಾರ್ ಅವರು ತಮ್ಮ ಪೂರ್ಣಿಮಾ ಎಂಟರ್‌ಪ್ರೈಸಸ್‌ನಡಿ ಕನ್ನಡ ಚಿತ್ರರಂಗಕ್ಕೆ ಹಲವು ಸೂಪರ್‌ಹಿಟ್ ಚಿತ್ರಗಳನ್ನು ನೀಡಿದ್ದರು. ಅದೇ ಕುಟುಂಬದ ಗೀತಾ ಶಿವರಾಜ್‌ಕುಮಾರ್ ತಮ್ಮ ಗೀತಾ ಪಿಕ್ಚರ್ಸ್‌ನಡಿ ಹಾಗೂ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಇದಕ್ಕೆ ಹೊಸ ಸೇರ್ಪಡೆ ಶಿವರಾಜ್‌ಕುಮಾರ್ ಅವರ ದ್ವಿತೀಯ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್.

'ಶ್ರೀ ಮುತ್ತು ಸಿನಿ ಸರ್ವಿಸ್' ನಿವೇದಿತಾ ಅವರ ಕನಸಿನ ಕೂಸು. ಈ ಸಂಸ್ಥೆಯಡಿ ಈಗಾಗಲೇ ಧಾರಾವಾಹಿ ಹಾಗೂ ಮೂರು ವೆಬ್ ಸರಣಿಗಳು ಹೊರಬಂದಿವೆ. ಈಗ ಇದೇ ಬ್ಯಾನರ್‌ನಡಿ ನಿವೇದಿತಾ ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದಾರೆ.

ನಿವೇದಿತಾ ಒಡೆತನದ 'ಶ್ರೀ ಮುತ್ತು ಸಿನಿ ಸರ್ವಿಸ್'ನಡಿ ಮೂಡಿಬರುತ್ತಿರುವ ಚೊಚ್ಚಲ ಸಿನಿಮಾಗೆ ವಂಶಿ ಸಾರಥಿ. ಒಂದಷ್ಟು ಕಿರುಚಿತ್ರ ನಿರ್ದೇಶಿಸಿ, ಪಿಆರ್‌ಕೆ ನಿರ್ಮಾಣ ಸಂಸ್ಥೆಯಡಿ ಬಂದ 'ಮಾಯಾಬಜಾರ್' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ ವಂಶಿ. ಇತ್ತೀಚೆಗೆ ತೆರೆಗೆ ಬಂದ ಐದು ಕಥೆಗಳ 'ಪೆಂಟಗನ್' ಸಿನಿಮಾದ ಕಿರಣ್ ಕುಮಾರ್ ನಿರ್ದೇಶನದ ಕಥೆಯಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದ ವಂಶಿ, ಇದೀಗ ಸ್ವತಂತ್ರ ನಿರ್ದೇಶಕರಾಗಿ ಹಾಗೂ ಪೂರ್ಣಪ್ರಮಾಣದ ನಾಯಕನಾಗಿ ಬೆಳ್ಳಿತೆರೆಗೆ ಬರಲಿದ್ದಾರೆ. ಲೈಫ್ ಡ್ರಾಮಾ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ 'ಬಾನದಾರಿಯಲ್ಲಿ' ಸಿನಿಮಾದ ಛಾಯಾಗ್ರಾಹಕ ಅಭಿಲಾಷ್ ಕಲ್ಲಟ್ಟಿ ಛಾಯಾಗ್ರಹಣವಿದ್ದು, ಚರಣ್ ರಾಜ್ ಸಂಗೀತ, ರಘು ನಿಡುವಳ್ಳಿ ಸಂಭಾಷಣೆಯಿದೆ. ❖



IN CINEMAS TODAY

ENGLISH | HINDI | TAMIL | TELUGU

IN 3D AND IMAX 3D

U/A

IN IMAX AT

PVR CINEMAS {Forum Mall, Koramangala, 9:00, 12:15, 3:30, 6:45, 10:00 p.m. | Vega City, 9:15, 12:30, 3:45, 7:15, 10:30 p.m. | VR Mall, 9:00, 12:15, 3:30, 6:45, 10:00 p.m.} | INOX {Mantri Square Mall, 9:30, 12:45, 4:00, 7:15, 10:30 p.m. | RMZ Mall, 9:00, 12:15, 3:30, 6:45, 10:00 p.m.} | CINEPOLIS CINEMAS {Shanthiniketan, 9:50, 1:00, 4:10, 7:20, 10:30 p.m.}.

IN 4DX AT

PVR CINEMAS {Phoenix Marketcity Mall, 8:40, 3:20, 10:00 p.m. | Forum Mall, Koramangala, 9:10, 3:50, 10:30 p.m. | Vega City, 9:00, 12:15, 11:00 p.m. | Orion Mall, 9:00, 12:15, 7:00 p.m. | Bhartiya City, 11:45 a.m., 6:30 p.m.} | CINEPOLIS CINEMAS {Shanthiniketan, 9:00, 3:30, 6:40 p.m.}.

PVR CINEMAS | INOX CINEMAS | CINEPOLIS CINEMAS | MIRAJ | GOPALAN | INNOVATIVE | ROCKLINE | KINO CINEMAS | CINEPHILE | VICTORY | SWAGATH {SHANKARNAG} | BALAJI {TAVEREKERE} | SWAGATH POORNIMA | SRINIVASA {SG PALYA} | BALAJI {CHIKKALASANDRA} | SRI VINAYAKA {MARATHAHALLI} | MUKTA A2 {UTTARAHALLI} | VIJAY LAKSHMI {GARUDACHARPALY} | MOHAN THEATRE {SUNKADAKATTE} | SIDDALINGESHWARA {J.P.NAGAR} | VENKATESHWARA {KONAPPANA AGRAHARA} & OTHER CINEMAS IN MYSORE, TUMKUR, MANGALORE, DAVANGERE, BELLARY & HOSEPT.

FOR ANY CHANGES OR CANCELLATION IN SHOW TIMINGS, PLEASE CONTACT THE THEATRE.

FARNAZ

ಜೆಡಿಎಸ್ ಕೋಟೆಗೆ ಬಿಜೆಪಿ ಲಗ್ಗೆ: ಗೆಲುವಿಗೆ ಕಾಂಗ್ರೆಸ್ ಕಸರತ್ತು

ಜಿದ್ದಾಜಿದ್ದಿಯ ಕಣವಾದ ದಾಸರಹಳ್ಳಿ ಕ್ಷೇತ್ರ: ಅಭ್ಯರ್ಥಿಗಳ ಪ್ರಬಲ ಪೈಪೋಟಿ

• ಸಚ್ಚಿದಾನಂದ ಕುರಗುಂದ



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ದಾಸರಹಳ್ಳಿ	ಬಿಜೆಪಿ	ಬಿಜೆಪಿ	ಜೆಡಿಎಸ್

ಸಾಕ್ಷಾತ್ ಸಮೀಕ್ಷೆ

ಮಂಜುನಾಥ್

ಜಿ. ಧನಂಜಯ

ಮುನಿರಾಜು

ಬೆಂಗಳೂರು: ಏಷ್ಯಾದಲ್ಲೇ ಅತಿ ದೊಡ್ಡ ಕೈಗಾರಿಕೆ ಪ್ರದೇಶ ಎಂದು ಗುರುತಿಸಲಾಗಿರುವ ಪೀಣ್ಯಾ ಕೈಗಾರಿಕೆ ಪ್ರದೇಶ ಹೊಂದಿರುವ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಈಗ ಜಿದ್ದಾಜಿದ್ದಿ ಕಣವಾಗಿದೆ.

ಕ್ಷೇತ್ರದಲ್ಲಿ ಜೆಡಿಎಸ್ ಮತ್ತೊಮ್ಮೆ ತನ್ನ ಶಕ್ತಿ ಪ್ರದರ್ಶಿಸಲು ಮುಂದಾಗಿದ್ದರೆ, ಬಿಜೆಪಿ ಪ್ರಬಲ ಪೈಪೋಟಿ ನೀಡಿ ಮುಂಚೂಣಿಗೆ ಬರಲು ಸರ್ವ ರೀತಿಯ ಪ್ರಯತ್ನ ನಡೆಸುತ್ತಿದೆ. ಈ ಉಭಯ ಪಕ್ಷಗಳ ನಡುವೆ ತನ್ನ ಅಸ್ತಿತ್ವ ಉಳಿಸಿಕೊಂಡು, ಸಾಂಪ್ರದಾಯಿಕ ಮತಗಳ ಆಧಾರದ ಮೇಲೆ ಗೆಲುವಿನ ದಾರಿ ಹುಡುಕಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ.

ಮೂರು ಪಕ್ಷಗಳ ಅಭ್ಯರ್ಥಿಗಳ ಸ್ಥಳೀಯ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಪ್ರಚಾರ ನಡೆಸುತ್ತಿದ್ದರೂ, ಅನುದಾನದ ವಿಷಯವೇ ಈ ಕ್ಷೇತ್ರದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಬಿಜೆಪಿ ಸರ್ಕಾರ ಅನುದಾನ ನೀಡಲು ತಾರತಮ್ಯ ಮಾಡಿದ್ದರೂ ಹೋರಾಟ ಮಾಡಿಯೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕಾಯಿತು ಎಂದು ಜೆಡಿಎಸ್ ಅಭ್ಯರ್ಥಿ ಆರ್. ಮಂಜುನಾಥ್ ಪ್ರತಿಪಾದಿಸುತ್ತಿದ್ದಾರೆ.

ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ಸಹ ಇದೇ ವಿಷಯ ಪ್ರಸ್ತಾಪಿಸಿ, ರಾಜ್ಯ ಸರ್ಕಾರ ಒಂದು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ನೀಡಿರುವ ಅನುದಾನವನ್ನು ಎಲ್ಲಿ ಬಳಸಲಾಗಿದೆ ಎನ್ನುವುದನ್ನು ಜೆಡಿಎಸ್‌ನ ಹಾಲಿ ಶಾಸಕರು ಬಹಿರಂಗಪಡಿಸಲಿ ಎಂದು ಸವಾಲು ಹಾಕಿ ಪ್ರಚಾರ ಕೈಗೊಂಡಿದ್ದಾರೆ.

2008 ಮತ್ತು 2013ರಲ್ಲಿ ಸತತ ಎರಡು ಬಾರಿ ಆಯ್ಕೆಯಾಗಿದ್ದ ಮುನಿರಾಜು ಅವರು, 2018ರ ವಿಧಾನಸಭಾ ಚುನಾವಣೆಯಲ್ಲಿ ಆರ್.ಮಂಜುನಾಥ್ ವಿರುದ್ಧ ಪರಾಭವಗೊಂಡಿದ್ದರು. ಸ್ಪರ್ಧಿಸಿದ್ದ ಮೊದಲ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ್ದ ಮಂಜುನಾಥ್ ಅವರು, ಮುನಿರಾಜು ಅವರನ್ನು 10,675 ಮತಗಳ ಅಂತರದಿಂದ ಪರಾಭವಗೊಳಿಸಿದ್ದರು. ಇಬ್ಬರು ಮತ್ತೊಮ್ಮೆ ಈಗ ಎದುರಾಳಿಗಳಾಗಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಗೊಂದಲ ಪರಿಹರಿಸಿಕೊಳ್ಳುವಲ್ಲಿ ತುಸು ವಿಳಂಬವಾದರೂ ಮೈಕೊಡವಿಕೊಂಡು ಪ್ರಚಾರ ನಡೆಸುತ್ತಿರುವ ಕಾಂಗ್ರೆಸ್, ಕಳೆದ 15 ವರ್ಷಗಳ ಅಭಿವೃದ್ಧಿ ವಿಷಯವನ್ನೇ ಮುನ್ನಲೆಗೆ ತರಲು ಯತ್ನಿಸುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಜಿ. ಧನಂಜಯ ಅವರು, ಜೆಡಿಎಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಕಾರ್ಯವೈಖರಿಯನ್ನು ಗುರಿಯಾಗಿರಿಸಿಕೊಂಡು ಮತದಾರರನ್ನು ಸೆಳೆಯಲು ಕಸರತ್ತು ನಡೆಸುತ್ತಿದ್ದಾರೆ.

ಕಳೆದ ಮೂರು ವಿಧಾನಸಭಾ ಚುನಾವಣೆಗಳಲ್ಲೂ ಕಾಂಗ್ರೆಸ್ ಸೋಲು ಅನುಭವಿಸಿರುವುದು ಪಕ್ಷ ಸಂಘಟನೆಗೆ ಹಿನ್ನಡೆಯಾಗಿತ್ತು. 2008 ಮತ್ತು 2013ರಲ್ಲಿ ಎರಡನೇ ಸ್ಥಾನ ಪಡೆದಿದ್ದ ಕಾಂಗ್ರೆಸ್, 2018ರಲ್ಲಿ ಮೂರನೇ ಸ್ಥಾನ ಪಡೆಯಿತು. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಪಿ.ಎನ್. ಕೃಷ್ಣಮೂರ್ತಿ 31,711 (ಶೇ14.66) ಮತಗಳನ್ನು ಮಾತ್ರ ಪಡೆದಿದ್ದರು.

ಕ್ಷೇತ್ರದಲ್ಲಿ ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆ ಕಂಡು ಬಂದರೂ ಬಿಜೆಪಿ ಮತ್ತು ಜೆಡಿಎಸ್ ನಡುವೆಯೇ ಪ್ರಬಲ ಪೈಪೋಟಿ ನಡೆಯುತ್ತಿದೆ. ಕಳೆದ ಬಾರಿ ಚುನಾವಣೆಯಲ್ಲಿ ಮುನಿರಾಜು ವಿರುದ್ಧದ ಅಲೆ, ಎಚ್.ಡಿ. ಕುಮಾರಸ್ವಾಮಿ ಪರ ಅಲೆ, ಬಿಎಸ್‌ಪಿ ಬೆಂಬಲ ಮತ್ತು ಕಾಂಗ್ರೆಸ್ ಮತ ಬುಟ್ಟಿಗೆ ಕೈಹಾಕಿದ್ದರಿಂದ ಜೆಡಿಎಸ್ ಸುಲಭವಾಗಿ ಗೆಲುವಿನ ಮಾರ್ಗದಲ್ಲಿ ಸಾಗಿತ್ತು. ಈ ಬಾರಿ ಪರಿಸ್ಥಿತಿ ಭಿನ್ನವಾಗಿದ್ದು, ತನ್ನ ಸಾಂಪ್ರದಾಯಿಕ ಮತಗಳನ್ನು ಕಾಂಗ್ರೆಸ್ ಭದ್ರಪಡಿಸಿಕೊಳ್ಳುತ್ತಿದೆ.

ಮೂರು ಪಕ್ಷಗಳು ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿವೆ. ಪರಿಶಿಷ್ಟರು, ಒಕ್ಕಲಿಗರು, ಲಿಂಗಾಯತರ ಮತಗಳು ಕ್ಷೇತ್ರದಲ್ಲಿ ನಿರ್ಣಾಯಕವಾಗಿವೆ.

ಕ್ಷೇತ್ರದಲ್ಲಿ 15 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಪಕ್ಷೇತರರಾಗಿ ಇಬ್ಬರು ಆರ್. ಮಂಜುನಾಥ್ ಮತ್ತು ಒಬ್ಬರು ಎನ್. ಮಂಜುನಾಥ್ ಎನ್ನುವವರು ಸಹ ಸ್ಪರ್ಧಿಸಿದ್ದಾರೆ. ಆಮ್ ಆದ್ಮಿ ಪಕ್ಷದಿಂದ ಸ್ಪರ್ಧಿಸಿರುವ ಕೀರ್ತನ್ ಕುಮಾರ್ ಎಂ. ಅವರ ಪ್ರಚಾರವೂ ಜೋರಾಗಿದೆ.

ಕೈಗಾರಿಕೆ ಪ್ರದೇಶವಾಗಿರುವುದರಿಂದ ಉತ್ತರ ಕರ್ನಾಟಕದ ಜಿಲ್ಲೆಗಳು ಸೇರಿದಂತೆ ವಿವಿಧೆಡೆಯಿಂದ ಬದುಕು ಕಟ್ಟಿಕೊಳ್ಳಲು ಬಂದಿರುವವರೇ ಇಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಕೇರಳ ಮೂಲದ ಮತದಾರರು ಸಹ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ಮತ ಸೆಳೆಯಲು ಮಲಯಾಳಿ ನಟ ಸುರೇಶ್ ಗೋಪಿ ಬಿಜೆಪಿ ಪರ ಇತ್ತೀಚೆಗೆ ಪ್ರಚಾರ ಕೈಗೊಂಡಿದ್ದರು. ವಲಸಿಗರು ಮತ್ತು ವಿವಿಧ ಸಮುದಾಯಗಳ ಮತಗಳು ನಿರ್ಣಾಯಕವಾಗಿರುವ ಈ ಕ್ಷೇತ್ರದಲ್ಲಿ ಯಾರನ್ನು ಗೆಲುವಿನ ದಡಕ್ಕೆ ಸೇರಿಸುತ್ತಾರೆ ಎನ್ನುವುದು ಕುತೂಹಲ.

ಶಿವಾಜಿನಗರ: ‘ಕೈ’ ಪಟ್ಟ ಕಸಿಯಲು ‘ಕಮಲ’ ತಂತ್ರ

• ಸಂತೋಷ ಜಿಗಳಿಕೊಪ್ಪ

ಎನ್‌.ಚಂದ್ರ

ರಿಜ್ವಾನ್


ಪ್ರಕಾಶ್



ಫಲಿತಾಂಶದ ಹಿನ್ನೋಟ

2008	2013	2018	2019 (ಉಪಚುನಾವಣೆ)
ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್

ಬೆಂಗಳೂರು: ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿರುವ (ಸಿಬಿಡಿ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಸತತ ನಾಲ್ಕು ಬಾರಿ ಗೆಲುವಿನ ಪತಾಕೆ ಹಾರಿಸಿರುವ ಕಾಂಗ್ರೆಸ್ ಪಕ್ಷವನ್ನು ಈ ಬಾರಿ ಕಟ್ಟಿಹಾಕಲು ಬಿಜೆಪಿ ಕಸರತ್ತು ಆರಂಭಿಸಿದೆ.

1999 ಹಾಗೂ 2004ರ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಬಿಜೆಪಿ, ಕ್ಷೇತ್ರದ ಮೇಲೆ ಹಿಡಿತ ಕಾಯ್ದುಕೊಂಡಿತ್ತು. 2004ರಲ್ಲಿ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಕಾಂಗ್ರೆಸ್, ಇದುವರೆಗೂ ಪಟ್ಟ ಬಿಟ್ಟುಕೊಟ್ಟಿಲ್ಲ.

2018ರಲ್ಲಿ ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾಗಿದ್ದ ರೋಷನ್ ಬೇಗ್, ಪಕ್ಷದ ಮುಖಂಡರ ಮೇಲೆ ಅತೃಪ್ತಗೊಂಡು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರ ಸ್ಥಾನಕ್ಕೆ ನಡೆದ 2019ರ ಉಪ ಚುನಾವಣೆಯಲ್ಲೂ ಗೆಲುವು ಸಾಧಿಸಿದ್ದ ಕಾಂಗ್ರೆಸ್, ಶಿವಾಜಿನಗರ ತನ್ನ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸಿದೆ.

ಮಧ್ಯಮ ವರ್ಗ ಹಾಗೂ ಆರ್ಥಿಕವಾಗಿ ಹಿಂದುಳಿದ ಜನರು ಹೆಚ್ಚಿರುವ ಕ್ಷೇತ್ರದಲ್ಲಿ ಮತ ಸೆಳೆಯಲು ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಳು ಈಗಾಗಲೇ ಬಿರುಸಿನ ಪ್ರಚಾರ ಆರಂಭಿಸಿದ್ದಾರೆ.

ಉಪಚುನಾವಣೆ ನಂತರ ಮೂರು ವರ್ಷ ಶಾಸಕರಾಗಿದ್ದ ರಿಜ್ವಾನ್ ಅರ್ಷದ್, ಈ ಬಾರಿಯೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ‘ಮೂರು ವರ್ಷದ ಅಭಿವೃದ್ಧಿ ನೋಡಿ. ಐದು ವರ್ಷ ಸಂಪೂರ್ಣ ಅಧಿಕಾರ ಚಲಾಯಿಸಲು ಅವಕಾಶ ನೀಡಿ’ ಎಂಬ ಮಂತ್ರದೊಂದಿಗೆ ಪ್ರಚಾರಕ್ಕೆ ಇಳಿದಿದ್ದಾರೆ.

ಗೆಲ್ಲುವ ಛಲದೊಂದಿಗೆ ಪ್ರಚಾರ ಆರಂಭಿಸಿರುವ ಬಿಜೆಪಿ ಅಭ್ಯರ್ಥಿ ಎನ್. ಚಂದ್ರ, ‘ಶಿವಾಜಿನಗರ ಕ್ಷೇತ್ರ ಹೆಸರಿಗಷ್ಟೇ ಕೇಂದ್ರ ಸ್ಥಾನದಲ್ಲಿದೆ. ಮೂಲ ಸೌಕರ್ಯದಿಂದ ವಂಚಿತವಾಗಿದೆ. ಕಳಪೆ ಕಾಮಗಾರಿಯಿಂದ ಹದಗೆಟ್ಟಿದೆ. ಕಾಂಗ್ರೆಸ್ ಬುಡಸಮೇತ ಕಿತ್ತೆಸೆದು ಬದಲಾವಣೆ ತನ್ನಿ’ ಎಂದು ಮತ ಕೇಳುತ್ತಿದ್ದಾರೆ.

‘ಕ್ಷೇತ್ರದಲ್ಲಿ ವಿಶ್ವದರ್ಜೆ ಸೌಲಭ್ಯ ಕಲ್ಪಿಸುವೆ’ ಎನ್ನುತ್ತಿರುವ ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿ ಪ್ರಕಾಶ್ ನೆಡುಂಗಡಿ ಸಹ ಚುನಾವಣೆ ಕಣದಲ್ಲಿದ್ದಾರೆ.

ಶಿವಾಜಿನಗರ ಕ್ಷೇತ್ರವು ರಾಮಸ್ವಾಮಿ ಪಾಳ್ಯ, ಜಯಮಹಲ್, ವಸಂತನಗರ, ಸಂಪಂಗಿ-ರಾಮನಗರ, ಭಾರತಿನಗರ ಹಾಗೂ ಹಲಸೂರು ವಾರ್ಡ್ ಒಳಗೊಂಡಿದೆ. 196 ಮತಗಟ್ಟೆಗಳಿವೆ. ಕೆಲ ವಾರ್ಡ್‌ಗಳಲ್ಲಿ ಬಿಜೆಪಿ ಒಲವಿದ್ದು, ಹೆಚ್ಚು ವಾರ್ಡ್‌ಗಳಲ್ಲಿ ಕಾಂಗ್ರೆಸ್ ಮುಂಚೂಣಿಯಲ್ಲಿದೆ.

ಧರ್ಮ, ಜಾತಿ ಮತ ಸೆಳೆಯಲು ಚಿತ್ತ: ಹಿಂದೂ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಮತದಾರರನ್ನು ಸೆಳೆಯಲು ಎಲ್ಲ ಅಭ್ಯರ್ಥಿಗಳು ಒತ್ತು ನೀಡುತ್ತಿದ್ದಾರೆ. ಮಸೀದಿ, ದರ್ಗಾ, ಚರ್ಚ್ ಹಾಗೂ ದೇವಸ್ಥಾನಗಳಿಗೆ ಅಭ್ಯರ್ಥಿಗಳು ಭೇಟಿ ನೀಡುತ್ತಿದ್ದಾರೆ. ಅಭ್ಯರ್ಥಿಗಳನ್ನು ಆತ್ಮೀಯವಾಗಿ ಬರಮಾಡಿಕೊಂಡು ಸತ್ಕರಿಸುತ್ತಿರುವ ಎಲ್ಲ ಧರ್ಮ–ಜಾತಿ ಮುಖಂಡರು, ಮತದಾನದ ಗುಟ್ಟು ಮಾತ್ರ ಬಿಟ್ಟುಕೊಟ್ಟಿಲ್ಲ.

ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್. ಮಂಜುನಾಥ್ ಅವರ ನಾಮಪತ್ರ ತಿರಸ್ಕೃತಗೊಂಡಿದ್ದು, ಇದರ ಲಾಭ ಕಾಂಗ್ರೆಸ್‌ಗೆ ಆಗಲಿದೆ ಎಂಬ ಲೆಕ್ಕಾಚಾರ ಸ್ಥಳೀಯರದ್ದು.

ಪ್ರೌಟಿಸ್ಟ್ ಬ್ಲಾಕ್ ಇಂಡಿಯಾ ಪಕ್ಷದಿಂದ ಬಿ.ಕೆ. ಪ್ರಸಾದ್, ಕರ್ನಾಟಕ ಕಾರ್ಮಿಕ ಪಕ್ಷದಿಂದ ಮೊಹತಾಶೆಮ್ ಎಂ. ಅಲಿಖಾನ್, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಹಬೀಬ್ ಸಾಬ್ ಕಣದಲ್ಲಿದ್ದಾರೆ. ಅನ್ವರ್ ಪಾಷಾ, ಜಮೀಲ್ ಅಹ್ಮದ್, ತನ್ವೀರ್ ಅಹ್ಮದ್, ಮೊಹಮ್ಮದ್ ಹನೀಫ್, ಎಂ. ರಫೀಕ್ ಅಹ್ಮದ್, ರಾಬರ್ಟ್ ಕ್ಲೈವೆ, ಶಹನವಾಜ್ ಅಹ್ಮದ್, ಎಸ್. ಸರವಣನ್ ಹಾಗೂ ಎಂ. ಸಾದಿಕ್ ಅಲಿ ಪಕ್ಷೇತರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದಾರೆ.

ಗಾಯಕ ವಿಜಯ್ ಪ್ರಕಾಶ್ ಸಂಗೀತ ಸಂಯೋಜನೆ

‘ಚುನಾವಣಾ ಆ್ಯಪ್’ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಮತಗಟ್ಟೆಯ ವಿವರ, ಅಭ್ಯರ್ಥಿಗಳ ವಿವರ, ಚುನಾವಣಾ ವೇಳಾ ಪಟ್ಟಿ ಸೇರಿ ಹಲವು ಮಾಹಿತಿಗಳನ್ನೊಳ-ಗೊಂಡ ‘ಚುನಾವಣಾ ಆ್ಯಪ್’ ಅನ್ನು ಚುನಾವಣಾ ಆಯೋಗ ರೂಪಿಸಿದ್ದು, ಗುರುವಾರ ನಗರದಲ್ಲಿ ಅನಾವರಣ ಮಾಡಲಾಯಿತು.

ಮುಖ್ಯ ಚುನಾವಣಾಧಿಕಾರಿ-ಗಳ ಕಚೇರಿ ಹಾಗೂ ಅಂಚೆ ಇಲಾಖೆ ಜಂಟಿಯಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿಶೇಷ ಅಂಚೆ ಲಕೋಟೆಯನ್ನು ಲೋಕಾರ್ಪಣೆ ಮಾಡಿ, ಗಾಯಕ ವಿಜಯ್ ಪ್ರಕಾಶ್ ಅವರು ಸಂಗೀತ ಸಂಯೋಜಿಸಿ ಹಾಡಿರುವ ಚುನಾವಣಾ ಜಾಗೃತಿ ಗೀತೆಯನ್ನು ಬಿಡುಗಡೆ ಮಾಡಲಾಯಿತು. ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯದಲ್ಲಿ ಚುನಾವಣೆ ಜಾಗೃತಿ ಗೀತೆ ಮೂಡಿಬಂದಿದೆ.

‘ಮತದಾನದ ದಿನದಂದು ಮತದಾರರ ಅನುಕೂಲಕ್ಕಾಗಿ ಹಲವು ಉಪಯುಕ್ತ ಮಾಹಿತಿಗಳುಳ್ಳ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಮತದಾರರು ಈ ಆ್ಯಪ್‌ನ ನೆರವಿನಿಂದ ಸುಲಭವಾಗಿ ಮತದಾನದಲ್ಲಿ ಭಾಗ-ವಹಿಸಬಹುದು. ಅಂಗವಿಕಲರು ಹಾಗೂ ಹಿರಿಯ ನಾಗರಿಕರಿಗೆ ಗಾಲಿಕುರ್ಚಿ ವ್ಯವಸ್ಥೆ, ಮತದಾನದ ಪ್ರಮಾಣ, ಮತಗಟ್ಟೆಯ ಸುತ್ತಮುತ್ತ-ಲಿನ ಆಸ್ಪತ್ರೆ, ಪೊಲೀಸ್ ಠಾಣೆ ವಿವರ ಸೇರಿ ಎಲ್ಲ ಉಪಯುಕ್ತ ಮಾಹಿತಿಗಳು ಈ ಆ್ಯಪ್‌ನಲ್ಲಿ ದೊರೆಯಲಿವೆ. ಚುನಾವಣೆಯ ನಂತರವೂ ಹತ್ತಿರದ ಪೊಲೀಸ್ ಠಾಣೆ ಹಾಗೂ ಆರೋಗ್ಯ ಕೇಂದ್ರಗಳ ಮಾಹಿತಿ ಪಡೆಯಲು ಜನರು ಈ ಆ್ಯಪ್ ಬಳಸಬಹುದು’ ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

‘ಮೇ 10 ರಂದು ಬೆಳಿಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಮತದಾನ ನಿಗದಿಯಾಗಿದ್ದು, ಚುನಾವಣಾ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಪ್ರಜಾಪ್ರಭುತ್ವದ ಹಬ್ಬವಾದ ಚುನಾವಣೆಯನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಪಾರದರ್ಶಕವಾಗಿ ನಡೆಸಲು ಸಾರ್ವಜನಿಕರ ಸಹಕಾರವೂ ಅತ್ಯಗತ್ಯ. ಚುನಾವಣಾ ಅಕ್ರಮಗಳನ್ನು ನಿಯಂತ್ರಿಸಿ, ನೈತಿಕ ಚುನಾವಣೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಚುನಾವಣಾ ಆಯೋಗ ಹೊರತಂದಿರುವ ಸಿ-ವಿಜಿಲ್, ಸುವಿಧಾ ಆ್ಯಪ್‌ಗಳಿಗೆ ಉತ್ತಮ ಜನಸ್ಪಂದನೆ ದೊರೆತಿದೆ’ ಎಂದರು.

ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್, ‘ಯಾವುದೇ ಸಂದೇಶವನ್ನು ಪದೇ ಪದೇ ಹೇಳುವುದರಿಂದ ಅದು ಹೆಚ್ಚಿನ ಪರಿಣಾಮ ಬೀರುತ್ತದೆ. ಅಂಚೆ ಇಲಾಖೆಯ ಫ್ರಾಂಕಿಂಗ್ ಮಷಿನ್‌ಗಳಲ್ಲಿ ‘ಮೇ 10 ರಂದು ತಪ್ಪದೇ ಮತ ಚಲಾಯಿಸಬೇಕು’ ಎಂಬ ಸಂದೇಶವನ್ನು ಮುದ್ರಿಸಲಾಗುತ್ತಿದೆ’ ಎಂದು ಹೇಳಿದರು.

‘ಒಳಒಪ್ಪಂದದಿಂದ ಟಿಕೆಟ್ ತಪ್ಪಿದೆ’

ಕೃಷ್ಣಯ್ಯ ಶೆಟ್ಟಿ

ಬೆಂಗಳೂರು: ‘ಕಾಂಗ್ರೆಸ್ ಮತ್ತು ಬಿಜೆಪಿಯ ಒಳಒಪ್ಪಂದದಿಂದ ನನಗೆ ಬಿಜೆಪಿ ಟಿಕೆಟ್ ಕೈ ತಪ್ಪಿದೆ’ ಎಂದು ಗಾಂಧಿನಗರ ವಿಧಾನಸಭೆ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ ಆರೋಪಿಸಿದರು.

ನಗರದಲ್ಲಿ ಗುರುವಾರ ಆಯೋಜಿಸಿದ್ದ ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮ-ದಲ್ಲಿ ಮಾತನಾಡಿದ ಅವರು, ‘ಸೋಲಿನ ಭೀತಿಯಲ್ಲಿರುವ ಬಿಜೆಪಿ ಅಭ್ಯರ್ಥಿ ಎ.ಆರ್. ಸಪ್ತಗಿರಿ ಗೌಡ, ನಾನು ಇನ್ನೂ ಬಿಜೆಪಿಯಲ್ಲಿದ್ದೇನೆ ಎಂದು ಅಪಪ್ರಚಾರ ಮಾಡಿ ಬಿಜೆಪಿಗೆ ಮತ ನೀಡುವಂತೆ ಮತದಾರರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ಅಭ್ಯರ್ಥಿಯ ಚಿಹ್ನೆ ಮತ್ತು ಪಕ್ಷದ ಹೆಸರನ್ನು ಅಪಪ್ರಚಾರ ಮಾಡುವುದು ಅಪರಾಧ. ಆದ್ದರಿಂದ, ಚುನಾವಣಾ ಆಯೋಗ ಸಪ್ತಗಿರಿ ಗೌಡ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದರು.

‘ಬಿಎಸ್‌ಪಿ, ದುಡಿಯುವ ಜನ ಪಕ್ಷ, ಸಂಯುಕ್ತ ಜನತಾ ದಳ, ಜನತಾ ಪಾರ್ಟಿ ಹಾಗೂ ಜನ ಸ್ಪಂದನಾ ಪಕ್ಷಗಳ ಅಭ್ಯರ್ಥಿಗಳು ನನಗೆ ಬೆಂಬಲ ಸೂಚಿಸಿ ಕಣದಿಂದ ಹಿಂದೆ ಸರಿದಿದ್ದಾರೆ. ಬಡತನ ನಿವಾರಣೆ ಮತ್ತು ಅವಕಾಶ ವಂಚಿತರ ಸೇವೆ ಮಾಡಲು ಈ ಐದು ಪಕ್ಷಗಳು ಬೆಂಬಲ ನೀಡಿವೆ’ ಎಂದರು.

ಬಿಎಸ್‌ಪಿಯ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಇದ್ದರು.

‘ಬಜರಂಗದಳ ನಿಷೇಧಿಸುವುದು ತಿರುಕನ ಕನಸು’

ಪೀಣ್ಯ ದಾಸರಹಳ್ಳಿ: ’ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದರೆ ಬಜರಂಗದಳ ನಿಷೇಧ ಮಾಡುತ್ತೇವೆ ಎನ್ನುತ್ತಾರೆ. ಆದರೆ, ಅದು ತಿರುಕನ ಕನಸು. ಅದನ್ನು ಭಾರತೀಯರು ಯಾರು ಕ್ಷಮಿ-ಸುವುದಿಲ್ಲ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ವಾಗ್ದಾಳಿ ನಡೆಸಿದರು.

ಹೆಸರಘಟ್ಟ ಮುಖ್ಯರಸ್ತೆಯ ಪಾಟೀದಾರ್ ಸಮಾಜದಲ್ಲಿ ದಾಸರಹಳ್ಳಿ ಕ್ಷೇತ್ರದ ಅಭ್ಯರ್ಥಿ ಎಸ್. ಮುನಿರಾಜು ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದರು.

'ಕಾಂಗ್ರೆಸ್ ಮುಳುಗುತ್ತಿರುವ ಹಡಗು, ಯಾರೋ ನಾಯಕ? ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ, ಅಮಿತ್ ಶಾ ಮುಂದೆ ಸಮ ಏನು‘ ಎಂದು ಪ್ರಶ್ನಿಸಿದರು.

'ಮೋದಿ ಅವರು ಕರ್ನಾಟಕದ ಬಗ್ಗೆ ವಿಶೇಷ ಅಭಿಮಾನ ಇರಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ರೋಡ್ ಶೋ ನಡೆಸುತ್ತಿರುವ ಮೋದಿ ಅವರಿಗೆ ಗೌರವ ತರಬೇಕಾದರೆ ಬಿಜೆಪಿ ಪಕ್ಷದ ಅಭ್ಯರ್ಥಿ ಮುನಿರಾಜು ಅವರನ್ನು ಗೆಲ್ಲಿಸಿ' ಎಂದರು.

ಬಿಜೆಪಿ ಅಭ್ಯರ್ಥಿ ಮುನಿರಾಜು ಮಾತನಾಡಿ, 'ನಾನು ಶಾಸಕನಾಗಿದ್ದಾಗ ಈ ಕ್ಷೇತ್ರದ ಅಭಿವೃದ್ಧಿಗಾಗಿ ನೂರಾರು ಕೋಟಿ ಅನುದಾನವನ್ನು ನೀಡಿದವರು ಯಡಿಯೂರಪ್ಪನವರು‘ ಎಂದರು.

ಉರುಳಿ ಬಿದ್ದ ಮರಗಳು • ಮಾರುಕಟ್ಟೆ ಪ್ರದೇಶಗಳಲ್ಲಿ ಹರಿದ ನೀರು

ಮಳೆ: ಹೊಳೆಯಂತಾದ ರಸ್ತೆಗಳು

ಪ್ರಜಾವಾಣಿ ವಾರ್ತೆ

ಧಾರಾಕಾರ ಮಳೆಯಿಂದಾಗಿ ನಗರದ ಶೇಷಾದ್ರಿಪುರ ರಸ್ತೆಯಲ್ಲಿ ನಿಂತ ನೀರಿನಲ್ಲಿಯೇ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಗುರುವಾರವೂ ಬಹುತೇಕ ಪ್ರದೇಶಗಳಲ್ಲಿ ಧಾರಾಕಾರ ಮಳೆ ಸುರಿಯಿತು. ಹಲವು ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಜೋರು ಗಾಳಿ ಬೀಸಿದ್ದರಿಂದ, ಕೆಲವೆಡೆ ಮರಗಳು ಉರುಳಿಬಿದ್ದಿದ್ದವು.

ಬೇಸಿಗೆ ಆರಂಭವಾದ ನಂತರ ಬಿಸಿಲು ಧಗೆ ಹೆಚ್ಚಿತ್ತು. ಕೆಲದಿನಗಳಿಂದ ನಗರದಲ್ಲಿ ಬಿಸಿಲು ಕಡಿಮೆಯಾಗಿ ಮೋಡ ಕವಿದ ವಾತಾವರಣ ಹೆಚ್ಚಾಗಿದೆ. ಇದರ ನಡುವೆಯೇ ಮಳೆ ಅಬ್ಬರ ಸಹ ಜೋರಾಗಿದೆ.

ನಗರದ ಹಲವೆಡೆ ಬುಧವಾರ ಉತ್ತಮ ಮಳೆ ಆಗಿತ್ತು. ಗುರುವಾರ ಮಧ್ಯಾಹ್ನದಿಂದಲೇ ಮಳೆ ಶುರುವಾಯಿತು. ಸಂಜೆ ಹಾಗೂ ರಾತ್ರಿ ಜೋರಾದ ಮಳೆಯಾಗಿ, ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಹುಳಿಮಾವು, ಗೊಟ್ಟಿಗೆರೆ, ಕೊತ್ತನೂರು, ಮಹಾಲಕ್ಷ್ಮಿ ಲೇಔಟ್, ನಾಗರಬಾವಿ, ನಂದಿನಿ ಲೇಔಟ್, ವಿಜಯನಗರ, ಕೆಂಗೇರಿ, ಜಯನಗರದ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ನಾಯಂಡಹಳ್ಳಿ, ರಾಜಾಜಿನಗರ, ಹೊರಮಾವು, ಹೆಬ್ಬಾಳ, ರಾಜರಾಜೇಶ್ವರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಜೋರು ಮಳೆಯಾಯಿತು.

ಬನಶಂಕರಿ, ಶಿವಾಜಿನಗರ, ಹಲಸೂರು, ವಸಂತನಗರ, ವಿದ್ಯಾರಣ್ಯಪುರ, ಕೋರಮಂಗಲ, ಬಸವನಗುಡಿ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ವಿಲ್ಸನ್ ಗಾರ್ಡನ್, ಶಾಂತಿನಗರ, ಸಂಪಂಗಿರಾಮನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಅಬ್ಬರವಿತ್ತು. ಇಲ್ಲೆಲ್ಲ ರಸ್ತೆಗಳಲ್ಲಿ ನೀರು ಹರಿಯಿತು.

ಮಾರುಕಟ್ಟೆ ಪ್ರದೇಶದಲ್ಲಿ ನೀರು: ಚಿಕ್ಕಪೇಟೆ, ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ ಹಾಗೂ ಸುತ್ತಮುತ್ತಲ ಮಾರುಕಟ್ಟೆ ಪ್ರದೇಶಗಳ ರಸ್ತೆಗಳಲ್ಲಿ ನೀರು ಹರಿಯಿತು. ಇದರಿಂದಾಗಿ ಜನರ ಸಂಚಾರಕ್ಕೆ ತೊಂದರೆ ಉಂಟಾಯಿತು. ವ್ಯಾಪಾರಕ್ಕೂ ಅಡಚಣೆಯಾಯಿತು.

ವಿಠ್ಠಲ ಮಲ್ಯ ರಸ್ತೆಯಲ್ಲಿ ನಿಂತು ಕೊಂಡಿದ್ದ ನೀರು ತೆರವು ಮಾಡಲು ಸಿಬ್ಬಂದಿ ಹರಸಾಹಸ ಪಟ್ಟರು.

ತುಂಬಿ ಹರಿದ ಕಾಲುವೆಗಳು: ಧಾರಾಕಾರ ಮಳೆಯಿಂದಾಗಿ ಹಲವು ರಸ್ತೆಗಳ ಕಾಲುವೆಗಳಲ್ಲಿ ನೀರು ತುಂಬಿ ಹರಿಯಿತು. ಬಹುತೇಕ ಕಾಲುವೆಗಳು ಹೂಳು ತುಂಬಿಕೊಂಡಿದ್ದರಿಂದ, ನೀರು ಹರಿದು ಹೋಗಲು ಜಾಗವಿರಲಿಲ್ಲ. ಹೀಗಾಗಿ, ನೀರು ರಸ್ತೆಯಲ್ಲಿ ಹರಿದು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ರಸ್ತೆಯ ನೀರಿನಲ್ಲೇ ನಿಂತುಕೊಂಡಿದ್ದವು. ಅಂಥ ವಾಹನಗಳನ್ನು ಸ್ಥಳೀಯರು ತಳ್ಳಿ ಮುಂದಕ್ಕೆ ಕಳುಹಿಸಿದರು.

‘ನಗರದ ಹಲವೆಡೆ ಮೂರು ದಿನಗಳಿಂದ ಉತ್ತಮ ಮಳೆ ಆಗುತ್ತಿದೆ. ಹಾನಿ ಬಗ್ಗೆ ದೂರುಗಳು ಬರುತ್ತಿದ್ದಂತೆ, ಆಯಾ ವಲಯ ಸಿಬ್ಬಂದಿಗೆ ಮಾಹಿತಿ ನೀಡಲಾಗುತ್ತಿದೆ. ಸಂಬಂಧಪಟ್ಟ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸುತ್ತಿದ್ದಾರೆ’ ಎಂದು ಬಿಬಿಎಂಪಿ ಸಹಾಯವಾಣಿ ಅಧಿಕಾರಿಗಳು ತಿಳಿಸಿದರು.

ಮರಗಳ ತೆರವು

ಮಳೆ ಆರಂಭಕ್ಕೂ ಮುನ್ನ ಗಾಳಿ ಸಹ ವೇಗವಾಗಿ ಬೀಸಿತ್ತು. ಇದರಿಂದಾಗಿ ಜಯನಗರದ 4ನೇ ಹಂತ ಹಾಗೂ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಎರಡು ಮರಗಳು ಉರುಳಿಬಿದ್ದಿದ್ದವು.

ಮರದ ಕೊಂಬೆಗಳು ರಸ್ತೆಯಲ್ಲಿ ಬಿದ್ದಿದ್ದರಿಂದ, ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಈ ಭಾಗದಲ್ಲಿ ಕೆಲ ನಿಮಿಷ ವಿಪರೀತ ದಟ್ಟಣೆ ಉಂಟಾಗಿತ್ತು. ಈ ಬಗ್ಗೆ ಸ್ಥಳೀಯರು ಬಿಬಿಎಂಪಿ ಸಹಾಯವಾಣಿಗೆ ಮಾಹಿತಿ ನೀಡಿದ್ದರು. ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ, ಸ್ಥಳೀಯರ ಸಹಾಯದಿಂದ ಮರಗಳನ್ನು ತೆರವು ಮಾಡಿದರು.

244 ನ್ಯಾಯಾಧೀಶರ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ವಿವಿಧ ವಿಭಾಗಗಳ ರಿಜಿಸ್ಟ್ರಾರ್ ಹುದ್ದೆಗಳಿಗೆ ಆರು ಮಂದಿ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿರುವುದೂ ಸೇರಿದಂತೆ ಒಟ್ಟು 244 ನ್ಯಾಯಾಧೀಶರ ವರ್ಗಾವಣೆ ಮಾಡಲಾಗಿದೆ.

ಈ ಕುರಿತಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕೆ. ಎಸ್. ಭರತ್ ಕುಮಾರ್ ಅಧಿಸೂಚನೆ ಹೊರಡಿಸಿದ್ದು, ಇದೇ 22ರಿಂದ ಈ ಕುರಿತ ಆದೇಶ ಅನ್ವಯವಾಗಲಿದೆ. ಪ್ರಮುಖವಾಗಿ ಈ ಮೊದಲು ಎನ್ಐಎ (ರಾಷ್ಟ್ರೀಯ ತನಿಖಾ ದಳ) ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಕಸನಪ್ಪ ನಾಯ್ಕ್ ಅವರನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಕಾರ್ಯದರ್ಶಿಯಾಗಿ ಮತ್ತು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಇ. ಚಂದ್ರಕಲಾ ಅವರನ್ನು ಮೌಲಸೌಕರ್ಯ ಮತ್ತು ನಿರ್ವಹಣಾ ರಿಜಿಸ್ಟ್ರಾರ್ ಆಗಿ ನೇಮಿಸಲಾಗಿದೆ.

ಮೈಸೂರಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದ ಸರಸ್ವತಿ ವಿಷ್ಣು ಕೋಸಂದರ್ ಅವರನ್ನು ವಿಚಕ್ಷಣಾ ವಿಭಾಗದ ರಿಜಿಸ್ಟ್ರಾರ್ ಆಗಿ, ಕಲಬುರಗಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಚ್.ಜೆ. ಮರುಳಸಿದ್ಧರಾಧ್ಯ ಅವರನ್ನು ಕಲಬುರಗಿ ಪೀಠದ ಹೆಚ್ಚುವರಿ ರಿಜಿಸ್ಟ್ರಾರ್ ಜನರಲ್ ಹುದ್ದೆಗೆ ನೇಮಕ ಮಾಡಲಾಗಿದೆ.

ಹಾಸನದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಕೆ. ನಾರಾಯಣ ಪ್ರಸಾದ್ ಅವರನ್ನು ನೇಮಕಾತಿ ವಿಭಾಗದ ರಿಜಿಸ್ಟ್ರಾರ್ ಆಗಿಯೂ, ಬೆಂಗಳೂರು ಗ್ರಾಮಾಂತರ 10ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಬಸವರಾಜ್ ಚೆಂಗಟಿ ಅವರನ್ನು ಅಂಕಿಸಂಖ್ಯೆ ಮತ್ತು ಪರಿಶೀಲನಾ ರಿಜಿಸ್ಟ್ರಾರ್ ಆಗಿಯೂ ನೇಮಿಸಲಾಗಿದೆ.

ನಿವೃತ್ತಿ: ರಾಯಚೂರಿನ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಆಯೋಜಿಸಲಾಗಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬಿ. ಆರ್. ಅಂಬೇಡ್ಕರ್ ಭಾವಚಿತ್ರ ಇರಿಸುವ ವಿಚಾರದಲ್ಲಿ ವಿವಾದದ ಕೇಂದ್ರವೆನಿಸಿದ್ದ ಹಾಗೂ ಸದ್ಯ ಶಿವಮೊಗ್ಗ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರು ಇದೇ 31ರಂದು ನಿವೃತ್ತಿ ಹೊಂದಲಿದ್ದಾರೆ. ಇವರ ಸ್ಥಾನಕ್ಕೆ ಹೈಕೋರ್ಟ್‌ನ ನೇಮಕಾತಿ ವಿಭಾಗದ ರಿಜಿಸ್ಟ್ರಾರ್ ಮಂಜುನಾಥ್ ನಾಯಕ್ ಅವರನ್ನು ನೇಮಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಹೈಕೋರ್ಟ್‌ನ ಅಧಿಕೃತ ವೆಬ್‌ಸೈಟ್ ನೋಡಬಹುದು.

ಮಳೆಗೆ ಸೋರಿದ ಟರ್ಮಿನಲ್–2 ಚಾವಣಿ!

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೊಸದಾಗಿ ನಿರ್ಮಾಣವಾದ ಟರ್ಮಿನಲ್ -2ನ ಲಾಂಜ್‌ಗೆ ಸೋಮವಾರ ತಡ ರಾತ್ರಿ ಸುರಿದ ಭಾರಿ ಮಳೆಯ ನೀರು ನುಗ್ಗಿದೆ.

ಮಂಗಳವಾರ ಮುಂಜಾನೆ ಸುರಿದ ಮಳೆಗೆ ಬಿದಿರಿನ ಚಾವಣಿಯಿಂದ ನೀರು ಸೋರಲು ಆರಂಭಿಸಿದೆ. ಇದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಟ್ವೀಟಿಗರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಹೊಸ ಟರ್ಮಿನಲ್‌ನಲ್ಲಿ ಚಿಕ್ಕಪುಟ್ಟ ತೊಂದರೆಗಳಾಗಿವೆ. ಅವುಗಳನ್ನು ಸರಿಪಡಿಸುತ್ತಿದ್ದೇವೆ’ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಗರ್ಭಿಣಿ, ಶಿಶು ಸಾವು; ವೈದ್ಯರ ನಿರ್ಲಕ್ಷ್ಯ– ಆರೋಪ

ಪ್ರಜಾವಾಣಿ ವಾರ್ತೆ

ಸಂಗೀತಾ

ಯಾದಗಿರಿ: ನಗರದ ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗಾಗಿ ಬಂದಿದ್ದ ಗರ್ಭಿಣಿ ಹಾಗೂ ಅವರ ಗರ್ಭದಲ್ಲಿಯೇ ಶಿಶು ಸಾವನ್ನಪ್ಪಿದ ಘಟನೆ ಗುರುವಾರ ನಡೆದಿದೆ. ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಗೂಡೂರು ಗ್ರಾಮದ ಸಂಗೀತಾ ನಾಗರಾಜ (20) ಮೃತ ಗರ್ಭಿಣಿ.

‘ಸಹಜ ಹೆರಿಗೆ ಮಾಡುತ್ತೇವೆ ಎಂದು ವೈದ್ಯರು, ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದ್ದಾರೆ. ವೈದ್ಯರು ಸರಿಯಾಗಿ ಪರೀಕ್ಷೆ ಮಾಡಿಲ್ಲ’ ಎಂದು ಸಂಬಂಧಿಕರಾದ ಮಹೇಶ ದೂರಿದ್ದಾರೆ.

‘ಗರ್ಭಿಣಿಗೆ ರಕ್ತದೊತ್ತಡ ಇತ್ತು. ಹೃದಯಾಘಾತದಿಂದ ಗರ್ಭಿಣಿ ಸಾವನ್ನಪ್ಪಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಕಳಿಸಲಾಗಿದೆ’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕಿ ಡಾ. ರಿಜ್ವಾನ್ ಹೇಳಿದರು.

ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಬಿಐಎಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಸಾರ್ವಜನಿಕ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಒಳಪಡಲಿದೆ’ ಎಂದು ಕರ್ನಾಟಕ ಮಾಹಿತಿ ಆಯೋಗ ಅಭಿಪ್ರಾಯಪಟ್ಟಿದೆ.

ಯಲಹಂಕ ನ್ಯೂ ಟೌನ್‌ನ ಬೆನ್ಸನ್ ಐಸಾಕ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ಮಾಹಿತಿ ಆಯುಕ್ತ ಎನ್.ಸಿ. ಶ್ರೀನಿವಾಸ್, ಆಯುಕ್ತರಾದ ಎಸ್. ಎಂ.ಸೋಮಶೇಖರ್ ಮತ್ತು ಕೆ.ಪಿ. ಮಂಜುನಾಥ್ ಅವರಿದ್ದ ಪೀಠ ಹೊರಡಿಸಿರುವ 37 ಪುಟಗಳ ಆದೇಶದಲ್ಲಿ ‘ಸಾರ್ವಜನಿಕ ಪ್ರಾಧಿಕಾರ’ ಎಂದು ಘೋಷಿಸಿದೆ. ವಿಮಾನ ನಿಲ್ದಾಣ ಸ್ಥಾಪಿಸುವಲ್ಲಿ ವಹಿಸಿದ್ದ ಮಹತ್ವದ ಪಾತ್ರ ವಹಿಸಿದ್ದರೂ ಬಿಐಎಎಲ್ ಬೆಂಬಲಿಸಿದ್ದಕ್ಕಾಗಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ಬಿಐಎಎಲ್ ಸಾರ್ವಜನಿಕ ಪ್ರಾಧಿಕಾರವೇ ಎಂಬ ಪ್ರಶ್ನೆಗೆ ಕೊನೆಗೂ ಉತ್ತರ ಸಿಕ್ಕಿದೆ. ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 4(1) ಅಡಿಯಲ್ಲಿ ಸ್ವಯಂ ಪ್ರೇರಿತವಾಗಿ ಮಾಹಿತಿಯನ್ನು ಪ್ರಕಟಿಸಬೇಕಿದ್ದು, ಅದಕ್ಕೆ ಎರಡು ತಿಂಗಳ ಕಾಲಾವಕಾಶ ನೀಡಲಾಗಿದೆ ಎಂದು ಆದೇಶದಲ್ಲಿ ಪೀಠ ತಿಳಿಸಿದೆ. ಈ ಆದೇಶ ಪಾಲನೆ ಮಾಡಿರುವ ಬಗ್ಗೆ ಅನುಪಾಲನಾ ವರದಿಯನ್ನು ಜುಲೈ 24ರೊಳಗೆ ಸಲ್ಲಿಸಬೇಕು ಎಂದು ತಿಳಿಸಿದೆ.

2007ರಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದ ಬೆನ್ಸನ್ ಐಸಾಕ್, ಹಣ ಬಳಕೆ ಬಗ್ಗೆ ಮಾಹಿತಿ ಕೋರಿದ್ದರು. ‘ಸಾರ್ವಜನಿಕ ಪ್ರಾಧಿಕಾರವಲ್ಲದ ಕಾರಣ ಆರ್‌ಟಿಐ ಕಾಯ್ದೆ ಅನ್ವಯವಾಗುವುದಿಲ್ಲ’ ಎಂದು ಬಿಐಎಎಲ್ ತಿಳಿಸಿತು. ಬಳಿಕ ಅವರು ಮಾಹಿತಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದರು. 2008ರ ಆಗಸ್ಟ್ 18ರಂದೇ ಆದೇಶ ಹೊರಡಿಸಿದ್ದ ಆಯೋಗ, ‘ಸಾರ್ವಜನಿಕ ಪ್ರಾಧಿಕಾರ’ ಎಂದು ಘೋಷಿಸಿತ್ತು.

ಅದನ್ನು ಪ್ರಶ್ನಿಸಿ ಬಿಐಎಎಲ್ ಹೈಕೋರ್ಟ್ ಮೊರೆ ಹೋಗಿತ್ತು. ಶೇ 74ರಷ್ಟು ಹಣಕಾಸಿನ ಪಾಲನ್ನು ಖಾಸಗಿ ಕಂಪನಿಗಳು ಹೊಂದಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶೇ 26ರಷ್ಟು ಮಾತ್ರ ಹೊಂದಿವೆ. ಆದ್ದರಿಂದ ಮಾಹಿತಿ ಹಕ್ಕು ಕಾಯ್ದೆಯಿಂದ ವಿನಾಯಿತಿ ಇದೆ ಎಂದು ವಾದಿಸಿತ್ತು. ಹೊಸದಾಗಿ ಆದೇಶ ಹೊರಡಿಸುವಂತೆ 2010ರಲ್ಲೇ ಆಯೋಗಕ್ಕೆ ಹೈಕೋರ್ಟ್ ವಾಪಸ್ ಕಳುಹಿಸಿತ್ತು. ನಂತರ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಪೂರ್ಣ ಪೀಠ ರಚನೆಯಾಗಿತ್ತು.

ಬಿಐಎಎಲ್‌ನಲ್ಲಿ ಸರ್ಕಾರದ ಹೂಡಿಕೆ, ಷೇರುಗಳನ್ನು ಗಮನಿಸಿರುವ ಆಯೋಗ, ಸರ್ಕಾರವು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಹಣಕಾಸಿನ ನೆರವು ನೀಡಿದೆ. ಐದು ವರ್ಷಗಳ ತನಕ ಆಸ್ತಿ ತೆರಿಗೆ ವಿನಾಯಿತಿ, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ರಸ್ತೆ ತೆರಿಗೆ ಸೇರಿ ಹಲವು ವಿನಾಯಿತಿಗಳನ್ನು ಬಿಐಎಎಲ್ ಪಡೆದಿದೆ ಎಂದು ಮಾಹಿತಿ ಆಯೋಗ ವಿವರಿಸಿದೆ.

ಇದೇ ರೀತಿಯ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಆಯೋಗ ಉಲ್ಲೇಖಿಸಿದೆ. ‘ಸರ್ಕಾರದಿಂದ ಹಣಕಾಸಿನ ನೆರವು ಪಡೆದಿದ್ದರೆ ಅದನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇದೆ’ ಎಂದೂ ಹೇಳಿದೆ.

ಆರ್‌ಟಿಐ ವ್ಯಾಪ್ತಿಗೆ ಕೆಜಿಎ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗಾಲ್ಫ್ ಅಸೋಸಿಯೇಷನ್ (ಕೆಜಿಎ) ಅನ್ನು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ-2005ರ ಅಡಿ ಸಾರ್ವಜನಿಕ ಪ್ರಾಧಿಕಾರವೆಂದು ಘೋಷಿಸಿ ಕರ್ನಾಟಕ ಮಾಹಿತಿ ಆಯೋಗ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಆಯೋಗದ ಆದೇಶ ಪ್ರಶ್ನಿಸಿ ಕೆಜಿಎ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎನ್.ಎಸ್. ಸಂಜಯ ಗೌಡ ಅವರಿದ್ದ ಏಕಸದಸ್ಯ ಪೀಠ, ’ಸರ್ಕಾರಿ ಜಮೀನು ಗುತ್ತಿಗೆ ಪಡೆದ ಮತ್ತು ಸಬ್ಸಿಡಿ ದರದಲ್ಲಿ ಬಾಡಿಗೆ ಪಾವತಿಸುತ್ತಿರುವ ಕಾರಣ ಕೆಜಿಎ ಸಾರ್ವಜನಿಕ ಪ್ರಾಧಿಕಾರ. ಆದ್ದರಿಂದ, ಕೆಜಿಎ ಆರ್‌ಟಿಐ ಕಾಯ್ದೆಯ ವ್ಯಾಪ್ತಿಗೆ ಒಳಪಡಲಿದೆ. ಈ ಕುರಿತು ಮಾಹಿತಿ ಆಯೋಗ ನೀಡಿರುವ ಆದೇಶ ಸೂಕ್ತವಾಗಿದೆ‘ ಎಂದು ಸ್ಪಷ್ಟಪಡಿಸಿದೆ.

‘ಮೈಸೂರು ಟರ್ಫ್ ಕ್ಲಬ್ ಹಾಗೂ ಇತರೆ ಕ್ಲಬ್‌ಗಳ ಪ್ರಕರಣದಲ್ಲಿ ಹೇಳಿರುವಂತೆ ಕೆಜಿಎ ಕೂಡಾ 124 ಎಕರೆ ಸರ್ಕಾರಿ ಜಮೀನನ್ನು 2010ರಿಂದ 30 ವರ್ಷ ಕಾಲ ಗುತ್ತಿಗೆ ಪಡೆದಿದೆ. ತನ್ನ ವಾರ್ಷಿಕ ನಿವ್ವಳ ಆದಾಯದಲ್ಲಿ ಅತ್ಯಂತ ಕಡಿಮೆ ಪ್ರಮಾಣ ಅಂದರೆ ಕೇವಲ ಶೇ 2ರಷ್ಟು ಪ್ರಮಾಣವನ್ನು (ಸಬ್ಸಿಡಿ ದರ) ಬಾಡಿಗೆ ಪಾವತಿಸುತ್ತಿದ’ ಎಂಬ ಅಂಶವನ್ನು ನ್ಯಾಯಪೀಠ ಆದೇಶದಲ್ಲಿ ಕಾಣಿಸಿದೆ.

ಪ್ರಕರಣವೇನು?: ಮಾಹಿತಿ ಹಕ್ಕು ಕಾಯ್ದೆಯಡಿ ಕೆಲವೊಂದು ಮಾಹಿತಿ ಕೋರಿ ವಕೀಲ ಎಸ್. ಉಮಾಪತಿ ಕೆಜಿಎಗೆ 2012ರ ಆಗಸ್ಟ್ 30ರಂದು ಅರ್ಜಿ ಸಲ್ಲಿಸಿದ್ದರು. ಆದರೆ, ‘ತಾನು ಮಾಹಿತಿ ಹಕ್ಕು ಕಾಯ್ದೆಗೆ ಒಳಪಡುವುದಿಲ್ಲ’ ಎಂದು ಉತ್ತರಿಸಿದ್ದ ಕೆಜಿಎ, ಮಾಹಿತಿ ನೀಡಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಉಮಾಪತಿ ಮಾಹಿತಿ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಆಯೋಗವು, ಕೆಜಿಎ ಸಾರ್ವಜನಿಕ ಪ್ರಾಧಿಕಾರ ಎಂದು ಘೋಷಿಸಿ 2014ರ ಅಕ್ಟೋಬರ್ 14ರಂದು ಆದೇಶಿಸಿತ್ತು. ಈ ಆದೇಶ ರದ್ದುಪಡಿಸುವಂತೆ ಕೋರಿ ಕೆಜಿಎ ಹೈಕೋರ್ಟ್ ಮೆಟ್ಟಿಲೇರಿತ್ತು.

ಚುನಾವಣೆ ಕರ್ತವ್ಯಕ್ಕೆ ಸಿಬ್ಬಂದಿ ನಿಯೋಜನೆ

ವೈದ್ಯಕೀಯ ಸೇವೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಸಿಬ್ಬಂದಿಯನ್ನು ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಿಕೊಂಡಿರುವುದರಿಂದ ಇಲ್ಲಿನ ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಇಂದಿರಾನಗರದ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳು ಗುರುವಾರ ಸಮಸ್ಯೆ ಎದುರಿಸಿದರು.

ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ ಚುನಾವಣೆ ಕರ್ತವ್ಯಕ್ಕೆ ವಿನಾಯಿತಿ ನೀಡುವಂತೆ ಇಲಾಖೆಯ ಆಯುಕ್ತ ಡಿ. ರಂದೀಪ್ ಅವರು ಜಿಲ್ಲಾ ಚುನಾವಣಾಧಿಕಾರಿಗೆ ಕಳೆದ ತಿಂಗಳು ಪತ್ರ ಬರೆದಿದ್ದರು.

‘ಚುನಾವಣೆ ಕರ್ತವ್ಯಕ್ಕೆ ವೈದ್ಯಕೀಯ ಸಿಬ್ಬಂದಿ ನಿಯೋಜಿಸಿದಲ್ಲಿ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಗೆ ಸಮಸ್ಯೆಯಾಗುತ್ತದೆ’ ಎಂದು ಹೇಳಿದ್ದರು. ಆದರೆ, ವೈದ್ಯಕೀಯ ಸಿಬ್ಬಂದಿಗೆ ವಿನಾಯಿತಿ ನೀಡದಿದ್ದರಿಂದ ನಗರದ ಎರಡು ಪ್ರಮುಖ ಆಸ್ಪತ್ರೆಗಳಲ್ಲಿ ತುರ್ತು ಸೇವೆ ಹೊರತುಪಡಿಸಿ, ಉಳಿದ ಎಲ್ಲ ಸೇವೆಗಳಲ್ಲಿ ವ್ಯತ್ಯಯವಾಯಿತು.

ಸೇವೆ ವ್ಯತ್ಯಯದ ಬಗ್ಗೆ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಕಟಣೆ ಹಾಕಲಾಗಿತ್ತು. ‘ಇದೇ 4ರಿಂದ 10ರ ವರೆಗೆ ಆಸ್ಪತ್ರೆಯ ಸಿಬ್ಬಂದಿಯನ್ನು ಚುನಾವಣೆ ಕಾರ್ಯಗಳಿಗೆ ನಿಯೋಜಿಸಲಾಗಿದೆ. ತುರ್ತು ಸೇವೆಗಳು ಹೊರತುಪಡಿಸಿ ಉಳಿದ ಸೇವೆಗಳು ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು’ ಎಂದು ಮನವಿ ಮಾಡಿಕೊಳ್ಳಲಾಗಿತ್ತು. ಈ ಬಗ್ಗೆ ಮಾಹಿತಿ ಇಲ್ಲದ ಕಾರಣ ರೋಗಿಗಳು ಚಿಕಿತ್ಸೆಗೆ ಪರದಾಡಿದರು.

ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ 74 ಶುಶ್ರೂಷಕರಲ್ಲಿ ಮೂವರು ಮಾತ್ರ ಹಾಜರಿದ್ದರು. ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ 72 ಶುಶ್ರೂಷಕರಲ್ಲಿ ಐವರು ಕಾರ್ಯನಿರ್ವಹಿಸಿದ್ದಾರೆ. ಉಳಿದಂತೆ ವಿವಿಧ ವಿಭಾಗದ ಸಿಬ್ಬಂದಿ ಚುನಾವಣೆ ಕರ್ತವ್ಯದ ಪ್ರಯುಕ್ತ ತರಬೇತಿಗೆ ತೆರಳಿದ್ದರು.

‘ಆಸ್ಪತ್ರೆ ಸಿಬ್ಬಂದಿಯನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿಕೊಂಡರೆ ರೋಗಿಗಳ ಚಿಕಿತ್ಸೆಯಲ್ಲಿ ವ್ಯತ್ಯಯವಾಗಲಿದೆ. ಚುನಾವಣಾ ಆಯೋಗ ಇದನ್ನು ಅರಿತು, ವೈದ್ಯಕೀಯ ಸಿಬ್ಬಂದಿಗೆ ವಿನಾಯಿತಿ ನೀಡಬೇಕು’ ಎಂದು ಸರ್.ಸಿ.ವಿ. ರಾಮನ್ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಕೋವಿಡ್: ರಾಜ್ಯದಲ್ಲಿ ಲಸಿಕೆಯ ದಾಸ್ತಾನು ಸಂಪೂರ್ಣ ಖಾಲಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಇಲ್ಲ ಲಸಿಕೆ

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೇಂದ್ರ ಸರ್ಕಾರವು ಕೋವಿಡ್ ಲಸಿಕೆಯ ಪೂರೈಕೆಯನ್ನು ಸ್ಥಗಿತ ಮಾಡಿರುವುದರಿಂದ ರಾಜ್ಯದಲ್ಲಿ ಲಸಿಕೆಯ ದಾಸ್ತಾನು ಸಂಪೂರ್ಣ ಖಾಲಿಯಾಗಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ದೊರೆಯುತ್ತಿಲ್ಲ.

ರಾಜ್ಯದಲ್ಲಿ 5 ಕೋಟಿಗೂ ಅಧಿಕ ಮಂದಿ ಎರಡು ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ ಹೆಚ್ಚಿನವರು ಇನ್ನೂ ಮುನ್ನೆಚ್ಚರಿಕೆ ಡೋಸ್ (ಬೂಸ್ಟರ್ ಡೋಸ್) ಲಸಿಕೆ ಹಾಕಿಸಿಕೊಂಡಿಲ್ಲ. 12ರಿಂದ 14 ವರ್ಷದವರು, ವೃದ್ಧರು, ಸಹ ಅಸ್ವಸ್ಥತೆ ಇರುವವರು ಹಾಗೂ ವಿದೇಶಗಳಿಗೆ ತೆರಳುವವರು ಹೆಚ್ಚಾಗಿ ಲಸಿಕೆ ಪಡೆಯಲು ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಆದರೆ, ದಾಸ್ತಾನು ಇಲ್ಲದಿರುವುದರಿಂದ ಲಸಿಕೆ ದೊರೆಯುತ್ತಿಲ್ಲ. ಇದರಿಂದ ಕೋವಿಡ್ ಲಸಿಕೆ ಪಡೆಯುವುದು ಸಮಸ್ಯೆಯಾಗಿದೆ.

ಕಳೆದ ವರ್ಷಾಂತ್ಯಕ್ಕೆ ಚೀನಾ ಸೇರಿ ಕೆಲವೆಡೆ ಕೋವಿಡ್ ಪ್ರಕರಣಗಳು ಹೆಚ್ಚಳವಾಗಿತ್ತು. ಇಲ್ಲಿಯೂ ರೂಪಾಂತರಿ ವೈರಾಣು ಕಾಣಿಸಿಕೊಳ್ಳುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ಮುನ್ನೆಚ್ಚರಿಕೆ ಡೋಸ್‌ಗೆ ಶಿಫಾರಸು ಮಾಡಿತ್ತು. ಇದರಿಂದಾಗಿ ಕಳೆದ ಜನವರಿ ತಿಂಗಳಲ್ಲಿ ಲಸಿಕೆಗೆ ಬೇಡಿಕೆ ಹೆಚ್ಚಳವಾಗಿತ್ತು. ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಲಸಿಕೆಗಳನ್ನು 12 ವರ್ಷಗಳು ಮೇಲ್ಪಟ್ಟವರಿಗೆ ಒದಗಿಸಲಾಗಿತ್ತು. ಆರೋಗ್ಯ ಇಲಾಖೆಯು ಲಸಿಕೆ ಪೂರೈಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿತ್ತು. ಆದರೆ, ಲಸಿಕೆ ಪೂರೈಕೆಯಾಗದಿದ್ದರಿಂದ ಇರುವ ದಾಸ್ತಾನು ಈಗ ಖಾಲಿಯಾಗಿದೆ. ಇದರಿಂದಾಗಿ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಣೆ ಸ್ಥಗಿತ ಮಾಡಲಾಗಿದೆ.

ಖಾಸಗಿಯಲ್ಲಿಯೂ ಸಮಸ್ಯೆ: ಕೋವಿನ್ ಪೋರ್ಟಲ್ ಮಾಹಿತಿ ಪ್ರಕಾರ ರಾಜ್ಯದಲ್ಲಿ 8 ಖಾಸಗಿ ವೈದ್ಯಕೀಯ ಕೇಂದ್ರಗಳಲ್ಲಿ ಮಾತ್ರ ಕೋವಿಡ್ ಲಸಿಕೆ ಒದಗಿಸಲಾಗುತ್ತಿದೆ. ಈ ಎಲ್ಲ ಕೇಂದ್ರಗಳು ಬೆಂಗಳೂರಿನಲ್ಲಿದ್ದು, ದಾಸ್ತಾನು ಇರುವ ಲಸಿಕೆಯನ್ನು ಮಾತ್ರ ನೀಡುತ್ತಿವೆ. ಶ್ರೀಸಾಯಿ, ಮೆಡಿಹೋಪ್, ಪರಿಮಳಾ ಸೇರಿ ಬೆರಳಣಿಕೆಯಷ್ಟು ಆಸ್ಪತ್ರೆಗಳಲ್ಲಿ ಲಸಿಕೆ ಲಭ್ಯವಿದ್ದು, ಅಲ್ಲಿಯೂ ಮುಂಚಿತವಾಗಿ ಕಾಯ್ದಿರಿಸಿಕೊಳ್ಳಬೇಕಾಗಿದೆ. ಮಣಿಪಾಲ್, ಅಪೋಲೊ, ನಾರಾಯಣ ಹೆಲ್ತ್ ಸೇರಿ ವಿವಿಧ ಪ್ರಮುಖ ಆಸ್ಪತ್ರೆಗಳಲ್ಲಿನ ದಾಸ್ತಾನು ಸಹ ಖಾಲಿಯಾಗಿದೆ.

'ಲಸಿಕೆ ಸಂಬಂಧ ಮಕ್ಕಳು ಸೇರಿ ವಿವಿಧ ವಯೋಮಾನದವರು ಭೇಟಿ ನೀಡುತ್ತಿದ್ದಾರೆ. ಆದರೆ, ಕೆಲ ದಿನಗಳಿಂದ ಲಸಿಕೆ ಪೂರೈಕೆ ಸ್ಥಗಿತಗೊಂಡಿದೆ. ಇದರಿಂದಾಗಿ ದಾಸ್ತಾನು ಖಾಲಿಯಾಗಿದ್ದು, ಲಸಿಕೆ ವಿತರಣೆ ನಡೆಯುತ್ತಿಲ್ಲ' ಎಂದು ಬೆಂಗಳೂರಿನ ಆಸ್ಪತ್ರೆಯೊಂದರ ಲಸಿಕೆ ವಿಭಾಗದ ಮುಖ್ಯಸ್ಥರು ತಿಳಿಸಿದರು.

'ಕೇಂದ್ರ ಸರ್ಕಾರ ಲಸಿಕೆ ಪೂರೈಸದಿದ್ದರಿಂದ ಲಸಿಕೆಯ ದಾಸ್ತಾನು ಇಲ್ಲ. ಆದ್ದರಿಂದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಸಿಗುತ್ತಿಲ್ಲ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ. ತ್ರಿಲೋಕ್ ಚಂದ್ರ ಹೇಳಿದರು.

ಕೋವಿಶೀಲ್ಡ್, ಕೋವ್ಯಾಕ್ಸಿನ್ ಲಸಿಕೆಯಿಲ್ಲ

ರಾಜ್ಯದಲ್ಲಿ 2022ರ ಜ.10ರಿಂದ ಮೂರನೇ ಡೋಸ್ ಲಸಿಕೆ ವಿತರಿಸಲಾಗುತ್ತಿದೆ. ಎರಡು ಡೋಸ್ ಲಸಿಕೆ ಪಡೆದು ಆರು ತಿಂಗಳಾದವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುತ್ತದೆ. ಆರೋಗ್ಯ ಕಾರ್ಯಕರ್ತರು ಸೇರಿ ಕೆಲವರಿಗೆ ಮಾತ್ರ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಒದಗಿಸಲಾಗಿದೆ. 'ಕೋವಿಶೀಲ್ಡ್' ಹಾಗೂ 'ಕೋವ್ಯಾಕ್ಸಿನ್' ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗೆ ಖಾಸಗಿ ಆಸ್ಪತ್ರೆಗಳು ₹ 386 ಪಡೆಯುತ್ತಿದ್ದವು. ಈಗ ಖಾಸಗಿ ಆಸ್ಪತ್ರೆಗಳಲ್ಲಿ ಈ ಎರಡು ಲಸಿಕೆಗಳು ದೊರೆಯುತ್ತಿಲ್ಲ. ಸದ್ಯ 'ಕೊವೊವ್ಯಾಕ್ಸ್', ಮೂಗಿನ ಮೂಲಕ ಹಾಕುವ 'ಇನ್‌ಕೋವ್ಯಾಕ್' ಹಾಗೂ ಕೋರ್ಬಿವ್ಯಾಕ್ಸ್ ಲಸಿಕೆ ಮಾತ್ರ ಲಭ್ಯವಿದೆ. ಇವುಗಳಿಗೆ ಕ್ರಮವಾಗಿ ₹ 386, ₹ 990 ಹಾಗೂ ₹ 400 ನಿಗದಿಪಡಿಸಿವೆ.

> ಕೇಂದ್ರ ಸರ್ಕಾರ ರಾಜ್ಯಗಳಿಗೆ ಕೋವಿಡ್ ಲಸಿಕೆಯನ್ನು ಪೂರೈಕೆ ಮಾಡುತ್ತಿಲ್ಲ. ಆದ್ದರಿಂದ ಸ್ಥಳೀಯವಾಗಿ ಖರೀದಿ ಮಾಡಿ, ವಿತರಿಸಲಾಗುವುದು
>
> **ಡಿ. ರಂದೀಪ್,** ಆರೋಗ್ಯ ಇಲಾಖೆ ಆಯುಕ್ತ

ಅಂಕಿ ಅಂಶ

12.21 ಕೋಟಿ — ಈವರೆಗೆ ವಿತರಿಸಿದ ಲಸಿಕೆಯ ಡೋಸ್‌ಗಳು

5.53 ಕೋಟಿ — ಎರಡು ಡೋಸ್ ಲಸಿಕೆ ಪಡೆದವರು

1.15 ಕೋಟಿ — ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದವರು

GALGOTIAS UNIVERSITY
(Under the Uttar Pradesh Private Universities Act No. 12 of 2019)
NAAC A+ Accreditation in First Cycle
School of Law Ranked #3 in India in Academic Excellence by INDIA TODAY
MDRA Survey - July 2022
ADMISSION OPEN 2023-24
Under Graduate Programs
● Bachelor of Law (LLB) (Hons.)
● Integrated BA+LLB (Hons.)
● Integrated BBA+LLB (Hons.)
Post Graduate Programs
● Master of LAW (LL.M.)
KEY FEATURES
• Lectures by eminent legal luminaries
• Certificate courses by highly acclaimed high court and Supreme Court advocates.
• Foreign University collaborations
• Research and knowledge creation
• Strong Mooting and Advocacy culture
• Legal Aid Clinics
• Regular court visits and internships with top legal Practitioners and Judges
• Updated Curriculum and Inter Disciplinary courses
• Soft skills improvement programmes
• Student and Faculty exchange Programmes
• World class faculty from top law Universities
#GetYourSelfPlaced
For the complete list of programmes offered and to apply online visit:
https://admissions.galgotiasuniversity.edu.in
www.galgotiasuniveristy.edu.in
Scan to know more
Call @ 9717300418, 9582847072, 0120 4370000

ವಿನಯ ಆಪ್ತರ ಮನೆ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಧಾರವಾಡ: ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಆಪ್ತ ಕಾರ್ಯದರ್ಶಿ ಹಾಗೂ ಪಕ್ಷದ ಮುಖಂಡರ ಮನೆ ಹಾಗೂ ಕಚೇರಿ ಮೇಲೆ ಗುರುವಾರ ಸಂಜೆ ಏಕಕಾಲಕ್ಕೆ ಆದಾಯ ತೆರಿಗೆ ಅಧಿಕಾರಿಗಳು ದಾಳಿ ನಡೆಸಿದರು.

ಆಪ್ತ ಕಾರ್ಯದರ್ಶಿ ಪ್ರಶಾಂತ ಕೇಕರೆ ಅವರ ಸಪ್ತಾಪುರ ಮನೆ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ ಶಿವಳ್ಳಿಗೆ ಸೇರಿ ಮುರುಘಾಮಠ ಬಳಿ ಕಚೇರಿಯಲ್ಲಿ ಅಧಿಕಾರಿಗಳು ಶೋಧ ನಡೆಸಿದರು.

ಜಿಲ್ಲೆ ಪ್ರವೇಶಕ್ಕೆ ನಿರ್ಬಂಧವಿರುವುದರಿಂದ ಕಿತ್ತೂರಿನಲ್ಲಿರುವ ವಿನಯ ಕುಲಕರ್ಣಿ ಅವರೊಂದಿಗೆ ಪ್ರಶಾಂತ ಕೇಕರೆ ಇದ್ದರು. ಈಶ್ವರ ಶಿವಳ್ಳಿ ಅವರು ಹೆಬ್ಬಳ್ಳಿಯಲ್ಲಿ ಇದ್ದ ಸಂದರ್ಭದಲ್ಲಿ ದಾಳಿ ನಡೆದಿದೆ. ಇಬ್ಬರನ್ನೂ ಕರೆಯಿಸಿಕೊಂಡ ಅಧಿಕಾರಿಗಳು ವಿಚಾರಣೆ ನಡೆಸಿದರು.

ಎಸ್ಸೆಸ್ಸೆಲ್ಸಿ ಮೌಲ್ಯಮಾಪನ ಪೂರ್ಣ; ಶೀಘ್ರ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿದ್ದು, ಅಂಕಗಳ ಕೂಡುವಿಕೆ ಕಾರ್ಯ ನಡೆಯುತ್ತಿದೆ. ಶೀಘ್ರ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹೇಳಿದೆ.

ರಾಜ್ಯದ 15,498 ಪ್ರೌಢಶಾಲೆಗಳ 8.42 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಮಾರ್ಚ್ 31ರಿಂದ ಏ.15ರವರೆಗೆ 3,305 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಮೌಲ್ಯಮಾಪನಕ್ಕೆ ವ್ಯವಸ್ಥೆ ಮಾಡಲಾಗಿತ್ತು. 63 ಸಾವಿರ ಶಿಕ್ಷಕರು ಮೌಲ್ಯಮಾಪನದಲ್ಲಿ ಭಾಗವಹಿಸಿದ್ದರು.

ವ್ಯರ್ಥವಾದ ಉತ್ತರ ಪತ್ರಿಕೆ ಹಾಳೆಗಳು: ವಿದ್ಯಾರ್ಥಿಗಳಿಗೆ ಉತ್ತರ ಬರೆಯಲು 24 ಪುಟಗಳ 'ಬುಕ್‌ಲೆಟ್' ನೀಡಲಾಗಿತ್ತು. ಶೇ 85ರಷ್ಟು ವಿದ್ಯಾರ್ಥಿಗಳು 15 ಪುಟಗಳನ್ನೂ ಬಳಸಿಲ್ಲ. ಹಾಗಾಗಿ, ಮುಖ್ಯ 'ಬುಕ್‌ಲೆಟ್' ಪುಟಗಳ ಸಂಖ್ಯೆ 15ಕ್ಕೆ ಇಳಿಸಬೇಕು. ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಹಾಳೆಗಳನ್ನು ನೀಡಬೇಕು ಎಂದು ಮೌಲ್ಯಪಾಪನ ಕಾರ್ಯದಲ್ಲಿ ಭಾಗವಹಿಸಿದ್ದ ಶಿಕ್ಷಕರು ಮಂಡಳಿಗೆ ಸಲಹೆ ನೀಡಿದ್ದಾರೆ.

ರಾಜ್ಯದಲ್ಲಿ ಮಳೆಯ ತೀವ್ರತೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ಗುಡುಗು ಸಹಿತ ಮಳೆಯಾಗಲಿದ್ದು, ಭಾನುವಾರದಿಂದ ಮಳೆಯ ತೀವ್ರತೆ ಹೆಚ್ಚುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಹಾಗೂ ವಿಜಯನಗರದಲ್ಲಿ ಶುಕ್ರವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಒಳನಾಡಿನ ಕಲಬುರಗಿ, ರಾಯಚೂರು, ಯಾದಗಿರಿ, ಬೀದರ್, ವಿಜಯಪುರ ಜಿಲ್ಲೆಯ ಒಂದೆರಡು ಕಡೆ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ ಮತ್ತು ಉತ್ತರ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಬೆಂಗಳೂರಿನ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಉಸ್ತುವಾರಿ ಕೇಂದ್ರದ ಆವರಣದಲ್ಲಿ ಗರಿಷ್ಠ ಪ್ರಮಾಣದ (5 ಸೆಂ.ಮೀ.) ಮಳೆಯಾಗಿದೆ. ಕೋಲಾರದ ಮಾಲೂರು ಹಾಗೂ ಬೆಂಗಳೂರಿನ ಜಿಕೆವಿಕೆಯಲ್ಲಿ ತಲಾ 4 ಸೆಂ.ಮೀ., ಯಾದಗಿರಿಯ ಸೈದಾಪುರ ಹಾಗೂ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ತಲಾ 3 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಈ ಪ್ರಮಾಣ 3 ಸೆಂ.ಮೀ.ಗಿಂತ ಕಡಿಮೆ ವರದಿಯಾಗಿದೆ.

ಕಾರವಾರದಲ್ಲಿ ಗರಿಷ್ಠ ಉಷ್ಣಾಂಶ (36.4 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ಸುರಿದ ಧಾರಕಾರ ಮಳೆಯಿಂದಾಗಿ ರಸ್ತೆಗಳು ಜಲಾವೃತವಾಗಿದ್ದವು

ಕೋಲಾರ: ಬಿರುಸಿನ ಮಳೆ

ಕೋಲಾರ: ಜಿಲ್ಲೆಯ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಗುರುವಾರ ಮಧ್ಯಾಹ್ನ ಜೋರು ಮಳೆ ಸುರಿದಿದೆ.

ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ 3 ಗಂಟೆಗೆ ದಟ್ಟ ಮೋಡಗಳಿಂದ ಕತ್ತಲು ಆವರಿಸಿದಂತಾಗಿ ಒಂದು ತಾಸು ಬಿರುಸಿನ ಮಳೆಯಾಯಿತು.

ಮುಳಬಾಗಿಲು ತಾಲ್ಲೂಕಿನ ಸೊನ್ನವಾಡಿ ವ್ಯಾಪ್ತಿಯಲ್ಲಿ 5 ಸೆ.ಮೀ., ಬಂಗಾರಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿ ವ್ಯಾಪ್ತಿಯಲ್ಲಿ 4 ಸೆ.ಮೀ.ಮಳೆಯಾಗಿದೆ.

ಎಲ್ಲ ಅರ್ಜಿದಾರರಿಗೆ ಈ ಸಲ ಹಜ್ ಯಾತ್ರೆಗೆ ಅವಕಾಶ?

ಪ್ರಜಾವಾಣಿ ವಾರ್ತೆ

ಮಂಗಳೂರು: 'ಅಖಿಲ ಭಾರತ ಹಜ್ ಸಮಿತಿಯು ಕರ್ನಾಟಕದ ಹಜ್ ಯಾತ್ರಿಕರ ಕೋಟಾವನ್ನು 2 ಸಾವಿರದಷ್ಟು ಹೆಚ್ಚಿಸಿದ್ದು, ಈ ಸಲ ರಾಜ್ಯದಿಂದ 8 ಸಾವಿರ ಮಂದಿಗೆ ಯಾತ್ರೆಯ ಅವಕಾಶ ಸಿಗಲಿದೆ' ಎಂದು ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಹಣಾ ಅಧಿಕಾರಿ ಸರ್ಫರಾಜ್ ಖಾನ್ ತಿಳಿಸಿದರು.

ರಾಜ್ಯದಿಂದ ಈ ಹಿಂದೆ 12 ಸಾವಿರಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸುತ್ತಿದ್ದರು. ಎಲ್ಲರಿಗೂ ಅವಕಾಶ ಸಿಗುತ್ತಿರಲಿಲ್ಲ. ಈಗ ಅರ್ಜಿ ಹಾಕುವವರ ಸಂಖ್ಯೆಯೂ ಕಡಿಮೆ ಆಗಿದೆ.

'ಈ ಸಲ ಯಾತ್ರಿಕರ ಕೋಟ ಹೆಚ್ಚಿದ್ದರೂ ಅರ್ಜಿಗಳ ಸಂಖ್ಯೆ 8 ಸಾವಿರದ ಆಸುಪಾಸಿನಲ್ಲೇ ಇದೆ. ಅರ್ಜಿ ಹಾಕಿರುವ ಬಹುತೇಕರಿಗೆ ಯಾತ್ರೆಗೆ ಅವಕಾಶ ಸಿಗಲೂ ಬಹುದು' ಎಂದು ಸರ್ಫರಾಜ್ ಖಾನ್ ತಿಳಿಸಿದರು. 'ಜೂನ್ ಮೊದಲ ವಾರದಲ್ಲಿ ಹಜ್ ಯಾತ್ರೆಯ ಮೊದಲ ವಿಮಾನ ಬೆಂಗಳೂರಿನಿಂದ ಹೊರಡುವ ನಿರೀಕ್ಷೆ ಇದೆ' ಎಂದರು.

ಉದ್ಯಮಿ ಮನೆಯಿಂದ ₹4 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ ಜಿಲ್ಲೆ): ತಾಲ್ಲೂಕಿನ ಹಂಚಾಳ ಬಳಿಯ ಜಿಯೋನ್ ಹಿಲ್ಸ್ ಗಾಲ್ಫ್ ರೆಸಾರ್ಟ್‌ನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ರಮೇಶ್ ಎಂಬುವರ ವಿಲ್ಲಾ ಮೇಲೆ ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಧರಣಿದೇವಿ ಮಾಲಗತ್ತಿ ನೇತೃತ್ವದ ತಂಡ ಗುರುವಾರ ದಾಳಿ ನಡೆಸಿ ಅಕ್ರಮವಾಗಿ ಇಟ್ಟಿದ್ದ ಸುಮಾರು ₹4.04 ಕೋಟಿ ವಶಕ್ಕೆ ಪಡೆದಿದೆ.

ವಿಲ್ಲಾ ಒಳಗೆ ₹2.54 ಕೋಟಿ, ವಿಲ್ಲಾ ಮುಂದೆ ನಿಲ್ಲಿಸಿದ್ದ ಕಾರಿನಲ್ಲಿ ₹1.5 ಕೋಟಿ ಇರುವುದು ಪತ್ತೆಯಾಗಿದೆ. ಹಣದ ಬಂಡಲ್ ಮೇಲೆ ಬಂಗಾರಪೇಟೆ ಕ್ಷೇತ್ರದ ಪಂಚಾಯಿತಿವಾರು ಹೆಸರು ಬರೆದು ಇಡಲಾಗಿತ್ತು ಎಂಬುದು ಗೊತ್ತಾಗಿದೆ.

ಜಿಲ್ಲೆಯ ರಾಜಕಾರಣಿಯೊಬ್ಬರು ಮತದಾರರಿಗೆ ಹಂಚಲು ಕೂಡಿಟ್ಟಿದ್ದ ಹಣ ಎಂದು ಹೇಳಲಾಗಿದೆ.

'ಬಲರಾಮ' ಆನೆ ಅಸ್ವಸ್ಥ: ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): ದಸರಾ ಜಂಬೂಸವಾರಿಯಲ್ಲಿ 14 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಹೆಗ್ಗಳಿಕೆಯ 'ಬಲರಾಮ' ಆನೆ (67) ಅಸ್ವಸ್ಥಗೊಂಡಿದೆ.

ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಭೀಮನಕಟ್ಟೆ ಆನೆ ಶಿಬಿರದಲ್ಲಿರುವ ಆನೆ ಕೆಲವು ದಿನಗಳಿಂದ ಆಹಾರ ತ್ಯಜಿಸಿದೆ. ಅರಣ್ಯ ಇಲಾಖೆಯ ವೈದ್ಯಾಧಿಕಾರಿಗಳು ಚಿಕಿತ್ಸೆ ನೀಡುತ್ತಿದ್ದಾರೆ.

'ಆನೆಗೆ ಗಂಟಲಿನಲ್ಲಿ ಹುಣ್ಣಾಗಿದೆ. ಮೇವು ನಿರಾಕರಿಸುತ್ತಿರುವುದರಿಂದ ನಿತ್ರಾಣಗೊಂಡಿದೆ. ಎಂಡೋಸ್ಕೋಪಿ ಮಾಡಿ ರಕ್ತ, ಅಂಗಾಂಗದ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಪರೀಕ್ಷೆ ವರದಿ ಆಧರಿಸಿ ಚಿಕಿತ್ಸೆ ನಡೆಸಲು ಸಿದ್ಧತೆ ನಡೆದಿದೆ' ಎಂದು ನಾಗರಹೊಳೆ ಹುಲಿ ಯೋಜನಾ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ 'ಪ್ರಜಾವಾಣಿ'ಗೆ ತಿಳಿಸಿದರು.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) TATA MOTORS LTD. - CB_LPT _1512_FULLY_BUILT_GOODS YOM – 2022 Reg No – KA02AH8726
2) ASHOK LEYLAND LIMITED – CB _Ashok Leyland Dost GOODS YOM – 2022 Reg No – KA04AC6286
3) ASHOK LEYLAND LIMITED – CB _AMBULANCE. YOM – 2022 Reg No – KA07B4966
4) MAHINDRA_AND_MAHINDRA - MAHINDRA BOLERO PICK-UP YOM – 2021 Reg No – KA14C2845
5) ASHOK LEYLAND LIMITED - CB_AMBULANCE YOM – 2022 Reg No – KA07B4223
6) MAHINDRA_AND_MAHINDRA - CB_BOLERO PIK UP all Varients YOM – 2022 Reg No – KA51AM5063
7) TATA MOTORS LTD. - TATA 1109GOODS YOM – 2021 Reg No – KA52B3095

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 05.05.2023

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249

PUBLIC NOTICE

Notice is hereby given to people at large and more particularly to those in Film Trade that our client is in the process of acquiring the below mentioned rights of the Kannada language cinematograph films as listed below (hereinafter referred to as "Said Films").

Name of the Film	Star Cast	Theatrical Release Date
1. Dharmasere	1. Srinath, Arthi and others	01-06-1979
2. Prema Pallavi	2. Jaijagdaish, Sunitha and others	25-04-1991
3. Manini	3. Vishnuvardean, Arathi and others	02-08-1979
4. Shubhashaya	4. Srinath, Jayanthi, Kalyankumar and others	01-11-1977
5. Udugore	5. Kalyan Kumar, Udayachandrika and others	01-06-1979
6. Shiva Kotta Sowbhagya	6. Arthi, Lokesh and others	25-09-1985
7. Sri Kanyaka Parameshwari Kathe	7. Rajkumar, Kalpana and others	29-11-1966

1. Sole and exclusive Linear Rights for transmission and/or re-transmission (as the case may be) via all distribution platforms including but not limited to via Satellite Broadcasting, Terrestrial Television, Cable Television Networks, Internet Protocol Television Networks, Head-end In the Sky, Direct to Home, Internet, Mobile Broadcast Technology, Applications via Internet, Digital Platform Broadcast; Local Cable Distribution Rights; Catch Up TV Rights; by and all means, modes, mediums and formats whether presently known or which may be discovered/ developed in future for the entire universe including India in perpetuity; AND

2. Sole and exclusive Commercial Establishment Rights for the entire universe including India in perpetuity; AND

3. Subtitling Rights in all languages of the world, Syndication Rights, Editing Rights, Promotion Rights and Clip Rights (whether in part or whole) for the purpose of exploiting the rights mentioned above.

The abovementioned rights shall collectively be referred to as the "said Right(s)".

To the best of our client's knowledge and belief, the said Films and the said Right(s) are free from any encumbrances, claims or demands of any nature whatsoever, should any person(s) have any claim in respect to the said Films and/or said Right(s) or part thereof, whether by way of assignment, gift, lease, license, pledge, reservation, sale, transfer of any kind and/or litigation of any nature related to said Films and/or any of said Right(s) or otherwise; such person(s) are hereby required to submit their claim along-with documentary proof at the addresses given herein below, within 15 (fifteen) days from the date of publication of this notice. In the event no such claim is received, the same will be considered as if no such claim exists or that they have been waived or abandoned. Any claims or objections received thereafter shall be deemed to be forfeited/waived and shall not be entertained in any manner whatsoever.

Date: 05/05/2023

Dua Associates
116, Free Press House, 11th Floor, 215 Backbay Reclamation – III, Nariman Point, Mumbai – 400 021
Email ID of the Concerned Persons: Kunal Parekh <kunalparekh@duaassociates.com>;
Nirali Shah <nirali@duaassociates.com>

भारतीय रिज़र्व बैंक
पर्यवेक्षण विभाग
क्षेत्रीय कार्यालय, बेंगलूरु
www.rbi.org.in

सार्वजनिक सूचना

भारतीय रिज़र्व बैंक ने भारतीय रिज़र्व बैंक अधिनियम, 1934 की धारा 45–आईए (6)(iv) के तहत प्रदत्त शक्तियों का प्रयोग करते हुए निम्नलिखित गैर–बैंकिंग वित्तीय कंपनियों (एनबीएफसी) को जारी पंजीयन प्रमाणपत्र (सीओआर) निरस्त कर दिया है।

क्र. सं.	एनबीएफसी का नाम	पंजीकृत कार्यालय का पता	सीओआर सं.	सीओआर जारी करने की तिथि
1	कूर्ग टी कंपनी लिमिटेड	नंबर 31, देवी थिएटर के पास, 5वीं मेन रोड, श्रीरामपुरम, बेंगलूरु - 560 021	02.00045	06 मार्च 1998
2	जेनफिन कैपिटल प्राइवेट लिमिटेड	नंबर 9, मंजुश्री, भाग 5, चौथी मंजिल, वेस्ट लिंक रोड, मल्लेश्वरम, बेंगलूरु - 560 003	B-02.00152	13 अगस्त 2015

अत: उपर्युक्त कंपनियां भारतीय रिज़र्व बैंक अधिनियम, 1934 की धारा 45–आईए के खंड (ए) में यथापरिभाषित गैर–बैंकिंग वित्तीय संस्था का कारोबार नहीं करेंगी।

-ह-
स्थान: बेंगलूरु महाप्रबंधक

ಭಾರತೀಯ ರಿಸರ್ವ್ ಬ್ಯಾಂಕ್
ಮೇಲ್ವಿಚಾರಣಾ ಇಲಾಖೆ, ಪ್ರಾದೇಶಿಕ ಕಚೇರಿ, ಬೆಂಗಳೂರು
www.rbi.org.in

ಸಾರ್ವಜನಿಕ ಸೂಚನೆ

ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಪ್ರಕರಣ 45-IA (6) (iv) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಕೆಳಕಂಡ ಬ್ಯಾಂಕಿಂಗೇತರ ಹಣಕಾಸು ಕಂಪನಿಗೆ ನೀಡಲಾಗಿದ್ದ ನೋಂದಣಿ ಪ್ರಮಾಣ ಪತ್ರವನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದು ಪಡಿಸಿದೆ.

ಕ್ರ. ಸಂ.	ಕಂಪನಿಯ ಹೆಸರು	ನೋಂದಾಯಿತ ಕಚೇರಿ ವಿಳಾಸ	ಸೀ ಓ ಆರ್ ಸಂಖ್ಯೆ	ಸೀ ಓ ಆರ್ ನೀಡಲಾದ ದಿನಾಂಕ
1	ಕೂರ್ಗ್ ಟೀ ಕಂಪನಿ ಲಿಮಿಟೆಡ್	ನಂ.31, ದೇವಿ ಥಿಯೇಟರ್ ಹತ್ತಿರ, 5 ನೇ ಮುಖ್ಯ ರಸ್ತೆ ಶ್ರೀರಾಮಪುರಂ, ಬೆಂಗಳೂರು–560021	02.00045	06 ಮಾರ್ಚ್ 1998
2.	ಜೆನ್ಫಿನ್ ಕ್ಯಾಪಿಟಲ್ ಪ್ರೈವೆಟ್ ಲಿಮಿಟೆಡ್	ನಂ.9, ಮಂಜುಶ್ರೀ, ಭಾಗ 5, 4 ನೇ ಮಹಡಿ, ವೆಸ್ಟ್ ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003	B-02. 00152	13 ಆಗಸ್ಟ್ 2015

ಆದ್ದರಿಂದ ಮೇಲಿನ ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 ರ ಕಲಂ 45-IA ಷರತ್ತು (ಎ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಬ್ಯಾಂಕಿಂಗೇತರ ಹಣಕಾಸು ವ್ಯವಹಾರಗಳನ್ನು ನಡೆಸುವಂತಿಲ್ಲ.

ಸಹಿ/–
ಬೆಂಗಳೂರು ಮುಖ್ಯ ವ್ಯವಸ್ಥಾಪಕರು

ಸುಧಾ, ಮಯೂರ ಓದಿರಿ

ಬಿಜೆಪಿ ಕರ್ನಾಟಕ

ಡಬಲ್ ಎಂಜಿನ್ ಸರ್ಕಾರ
ಕರ್ನಾಟಕದ ಅಭಿವೃದ್ಧಿಯ ಸಾಕಾರ
#ಬಿಜೆಪಿಯೇಭರವಸೆ

ಚುನಾವಣಾ ಪ್ರಚಾರ ಸಭೆಗಳು
5 ಮೇ 2023 | ಶುಕ್ರವಾರ

ಶ್ರೀ ಅಮಿತ್ ಶಾ
ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು
ಬೆ. 10:30 ರಾಯಚೂರು ಗ್ರಾ.
ಮ. 12:30 ಮಸ್ಕಿ
ಮ. 2:00 ಕಾರಟಗಿ-ರೋಡ್ ಶೋ
ಮ. 3:30 ಕುಷ್ಟಗಿ
ಸಂ. 5:00 ಕೊಪ್ಪಳ-ರೋಡ್ ಶೋ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಬೆ. 9:30 ಸಕಲೇಶಪುರ
ಬೆ. 11:30 ಅರಕಲಗೂಡು
ಮ. 1:30 ಬೇಲೂರು
ಮ. 3:30 ಕಡೂರು
ಸಂ. 5:00 ಅಜ್ಜಂಪುರ (ತರೀಕೆರೆ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ
ಬೆ. 10:30 ಟಿ. ನರಸೀಪುರ-ರೋಡ್ ಶೋ
ಮ. 12:00 ವರುಣ-ರೋಡ್ ಶೋ
ಮ. 3:00 ಕಲಘಟಗಿ-ರೋಡ್ ಶೋ

ಶ್ರೀ ನಳಿನ್ ಕುಮಾರ್ ಕಟೀಲ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ
ಬೆ. 11:30 ಬಾದಾಮಿ
ಮ. 2:30 ಬೀಳಗಿ
ಸಂ 7:00 ಜೇವರ್ಗಿ

ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿಗಳು
ಬೆ. 10:00 ಶಿರಹಟ್ಟಿ
ಮ. 2:30 ಗದಗ

ಡಾ. ಹಿಮಂತ ಬಿಸ್ವಾಸ್ ಶರ್ಮಾ
ಮಾನ್ಯ ಮುಖ್ಯಮಂತ್ರಿಗಳು, ಅಸ್ಸಾಂ
ಮ. 2:00 ಅರಸೀಕೆರೆ ಟೌನ್-ರೋಡ್ ಶೋ

ಶ್ರೀಮತಿ ಸ್ಮೃತಿ ಇರಾನಿ
ಮಾನ್ಯ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಲ್ಪ ಸಂಖ್ಯಾತ ಕಲ್ಯಾಣ ಸಚಿವರು
ಸಂ. 10:30 ನಾಗಮಂಗಲ-ರೋಡ್ ಶೋ
ಮ. 2:00 ಶಿರಾ
ಸಂ. 4:30 ಬೆಂಗಳೂರ ದಕ್ಷಿಣ-ರೋಡ್ ಶೋ

ಶ್ರೀ ಅರ್ಜುನ್ ಮುಂಡಾ
ಮಾನ್ಯ ಕೇಂದ್ರ ಬುಡಕಟ್ಟು ವ್ಯವಹಾರಗಳ ಖಾತೆ ಸಚಿವರು
ಶ್ರೀ ಶಾಂತಾರಾಂ ಸಿದ್ದಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಮ. 12:00 ಕೊಳ್ಳೇಗಾಲ

ಶ್ರೀ ಎ. ನಾರಾಯಣಸ್ವಾಮಿ
ಮಾನ್ಯ ಕೇಂದ್ರ ಸಹಾಯಕ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವರು
ಬೆ. 8:00 ಆನೇಕಲ್
ಮ. 1:00 ಚಿಕ್ಕಮಗಳೂರು

ಶ್ರೀ ದೇವೇಂದ್ರ ಫಡ್ನವೀಸ್
ಮಾನ್ಯ ಉಪಮುಖ್ಯಮಂತ್ರಿಗಳು, ಮಹಾರಾಷ್ಟ್ರ
ಬೆ. 10:00 ಹುಬ್ಬಳ್ಳಿ

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್
ಮಾನ್ಯ ಶಾಸಕರು
ಬೆ. 9:30 ಜೇವರ್ಗಿ
ಬೆ. 11:30 ಕಲಬುರಗಿ ಉತ್ತರ
ಮ. 2:00 ಚಿಂಚೋಳಿ
ಮ. 3:30 ಭಾಲ್ಕಿ

ಶ್ರೀ ಕೆ. ಅಣ್ಣಾಮಲೈ
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ, ತಮಿಳುನಾಡು ಹಾಗೂ ಕರ್ನಾಟಕ ಸಹ ಉಸ್ತುವಾರಿ
ಬೆ. 9:30 ಚಿಕ್ಕಪೇಟೆ-ರೋಡ್ ಶೋ
ಸಂ. 5:30 ಪುಲಕೇಶಿನಗರ-ರೋಡ್ ಶೋ

ಶ್ರೀ ಬಿ.ವೈ. ವಿಜಯೇಂದ್ರ
ಮಾನ್ಯ ರಾಜ್ಯ ಉಪಾಧ್ಯಕ್ಷರು, ಬಿಜೆಪಿ
ಬೆ. 9:30 ಹಾಸನ-ರೋಡ್ ಶೋ
ಬೆ. 11:00 ಬೇಲೂರು-ರೋಡ್ ಶೋ
ಮ. 2:30 ಪಿರಿಯಾಪಟ್ಟಣ-ರೋಡ್ ಶೋ
ಮ. 3:00 ಅರಸೀಕೆರೆ-ರೋಡ್ ಶೋ
ಸಂ. 5:00 ಹೊಸದುರ್ಗ-ರೋಡ್ ಶೋ

ಶ್ರೀ ಸುದೀಪ್
ಖ್ಯಾತ ಚಲನಚಿತ್ರ ನಟರು
ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆ. 9:00 ನಂಜನಗೂಡು-ರೋಡ್ ಶೋ
ಬೆ. 10:00 ಗುಂಡ್ಲುಪೇಟೆ-ರೋಡ್ ಶೋ
ಬೆ. 11:00 ಚಾಮರಾಜನಗರ -ರೋಡ್ ಶೋ
ಮ. 12:30 ಕೊಳ್ಳೇಗೌಲ-ರೋಡ್ ಶೋ
ಮ. 2:00 ಹನೂರು-ರೋಡ್ ಶೋ
ಸಂ. 4:00 ಟಿ. ನರಸೀಪುರ-ರೋಡ್ ಶೋ
ಸಂ. 5:30 ಚಾಮುಂಡೇಶ್ವರಿ-ರೋಡ್ ಶೋ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ
ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ
ಪ್ರಕಟಣೆ : ಬಿಜೆಪಿ ಕರ್ನಾಟಕ

ಬಾಗಲಕೋಟೆ ಬಿಸಿಲಿಗಿಂತ ಸ್ವಪಕ್ಷೀಯರ ಒಳೇಟು, ಬಂಡಾಯದ ತಾಪವೇ ಹೆಚ್ಚು • ಅಸಮಾಧಾನಿತರನ್ನು ತಣಿಸಲು ಅಭ್ಯರ್ಥಿಗಳು ಹೈರಾಣ

ಮುಳುಗಡೆ ಜಿಲ್ಲೆಯಲ್ಲಿ ತೇಲುವವರು ಯಾರು?

• ಬಸವರಾಜ ಹವಾಲ್ದಾರ

ಗೋವಿಂದ ಕಾರಜೋಳ | ಆರ್.ಬಿ. ತಿಮ್ಮಾಪುರ | ಮುರುಗೇಶ ನಿರಾಣಿ | ಜೆ.ಟಿ. ಪಾಟೀಲ | ಎಚ್.ವೈ. ಮೇಟಿ | ವೀರಣ್ಣ ಚರಂತಿಮಠ

ಬಾಗಲಕೋಟೆ: ಜಿಲ್ಲೆಯಲ್ಲಿ ಅಭ್ಯರ್ಥಿಗಳಿಗೆ ಉರಿ ಬಿಸಿಲಿಗಿಂತ ಒಳೇಟು, ಬಂಡಾಯದ ತಾಪ ಹೆಚ್ಚಾಗಿದೆ. ಅಸಮಾಧಾನ ಶಮನಗೊಳಿಸಿ, ವಿಜಯಮಾಲೆ ಹಾಕಿಕೊಳ್ಳಲು ಬೆವರಿಳಿಸುತ್ತಿದ್ದಾರೆ. ಒಗ್ಗಟ್ಟಿನ ಮಂತ್ರದ ನಡುವೆಯೇ ಅಲ್ಲಲ್ಲಿ ಬಿರುಕುಗಳೂ ಕಾಣಿಸಿಕೊಂಡಿವೆ. ಒಂದು ಬಿರುಕು ಸರಿಪಡಿಸಿಕೊಂಡು ಮುನ್ನುಗ್ಗುವ ವೇಳೆಗೆ ಮತ್ತೊಂದು ಬಿರುಕು ತೆರೆದುಕೊಳ್ಳುತ್ತಿರುವುದು ಅಭ್ಯರ್ಥಿಗಳನ್ನು ಹೈರಾಣಾಗಿಸಿದೆ.

ಬಾದಾಮಿ, ಬಾಗಲಕೋಟೆ, ಜಮಖಂಡಿ, ತೇರದಾಳ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಓಟಕ್ಕೆ ಬಿಜೆಪಿ ನಾಯಕರೇ ಒಳೇಟು ನೀಡುವ ಭೀತಿ ಇದ್ದರೆ, ಬೀಳಗಿ, ಜಮಖಂಡಿ, ಮುಧೋಳ, ಬಾಗಲಕೋಟೆ, ತೇರದಾಳ ಕ್ಷೇತ್ರಗಳಲ್ಲಿ ಕಾಂಗ್ರೆಸ್ ನಾಯಕರು, ಬಂಡಾಯಗಾರರು ಆ ಪಕ್ಷದ ಅಭ್ಯರ್ಥಿಗಳಿಗೆ ಅಡ್ಡಗಾಲಾಗುವ ಲಕ್ಷಣಗಳಿವೆ.

ಪಕ್ಷಾಂತರ ಪರ್ವ ಜಿಲ್ಲೆಯಲ್ಲಿ ಜೋರಾಗಿದ್ದು, ಪಕ್ಷದಲ್ಲಿ ಅಸಮಾಧಾನಗೊಂಡವರನ್ನು ಹಿಡಿದಿಟ್ಟುಕೊಳ್ಳುವ ಸವಾಲು ಅಭ್ಯರ್ಥಿಗಳಿಗಿದೆ. ಕಾಂಗ್ರೆಸ್, ಬಿಜೆಪಿಗಳೆರಡೂ ಅಸಮಾಧಾನಗೊಂಡವರನ್ನು ಸೆಳೆದು ಮತ ಪ್ರಮಾಣ ಹೆಚ್ಚಿಸಿಕೊಳ್ಳುವ ಕಸರತ್ತು ನಡೆಸುತ್ತಿವೆ.

ತೇರದಾಳ ಕ್ಷೇತ್ರದಲ್ಲಿ ಬಿಜೆಪಿಯಿಂದ ಶಾಸಕ ಸಿದ್ದು ಸವದಿ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್‌ನಿಂದ ಉಮಾಶ್ರೀ ಬದಲಾಗಿ ಹೊಸಮುಖ ಸಿದ್ದು ಕೊಣ್ಣೂರ ಅವರಿಗೆ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಮುಖಂಡ ಡಾ.ಪದ್ಮಜೀತ ನಾಡಗೌಡ ಪಾಟೀಲ ಬಂಡಾಯದ ಬಾವುಟ ಹಾರಿಸಿದ್ದಾರೆ. ಕಾಂಗ್ರೆಸ್, ಬಿಜೆಪಿಗಳೆರಡರಲ್ಲೂ ಅಸಮಾಧಾನವಿದೆ. ಎಎಪಿಯ ಅರ್ಜುನ ಹಲಗಿಗೌಡರ, ಪಕ್ಷೇತರ ಅಂಬಾದಾಸ ಕಾಮೂರ್ತಿ ಗಮನ ಸೆಳೆಯುತ್ತಿದ್ದಾರೆ. 'ಕಾಂಗ್ರೆಸ್, ಬಿಜೆಪಿ ತಮ್ಮ ಸಮುದಾಯಕ್ಕೆ ಟಿಕೆಟ್ ನೀಡಿಲ್ಲ' ಎಂದು ಅಸಮಾಧಾನಗೊಂಡಿರುವ ನೇಕಾರರೇ ಇಲ್ಲಿ ನಿರ್ಣಾಯಕರಾಗಲಿದ್ದಾರೆ.

2018ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ವಿರುದ್ಧ ಬಿ. ಶ್ರೀರಾಮುಲು ಸ್ಪರ್ಧೆಯಿಂದ ರಾಜ್ಯದ ಗಮನ ಸೆಳೆದಿದ್ದ ಬಾದಾಮಿ ಕ್ಷೇತ್ರದಲ್ಲೀಗ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಮಾಜಿ ಸಚಿವ ಬಿ.ಬಿ. ಚಿಮ್ಮನಕಟ್ಟಿ ಪುತ್ರ ಭೀಮಸೇನ ಚಿಮ್ಮನಕಟ್ಟಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಬಿಜೆಪಿಯಿಂದ ಶಾಂತಗೌಡ ಪಾಟೀಲ ಸ್ಪರ್ಧೆಗಿಳಿದಿದ್ದು, ಆಕಾಂಕ್ಷಿಗಳಾಗಿದ್ದ ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ, ಮಹಾಂತೇಶ ಮಮದಾಪುರ ಅಸಮಾಧಾನ ಬದಿಗೊತ್ತಿ ಪ್ರಚಾರಕ್ಕಿಳಿದಿದ್ದಾರೆ. ಜೆಡಿಎಸ್‌ನ ಹನುಮಂತ ಮಾವಿನಮರದ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದು, ಎಚ್.ಡಿ. ಕುಮಾರಸ್ವಾಮಿ ಅವರೇ ಕ್ಷೇತ್ರದ ಬಗ್ಗೆ ಆಸಕ್ತಿವಹಿಸಿದ್ದಾರೆ. ಕಾಂಗ್ರೆಸ್, ಬಿಜೆಪಿಗೆ ಇಲ್ಲಿ ಒಳೇಟಿನ ಭೀತಿ ಕಾಡುತ್ತಿದೆ.

ಮುಧೋಳ ಕ್ಷೇತ್ರದಲ್ಲಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಬಿಜೆಪಿ ಅಭ್ಯರ್ಥಿ. ಕಾಂಗ್ರೆಸ್‌ನಿಂದ ಆರ್.ಬಿ. ತಿಮ್ಮಾಪುರ ಕಣದಲ್ಲಿದ್ದು, ಹಳೆಯ ಎದುರಾಳಿಗಳ ಹಣಾಹಣಿಗೆ ವೇದಿಕೆ ಸಜ್ಜಾಗಿದೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸತೀಶ ಬಂಡಿವಡ್ಡರ ಬಂಡಾಯ ಸಾರಿ ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ. ಇದು ಕಾಂಗ್ರೆಸ್‌ನ ತಲೆನೋವನ್ನು ಹೆಚ್ಚಿಸಿದೆ.

ಬೀಳಗಿ ಕ್ಷೇತ್ರದಲ್ಲಿ ಸಚಿವ ಮುರುಗೇಶ ನಿರಾಣಿ ಬಿಜೆಪಿಯಿಂದ, ಜೆ.ಟಿ. ಪಾಟೀಲ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದು, ಸಾಂಪ್ರದಾಯಿಕ ಎದುರಾಳಿಗಳ ನಡುವೆ ಸ್ಪರ್ಧೆ ನಡೆಯಲಿದೆ. ಟಿಕೆಟ್ ಬಯಸಿದ್ದ ಬಸವಪ್ರಭು ಸರನಾಡಗೌಡ ಸಮಾಧಾನಗೊಂಡು ಪ್ರಚಾರಕ್ಕೆ ಇಳಿದಿದ್ದಾರೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಬಸವರಾಜ ಖೋತ, ಶಿವಾನಂದ ನಿಂಗನೂರ, ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎನ್.ಬಿ. ಬನ್ನೂರ ಬಿಜೆಪಿ ಸೇರ್ಪಡೆಯಾಗಿದ್ದಾರೆ. ಕಾಂಗ್ರೆಸ್‌ಗೆ ಒಳೇಟಿನ ಭೀತಿಯೂ ಇದೆ.

ಶಾಸಕ ದೊಡ್ಡನಗೌಡ ಪಾಟೀಲ ಹುನಗುಂದ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ. ಕಾಂಗ್ರೆಸ್‌ನಿಂದ ವಿಜಯಾನಂದ ಕಾಶಪ್ಪನವರ ಸ್ಪರ್ಧಿಸಿದ್ದಾರೆ. ಮೂರು ಚುನಾವಣೆಗಳಿಂದ ಇವರೇ ಪರಸ್ಪರ ಎದುರಾಳಿಗಳಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ 25 ಸಾವಿರಕ್ಕೂ ಹೆಚ್ಚು ಮತ ಪಡೆದು, ಗಮನ ಸೆಳೆದಿದ್ದ ಎಸ್.ಆರ್. ನವಲಿ ಹಿರೇಮಠ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಇದು ತ್ರಿಕೋನ ಸ್ಪರ್ಧೆಗೆ ಕಾರಣವಾಗಿದೆ.

ಬಾಗಲಕೋಟೆ ಕ್ಷೇತ್ರದಲ್ಲಿ ಶಾಸಕ ವೀರಣ್ಣ ಚರಂತಿಮಠ ಬಿಜೆಪಿ ಅಭ್ಯರ್ಥಿ. ಬಿಜೆಪಿಯಲ್ಲಿದ್ದ ಅವರ ಸಹೋದರ ಮಲ್ಲಿಕಾರ್ಜುನ ಚರಂತಿಮಠ ಪಕ್ಷೇತರರಾಗಿ ಕಣದಲ್ಲಿದ್ದಾರೆ. ಕಾಂಗ್ರೆಸ್‌ನಿಂದ ಎಚ್.ವೈ. ಮೇಟಿ ಸ್ಪರ್ಧಿ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಡಾ.ದೇವರಾಜ ಪಾಟೀಲ ಕಾಂಗ್ರೆಸ್ ತೊರೆದು ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಬಿಜೆಪಿ ವಿಧಾನ ಪರಿಷತ್ ಸದಸ್ಯ, ಹಿಂದೆ ಬಾಗಲಕೋಟೆ ಕ್ಷೇತ್ರದ ಶಾಸಕರಾಗಿದ್ದ ಪಿ.ಎಚ್. ಪೂಜಾರ ಪ್ರಚಾರಕ್ಕೆ ಇಳಿದಿಲ್ಲ. ಕಾಂಗ್ರೆಸ್, ಬಿಜೆಪಿ ಬಂಡಾಯ ಎದುರಿಸುತ್ತಿವೆ.

ಸಿದ್ದು ನ್ಯಾಮಗೌಡರ ನಿಧನದ ನಂತರ ನಡೆದ ಜಮಖಂಡಿ ಉಪಚುನಾವಣೆಯಲ್ಲಿ ಗೆದ್ದಿದ್ದ ಆನಂದ ನ್ಯಾಮಗೌಡ ಜಮಖಂಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ. ಬಿಜೆಪಿ ತನ್ನ ಅಭ್ಯರ್ಥಿ ಬದಲಾಯಿಸಿದ್ದು ಹೊಸಮುಖ ಜಗದೀಶ ಗುಡಗುಂಟಿ ಅವರನ್ನು ಕಣಕ್ಕಿಳಿಸಿದೆ. ಹಿಂದೆ ಕಾಂಗ್ರೆಸ್‌ನಲ್ಲಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸುಶೀಲಕುಮಾರ ಬೆಳಗಲಿ ಪಕ್ಷೇತರರಾಗಿ ಸ್ಪರ್ಧೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಬಸವರಾಜ ಸಿಂಧೂರ ಬಿಜೆಪಿ ಸೇರ್ಪಡೆಗೊಂಡಿದ್ದಾರೆ. ಕಾಂಗ್ರೆಸ್, ಬಿಜೆಪಿ ನಡುವೆ ನೇರ ಪೈಪೋಟಿ ಇದೆ.

ತೇರದಾಳ, ಹುನಗುಂದ, ಬಾದಾಮಿ ಕ್ಷೇತ್ರಗಳಲ್ಲಿ ನಿರ್ಣಾಯಕರಾಗಿರುವ ನೇಕಾರ ಸಮುದಾಯದವರೊಬ್ಬರಿಗೂ ಜಿಲ್ಲೆಯಲ್ಲಿ ಟಿಕೆಟ್ ನೀಡಿಲ್ಲ ಎಂಬ ಅಸಮಾಧಾನವಿದೆ. ಆ ಸಮುದಾಯದ ನಿರ್ಧಾರ ಮೂರ್ನಾಲ್ಕು ಕ್ಷೇತ್ರಗಳ ಫಲಿತಾಂಶವನ್ನು ನಿರ್ಧರಿಸಲಿದೆ.

ಹಿಂದಿನ ಚುನಾವಣೆಯ ಬಲಾಬಲ

ಕ್ಷೇತ್ರ	2013	2018
ಬಾಗಲಕೋಟೆ	ಕಾಂಗ್ರೆಸ್	ಬಿಜೆಪಿ
ಹುನಗುಂದ	ಕಾಂಗ್ರೆಸ್	ಬಿಜೆಪಿ
ಜಮಖಂಡಿ	ಕಾಂಗ್ರೆಸ್	ಕಾಂಗ್ರೆಸ್
ಮುಧೋಳ	ಬಿಜೆಪಿ	ಬಿಜೆಪಿ
ತೇರದಾಳ	ಕಾಂಗ್ರೆಸ್	ಬಿಜೆಪಿ
ಬಾದಾಮಿ	ಕಾಂಗ್ರೆಸ್	ಕಾಂಗ್ರೆಸ್
ಬೀಳಗಿ	ಕಾಂಗ್ರೆಸ್	ಬಿಜೆಪಿ



ಪ್ರತಿ ಕ್ಷೇತ್ರದಲ್ಲಿ ವಿಭಿನ್ನ ಚಿತ್ರಣ!

ಚಿಕ್ಕಬಳ್ಳಾಪುರ ತಲಾ 2ರಲ್ಲಿ ತ್ರಿಕೋನ, ನೇರ, 1ರಲ್ಲಿ ಪಕ್ಷೇತರ ಸವಾಲು

• ಡಿ.ಎಂ.ಕುರ್ಕೆ ಪ್ರಶಾಂತ್



ಡಾ.ಕೆ. ಸುಧಾಕರ್ | ಎನ್.ಎಚ್. ಶಿವಶಂಕರರೆಡ್ಡಿ | ಎಂ. ಕೃಷ್ಣಾರೆಡ್ಡಿ | ಬಿ.ಎನ್. ರವಿಕುಮಾರ್ | ಎಸ್.ಎನ್. ಸುಬ್ಬಾರೆಡ್ಡಿ

ಚಿಕ್ಕಬಳ್ಳಾಪುರ: ಆಂಧ್ರಪ್ರದೇಶದ ಜೊತೆ ಗಡಿ ಹಂಚಿಕೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಮೇಲೆ ರಾಯಲಸೀಮೆ ರಾಜಕಾರಣದ ಪ್ರಭಾವ ದಟ್ಟವಾಗಿದೆ. ಚುನಾವಣೆಗಳಲ್ಲಿ ಅಭಿವೃದ್ಧಿ ವಿಚಾರ ಹಿನ್ನೆಲೆಗೆ ಸರಿದು ಜಾತಿ, ಹಣ, ಕುಟುಂಬ ಪ್ರತಿಷ್ಠೆಯಂತಹ ವಿಚಾರಗಳೇ ಪ್ರಮುಖವಾಗುತ್ತವೆ.

ಜಿಲ್ಲೆಯಲ್ಲಿ ಐದು ವಿಧಾನಸಭಾ ಕ್ಷೇತ್ರಗಳಿವೆ. ಪ್ರತಿ ಕ್ಷೇತ್ರದಲ್ಲಿಯೂ ಚಿತ್ರಣ ಭಿನ್ನವಾಗಿದೆ. ಸದ್ಯ ಕಾಂಗ್ರೆಸ್‌ನ ಮೂವರು, ಬಿಜೆಪಿ ಮತ್ತು ಜೆಡಿಎಸ್‌ನ ತಲಾ ಒಬ್ಬ ಶಾಸಕ ಇದ್ದಾರೆ.

ರಾಜಧಾನಿ ಬೆಂಗಳೂರಿನ ಸೆರಗಿನಲ್ಲಿರುವ ಕಾರಣ 'ಹೂಡಿಕೆ'ಗೆ ಪ್ರಶಸ್ತ ಎಂದು ಉದ್ಯಮಿಗಳು ಸ್ಥಳೀಯ ಮತದಾರರ ಪಟ್ಟಿ ಸೇರುವ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧೆಯಲ್ಲಿ ಇದ್ದಾರೆ.

ಒಕ್ಕಲಿಗ, ರೆಡ್ಡಿ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಮತದಾರರು ಗಣನೀಯವಾಗಿರುವ ಜಿಲ್ಲೆಯಲ್ಲಿ ಹಲವು ದಶಕಗಳಿಂದ ಕಾಂಗ್ರೆಸ್ ಮತ್ತು ಜೆಡಿಎಸ್ ಸಾಂಪ್ರದಾಯಿಕ ಎದುರಾಳಿಗಳು.

ಜಿಲ್ಲೆಯಲ್ಲಿ ಬಿಜೆಪಿ ಸಾರ್ವತ್ರಿಕ ಚುನಾವಣೆಗಳಲ್ಲಿ ಯಾವುದೇ ಕ್ಷೇತ್ರದಲ್ಲಿ ಒಮ್ಮೆಯೂ ಗೆಲುವು ದಾಖಲಿಸಿರಲಿಲ್ಲ. ಆದರೆ, ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಚಿಕ್ಕಬಳ್ಳಾಪುರ ಶಾಸಕ ಡಾ.ಕೆ. ಸುಧಾಕರ್ 2019ರ ಉಪ ಚುನಾವಣೆಯಲ್ಲಿ ಮೊದಲ ಬಾರಿಗೆ ಜಿಲ್ಲೆಯಲ್ಲಿ ಕಮಲ ಅರಳಿಸಿದರು. ಈ ಬಾರಿ ಮತ್ತಷ್ಟು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಜವಾಬ್ದಾರಿಯನ್ನು ಅವರಿಗೆ ಬಿಜೆಪಿ ನೀಡಿದೆ. ಆದರೆ, ಅದು ಸುಲಭದ ಮಾತಲ್ಲ.

ತ್ರಿಕೋನ ಸ್ಪರ್ಧೆ: ಚಿಕ್ಕಬಳ್ಳಾಪುರದಲ್ಲಿ ಬಿಜೆಪಿಯ ಡಾ.ಕೆ. ಸುಧಾಕರ್, ಕಾಂಗ್ರೆಸ್‌ನ ಪ್ರದೀಪ್ ಈಶ್ವರ್, ಜೆಡಿಎಸ್‌ನ ಕೆ.ಪಿ. ಬಚ್ಚೇಗೌಡ ನಡುವೆ ತ್ರಿಕೋನ ಸ್ಪರ್ಧೆ ಇದೆ. ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳು ಒಕ್ಕಲಿಗ ಸಮುದಾಯದವರು. ಕಾಂಗ್ರೆಸ್ ಅಭ್ಯರ್ಥಿ ಬಲಿಜ ಸಮಾಜದವರು. ಹಲವು ದಶಕಗಳ ನಂತರ ಹಿಂದುಳಿದ ವರ್ಗದ ಅಭ್ಯರ್ಥಿಯನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿದೆ.

ಹಣ ಮತ್ತು ಜಾತಿ ರಾಜಕಾರಣ ಹಳ್ಳಿಗಳನ್ನು ಪ್ರವಹಿಸಿದೆ. ಮತ ಧ್ರುವೀಕರಣದ ಲೆಕ್ಕಾಚಾರ ಜೋರಾಗಿದೆ.

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಚಿಕ್ಕಬಳ್ಳಾಪುರ	ಕಾಂಗ್ರೆಸ್	ಕಾಂಗ್ರೆಸ್
ಗೌರಿಬಿದನೂರು	ಕಾಂಗ್ರೆಸ್	ಕಾಂಗ್ರೆಸ್
ಚಿಂತಾಮಣಿ	ಜೆಡಿಎಸ್	ಜೆಡಿಎಸ್
ಶಿಡ್ಲಘಟ್ಟ	ಜೆಡಿಎಸ್	ಕಾಂಗ್ರೆಸ್
ಬಾಗೇಪಲ್ಲಿ	ಪಕ್ಷೇತರ	ಕಾಂಗ್ರೆಸ್

(2018ರ ಸಾರ್ವತ್ರಿಕ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಆಯ್ಕೆ ಆಗಿತ್ತು. 2019ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿತು)

ಚಿಂತಾಮಣಿ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕ ಎಂ. ಕೃಷ್ಣಾರೆಡ್ಡಿ ಮತ್ತು ಕಾಂಗ್ರೆಸ್‌ನ ಮಾಜಿ ಶಾಸಕ ಡಾ.ಎಂ.ಸಿ. ಸುಧಾಕರ್ ಮೂರನೇ ಬಾರಿಗೆ ಎದುರಾಳಿಗಳಾಗಿದ್ದಾರೆ. ಇಲ್ಲಿ ವೇಣುಗೋಪಾಲ್ ಬಿಜೆಪಿ ಅಭ್ಯರ್ಥಿ. ಆದರೆ, ನೇರ ಹಣಾಹಣಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಇದೆ.

ಎಂ. ಕೃಷ್ಣಾರೆಡ್ಡಿ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿ ಇದ್ದರೆ, ಡಾ.ಎಂ.ಸಿ. ಸುಧಾಕರ್ ಹ್ಯಾಟ್ರಿಕ್ ಸೋಲಿನಿಂದ ತಪ್ಪಿಸಿಕೊಳ್ಳಲು ಸಾಹಸ ಮಾಡುತ್ತಿದ್ದಾರೆ.

ಶಿಡ್ಲಘಟ್ಟ ಕ್ಷೇತ್ರದಲ್ಲಿಯೂ ಈ ಹಿಂದಿನ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ಠೇವಣಿ ಕಳೆದುಕೊಂಡಿದೆ. ಈ ಬಾರಿಯೂ ಕಾಂಗ್ರೆಸ್ ಮತ್ತು ಜೆಡಿಎಸ್ ಎದುರಾಳಿಗಳಾಗಿವೆ. ಕಾಂಗ್ರೆಸ್‌ನಿಂದ ಉದ್ಯಮಿ ರಾಜೀವ್ ಗೌಡ, ಬಿಜೆಪಿಯಿಂದ ಮತ್ತೊಬ್ಬ ಉದ್ಯಮಿ ರಾಮಚಂದ್ರಗೌಡ ಮತ್ತು ಜೆಡಿಎಸ್‌ನಿಂದ ಬಿ.ಎನ್. ರವಿಕುಮಾರ್ ಅಖಾಡದಲ್ಲಿದ್ದಾರೆ. ಕಾಂಗ್ರೆಸ್‌ಗೆ ಬಂಡಾಯ ಎದುರಾಗಿದೆ. ಟಿಕೆಟ್ ವಂಚಿತ ಆಂಜನಪ್ಪ ಪುಟ್ಟು ಪಕ್ಷೇತರರಾಗಿ ಕಣಕ್ಕೆ ಇಳಿದಿದ್ದು 'ಕೈ' ಒಡಕಿಗೆ ಕಾರಣರಾಗಿದ್ದಾರೆ.

ಹಿರಿಯ ಶಾಸಕನಿಗೆ ಪಕ್ಷೇತರ ಸವಾಲು: ಗೌರಿಬಿದನೂರು ವಿಧಾನಸಭಾ ಕ್ಷೇತ್ರದಲ್ಲಿ ಸತತ ಐದು ಬಾರಿ ಗೆಲುವು ಸಾಧಿಸಿರುವ ಕಾಂಗ್ರೆಸ್ ಶಾಸಕ ಎನ್.ಎಚ್. ಶಿವಶಂಕರರೆಡ್ಡಿ ಮತ್ತು ಪಕ್ಷೇತರ ಅಭ್ಯರ್ಥಿ ಕೆ.ಎಚ್. ಪುಟ್ಟಸ್ವಾಮಿಗೌಡ ನಡುವೆ ನೇರ ಸ್ಪರ್ಧೆ ಇದೆ.

ಸಮಾಜ ಸೇವಕರಾಗಿ ಕ್ಷೇತ್ರ ಪ್ರವೇಶಿಸಿದ ಉದ್ಯಮಿ ಪುಟ್ಟಸ್ವಾಮಿಗೌಡ ನಾಲ್ಕು ವರ್ಷಗಳಿಂದ ದೊಡ್ಡ ಪ್ರಮಾಣದ 'ಹೂಡಿಕೆ'ಯೊಂದಿಗೆ ಕ್ಷೇತ್ರದಲ್ಲಿ ಬೆಂಬಲಿಗರ ದೊಡ್ಡ ಪಡೆಯನ್ನೇ ಕಟ್ಟಿದ್ದಾರೆ.

ಬಿಜೆಪಿಯಿಂದ ಡಾ.ಶಶಿಧರ್, ಜೆಡಿಎಸ್‌ನಿಂದ ಸಿ.ಆರ್. ನರಸಿಂಹಮೂರ್ತಿ, ಪಕ್ಷೇತರರಾಗಿ ಕುರುಬ ಸಮಾಜದ ಮುಖಂಡ ಕೆಂಪರಾಜು ಕಣದಲ್ಲಿದ್ದಾರೆ.

ಬಾಗೇಪಲ್ಲಿಯಲ್ಲಿ ಕಾಂಗ್ರೆಸ್‌ನ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ, ಸಿಪಿಎಂ ಅಭ್ಯರ್ಥಿ ಡಾ.ಅನಿಲ್ ಕುಮಾರ್ ಮತ್ತು ಬಿಜೆಪಿಯ ಸಿ. ಮುನಿರಾಜು ನಡುವೆ ತ್ರಿಕೋನ ಸ್ಪರ್ಧೆ ಇದೆ. ಕಳೆದ ಮೂರು ದಶಕಗಳಿಂದ ಕಾಂಗ್ರೆಸ್ ಮತ್ತು ಸಿಪಿಎಂ ನಡುವೆ ಹಣಾಹಣಿ ನಡೆದಿತ್ತು. ಈಗ ಬಿಜೆಪಿ ಸಹ ಹಳ್ಳಿ, ಹಳ್ಳಿಗಳಲ್ಲಿ ಆಳವಾಗಿ ಬೇರುಬಿಟ್ಟಿದೆ. ಜೆಡಿಎಸ್ ಈ ಕ್ಷೇತ್ರದಲ್ಲಿ ಸಿಪಿಎಂಗೆ ಬೆಂಬಲ ಸೂಚಿಸಿದೆ.



ಸಾಕ್ಷಾತ್ ಸಮೀಕ್ಷೆ

ಚಿಕ್ಕಮಗಳೂರು ಹಳೆಯ ವೈಭವಕ್ಕೆ ಕಾಂಗ್ರೆಸ್, ಅಸ್ತಿತ್ವಕ್ಕೆ ಜೆಡಿಎಸ್ ಹೋರಾಟ

ಕೋಟೆ ರಕ್ಷಣೆಗೆ ಬಿಜೆಪಿ ಕಸರತ್ತು

• ಬಿ.ಜೆ.ಧನ್ಯಪ್ರಸಾದ್

ಸಿ.ಟಿ.ರವಿ | ತಮ್ಮಯ್ಯ | ಬೆಳ್ಳಿ ಪ್ರಕಾಶ್ | ವೈ.ಎಸ್.ವಿ.ದತ್ತ | ಕೆ.ಎಸ್.ಆನಂದ್ | ಡಿ.ಎಸ್. ಸುರೇಶ್

ಚಿಕ್ಕಮಗಳೂರು: ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಾಂತರ, ಬಂಡಾಯ, ಹೊಂದಾಣಿಕೆ ರಾಜಕಾರಣ ಭಾರಿ ಸದ್ದು ಮಾಡಿವೆ. ಭದ್ರಕೋಟೆ ಉಳಿಸಿಕೊಳ್ಳಲು ಬಿಜೆಪಿ ಹೆಣಗಾಟ, ಹಳೆಯ ವೈಭವ ಮರುಸ್ಥಾಪನೆಗೆ ಕಾಂಗ್ರೆಸ್ ಹರಸಾಹಸ, ಅಸ್ತಿತ್ವಕ್ಕಾಗಿ ಜೆಡಿಎಸ್ ಹೋರಾಟ ಮಾಡುತ್ತಿವೆ.

ಜಿಲ್ಲೆಯ ಐದು ಕ್ಷೇತ್ರಗಳ ಪೈಕಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ನೇರ ಹಣಾಹಣಿ ಇದೆ. ಮೂಡಿಗೆರೆ, ಶೃಂಗೇರಿ, ಕಡೂರು ಕ್ಷೇತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮಧ್ಯೆ ಹಾಗೂ ತರೀಕೆರೆ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್, ಪಕ್ಷೇತರ ಅಭ್ಯರ್ಥಿ ಎಚ್.ಎಂ. ಗೋಪಿಕೃಷ್ಣ ಮಧ್ಯೆ ತ್ರಿಕೋನ ಸ್ಪರ್ಧೆ ಇದೆ.

ತರೀಕೆರೆ ಕ್ಷೇತ್ರದಲ್ಲಿ ಜೆಡಿಎಸ್ ಕಣದಲ್ಲಿ ಇಲ್ಲ. ಚಿಕ್ಕಮಗಳೂರು ಕ್ಷೇತ್ರದಲ್ಲಿ ಇದ್ದೂ ಇಲ್ಲದಂತಿದೆ.

ಚಿಕ್ಕಮಗಳೂರು – ಜಿದ್ದಾಜಿದ್ದಿ: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ, ಒಕ್ಕಲಿಗ ಸಮುದಾಯದ ಸಿ.ಟಿ. ರವಿ ಅವರನ್ನು ಸೋಲಿಸಲು ಕಾಂಗ್ರೆಸ್ ತೀವ್ರ ಕಸರತ್ತಿನಲ್ಲಿ ತೊಡಗಿದೆ. ಸಿ.ಟಿ. ರವಿ ಆಪ್ತರಾಗಿದ್ದ ನಗರಸಭೆ ಮಾಜಿ ಅಧ್ಯಕ್ಷ ಎಚ್.ಡಿ. ತಮ್ಮಯ್ಯ, ಕೆಲ ತಿಂಗಳ ಹಿಂದಷ್ಟೇ ಕಾಂಗ್ರೆಸ್ ಸೇರಿದ್ದು, ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

ತಮ್ಮಯ್ಯ ವೀರಶೈವ- ಲಿಂಗಾಯತ ಸಮುದಾಯದವರು. ಕ್ಷೇತ್ರದ ಬಹುಸಂಖ್ಯಾತ ಸಮುದಾಯ ಇದು. ಕ್ಷೇತ್ರದಲ್ಲಿ 1967ರ ಚುನಾವಣೆಯಲ್ಲಿ ಲಿಂಗಾಯತ ಸಮುದಾಯದ ಸಿ.ಎಂ.ಎಸ್. ಶಾಸ್ತ್ರಿ ಚುನಾಯಿತರಾಗಿದ್ದರು. ಆ ನಂತರ ಸಮುದಾಯವರು ಆಯ್ಕೆಯಾಗಿಲ್ಲ.

ಸತತ ನಾಲ್ಕು ಬಾರಿ ಗೆಲುವು ಕಂಡಿರುವ ರವಿ ಓಟಕ್ಕೆ ಬ್ರೇಕ್ ಹಾಕಲು ಕಾಂಗ್ರೆಸ್ ಜತೆ ಜೆಡಿಎಸ್ ಮುಖಂಡರು ಕೈಜೋಡಿಸಿದ್ದಾರೆ. ಸಿಪಿಐ, ಎಸ್‌ಡಿಪಿಐ ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ. ರೈತ ಸಂಘ, ಕೆಲವು ದಲಿತ ಸಂಘಟನೆಗಳು ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿವೆ. ಕಾಂಗ್ರೆಸ್‌ಗೆ ಇಲ್ಲಿ ಹೊಂದಾಣಿಕೆ ರಾಜಕಾರಣದ ಆಸರೆ ಸಿಕ್ಕಿದೆ.

ಸಿ.ಟಿ. ರವಿ ಆರನೇ ಬಾರಿಗೆ ಅಖಾಡಕ್ಕೆ ಇಳಿದಿದ್ದಾರೆ. 'ಸಿದ್ಧಾಂತ' ಮತ್ತು 'ಅಭಿವೃದ್ಧಿ' ಪಠಣದಲ್ಲಿ ತೊಡಗಿದ್ದಾರೆ. ಅವರನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸುವ ಯತ್ನ ಕ್ಷೇತ್ರದಲ್ಲಿ ನಡೆ ದಿದೆ. ಪಕ್ಷದ ಒಳೇಟು, ನಾಯಕರ ಕಡೆಗಣನೆಯಿಂದ ಜೆಡಿಎಸ್ ಅಭ್ಯರ್ಥಿ ಬಿ.ಎಂ. ತಿಮ್ಮಶೆಟ್ಟಿ ಮೂಲೆಗುಂಪಾಗಿದ್ದಾರೆ.

ಕಡೂರು ಕ್ಷೇತ್ರದಲ್ಲಿ ಬಿಜೆಪಿಯ ಬೆಳ್ಳಿ ಪ್ರಕಾಶ್, ಕಾಂಗ್ರೆಸ್‌ನ ಕೆ.ಎಸ್. ಆನಂದ್ ಹಾಗೂ ಜೆಡಿಎಸ್‌ನ ವೈ.ಎಸ್.ವಿ. ದತ್ತ ನಡುವೆ ಸ್ಪರ್ಧೆ ಇದೆ. ಪಕ್ಷಾಂತರ ಮಾಡಿದ್ದ ದತ್ತ ಅವರು ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ದಿಢೀರನೆ ಜೆಡಿಎಸ್‌ಗೆ ಮರಳಿ ಅಭ್ಯರ್ಥಿಯಾಗಿದ್ದಾರೆ. ಆನಂದ್ ಮತ್ತು ದತ್ತ ಇಬ್ಬರೂ ಕಳೆದ ಬಾರಿಯ ಸೋಲಿನ ಅನುಕಂಪ ಕೈಹಿಡಿಯಲಿದೆ ಎಂಬ ವಿಶ್ವಾಸದಲ್ಲಿದ್ದಾರೆ. ಅಭಿವೃದ್ಧಿ ಕಾರ್ಯಗಳು ಶ್ರೀರಕ್ಷೆಯಾಗಲಿವೆ ಎಂಬುದು ಬೆಳ್ಳಿಪ್ರಕಾಶ್ ಲೆಕ್ಕಾಚಾರ.

ತರೀಕೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಎಚ್.ಎಂ. ಗೋಪಿಕೃಷ್ಣ ಮತ್ತು ದೋರನಾಳು ಪರಮೇಶ್ ಅವರು ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವುದು ಪಕ್ಷಕ್ಕೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಟಿಕೆಟ್ ಸಿಗದ ಇತರ ಕೆಲವರು ಕಾಂಗ್ರೆಸ್ ಅಭ್ಯರ್ಥಿಗೆ ತೊಡರುಗಾಲಾಗಿದ್ದಾರೆ.

ಕಾಂಗ್ರೆಸ್‌ನಿಂದ ಮಾಜಿ ಶಾಸಕ ಜಿ.ಎಚ್. ಶ್ರೀನಿವಾಸ್ ಮತ್ತು ಬಿಜೆಪಿಯಿಂದ ಡಿ.ಎಸ್.ಸುರೇಶ್ ಕಣದಲ್ಲಿದ್ದಾರೆ. ಪಕ್ಷೇತರ ಅಭ್ಯರ್ಥಿ ಗೋಪಿಕೃಷ್ಣ, ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ತ್ರಿಕೋನ ಸ್ಪರ್ಧೆ ಇದೆ.

ಮೂಡಿಗೆರೆ ಮೀಸಲು ಕ್ಷೇತ್ರದಲ್ಲಿ ಎಂ.ಪಿ. ಕುಮಾರಸ್ವಾಮಿ ಅವರು ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ ಜೆಡಿಎಸ್‌ಗೆ ಜಿಗಿದಿದ್ದಾರೆ. ಕುಮಾರಸ್ವಾಮಿ ಅವರಿಗೆ ಬಿಜೆಪಿ ಟಿಕೆಟ್ ನೀಡದಂತೆ ವಿರೋಧಿ ಗುಂಪು ಪಕ್ಷದ ವರಿಷ್ಠರಿಗೆ ಒತ್ತಡ ಹೇರಿತ್ತು. ಜೆಡಿಎಸ್ ಟಿಕೆಟ್ ಘೋಷಿಸಿದ್ದ ಮಾಜಿ ಸಚಿವ ಬಿ.ಬಿ. ನಿಂಗಯ್ಯ ಅವರನ್ನು ಬದಲಾವಣೆ ಮಾಡಿ ಕೊನೆಗಳಿಗೆಯಲ್ಲಿ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಿದೆ. ನಿಂಗಯ್ಯ ಈಗ ಕಾಂಗ್ರೆಸ್ ಸೇರಿದ್ದಾರೆ. ಬಿಜೆಪಿಯಿಂದ ದೀಪಕ್ ದೊಡ್ಡಯ್ಯ ಮತ್ತು ಕಾಂಗ್ರೆಸ್‌ನಿಂದ ನಯನಾ ಮೋಟಮ್ಮ ಸ್ಪರ್ಧಿಸಿದ್ದು, ಇವರಿಬ್ಬರೂ ಹೊಸಮುಖಗಳು. ಕಾಂಗ್ರೆಸ್ ಮತ್ತು ಬಿಜೆಪಿಗೆ ಹೊಸಮುಖ ಗೆಲ್ಲಿಸುವ, ಜೆಡಿಎಸ್‌ಗೆ ಪಕ್ಷಾಂತರಿಯನ್ನು ಗೆಲ್ಲಿಸುವ ಸವಾಲು ಇದೆ.

ಶೃಂಗೇರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶಾಸಕ ಟಿ.ಡಿ. ರಾಜೇಗೌಡ, ಬಿಜೆಪಿಯಿಂದ ಮಾಜಿ ಸಚಿವ ಡಿ.ಎನ್. ಜೀವರಾಜ್ ಹಾಗೂ ಜೆಡಿಎಸ್‌ನಿಂದ ಹೊಸ ಮುಖ ಸುಧಾಕರ್ ಎಸ್.ಶೆಟ್ಟಿ ಕಣದಲ್ಲಿದ್ದಾರೆ. ಈ ಕ್ಷೇತ್ರದಲ್ಲೂ ತ್ರಿಕೋನ ಸ್ಪರ್ಧೆ ಇದೆ.

ಹಳೆಯ ವೈಭವವನ್ನು(1989ರ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲಿ ಗೆಲುವು) ಜಿಲ್ಲೆಯಲ್ಲಿ ಮರುಸ್ಥಾಪಿಸಲು ಕಾಂಗ್ರೆಸ್, 2018ರಲ್ಲಿ ಜಿಲ್ಲೆಯ ಐದು ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಅರಳಿರುವ ಕಮಲದ ಭದ್ರಕೋಟೆ ರಕ್ಷಿಸಿಕೊಳ್ಳಲು ಬಿಜೆಪಿ ಹಾಗೂ ಕಳೆದುಕೊಂಡಿರುವ ಅಸ್ತಿತ್ವವನ್ನು ಪಡೆದುಕೊಳ್ಳಲು ಜೆಡಿಎಸ್ ಯತ್ನಿಸುತ್ತಿವೆ.



ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಚಿಕ್ಕಮಗಳೂರು	ಬಿಜೆಪಿ	ಬಿಜೆಪಿ
ಕಡೂರು	ಜೆಡಿಎಸ್	ಬಿಜೆಪಿ
ತರೀಕೆರೆ	ಕಾಂಗ್ರೆಸ್	ಬಿಜೆಪಿ
ಶೃಂಗೇರಿ	ಬಿಜೆಪಿ	ಕಾಂಗ್ರೆಸ್
ಮೂಡಿಗೆರೆ	ಜೆಡಿಎಸ್	ಬಿಜೆಪಿ

ರಾಯಚೂರು ಪಕ್ಷ, ವ್ಯಕ್ತಿ ಪ್ರತಿಷ್ಠೆಗೆ ಮನ್ನಣೆಯೋ ಅಥವಾ ತತ್ವ, ಸಿದ್ಧಾಂತಕ್ಕೆ ಮಾನ್ಯತೆಯೋ?

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನಡುವೆ ಪೈಪೋಟಿ

• ನಾಗರಾಜ ಚಿನಗುಂಡಿ

ಡಾ.ಶಿವರಾಜ ಪಾಟೀಲ | ವೆಂಕಟರಾವ್ ನಾಡಗೌಡ | ಬಸನಗೌಡ ದದ್ದಲ್ | ಕೆ. ಶಿವನಗೌಡ ನಾಯಕ | ಜಿ. ಕರಿಯಮ್ಮ | ಬಿ.ವಿ. ನಾಯಕ | ಹಂಪನಗೌಡ ಬಾದರ್ಲಿ | ಸಿದ್ದು ಬಂಡಿ

ರಾಯಚೂರು: ಜಿಲ್ಲೆಯು ಇನ್ನೂ ಸಮಸ್ಯೆಗಳ ಸುಳಿಗಳಿಂದ ಮುಕ್ತವಾಗಿಲ್ಲ. ಮೂಲ ಸೌಕರ್ಯ ಕೊರತೆ, ಸೃಷ್ಟಿಯಾಗದ ಉದ್ಯೋಗಾವಕಾಶ ಸೇರಿ ಹಲವು ಸಮಸ್ಯೆ ಎದುರಿಸುತ್ತಿದ್ದು, ಈ ಸಲದ ಚುನಾವಣೆಯಲ್ಲಿ ಇದೇ ವಿಷಯಗಳು ಪ್ರಧಾನವಾಗಿ ಚರ್ಚೆಯಾಗುತ್ತಿವೆ. 'ಸಂಕಷ್ಟಗಳು ಕೊನೆಯಾಗಬೇಕು' ಎಂದು ಒಂದೆಡೆ ಜನ ಬಯಸಿದರೆ, ಇನ್ನೊಂದೆಡೆ ಇದಕ್ಕೆ ಪೂರಕವಾಗಿ ಬದಲಾವಣೆಯ ಗಾಳಿ ಬೀಸುವ ಲಕ್ಷಣಗಳು ಕಾಣುತ್ತಿವೆ.

ಪಕ್ಷಕ್ಕಿಂತ ವ್ಯಕ್ತಿಗಳ ಪ್ರಭಾವವೇ ಪ್ರಧಾನವಾಗಿರುವ ಜಿಲ್ಲೆಯ ಏಳೂ ಕ್ಷೇತ್ರಗಳಲ್ಲಿ ಈ ಸಲದ ಚುನಾವಣೆಯು ಕುತೂಹಲಕರ ರಾಜಕೀಯ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ವ್ಯಕ್ತಿ ಪ್ರತಿಷ್ಠೆ ಮುಖ್ಯವಾಗುವುದೇ ಅಥವಾ ಆಯಾ ಪಕ್ಷಗಳ ತತ್ವ, ಸಿದ್ಧಾಂತಕ್ಕೆ ಮಾನ್ಯತೆ ಸಿಗುವುದೇ ಎಂಬ ಬಗ್ಗೆ ಜನರು ಸುಲಭವಾಗಿ ಗುಟ್ಟು ಬಿಟ್ಟುಕೊಡುತ್ತಿಲ್ಲ.

2013 ಮತ್ತು 2018ರ ವಿಧಾನಸಭೆ ಚುನಾವಣೆಗಳಲ್ಲಿ ಗೆಲುವು ಸಾಧಿಸುವಲ್ಲಿ ಸಫಲರಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಈ ಸಲದ ಚುನಾವಣೆಯಲ್ಲೂ ಪುನರಾವರ್ತನೆ ಮಾಡಲು ಹರಸಾಹಸ ಪಡಬೇಕಿದೆ. ಬಂಡಾಯ, ಬದಲಾದ ಜನರ ಮನಸ್ಥಿತಿ, ಪಕ್ಷಾಂತರದ ಪರಿಣಾಮ ಎಲ್ಲವನ್ನೂ ಸಮರ್ಥವಾಗಿ ಎದುರಿಸಿ ವಿಜಯ ಸಾಧಿಸುವುದೇ ಪಕ್ಷಗಳಿಗೆ ಸವಾಲಾಗಿದೆ.

ರಾಯಚೂರು ನಗರ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ಡಾ.ಶಿವರಾಜ ಪಾಟೀಲ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. 10 ವರ್ಷಗಳ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಆಗಿರುವ ಮತ್ತು ಆಗಬೇಕಾದ ವಿಷಯಗಳನ್ನು ಮುಂದಿಟ್ಟುಕೊಂಡು ಮತಯಾಚಿಸುತ್ತಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಮೊಹ್ಮದ್ ಶಾಲಂ ಅವರಿಗೆ ಎಐಸಿಸಿ ಕಾರ್ಯದರ್ಶಿ ಎನ್.ಎಸ್. ಬೋಸರಾಜ ಮತ್ತು ಯುವ ಮುಖಂಡ ರವಿ ಬೋಸರಾಜ ಬೆನ್ನೆಲುಬಾಗಿ ನಿಂತಿದ್ದಾರೆ. ಇವರಿಬ್ಬರಿಗೂ ಪ್ರತಿಸ್ಪರ್ಧಿಯಾಗಿರುವ ಜೆಡಿಎಸ್‌ನ ವಿನಯಕುಮಾರ್ 'ಪಂಚರತ್ನ' ಯೋಜನೆಗಳು ಮತ್ತು ತಾವು ನಗರಸಭೆ ಅಧ್ಯಕ್ಷರಾಗಿದ್ದ ವೇಳೆ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಪಡಿಸುತ್ತಿದ್ದಾರೆ.

ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಮತ್ತು ಮಾಜಿ ಶಾಸಕ ಬಿಜೆಪಿಯ ತಿಪ್ಪರಾಜು ಹವಾಲ್ದಾರ್ ನಡುವೆ ನೇರ ಹಣಾಹಣಿಯಿದೆ. ದದ್ದಲ್ ಅವರು ಕಾಂಗ್ರೆಸ್ ಗ್ಯಾರಂಟಿ ಕಾರ್ಡ್‌ನ ಬಗ್ಗೆ ವಿವರಿಸಿದರೆ, ಅಭಿವೃದ್ಧಿಗೆ ಆದ್ಯತೆ ಕೊಟ್ಟು ಮತ ನೀಡುವಂತೆ ಹವಾಲ್ದಾರ್ ಅವರು ಜನರಿಗೆ ಮನವಿ ಮಾಡುತ್ತಿದ್ದಾರೆ.

'ಕೇಂದ್ರ ಮತ್ತು ರಾಜ್ಯ ಸರ್ಕಾರ ದಿಂದ ತಂದ ನೂರಾರು ಕೋಟಿ ಅನುದಾನ ದಿಂದ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಂಡಿರುವೆ. ಅವುಗಳೇ ನನಗೆ ಶ್ರೀರಕ್ಷೆ' ಎಂದು ದೇವದುರ್ಗದಲ್ಲಿ ಬಿಜೆಪಿ ಶಾಸಕ ಕೆ.ಶಿವನಗೌಡ ನಾಯಕ ಆತ್ಮವಿಶ್ವಾಸ ವ್ಯಕ್ತಪಡಿಸಿದರೆ, 'ಜನರ ಬೆಂಬಲವೇ ನನಗೆ ಬಲ. ಬದಲಾವಣೆಗಾಗಿ ನನಗೆ ಮತ ನೀಡುವರು' ಎಂದು ಜೆಡಿಎಸ್‌ನ ಕರಿಯಮ್ಮ ಹೇಳುತ್ತಾರೆ. ಇವರಿಬ್ಬರಿಗೂ ಸವಾಲು ಎನ್ನುವ ರೀತಿ ಕಾಂಗ್ರೆಸ್‌ನ ಶ್ರೀದೇವಿ ರಾಜಶೇಖರ ನಾಯಕ ತೀವ್ರ ಪೈಪೋಟಿ ನೀಡುತ್ತಿದ್ದಾರೆ.

ಮಾನ್ವಿ ಕ್ಷೇತ್ರದಲ್ಲಿ 'ಮತ್ತೊಮ್ಮೆ ಗೆಲುವು ದಾಖಲಿಸುವೆ' ಎಂದು ಹೇಳುತ್ತಿರುವ ಜೆಡಿಎಸ್‌ನ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರಿಗೆ ಸವಾಲು ಆಗಿರುವ ಕಾಂಗ್ರೆಸ್‌ನ ಹಂಪಯ್ಯ ನಾಯಕ, 'ಜನರು ಬದಲಾವಣೆ ಬಯಸಿದ್ದಾರೆ' ಎಂದು ದೃಢವಾಗಿ ಹೇಳುತ್ತಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಪಕ್ಷ ತೊರೆದು ಬಿಜೆಪಿ ಸೇರ್ಪಡೆಗೊಂಡು ಅಭ್ಯರ್ಥಿಯಾಗಿ ಕಣದಲ್ಲಿರುವ ಬಿ.ವಿ. ನಾಯಕ, ವ್ಯಕ್ತಿಯ ಪ್ರಭಾವಕ್ಕೆ ಮನ್ನಣೆ ನೀಡುವರು ಎಂಬ ವಿಶ್ವಾಸದಲ್ಲಿದ್ದಾರೆ.

ಲಿಂಗಸುಗೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕ ಡಿ.ಎಸ್. ಹೂಲಗೇರಿ ಅವರು ಪುನರಾಯ್ಕೆ ಬಯಸಿದರೆ, ಈ ಹಿಂದೆ ಎರಡು ಬಾರಿ ಸೋಲುಂಡಿರುವ ಜೆಡಿಎಸ್‌ನ ಸಿದ್ದು ಬಂಡಿ ಅವರು 'ಅನುಕಂಪ'ದ ಆಧಾರದ ಮೇಲೆ ಹೆಚ್ಚಿನ ಮತ ಗಳಿಸುವ ನಿರೀಕ್ಷೆಯಲ್ಲಿದ್ದಾರೆ. ಇವರಿಬ್ಬರಿಗೂ ತೀವ್ರ ಪೈಪೋಟಿ ಒಡ್ಡುವ ರೂಪದಲ್ಲಿ ಮಾಜಿ ಶಾಸಕ ಬಿಜೆಪಿಯ ಮಾನಪ್ಪ ವಜ್ಜಲ್ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳನ್ನೇ ಮುಂದಿರಿಸಿಕೊಂಡು ಮತ ಕೇಳುತ್ತಿದ್ದಾರೆ.

ಪಂಚರತ್ನ ಯೋಜನೆಗಳ ಅನುಷ್ಠಾನ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರ ಆಡಳಿತದ ಸಾಧನೆಗಳನ್ನು ಹೇಳಿ ಜನರನ್ನು ಭೇಟಿ ಮಾಡುತ್ತಿರುವ ಸಿಂಧನೂರು ಕ್ಷೇತ್ರದ ಜೆಡಿಎಸ್ ಶಾಸಕ ವೆಂಕಟರಾವ್ ನಾಡಗೌಡ ಪುನರಾಯ್ಕೆ ಬಯಸಿದ್ದಾರೆ. 'ಜೆಡಿಎಸ್ ಬದಲು ಕಾಂಗ್ರೆಸ್‌ಗೆ ಅವಕಾಶ ನೀಡಿ' ಎಂದು ಕಾಂಗ್ರೆಸ್‌ನ ಹಂಪನಗೌಡ ಬಾದರ್ಲಿ ಅವರು ಜನರಿಗೆ ಕೋರುತ್ತ ಬಿರುಸಿನ ಪ್ರಚಾರ ನಡೆಸಿದ್ದಾರೆ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ ಕಣದಲ್ಲಿರುವ ಕರಿಯಪ್ಪ ತೀವ್ರ ಪೈಪೋಟಿ ಒಡ್ಡುತ್ತಿದ್ದಾರೆ.

2008ರಲ್ಲಿ ಹೊಸದಾಗಿ ರಚನೆಯಾದ ಮಸ್ಕಿ ವಿಧಾನಸಭೆ ಕ್ಷೇತ್ರದಲ್ಲಿ ಪ್ರತಾಪಗೌಡ ಪಾಟೀಲ ಮತ್ತೊಮ್ಮೆ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. 2021ರಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಶಾಸಕ ಬಸನಗೌಡ ತುರ್ವಿಹಾಳ ಪ್ರತಿಸ್ಪರ್ಧಿಯಾಗಿದ್ದಾರೆ. ಇಬ್ಬರ ಪೈಪೋಟಿ ಕುತೂಹಲ ಕೆರಳಿಸಿದೆ.



ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ರಾಯಚೂರು	ಜೆಡಿಎಸ್	ಬಿಜೆಪಿ
ರಾಯಚೂರು ಗ್ರಾಮೀಣ	ಬಿಜೆಪಿ	ಕಾಂಗ್ರೆಸ್
ಮಾನ್ವಿ	ಕಾಂಗ್ರೆಸ್	ಜೆಡಿಎಸ್
ದೇವದುರ್ಗ	ಕಾಂಗ್ರೆಸ್*	ಬಿಜೆಪಿ
ಸಿಂಧನೂರು	ಕಾಂಗ್ರೆಸ್	ಜೆಡಿಎಸ್
ಲಿಂಗಸುಗೂರು	ಜೆಡಿಎಸ್	ಕಾಂಗ್ರೆಸ್
ಮಸ್ಕಿ	ಕಾಂಗ್ರೆಸ್	ಕಾಂಗ್ರೆಸ್*

* 2013ರಲ್ಲಿ ದೇವದುರ್ಗದ ಕಾಂಗ್ರೆಸ್ ಶಾಸಕ ವೆಂಕಟೇಶ ನಾಯಕ ನಿಧನರಾದ ಕಾರಣ ನಂತರ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಶಿವನಗೌಡ ನಾಯಕ ಶಾಸಕರಾದರು.
* 2018ರಲ್ಲಿ ಮಸ್ಕಿಯಲ್ಲಿ ಕಾಂಗ್ರೆಸ್ ಶಾಸಕ ಪ್ರತಾಪಗೌಡ ಪಾಟೀಲ ರಾಜೀನಾಮೆ ನೀಡಿ ಬಿಜೆಪಿ ಸೇರಿದರು. ನಂತರ ನಡೆದ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಬಸನಗೌಡ ತುರ್ವಿಹಾಳ ಶಾಸಕರಾದರು

ಬಿಜೆಪಿ ಸೇರಿದ ಬಸವರಾಜನ್ ದಂಪತಿ

ಸೌಭಾಗ್ಯ ಬಸವರಾಜನ್

ಚಿತ್ರದುರ್ಗ: ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ಅವರು ಕಣದಿಂದ ನಿವೃತ್ತಿ ಘೋಷಿಸಿದ್ದು, ಗುರುವಾರ ಸಂಜೆ ಪತಿ ಎಸ್.ಕೆ. ಬಸವರಾಜನ್ ಅವರೊಂದಿಗೆ ಬಿಜೆಪಿಗೆ ಸೇರಿದರು.

ನಗರದ ರೆಡ್ಡಿ ಸಮುದಾಯ ಭವನದಲ್ಲಿ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಮ್ಮುಖದಲ್ಲಿ ಪಕ್ಷ ಸೇರಿದರು. ಬಿಜೆಪಿ ಅಭ್ಯರ್ಥಿ ಜಿ.ಎಚ್. ತಿಪ್ಪಾರೆಡ್ಡಿ ಅವರಿಗೆ ಬೆಂಬಲ ಘೋಷಿಸಿದರು.

'ರಾಜಕೀಯ ವೈರಿಗಳಾಗಿದ್ದ ನಾನು ಮತ್ತು ತಿಪ್ಪಾರೆಡ್ಡಿ ಸ್ನೇಹಿತರಾಗಿದ್ದೇವೆ. ಇಬ್ಬರೂ ಸ್ಥಳೀಯರು, ನಾವು ಶಾಸಕರಾಗಿ ಕೆಲಸ ಮಾಡಿದರೂ ಗೂಂಡಾಗಿರಿಗೆ ಅವಕಾಶ ನೀಡಿರಲಿಲ್ಲ. ಬಿಜೆಪಿ ಅಭ್ಯರ್ಥಿ ತಿಪ್ಪಾರೆಡ್ಡಿ ಅವರ ಗೆಲುವಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುವೆ' ಎಂದು ಮಾಜಿ ಶಾಸಕ ಬಸವರಾಜನ್ ಹೇಳಿದರು.

'ಯಡಿಯೂರಪ್ಪ ಹಾಗೂ ನರೇಂದ್ರ ಮೋದಿ ಅವರ ನಾಯಕತ್ವ ಮೆಚ್ಚಿ ಬಿಜೆಪಿ ಸೇರಿದ್ದೇನೆ. ತಿಪ್ಪಾರೆಡ್ಡಿ ಅವರ ಗೆಲುವಿಗಾಗಿ ಬಿಜೆಪಿ ಸೇರಿದ್ದೇವೆ' ಎಂದು ಸೌಭಾಗ್ಯ ಬಸವರಾಜನ್ ಹೇಳಿದರು.

‘ವಿರೋಧಿ ಅಲೆ ಸಾಮಾನ್ಯ, ಗೆಲುವು ನಮ್ಮದೇ’

• ಎಸ್. ರವಿಪ್ರಕಾಶ್

ಪ್ರಜಾವಾಣಿ ಸಂದರ್ಶನ

ಧರ್ಮೇಂದ್ರ ಪ್ರಧಾನ್

ಬೆಂಗಳೂರು: ‘ಆಡಳಿತ ವಿರೋಧಿ ಅಲೆ ಎಂಬುದು ಹಳೆಯ ಬಗೆಯ ಚಿಂತನೆ. ಯಾವುದೇ ಒಂದು ಸರ್ಕಾರ ಇದ್ದರೂ ವಿರೋಧಿ ಅಲೆ ಇದ್ದೇ ಇರುತ್ತದೆ. ಇದೇ ಕಾರಣಕ್ಕೇ ಆಡಳಿತ ಪಕ್ಷ ಸೋಲುತ್ತದೆ ಎಂಬುದು ಸರಳ ವ್ಯಾಖ್ಯಾನ. ಹೊಸ ಟ್ರೆಂಡ್ ಎಂದರೆ ಆಡಳಿತ ವಿರೋಧಿ ಅಲೆ ಇದ್ದರೂ ಉತ್ತಮ ನಿರ್ವಹಣೆಯ ರಾಜಕಾರಣದಿಂದ ಚುನಾವಣೆ ಗೆಲ್ಲಬಹುದು. ಇದಕ್ಕೆ ಹಲವು ರಾಜ್ಯಗಳ ಚುನಾವಣಾ ಫಲಿತಾಂಶವೇ ನಿದರ್ಶನ’ ಎಂದು ಬಿಜೆಪಿ ಚುನಾವಣಾ ಉಸ್ತುವಾರಿ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಪ್ರತಿಪಾದಿಸಿದರು.

‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಅವರು ಆಡಿದ ಮಾತುಗಳು ಇಲ್ಲಿವೆ.

• **ಚುನಾವಣೆ ಪ್ರಚಾರ ಕೊನೆಯ ಘಟ್ಟಕ್ಕೆ ತಲುಪಿದೆ. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಜೋಡಿ ಬೆವರು ಹರಿಸುತ್ತಿದ್ದಾರೆ. ಈ ಚುನಾವಣೆ ಗೆಲ್ಲುತ್ತೀರಿ ಎಂಬ ವಿಶ್ವಾಸವಿದೆಯೇ?**

ಬರಿ ಗೆಲುವಲ್ಲ, ಸಂಪೂರ್ಣ ಬಹುಮತ ಸಿಗುತ್ತದೆ. ಇದಕ್ಕೆ ಕಾರಣ ಹೇಳುತ್ತೇನೆ, ಕರ್ನಾಟಕದಲ್ಲಿ ಹೊಸ ರಾಜಕೀಯ ಅಧ್ಯಾಯ ಆರಂಭವಾಗಿದೆ. ಈಗ ನಡೆದಿರುವ ಚುನಾವಣಾ ಸಮರ ಬಿಜೆಪಿ ಮತ್ತು ಕಾಂಗ್ರೆಸ್ ಎ– ಬಿ ಟೀಮ್‌ಗಳ ಮಧ್ಯೆ. ಎಲ್ಲೂ ತ್ರಿಕೋನ ಸ್ಪರ್ಧೆ ಇಲ್ಲ. ಒಂದೂ ಕಾಂಗ್ರೆಸ್ ಇಲ್ಲವೇ ಅದರ ಬಿ ಟೀಮ್ ಎನಿಸಿರುವ ಜೆಡಿಎಸ್ ಮಧ್ಯೆ ಹೋರಾಟ. ಪಕ್ಷದಲ್ಲೂ ಒಂದು ಬಗೆಯ ಪರಿವರ್ತನೆ ಆಗಿದೆ. ಹಿಂದೆ ಬಿಜೆಪಿ ಎಂದರೆ ರೈತ ಪರ ಪಕ್ಷ ಎಂಬುದಿತ್ತು. ಬಿಜೆಪಿ ಸರ್ಕಾರಗಳ ಹೊಸ ನೀತಿಗಳು ಕಾರ್ಯಕ್ರಮಗಳು ಹಾಗೂ ತಳಮಟ್ಟದ ಸಮುದಾಯಗಳನ್ನು ಮುಟ್ಟಿರುವ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಕಾರಣ, ನಮ್ಮಲ್ಲಿ ವಿಭಿನ್ನ ಸಮುದಾಯಗಳ ಹೊಸ ನಾಯಕರು ಸೃಷ್ಟಿಯಾಗಿದ್ದಾರೆ. ಇವರು ನಮ್ಮ ಶಕ್ತಿ. ಇನ್ನೂ ಒಂದು ಅನುಕೂಲಕಾರಿ ಅಂಶವೆಂದರೆ ಮೀಸಲಾತಿ ಪ್ರಮಾಣ ಹೆಚ್ಚು ಮಾಡಿದ್ದು. ಹಿಂದೆ ಆಂಧ್ರದಲ್ಲಿ ಎನ್. ಟಿ.ರಾಮರಾವ್ ಅವರು ಪರಿಶಿಷ್ಟ ಜಾತಿಗೆ ಶೇ 1 ರಷ್ಟು ಮೀಸಲಾತಿ ಹೆಚ್ಚಿಸಿದ್ದು ಬಿಟ್ಟರೆ, ದೇಶದಲ್ಲಿ ಯಾರೂ ಮೀಸಲಾತಿ ಪ್ರಮಾಣ ಹೆಚ್ಚಿಸಿರಲಿಲ್ಲ. ಬೊಮ್ಮಾಯಿ ಅದನ್ನು ಮಾಡಿದ್ದಾರೆ. ಇದು ಫಲ ನೀಡುತ್ತದೆ.

• **ಕೆಲವು ಹಳೆ ಮುಖಗಳನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಲಾಗಿದೆ. ಆದರೂ ಇನ್ನೂ ಸಾಕಷ್ಟು ಕ್ಷೇತ್ರಗಳಲ್ಲಿ ಆಡಳಿತ ವಿರೋಧಿ ಅಲೆ ಇದೆ. ಇದು ನಿಮಗೆ ಪೆಟ್ಟು ಕೊಡುವುದಿಲ್ಲವೇ?**

ಶೇ 23 ರಷ್ಟು ಶಾಸಕರನ್ನು ಬದಲಿಸಿದ್ದೇವೆ. ಯಾವುದೇ ಸರ್ಕಾರ ಇದ್ದರೂ ಶೇ 30 ರಷ್ಟು ಶಾಸಕರ ವಿರುದ್ಧ ವಿರೋಧಿ ಅಲೆ ಇದ್ದೇ ಇರುತ್ತದೆ ಎಂಬುದು ವೈಜ್ಞಾನಿಕ ಸಮೀಕ್ಷೆಯೊಂದರ ಪ್ರಮುಖ ಅಂಶ. ಯಾವುದೇ ಪಕ್ಷದ ಸರ್ಕಾರ ಇದ್ದರೂ ವಿರೋಧಿ ಅಲೆ ಇದ್ದೇ ಇರುತ್ತದೆ. ಇದೇ ಕಾರಣಕ್ಕೇ ಆಡಳಿತ ಪಕ್ಷ ಸೋಲುತ್ತದೆ ಎಂಬುದು ಸರಳ ವ್ಯಾಖ್ಯಾನವಷ್ಟೆ. ಹೊಸ ಟ್ರೆಂಡ್ ಎಂದರೆ ಆಡಳಿತ ವಿರೋಧಿ ಅಲೆ ಇದ್ದರೂ ಉತ್ತಮ ನಿರ್ವಹಣೆಯ ರಾಜಕಾರಣದಿಂದ ಚುನಾವಣೆ ಗೆಲ್ಲಬಹುದು. ಇದಕ್ಕೆ ಉತ್ತರಪ್ರದೇಶ, ತ್ರಿಪುರ, ಗೋವಾ, ಉತ್ತರಾಖಂಡ್, ನಾಗಾಲ್ಯಾಂಡ್ ರಾಜ್ಯಗಳ ಫಲಿತಾಂಶವೇ ಸಾಕ್ಷಿ. ಕೇರಳದ ಇತಿಹಾಸದಲ್ಲಿ ಎಂದೂ ಒಮ್ಮೆ ಗೆದ್ದ ಪಕ್ಷ ಮತ್ತೊಮ್ಮೆ ಗೆಲ್ಲುತ್ತಿರಲಿಲ್ಲ. ಅಲ್ಲಿ ಎರಡನೇ ಬಾರಿಗೆ ಎಲ್‌ಡಿಎಫ್ ಗೆಲುವು ಸಾಧಿಸಿತು. ಕರ್ನಾಟಕದಲ್ಲೂ ಅದೇ ಪುನರಾವರ್ತನೆ ಆಗುತ್ತದೆ.

• **ರಾಜ್ಯದ ಎಲ್ಲೆಡೆ ಬಿಜೆಪಿ ತನ್ನ ತಳಹದಿಯನ್ನು ವಿಸ್ತರಿಸಲು ಸಾಧ್ಯವಾಗಿದೆಯೇ?**

ಪ್ರದೇಶವಾರು ಮತ್ತು ಸಾಮಾಜಿಕವಾಗಿ ಈ ಕೆಲಸ ಆಗಿದೆ. ಬಿಜೆಪಿ ಕಾಲಿಡಲು ಸಾಧ್ಯವಾಗದ ಕಡೆಗಳಲ್ಲೂ ವಿಶೇಷವಾಗಿ ಹಳೆ ಮೈಸೂರು ಪ್ರದೇಶಗಳಲ್ಲಿ ತನ್ನ ಬೇರನ್ನು ಬಿಟ್ಟಿದೆ. ಮತ್ತೊಂದು ಕಡೆ, ಸಮಾಜ ಎಲ್ಲ ವರ್ಗ ಅದರಲ್ಲೂ ತಳ ಸಮುದಾಯದ ಜನರಿಗೆ ಪಕ್ಷ, ಸರ್ಕಾರ ಮತ್ತು ಕಾರ್ಯಕ್ರಮಗಳಲ್ಲಿ ಆದ್ಯತೆ ನೀಡಿದ್ದೇವೆ. ಹೀಗಾಗಿ ಸಮಾಜದ ಎಲ್ಲ ವರ್ಗಗಳ ಜನ ಬಿಜೆಪಿ ಸೇರುತ್ತಿದ್ದಾರೆ. ಸರಿಸುಮಾರು 10 ವರ್ಷ ಬಿಜೆಪಿ ಆಡಳಿತವನ್ನು ಜನ ನೋಡಿದ್ದಾರೆ. ಸ್ಪಷ್ಟ ನೀತಿಗಳನ್ನು ಜಾರಿ ಮಾಡಿದ್ದೇವೆ. ಹೀಗಾಗಿ ಬಿಜೆಪಿ ಕರ್ನಾಟಕದಲ್ಲಿ ಹಿಂದೆಂದಿಗಿಂತಲೂ ಬಲಶಾಲಿಯಾಗಿದೆ.

• **ಕರ್ನಾಟಕದ ಮತದಾರರಿಗೆ ನೀವು ಹೇಳುವುದೇನು?**

ಕರ್ನಾಟಕದ ಜನ ಮೊದಲಿಂದಲೂ ಬಿಜೆಪಿಯನ್ನು ಆಶೀರ್ವದಿಸುತ್ತಾ ಬಂದಿದ್ದಾರೆ. ಈ ಬಾರಿ ರಾಜ್ಯದಲ್ಲಿ ಬಹುಮತ ನೀಡಿದರೆ, ಬಸವಣ್ಣ ಅವರ ತತ್ವ ಆದರ್ಶಗಳ ಸ್ಥಾಪನೆಗೆ ಕಟಿ ಬದ್ಧರಾಗಿದ್ದೇವೆ. ಜಗತ್ತು, ನಾಗರಿಕತೆಯನ್ನು ಮುನ್ನಡೆಸುವ ಸಾಮರ್ಥ್ಯ ಕರ್ನಾಟಕಕ್ಕಿದೆ. ಅದನ್ನು ಸಾಕಾರಗೊಳಿಸಲು ನಾವು ಬದ್ಧರಾಗಿದ್ದೇವೆ.

‘ಹನುಮನ ಬಾಲಕ್ಕೆ ಬೆಂಕಿ ಇಟ್ಟಿದ್ದಾರೆ’

• **ಬಜರಂಗ ದಳ ಮತ್ತು ಬಜರಂಗಿ ವಿಷಯವನ್ನು ನಿಮ್ಮ ನಾಯಕರು ಪ್ರಸ್ತಾಪಿಸುತ್ತಿರುವುದೇಕೆ?**

ಕಾಂಗ್ರೆಸ್‌ನವರು ಜೇನುಗೂಡಿಗೆ ಕೈಹಾಕಿದ್ದಾರೆ. ಕಚ್ಚಿಸಿಕೊಳ್ಳುವುದು ನಿಶ್ಚಿತ. ಅವರಾಗಿಯೇ ಹನುಮನ ಬಾಲಕ್ಕೆ ಬೆಂಕಿ ಇಟ್ಟಿದ್ದಾರೆ, ಅನುಭವಿಸುತ್ತಾರೆ. ಕಾಂಗ್ರೆಸ್‌ನ ಒಬ್ಬ ನಾಯಕರಂತೂ ಭಾರತೀಯ ಸಂಸ್ಕೃತಿಯ ಗಂಧಗಾಳಿಯೂ ಇಲ್ಲದಂತೆ ಮಾತನಾಡಿದ್ದಾರೆ. ಬಜರಂಗಬಲಿಯ (ಹನುಮ) ತಂದೆ ಸೂರ್ಯ ಎಂದು ಹೇಳಿದ್ದಾರೆ. ಕಾಂಗ್ರೆಸ್‌ನದು ಊಳಿಗಮಾನ್ಯ ಜಗತ್ತು. ಅಲ್ಲಿ ಒಂದು ಪರಿವಾರವನ್ನು ಖುಷಿಪಡಿಸಲು ಯಾವುದೇ ಮಟ್ಟಕ್ಕೂ ಇಳಿಯುತ್ತಾರೆ. ಹೀಗಾಗಿಯೇ ಮೋದಿಯವರನ್ನು ಬೈಯ್ದು ಒಂದು ಕುಟುಂಬವನ್ನು ತೃಪ್ತಿ ಪಡಿಸುತ್ತಾರೆ. ಮೋದಿಯನ್ನು ಹೀನಾಯವಾಗಿ ಕಾಣುವುದೂ ಇದೇ ಕಾರಣಕ್ಕೆ. ಇದರಿಂದಾಗಿ ದೇಶ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ನಾಮಾವಶೇಷವಾಗಿದೆ.

ಸಿಡಿಯುತ್ತಾ ಅಥವಾ ಠುಸ್ ಪಟಾಕಿಯಾ? • ಕೈ–ಕಮಲದ ಅಬ್ಬರದಲ್ಲಿ ಕಳೆದುಹೋದ ತೆನೆ ಹೊತ್ತ ಮಹಿಳೆ

‘ಬಂಡೆ’ ಒಡೆಯಲು ‘ಅಶೋಕ’ ಡೈನಮೈಟ್

• ಆರ್. ಜಿತೇಂದ್ರ

ಕನಕಪುರ ಗಮನ ಸೆಳೆದ ಕಣ
ಸಾಕ್ಷಾತ್ ಸಮೀಕ್ಷೆ

ರಾಮನಗರ: ಸತತ ಏಳು ಗೆಲುವಿನೊಂದಿಗೆ ಕನಕಪುರ ಕ್ಷೇತ್ರದಲ್ಲಿ ‘ಬಂಡೆ’ಯಂತೆ ನಿಂತಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎದುರು ಬಿಜೆಪಿಯು ಸಚಿವ ಆರ್. ಅಶೋಕ ಅವರನ್ನು ಕಣಕ್ಕೆ ಇಳಿಸಿದೆ. ಅವರು ಡೈನಮೈಟ್‌ನಂತೆ ಸಿಡಿಯುತ್ತಾರೋ ಅಥವಾ ಡಿ.ಕೆ. ಸಹೋದರರ ಅಬ್ಬರದಲ್ಲಿ ಠುಸ್ ಪಟಾಕಿ ಆಗುತ್ತಾರೋ ಎಂಬುದು ಸದ್ಯದ ಕುತೂಹಲ.

ಎರಡು ದಶಕಗಳಿಂದಲೂ ಕಾಂಗ್ರೆಸ್ ಭದ್ರಕೋಟೆ ಆಗಿರುವ ಕನಕಪುರದಲ್ಲಿ ಬಿಜೆಪಿ ಈ ಬಾರಿ ಪ್ರಯೋಗಕ್ಕೆ ಕೈ ಹಾಕಿದೆ. ತನ್ನೆಲ್ಲ ಶಕ್ತಿಯನ್ನು ಬಳಸಿ ಕೆಪಿಸಿಸಿ ಅಧ್ಯಕ್ಷರನ್ನು ತವರಿನಲ್ಲೇ ಕಟ್ಟಿ ಹಾಕುವ ಪ್ರಯತ್ನ ಮಾಡಿದೆ. ಹಿಂದೆಲ್ಲ ಇಲ್ಲಿ ಬಿಜೆಪಿ ಸ್ಪರ್ಧೆ ಹೆಸರಿಗಷ್ಟೇ ಸೀಮಿತವಾಗಿತ್ತು. ಒಮ್ಮೆಯೂ ಠೇವಣಿ ಉಳಿದಿಲ್ಲ. ಆದರೆ, ಈ ಬಾರಿ ಅಶೋಕ ಸ್ಪರ್ಧೆಯಿಂದ ಚಿತ್ರಣ ಬದಲಾಗಿದೆ.

2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆ ವೇಳೆ ಸಾತನೂರು ಕ್ಷೇತ್ರ ಅಸ್ತಿತ್ವ ಕಳೆದುಕೊಂಡು ಕನಕಪುರ ಕ್ಷೇತ್ರದಲ್ಲಿ ವಿಲೀನವಾಯಿತು. ಡಿ.ಕೆ. ಶಿವಕುಮಾರ್ ಇಲ್ಲಿಯೂ ಗೆಲುವಿನ ಓಟವನ್ನು ಮುಂದುವರಿಸಿದ್ದಾರೆ. ಚುನಾವಣೆಯಿಂದ ಚುನಾವಣೆಗೆ ಅವರ ಗೆಲುವಿನ ಅಂತರ ಹೆಚ್ಚುತ್ತಲೇ ಇದೆ. ಈ ಬಾರಿ ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದು ಮುಖ್ಯಮಂತ್ರಿ ಆಗುವ ಕನಸನ್ನು ಶಿವಕುಮಾರ್ ಬಿಚ್ಚಿಟ್ಟಿದ್ದಾರೆ.

ಈ ಹಿಂದೆ ಜೆಡಿಎಸ್‌ನಿಂದ ಪೈಪೋಟಿ ನೀಡುತ್ತಿದ್ದ ಡಿ.ಎಂ. ವಿಶ್ವನಾಥ್, ನಾರಾಯಣಗೌಡ ಸೇರಿದಂತೆ ಹಲವರನ್ನು ಕಾಂಗ್ರೆಸ್‌ಗೆ ಸೆಳೆದು ವಿರೋಧ ಪಕ್ಷಗಳಿಗೆ ನಾಯಕತ್ವ ಇಲ್ಲದಂತೆ ನೋಡಿಕೊಂಡಿದ್ದಾರೆ. ಹೀಗಿರುವಾಗ ಬಿಜೆಪಿಯ ‘ಅನಿರೀಕ್ಷಿತ ಅಭ್ಯರ್ಥಿ’ಯ ಸ್ಪರ್ಧೆ ಕೊಂಚ ಬಿಸಿ ಮುಟ್ಟಿಸಿದೆ.

ಕನಕಪುರ ಕ್ಷೇತ್ರದಲ್ಲಿ ಒಕ್ಕಲಿಗರ ಪ್ರಾಬಲ್ಯವಿದೆ. ಹೀಗಾಗಿ ಮೂರು ಪ್ರಮುಖ ಪಕ್ಷಗಳೂ ಇದೇ ಸಮುದಾಯದ ಅಭ್ಯರ್ಥಿಗಳಿಗೆ ಮಣೆ ಹಾಕಿವೆ. ಬಿಜೆಪಿ ಸಹ ತನ್ನಲ್ಲಿನ ಒಕ್ಕಲಿಗ ನಾಯಕನನ್ನೇ ಕಣಕ್ಕೆ ಇಳಿಸಿದೆ. ಜೊತೆಗೆ ಪಕ್ಷದಲ್ಲಿನ ಇದೇ ಸಮುದಾಯದ ಮುಖಂಡರಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣಗೌಡ, ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಅಪ್ಪಾಜಿಗೌಡರಿಗೆ ಸ್ಥಳೀಯ ಸಂಘಟನೆಯ ಜವಾಬ್ದಾರಿ ಕೊಟ್ಟಿದೆ.

ಶಿವಕುಮಾರ್ ರನ್ನು ತವರಿನಲ್ಲೇ ಕಟ್ಟಿ ಹಾಕಬೇಕು ಎನ್ನುವ ಬಿಜೆಪಿ ತಂತ್ರ ಸದ್ಯಕ್ಕೆ ಯಶಸ್ಸು ಕಂಡಂತಿಲ್ಲ. ಏಕೆಂದರೆ, ನಾಮಪತ್ರ ಸಲ್ಲಿಸಿ ಹೋದ ಶಿವಕುಮಾರ್ ಮತ್ತೆ ಕನಕಪುರದತ್ತ ಮುಖ ಮಾಡಿಲ್ಲ. ಡಿ.ಕೆ. ಸುರೇಶ್ ಚುನಾವಣೆಯ ಉಸ್ತುವಾರಿ ವಹಿಸಿದ್ದಾರೆ. ಡಿಕೆಶಿ ಪತ್ನಿ ಉಷಾ ಸಹ ಹೆಚ್ಚಾಗಿ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಸಹೋದರರಿಬ್ಬರೂ ಇಲ್ಲಿ ಅಭೇದ್ಯ ಕೋಟೆ ನಿರ್ಮಿಸಿಕೊಂಡಿದ್ದು, ಅದನ್ನು ನೆಲಕ್ಕೆ ಉರುಳಿಸುವುದು ಸುಲಭದ ಮಾತಲ್ಲ ಎನ್ನುವ ಅರಿವು ಕಮಲ ಪಾಳಯಕ್ಕೂ ಇದೆ. ಹಳ್ಳಿ–ಹಳ್ಳಿಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪಡೆ ಇದೆ. ಈ ವಿಚಾರದಲ್ಲಿ ಬಿಜೆಪಿ ಕೊಂಚ ಹಿಂದೆ ಉಳಿದಿದೆ.

ಹೈಕಮಾಂಡ್ ಸೂಚನೆ ಮೇರೆಗೆ ಪದ್ಮನಾಭನಗರದ ಜೊತೆಗೆ ಕನಕಪುರದಲ್ಲೂ ಸ್ಪರ್ಧೆ ಮಾಡಿರುವ ಅಶೋಕ ನಿತ್ಯ ಪ್ರಚಾರದ ಮೂಲಕ ಬೆವರು ಹರಿಸುತ್ತಿದ್ದಾರೆ. ಬಿಜೆಪಿ ಪಾಳಯ ಅವರ ಬೆನ್ನಿಗೆ ನಿಂತಿದೆ. ಅರುಣ್ ಸಿಂಗ್, ಸಿ.ಟಿ. ರವಿ, ಬಿ.ಎಲ್. ಸಂತೋಷ್ ಸೇರಿದಂತೆ ಬಿಜೆಪಿ ರಾಜ್ಯ–ರಾಷ್ಟ್ರೀಯ ನಾಯಕರ ದಂಡು ಪ್ರಚಾರ ನಡೆಸಿದೆ.

ಡಿ.ಕೆ. ಸಹೋದರರ ಮೇಲೆ ಇರುವ ಅಕ್ರಮ ಆಸ್ತಿ ಗಳಿಕೆ, ದಬ್ಬಾಳಿಕೆ ಆರೋಪಗಳನ್ನೇ ಅಸ್ತ್ರವಾಗಿಸಿಕೊಂಡು ಬಿಜೆಪಿ ಪ್ರಚಾರ ಮಾಡುತ್ತಿದ್ದು, ಮತದಾರರ ಮನ ಪರಿವರ್ತನೆ ತಮ್ಮ ಪಾಲಿಗೆ ವರವಾಗಲಿದೆ ಎಂದು ನಂಬಿದೆ. ಜೊತೆಗೆ ಕ್ಷೇತ್ರದಲ್ಲಿ ನೊಂದಿರುವ ಜೆಡಿಎಸ್ ಕಾರ್ಯಕರ್ತರೂ ತಮ್ಮ ಬೆನ್ನಿಗೆ ನಿಲ್ಲುತ್ತಾರೆ ಎನ್ನುವ ವಿಶ್ವಾಸದಲ್ಲಿದೆ.





ಹೊಂದಾಣಿಕೆ ರಾಜಕಾರಣದ ಸದ್ದು

ಬಿ.ನಾಗರಾಜು

ಕನಕಪುರದಲ್ಲಿ ಈ ಬಾರಿ ಎರಡು ರಾಷ್ಟ್ರೀಯ ಪಕ್ಷಗಳ ನಡುವಿನ ಕದನವನ್ನು ಮೂಕಪ್ರೇಕ್ಷಕನಂತೆ ನೋಡುತ್ತಿರುವ ಜೆಡಿಎಸ್ ಕ್ಷೇತ್ರದಲ್ಲಿ ಹೆಚ್ಚು ಸದ್ದು ಮಾಡುತ್ತಿಲ್ಲ. ಪಕ್ಷದ ಅಭ್ಯರ್ಥಿಯಾಗಿ ನಾಗರಾಜು ಸ್ಪರ್ಧೆಯಲ್ಲಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ ಸೇರಿದಂತೆ ಯಾರೊಬ್ಬರೂ ಪ್ರಚಾರಕ್ಕೆ ಬಾರದಿರುವುದು ಹೊಂದಾಣಿಕೆ ರಾಜಕೀಯದ ಮುನ್ಸೂಚನೆ ಎಂಬ ಮಾತು ಕೇಳಿಬರುತ್ತಿದೆ.

ಕನಕಪುರ ತಾಲ್ಲೂಕಿನ ಸಾತನೂರು ಕ್ಷೇತ್ರದಿಂದ 1985ರಲ್ಲಿ ಎಚ್‌.ಡಿ. ದೇವೇಗೌಡರು, 1999ರಲ್ಲಿ ಎಚ್‌.ಡಿ. ಕುಮಾರಸ್ವಾಮಿ ಸ್ಪರ್ಧೆ ಮಾಡಿದ್ದರು. ಅಂದಿನಿಂದಲೂ ಇಲ್ಲಿನ ಸಾವಿರಾರು ಕಾರ್ಯಕರ್ತರು ಜೆಡಿಎಸ್‌ನೊಂದಿಗೆ ಭಾವನಾತ್ಮಕ ನಂಟು ಹೊಂದಿದ್ದಾರೆ.

ಮರಾಠ ಸಮುದಾಯಕ್ಕೆ ಸೇರಿದ ಪಿ.ಜಿ.ಆರ್. ಸಿಂಧ್ಯಾ ಜನತಾ ಪರಿವಾರದಿಂದ ಸ್ಪರ್ಧಿಸಿ ಸತತವಾಗಿ ಆರಿಸಿಬಂದ ಇತಿಹಾಸವಿದೆ.

1983ರಲ್ಲಿ ನಡೆದ ಉಪ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆ ಅವರು ಕನಕಪುರದಿಂದ ಗೆದ್ದು ಮುಖ್ಯಮಂತ್ರಿಯಾಗಿದ್ದರು. ಇಲ್ಲಿ ಯಾರೇ ಅಭ್ಯರ್ಥಿಯಾದರೂ ಜೆಡಿಎಸ್ ಚಿಹ್ನೆ ನೋಡಿ ಮತ ಹಾಕುವ 40–50 ಸಾವಿರದಷ್ಟು ಕಾರ್ಯಕರ್ತರು ಇದ್ದಾರೆ. ಈ ಬಾರಿ ಜೆಡಿಎಸ್ ಇಲ್ಲಿ ಎಷ್ಟು ಮತದಾರರನ್ನು ಸೆಳೆಯಲಿದೆ. ಯಾವ ಸ್ಥಾನದಲ್ಲಿ ಇರಲಿದೆ ಎನ್ನುವ ಕುತೂಹಲ ಜನರಿಗೆ ಇದೆ.

ಅಂಕಿ–ಅಂಶ

2,24,956 ಒಟ್ಟು ಮತದಾರರು | 5 ಲಿಂಗತ್ವ ಅಲ್ಪಸಂಖ್ಯಾತರು

1,11,030 ಪುರುಷರು | 1,13,921 ಮಹಿಳೆಯರು

ಪಕ್ಷವಾರು ಮತಗಳಿಕೆ ಪ್ರಮಾಣ

ಪಕ್ಷ	2018	2013	2008
ಕಾಂಗ್ರೆಸ್	1,27,752	1,00,007	68,096
ಜೆಡಿಎಸ್	47,643	68,583	60,917
ಬಿಜೆಪಿ	6273	1807	3340

ಶಿಗ್ಗಾವಿ ಪಟ್ಟಣದಲ್ಲಿ ಗುರುವಾರ ಏರ್ಪಡಿಸಿದ್ದ ಜೆಡಿಎಸ್ ಬೃಹತ್ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಅವರು ನೆರೆದಿದ್ದ ಜನರತ್ತ ಕೈಬೀಸಿದರು. ಜೆಡಿಎಸ್ ಅಭ್ಯರ್ಥಿಗಳಾದ ಶಶಿಧರ ಯಲಿಗಾರ, ಮನೋಹರ ತಹಸೀಲ್ದಾರ್, ಮಂಜುನಾಥ ಗೌಡಶಿವಣ್ಣನವರ ಇದ್ದಾರೆ

ಕಾಂಗ್ರೆಸ್ ಪ್ರಣಾಳಿಕೆ ಪ್ರತಿ ಸುಟ್ಟ ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಜರಂಗ ದಳವನ್ನು ನಿಷೇಧಿಸುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಉಲ್ಲೇಖಿಸಿದ್ದನ್ನು ಖಂಡಿಸಿ ಶಾಸಕ ಕೆ.ಎಸ್. ಈಶ್ವರಪ್ಪ ಅವರು ಗುರುವಾರ ಕಾಂಗ್ರೆಸ್ ಪ್ರಣಾಳಿಕೆಯ ಪ್ರತಿಗೆ ಬೆಂಕಿ ಹಚ್ಚಿ ಸುಟ್ಟರು.

‘ಕಾಂಗ್ರೆಸ್‌ನದ್ದು ಮುಸ್ಲಿಂ ಲೀಗ್‌ನ ಮಹಮ್ಮದ್ ಅಲಿ ಜಿನ್ನಾರ ಪ್ರಣಾಳಿಕೆಯಂತಿದೆ. ರಾಷ್ಟ್ರ ಮತ್ತು ಧರ್ಮ ರಕ್ಷಣೆಯಲ್ಲಿ ನಿರತ ಬಜರಂಗದಳ ನಿಷೇಧಿಸುವುದಾಗಿ ಕಾಂಗ್ರೆಸ್ ಹೇಳಿದೆ. ಇದರಿಂದ ದೇಶ ಭಕ್ತರಿಗೆ ನೋವಾಗಿದ್ದು, ಪ್ರಣಾಳಿಕೆ ಸುಟ್ಟಿರುವೆ’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಸಮರ್ಥಿಸಿಕೊಂಡರು.

‘ಜಾತಿ, ಧರ್ಮದ ಹೆಸರಲ್ಲಿ ದ್ವೇಷ ಬಿತ್ತುವವರ ವಿರುದ್ಧ ಕಠಿಣ ಕ್ರಮದ ಭರವಸೆ ಕಾಂಗ್ರೆಸ್ ನೀಡಿದೆ. ಈ ಹಿಂದೆ ಮುಖ್ಯಮಂತ್ರಿ ಹುದ್ದೆ ಪ್ರಸ್ತಾಪಿಸಿ ಡಿ.ಕೆ. ಶಿವಕುಮಾರ್ ಅವರು, ಒಕ್ಕಲಿಗರ ಮತ್ತು ಸಿದ್ದರಾಮಯ್ಯ ಕುರುಬ ಸಮುದಾಯದ ಬೆಂಬಲ ಕೋರಿದ್ದರು. ಇದು ಜಾತಿ ನಡುವೆ ವಿಷಬೀಜ ಬಿತ್ತಿದ್ದಂತೆ. ಹೀಗಾಗಿ, ಈ ಇಬ್ಬರನ್ನೂ ಜೈಲಿಗೆ ಹಾಕಬೇಕು’ ಎಂದರು.

ಪ್ರಜಾಪ್ರಭುತ್ವಕ್ಕೆ ಅವಮಾನ: ಖರ್ಗೆ

ಕಲಬುರಗಿ: ‘ಬಿಜೆಪಿ ಶಾಸಕ ಈಶ್ವರಪ್ಪ ಅವರು ಕಾಂಗ್ರೆಸ್ ಪ್ರಣಾಳಿಕೆಯ ಪ್ರತಿಯನ್ನು ಸುಟ್ಟು ಹಾಕುವ ಮೂಲಕ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

‘ಪ್ರಣಾಳಿಕೆ ಪ್ರತಿ ಸುಡುವುದು ಸರಿಯಲ್ಲ. ಯಾವುದೇ ಪ್ರಣಾಳಿಕೆ ಇಷ್ಟವಿರಲಿ ಅಥವಾ ಇರದಿರಲಿ, ಅದನ್ನು ಸುಡಬಾರದು. ಜನರಿಗೆ ಕೊಟ್ಟ ಭರವಸೆಗಳ ಯೋಜನೆಗಳ ಪಟ್ಟಿಯ ಪ್ರತಿಯನ್ನು ಸುಟ್ಟು ಹಾಕಿ, ಅವಮಾನಿಸಿದ್ದು ಸರಿಯಲ್ಲ’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಹಿಷ್ಣುತೆ ಮುಖ್ಯ. ಈ ಕೃತ್ಯಕ್ಕೆ ತಕ್ಕ ಉತ್ತರವನ್ನು ಕೆಪಿಸಿಸಿ ಅಧ್ಯಕ್ಷರು, ಪ್ರಣಾಳಿಕೆ ಸಮಿತಿಯ ಪರಮೇಶ್ವರ ಹಾಗೂ ತಂಡದವರು ನೀಡುವರು’ ಎಂದರು.

ಪ್ರಚಾರಕ್ಕೆ ರಂಗು ತುಂಬಿದ ಶಿವರಾಜ್‌ಕುಮಾರ್, ರಮ್ಯಾ, ನಿಶ್ವಿಕಾ

ಮತ್ತೆ ಸಿ.ಎಂ. ಅವಕಾಶ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ನನ್ನನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಮುಖ್ಯಮಂತ್ರಿ ಮಾಡಿದವರು ನೀವು. ಈ ಬಾರಿಯೂ ಅವಕಾಶವಿದೆ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದರೆ ಮರೆತು ದಯಮಾಡಿ ಎಲ್ಲ ಸಮಾಜದವರೂ ಒಟ್ಟಾಗಿ ಬೆಂಬಲಿಸಿ’ ಎಂದು ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಕೋರಿದರು.

ನಂಜನಗೂಡು ತಾಲ್ಲೂಕಿನ ರಾಂಪುರದಲ್ಲಿ ಗುರುವಾರ ರೋಡ್ ಶೋ ನಡೆಸಿ ಮಾತನಾಡಿ, ‘ಲಿಂಗಾಯತ ಸಮಾಜದವರು ಕ್ಷಮಿಸಬೇಕು. ಸಮಯದ ಅಭಾವ ಇರುವುದರಿಂದ ಎಲ್ಲ ಬೀದಿಗಳು, ದೇವಸ್ಥಾನಗಳಿಗೆ ಬರಲಾಗುತ್ತಿಲ್ಲ. ಎರಡು ದಿನವಷ್ಟೇ ಸಮಯವಿದೆ. ಎಲ್ಲ ಕಡೆಗೂ ಪ್ರಚಾರಕ್ಕೆ ಹೋಗಬೇಕಾಗಿದೆ. ನಿಮ್ಮೆಲ್ಲರಿಗೂ ಕೈಮುಗಿಯಲು ಬಂದಿದ್ದೇನೆ. ಸಾಂಕೇತಿಕವಾಗಿ ದಲಿತರ ಬೀದಿಗೆ ಹೋಗಿ ಬಂದಿದ್ದೇನೆ’ ಎಂದರು.

‘ಬಾದಾಮಿ ಬೇಡವೆಂದಾಗ ಹೈಕಮಾಂಡ್ ವರುಣದಲ್ಲಿ ಸ್ಪರ್ಧಿಸಲು ಹೇಳಿದೆ. ನೀವೆಲ್ಲರೂ ಆಶೀರ್ವದಿಸಿದರೆ ರಾಜಕೀಯವಾಗಿ ದೊಡ್ಡ ಶಕ್ತಿಯನ್ನು ಕೊಟ್ಟಂತಾಗುತ್ತದೆ. ಚುನಾವಣೆ ಮುಗಿದ ಮೇಲೆ ಗ್ರಾಮದ ಪಟೇಲರ ಮನೆಗೆ ಊಟಕ್ಕೆ ಬರುತ್ತೇನೆ. ರಾಮದೇವರ ದೇವಸ್ಥಾನವನ್ನು ಅಭಿವೃದ್ಧಿಪಡಿಸುತ್ತೇನೆ’ ಎಂದು ಭರವಸೆ ನೀಡಿದರು.

‘ಬೆಂಗಳೂರಿನಿಂದ ಬಂದು ಇಲ್ಲಿ ಸ್ಪರ್ಧಿಸಿರುವವರಿಗೆ (ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ) ರಾಂಪುರ, ಹದಿನಾರು, ತಾಂಡವಪುರ, ದೂರ ಎಲ್ಲಿದೆ ಎಂಬುದೇ ಗೊತ್ತಿಲ್ಲ. ನೀವು ನಮ್ಮ ಜನ, ನಾನು ನಿಮ್ಮವನು. ಗೆಲ್ಲಿಸಿ ರಾಜಕೀಯವಾಗಿ ರಕ್ಷಣೆ ಕೊಡಬೇಕು. ಜಾತಿ ಮಾಡುವ ಬಿಜೆಪಿಯವರ ಮಾತುಗಳನ್ನು ಕೇಳಬೇಡಿ. ಮನೆಯ ಮಗನನ್ನು ಗೆಲ್ಲಿಸಿ’ ಎಂದು ಕೋರಿದರು.

ತಾರಾ ಮೆರುಗು: ಸಿದ್ದರಾಮಯ್ಯ ಅವರೊಂದಿಗೆ ಚಲನಚಿತ್ರ ನಟ ಶಿವರಾಜ್‌ಕುಮಾರ್, ಅವರ ಪತ್ನಿ, ನಿರ್ಮಾಪಕಿ ಗೀತಾ ಹಾಗೂ ನಿಶ್ವಿಕಾ ನಾಯ್ಡು ಪ್ರಚಾರಕ್ಕೆ ರಂಗು ತುಂಬಿದರು. ವರುಣ ಕ್ಷೇತ್ರದ ಮರಳೂರು, ಗೊದ್ದನಪುರ, ತಾಂಡವಪುರದಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು.

ಕೆಂಪಿಸಿದ್ದನಹುಂಡಿ, ಹುಳಿಮಾವು ಹಾಗೂ ಹದಿನಾರು ಗ್ರಾಮದಲ್ಲಿ ಚಿತ್ರನಟಿ ರಮ್ಯಾ, ಮಾಜಿ ಸಚಿವ ಎಂ.ಆರ್. ಸೀತಾರಾಂ, ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷ ರಾಮಯ್ಯ ಪ್ರಚಾರ ನಡೆಸಿದರು.

ಮೈಸೂರಿನ ವರುಣ ವಿಧಾನಸಭಾ ಕ್ಷೇತ್ರದ ತಾಂಡವಪುರದಲ್ಲಿ ಗುರುವಾರ ನಡೆದ ರೋಡ್ ಶೋನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಮಾತನಾಡಿದರು. ಗೀತಾ ಶಿವರಾಜ್‌ಕುಮಾರ್, ನಟ ಶಿವರಾಜ್‌ಕುಮಾರ್, ನಟಿ ನಿಶ್ವಿಕಾ ನಾಯ್ಡು ಇದ್ದಾರೆ –ಪ್ರಜಾವಾಣಿ ಚಿತ್ರ

ಶಿವರಾಜ್‌ಕುಮಾರ್ ಪ್ರಚಾರ: ಆಕ್ಷೇಪ

ಮೈಸೂರು: ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರ ನಟ ಶಿವರಾಜ್ ಕುಮಾರ್ ಪ್ರಚಾರ ಮಾಡಿದ್ದಕ್ಕೆ ಸಂಸದ ಪ್ರತಾಪ ಸಿಂಹ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್‌ಕುಮಾರ್ ಕುಟುಂಬ ರಾಜಕೀಯ ಸೋಂಕು ಅಂಟಿಸಿಕೊಂಡಿರಲಿಲ್ಲ. ಶಿವಮೊಗ್ಗದಲ್ಲಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಗೀತಾ ಶಿವರಾಜ್‌ಕುಮಾರ್ ಸ್ಪರ್ಧಿಸಿದ್ದರು. ಆಗಲೂ ಶಿವರಾಜ್‌ಕುಮಾರ್ ಪ್ರಚಾರಕ್ಕೆ ಹೋಗಿರಲಿಲ್ಲ’ ಎಂದರು.

‘ಗೀತಾ ರಾಜಕೀಯ ಕುಟುಂಬದಿಂದ ಬಂದಿದ್ದಾರೆ. ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ಪುತ್ರಿ. ಅವರು ಪ್ರಚಾರಕ್ಕೆ ಬಂದರೆ ತಕರಾರಿಲ್ಲ’ ಎಂದರು.

‘ರಾಹುಲ್ ಮಟ್ಟಕ್ಕೆ ಮೋದಿ ಇಳಿಯಬಾರದು’

ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ): ‘ಜೆಡಿಎಸ್‌ಗೆ ಮತ ಹಾಕಿದರೆ, ಕಾಂಗ್ರೆಸ್‌ಗೆ ಹಾಕಿದಂತೆ ಎಂದು ಪ್ರಧಾನಿ ಮೋದಿ ಹೇಳಿರುವುದು ಸರಿಯಲ್ಲ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಆಕ್ಷೇಪಿಸಿದರು.

ಗಂಡಸಿ ಹ್ಯಾಂಡ್‌ಪೋಸ್ಟ್‌ನಲ್ಲಿ ಗುರುವಾರ ಪ್ರಚಾರ ಸಭೆಯಲ್ಲಿ ಮಾತನಾಡಿ, ‘ರಾಹುಲ್ ಗಾಂಧಿ ಅವರ ಮಟ್ಟಕ್ಕೆ ಮೋದಿ ಇಳಿಯಬಾರದಿತ್ತು. ಕಳೆದ ಬಾರಿ ರಾಹುಲ್ ಗಾಂಧಿ ಹೇಳಿದ್ದನ್ನೇ, ಈ ಬಾರಿ ಪ್ರಧಾನಿ ಮೋದಿ ಹೇಳಿರುವುದು ಸರಿಯಲ್ಲ’ ಎಂದರು.

‘ರಾಹುಲ್ ಗಾಂಧಿಗೂ, ಪ್ರಧಾನಿಗೂ ವ್ಯತ್ಯಾಸವಿದೆ. ರಾಹುಲ್ ಗಾಂಧಿ ಯುವಕ. ಆದರೆ, ಮೋದಿ ಅನುಭವಿ ನಾಯಕ. ಅವರಿಂದ ಇಂತಹ ಮಾತು ಬರುತ್ತದೆ ಎಂದು ಯೋಚನೆಯನ್ನೇ ಮಾಡಿರಲಿಲ್ಲ’ ಎಂದರು.

ತುರ್ತು ಭೂಸ್ಪರ್ಶ: ತಾಂತ್ರಿಕ ಸಮಸ್ಯೆ ಉಂಟಾಗಿದ್ದರಿಂದ ದೇವೇಗೌಡ ಅವರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಸಕಲೇಶಪುರ ಕ್ರೀಡಾಂಗಣದಲ್ಲಿ ತುರ್ತು ಭೂ ಸ್ಪರ್ಶ ಮಾಡಿತು. ನಂತರ ಸರಿಪಡಿಸಿಕೊಂಡು ಅದೇ ಹೆಲಿಕಾಪ್ಟರ್‌ನಲ್ಲಿ ಅವರು, ಅರಕಲಗೂಡಿಗೆ ತೆರಳಿದರು.

‘ಸಂವಿಧಾನಬದ್ಧವಾಗಿ ನಡೆದರೆ ಬಜರಂಗದಳ ನಿಷೇಧವಿಲ್ಲ’

ಮಂಗಳೂರು: ‘ಸಂವಿಧಾನದ ಆಶಯಗಳಿಗೆ ಪೂರಕವಾಗಿ ನಡೆದುಕೊಂಡರೆ ಬಜರಂಗ ದಳವನ್ನು ನಿಷೇಧಿಸುವ ಪ್ರಮೇಯ ಎದುರಾಗದು’ ಎಂದು ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಪ್ರಣಾಳಿಕೆಯಲ್ಲಿರುವ ಅಂಶವನ್ನು ಸಮರ್ಥಿಸಿಕೊಂಡರು.

‘ಪಿಎಫ್‌ಐ ಮತ್ತು ಬಜರಂಗದಳಗಳೆರಡನ್ನೂ ನಿಷೇಧಿಸುವ ಪ್ರಸ್ತಾವ ಪ್ರಣಾಳಿಕೆಯಲ್ಲಿದೆ. ಎರಡು ಕೈ ಸೇರದೇ ಚಪ್ಪಾಳೆ ಆಗುವುದಿಲ್ಲ. ಎರಡೂ ಕಡೆಯವರೂ ದ್ವೇಷಾಪರಾಧ ಕೃತ್ಯಗಳಲ್ಲಿ ತೊಡಗುವುದನ್ನು ನಿಲ್ಲಿಸಬೇಕು. ದ್ವೇಷಾಪರಾಧದಲ್ಲಿ ತೊಡಗುವವರಿಗೆ ನಮ್ಮ ಪ್ರಣಾಳಿಕೆಯು ನೋಟಿಸ್ ಇದ್ದಂತೆ’ ಎಂದರು.

ಆಮ್ ಆದ್ಮಿ ಪಾರ್ಟಿ

ಒಂದು ಅವಕಾಶ ಕೇಜ್ರಿವಾಲ್‌ಗೆ

ತಮ್ಮ ಮತ ಪೊರಕೆಗೆ

ಕರ್ನಾಟಕಕ್ಕೆ ಕೇಜ್ರಿವಾಲ್ ಗ್ಯಾರಂಟಿಗಳು

ಮಹಿಳೆಯರಿಗೆ ಕೇಜ್ರಿವಾಲ್‌ರ ಗ್ಯಾರಂಟಿ

ಮಹಿಳೆಯರಿಗೆ ಪ್ರತಿ ತಿಂಗಳು ರೂ 1000 ಸಬಲೀಕರಣ ಭತ್ಯೆ

ಉಚಿತ ಸಿಟಿ ಬಸ್ ಪ್ರಯಾಣ

ಯುವಕರಿಗೆ ಕೇಜ್ರಿವಾಲ್‌ರ ಗ್ಯಾರಂಟಿ

ವರ್ಷಕ್ಕೆ 2 ಲಕ್ಷ ಉದ್ಯೋಗಗಳ ಸೃಷ್ಟಿ

ಯುವ ಜನತೆಗೆ ಉದ್ಯೋಗ ಸಿಗುವವರೆಗೆ ತಿಂಗಳಿಗೆ ರೂ 3000 ನಿರುದ್ಯೋಗ ಭತ್ಯೆ

ರೈತರಿಗೆ ಕೇಜ್ರಿವಾಲ್‌ರ ಗ್ಯಾರಂಟಿ

ರೈತರ ಸಾಲ ಮನ್ನಾ ಹಾಗು ಬೆಂಬಲ ಬೆಲೆ ಖಾತರಿ

ಕೃಷಿಗೆ ದಿನಕ್ಕೆ 12 ಗಂಟೆ ಉಚಿತ ವಿದ್ಯುತ್

ಕಬ್ಬು ಮಾರಿದ ದಿನವೇ ಹಣ ಪಾವತಿ

ಕೇಜ್ರಿವಾಲ್‌ರ ಶಿಕ್ಷಣದ ಗ್ಯಾರಂಟಿ

ದೆಹಲಿಯಂತೆ ಖಾಸಗಿ ಶಾಲೆಗಳಿಗಿಂತ ಉತ್ತಮ ಸರ್ಕಾರಿ ಶಾಲೆಗಳು

ವಿದ್ಯಾರ್ಥಿಗಳಿಗೆ ಉಚಿತ ಸಿಟಿ ಬಸ್ ಪ್ರಯಾಣ

ಖಾಸಗಿ ಶಾಲೆಗಳ ದುಬಾರಿ ಶುಲ್ಕಕ್ಕೆ ಕಡಿವಾಣ

ಆರೋಗ್ಯದ ಕೇಜ್ರಿವಾಲ್‌ರ ಗ್ಯಾರಂಟಿ

ಟೆಸ್ಟ್‌ಗಳು, ಔಷಧಿ, ಚಿಕಿತ್ಸೆ ಎಲ್ಲವೂ ಉಚಿತ

ನಿಮ್ಮ ಮನೆಯ ಹತ್ತಿರದಲ್ಲೇ ದೆಹಲಿ ಮಾದರಿ ಮೊಹಲ್ಲಾ ಕ್ಲಿನಿಕ್

ಪೃಥ್ವಿ ರೆಡ್ಡಿ
ರಾಜ್ಯಾಧ್ಯಕ್ಷರು, ಕರ್ನಾಟಕ

ಡಾ. ಮುಖ್ಯಮಂತ್ರಿ ಚಂದ್ರು
ಅಧ್ಯಕ್ಷರು, ಪ್ರಚಾರ ಮತ್ತು ಜನಸಂಪರ್ಕ

‘ಪೊರಕೆ’ಗೆ ತಮ್ಮ ಮತ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಯಾರು ಬದಲಾಗಲು ಇಚ್ಛಿಸುವುದಿಲ್ಲವೋ ಅಂತಹವರನ್ನು ಅವರ ಪಾಡಿಗೆ ಬಿಟ್ಟುಬಿಡಿ, ಅವರು ನಿದ್ರೆ ಮಾಡಿಕೊಂಡೇ ಇರಲಿ. **-ರೂಮಿ**

ವಾಕ್ ಸ್ವಾತಂತ್ರ್ಯ ದಮನಕ್ಕೆ ಹೊಸ ಹೊಸ ಮಾರ್ಗ

ವಾಕ್ ಸ್ವಾತಂತ್ರ್ಯದ ಹಕ್ಕು ಚಲಾವಣೆಗೆ ಸಂವಿಧಾನವು ಸ್ವಲ್ಪ ಮಟ್ಟಿನ ನಿರ್ಬಂಧಗಳನ್ನು ವಿಧಿಸಿದೆ. ಆದರೆ, ಇತ್ತೀಚಿನ ದಿನಗಳಲ್ಲಿ, ವಾಕ್ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳಿಗೆ ಯಾವ ಮಿತಿಯೂ ಇಲ್ಲದಂತಾಗಿದೆ. ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್ ಅವರು ಬರೆದ ಲೇಖನವೊಂದರ ಕುರಿತು ವಿವರಣೆ ಕೊಡುವಂತೆ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ನೋಟಿಸ್ ನೀಡಿದ್ದಾರೆ. ಧನಕರ್ ಅವರ ಈ ನಡವಳಿಕೆಯನ್ನು ನೋಡಿದರೆ, ವಾಕ್ ಸ್ವಾತಂತ್ರ್ಯಕ್ಕೆ ಹೇರುವ ನಿರ್ಬಂಧಗಳಿಗೆ ಮಿತಿಯೇ ಇಲ್ಲ ಎಂಬ ತೀರ್ಮಾನಕ್ಕೆ ನಾವು ಬರಬಹುದಾಗಿದೆ. ಬ್ರಿಟ್ಟಾಸ್ ಅವರು ಫೆಬ್ರುವರಿ 20ರಂದು ಬರೆದ ಲೇಖನವೊಂದರಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯೊಂದನ್ನು ವಿಮರ್ಶಾತ್ಮಕ-ವಾಗಿ ವಿಶ್ಲೇಷಿಸಿದ್ದರು. 'ಕೇರಳವು ನಿಮ್ಮ ಹತ್ತಿರದಲ್ಲಿದೆ, ಹಾಗಾಗಿ ಕರ್ನಾಟಕವನ್ನು ಬಿಜೆಪಿ ಮಾತ್ರ ರಕ್ಷಿಸಬಲ್ಲದು' ಎಂಬರ್ಥದಲ್ಲಿ ಶಾ ಮಂಗಳೂರಿನಲ್ಲಿ ಹೇಳಿದ್ದರು. ಕರ್ನಾಟಕದ ಸುರಕ್ಷತೆಗೆ ಕೇರಳವು ಬೆದರಿಕೆ ಒಡ್ಡಬಹುದು ಎಂಬ ಅರ್ಥದಲ್ಲಿ ಶಾ ನೀಡಿದ್ದ ಹೇಳಿಕೆಯನ್ನು ಬ್ರಿಟ್ಟಾಸ್ ಅವರು ಟೀಕಿಸಿದ್ದರು.

ಸಂಸತ್ ಸದಸ್ಯರೇ ತಮ್ಮ ವಾಕ್ ಸ್ವಾತಂತ್ರ್ಯದ ಹಕ್ಕು ಚಲಾಯಿಸಲು ಸಾಧ್ಯವಾಗುತ್ತಿಲ್ಲ ಎಂದಾದರೆ, ಸಾಮಾನ್ಯ ಪೌರರ ಪಾಡೇನು?

ಶಾ ಅವರನ್ನು ಟೀಕಿಸಿರುವುದು ದೇಶದ್ರೋಹವಾಗಿದ್ದು, ಬ್ರಿಟ್ಟಾಸ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಪದಾಧಿಕಾರಿಯೊಬ್ಬರು ಧನಕರ್ ಅವರನ್ನು ಕೋರಿದ್ದರು.

ಅಮಿತ್ ಶಾ ಅವರ ಹೇಳಿಕೆಯನ್ನು ಟೀಕಿಸುವ ಹಕ್ಕು ಬ್ರಿಟ್ಟಾಸ್ ಅವರಿಗೆ ಇದೆ. ಸಾಂವಿಧಾನಿಕ ಹುದ್ದೆಯಲ್ಲಿರುವ ಧನಕರ್ ಅವರಿಗೆ ಪೌರರ ಹಕ್ಕುಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ಇದೆ. ಅಂತಹ ಹೊಣೆಗಾರಿಕೆ ಇರುವ ವ್ಯಕ್ತಿಯು ಬ್ರಿಟ್ಟಾಸ್ ಅವರಿಗೆ ನೋಟಿಸ್ ನೀಡಿರುವುದು ಅಚ್ಚರಿದಾಯಕ. ಬ್ರಿಟ್ಟಾಸ್ ಅವರು ಧನಕರ್ ಅವರನ್ನು ಭೇಟಿಯಾಗಿ ವಿವರಣೆಯನ್ನು ಮೌಖಿಕವಾಗಿ ಕೊಟ್ಟಿದ್ದಾರೆ. ಆದರೆ, ವಿವರಣೆಯನ್ನು ಲಿಖಿತವಾಗಿ ನೀಡಬೇಕು ಎಂದು ಅವರಿಗೆ ಸೂಚಿಸಲಾಗಿದೆ. ರಾಜ್ಯಸಭೆಯ ಸದಸ್ಯರೊಬ್ಬರ ಸದನದ ಹೊರಗಿನ ವರ್ತನೆಯ ಕುರಿತು ಬಂದ ದೂರಿನ ಆಧಾರದಲ್ಲಿ ಕ್ರಮ ಕೈಗೊಳ್ಳಲು ಸಭಾಪತಿಗೆ ಇರುವ ಅಧಿಕಾರ ಏನು ಎಂಬುದು ಗೊತ್ತಿಲ್ಲ. ಎಲ್ಲ ಘಟನಾವಳಿಗಳನ್ನು ಗಮನಿಸಿದರೆ, ಶಾ ಅವರು ನೀಡಿದ ಹೇಳಿಕೆಯು ತಮ್ಮ ಬೆಂಬಲಿಗರಿಗೆ ನೀಡಿದ ಕುಮ್ಮಕ್ಕು ಎಂಬುದು ತಿಳಿಯುತ್ತದೆ. ಹಾಗಾಗಿ ಶಾ ಅವರ ನಡವಳಿಕೆಯು ಅನುಚಿತವಾಗಿದೆಯೇ ಹೊರತು ಬ್ರಿಟ್ಟಾಸ್ ಅವರ ಲೇಖನದಲ್ಲಿ ನ್ಯಾಯಬಾಹಿರವಾದುದು ಏನೂ ಇಲ್ಲ. ಬ್ರಿಟ್ಟಾಸ್ ಅವರು ಬರೆದ ಲೇಖನವು ದೇಶದ್ರೋಹದಿಂದ ಕೂಡಿದೆ ಎಂದು ಯಾರೋ ಒಬ್ಬ ವ್ಯಕ್ತಿಗೆ ಅನಿಸುವುದೇ ಅತಿರೇಕ ಮತ್ತು ಅಂತಹ ಕೋರಿಕೆಯ ಆಧಾರದಲ್ಲಿ ಸಭಾಪತಿ ಕ್ರಮ ಕೈಗೊಂಡಿದ್ದಾರೆ ಎಂಬುದು ಅಚ್ಚರಿ ಮೂಡಿಸಿದೆ. ಕೆಟ್ಟ ನಿದರ್ಶನಗಳು ಪದೇ ಪದೇ ಘಟಿಸುತ್ತಿದ್ದು, ಅದರ ನಡುವೆಯೇ ಇದು ಮತ್ತೊಂದು ಕೆಟ್ಟ ನಿದರ್ಶನವಾಗಿದೆ.

ವಾಕ್ ಸ್ವಾತಂತ್ರ್ಯದ ಹಕ್ಕಿಗೆ ಇಲ್ಲಿ ಅಪಾಯ ಎದುರಾಗಿದೆ. ವಾಕ್ ಸ್ವಾತಂತ್ರ್ಯ ದಮನಕ್ಕೆ ಹೊಸ ಹೊಸ ಮಾರ್ಗಗಳನ್ನು ಕಂಡುಕೊಳ್ಳಲಾಗಿದೆ ಎಂಬುದರತ್ತ ಈ ವಿದ್ಯಮಾನವು ಬೆಳಕು ಚೆಲ್ಲುತ್ತದೆ. ಸದಸ್ಯರ ಹಕ್ಕುಗಳನ್ನು ರಕ್ಷಿಸುವುದು ಸಭಾಪತಿಯ ಜವಾಬ್ದಾರಿ. ಧನಕರ್ ಅವರು ಯಾವ ನಿರ್ಧಾರ ಕೈಗೊಳ್ಳಲಿದ್ದಾರೆ ಎಂಬುದು ಗೊತ್ತಿಲ್ಲ. ಹಾಗಿದ್ದರೂ ಬ್ರಿಟ್ಟಾಸ್ ಅವರು ಬರೆದ ಲೇಖನದ ಕುರಿತು ಪ್ರಶ್ನೆ ಎತ್ತಿದ್ದು ಮತ್ತು ಅವರಿಂದ ವಿವರಣೆ ಕೇಳಿರುವುದು ಈ ವಿಚಾರದಲ್ಲಿ ಧನಕರ್ ಅವರು ಸಂಕುಚಿತ ಮನೋಭಾವ ಹೊಂದಿದ್ದಾರೆ ಎಂಬುದನ್ನು ಹೇಳುತ್ತದೆ. ಸರ್ಕಾರ ಮತ್ತು ಅದರ ನೀತಿಗಳನ್ನು ಸದನದೊಳಗೆ ಸದಸ್ಯರು ಟೀಕಿಸಲು ಸಾಧ್ಯವಾಗುತ್ತಿಲ್ಲ. ಈಗ, ಅವರು ಸದನದ ಹೊರಗೆ ವ್ಯಕ್ತಪಡಿಸಿದ ನಿಲುವುಗಳನ್ನು ಕೂಡ ಪ್ರಶ್ನಿಸಲಾಗುತ್ತಿದೆ. ಸಂಸತ್ ಸದಸ್ಯರೇ ತಮ್ಮ ವಾಕ್ ಸ್ವಾತಂತ್ರ್ಯದ ಹಕ್ಕು ಚಲಾಯಿಸಲು ಸಾಧ್ಯವಾಗುತ್ತಿಲ್ಲ ಎಂದಾದರೆ, ಸಾಮಾನ್ಯ ಪೌರರ ಪಾಡೇನು?

ದಿನದ ಟ್ವೀಟ್

ಮನದಾಳದ ದನಿಗೆ ಕಿವಿಗೊಡಿ

830 ಕೋಟಿ ಮೌಲ್ಯದ ನಿಮ್ಮ 'ಮನ್ ಕೀ ಬಾತ್'ನ 100 ಕಂತುಗಳನ್ನು ನಾವು ಕೇಳಿಸಿಕೊಂಡಿದ್ದೇವೆ. ನಮ್ಮ ಚಾಂಪಿಯನ್ ಅಥ್ಲೀಟ್‌ಗಳ 'ಮನ್ ಕೀ ಬಾತ್' ಅನ್ನು ದಯಮಾಡಿ ನೀವು ಕೇಳಿಸಿಕೊಳ್ಳಿ.

ವೈ.ಸತೀಶ್ ರೆಡ್ಡಿ, ಅಧ್ಯಕ್ಷ,
ತೆಲಂಗಾಣ ರಾಜ್ಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ

ಕಿಡಿನುಡಿ

ಉತ್ತರಪ್ರದೇಶದಲ್ಲಿ ವಿಶೇಷ ಕಾರ್ಯಪಡೆಯೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಭೂಗತ ಪಾತಕಿ ಅನಿಲ್ ದುಜಾನ ಹತ್ಯೆಗೀಡಾಗಿದ್ದಾನೆ. ಕಾನೂನುಬದ್ಧ ವಿಚಾರಣಾ ಪ್ರಕ್ರಿಯೆ ನಡೆಯುವುದಕ್ಕೆ ಬದಲಾಗಿ ಏಕೆ ಇಲ್ಲಿ ಎನ್‌ಕೌಂಟರ್‌ಗಳು ನಡೆಯುತ್ತಿವೆ? ತಮ್ಮ ರಕ್ತಪಿಪಾಸುತನವನ್ನು ತಣಿಸಿಕೊಳ್ಳಲು ಮಾನ್ಯ ಮುಖ್ಯಮಂತ್ರಿ ಉತ್ತರಪ್ರದೇಶ ಪೊಲೀಸರಿಗೆ ಯಾವ ರೀತಿಯ ನಿರ್ದೇಶನ ನೀಡುತ್ತಿರಬಹುದು? ನ್ಯಾಯಾಂಗ ವಿಧಿಸುವ ಮರಣದಂಡನೆಗೆ ಹೊರತಾದ ಹತ್ಯೆಗಳಿಗೆ ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ ಅವಕಾಶ ಇರಬಾರದು.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಮಂಗಳವಾರ, 5-5-1998

• **ಕಲ್ಬುರ್ಗಿ: ಕಳಪೆ ಕ್ರಿಮಿನಾಶಕ ಜಾಲ ಪತ್ತೆ**

ಕಲ್ಬುರ್ಗಿ, ಮೇ 4– ಉತ್ತರ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ ಸರಮಾಲೆ ಮುಂದುವರಿಯುತ್ತಿರುವಾಗಲೇ ಕಲ್ಬುರ್ಗಿಯಲ್ಲಿ ಜಾಲ ಹೊಂದಿರುವ 33 ಕಳಪೆ ಕ್ರಿಮಿನಾಶಕ ಕಂಪನಿಗಳನ್ನು ಪತ್ತೆ ಹಚ್ಚಲಾಗಿದೆ. ಈ ಕಂಪನಿಗಳ ವಿರುದ್ಧ ನ್ಯಾಯಾಲಯದಲ್ಲಿ 50 ಮೊಕದ್ದಮೆಗಳನ್ನು ಹೂಡಲಾಗಿದೆ.

ಉತ್ತರ ಕರ್ನಾಟಕದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೆ ಕಳಪೆ ಕ್ರಿಮಿನಾಶಕಗಳು ಮುಖ್ಯ ಕಾರಣ ಎಂಬುದು ವಿವಿಧ ತನಿಖೆಯ ವೇಳೆ ಬಯಲಿಗೆ ಬರುತ್ತಿರುವಂತೆಯೇ ಜಿಲ್ಲೆಯ ಕೃಷಿ ಇಲಾಖೆ ಮಿಂಚಿನ ಕಾರ್ಯಾಚರಣೆ ನಡೆಸಿ 33 ಕಂಪನಿಗಳನ್ನು ಇದುವರೆಗೂ ಪತ್ತೆ ಹಚ್ಚಿದ್ದು ಇನ್ನೂ ಮೊಕದ್ದಮೆ ಹೂಡುವ ಕೆಲಸ ನಡೆಯುತ್ತಲೇ ಇದೆ. ಇದರಿಂದ ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ ಹರಡಿರುವ ಕಳಪೆ ಕ್ರಿಮಿನಾಶಕ ಕಂಪನಿಗಳ ಜಾಲ ಬೆಳಕಿಗೆ ಬಂದಿದೆ.

• **ಹಿರಿಯೂರಿನಲ್ಲಿ ಗುಂಡು ಹಾರಿಸಿ ಡಕಾಯಿತಿ**

ಹಿರಿಯೂರು, ಮೇ 4– ಬಂದೂಕು ಮತ್ತು ಸ್ಫೋಟಕ ಹೊಂದಿದ್ದ ಏಳು ಡಕಾಯಿತರ ಗುಂಪು ಇಂದು ಬೆಳಗಿನ ಜಾವ ಹಿರಿಯೂರು ಪಟ್ಟಣದ ಮುಖ್ಯ ರಸ್ತೆಯಲ್ಲಿರುವ 3 ಮನೆಗಳ ಮೇಲೆ ಗುಂಡು ಹಾರಿಸಿ ಹಲವರನ್ನು ಗಾಯಗೊಳಿಸಿ, 70 ಸಾವಿರಕ್ಕೂ ಹೆಚ್ಚು ಬೆಲೆಯ ಚಿನ್ನಾಭರಣ ದೋಚಿದೆ.

ತಮ್ಮನ್ನು ಅಟ್ಟಿಸಿಕೊಂಡು ಬಂದ ಜನರನ್ನು ಬೆದರಿಸಲು ಡಕಾಯಿತರು ಮನಬಂದಂತೆ ಗುಂಡು ಹಾರಿಸಿ ಕತ್ತಲೆಯಲ್ಲಿ ಪರಾರಿಯಾಗಿದ್ದಾರೆ.

ಡಕಾಯಿತರ ಹಲ್ಲೆ ಮತ್ತು ಗುಂಡಿನ ದಾಳಿಯಲ್ಲಿ 7 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ನಾಲ್ವರನ್ನು ಬೆಂಗಳೂರಿನ ಆಸ್ಪತ್ರೆಗೆ ಸೇರಿಸಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 5-5-1973

• **ಭೇದಭಾವ ತೊರೆದು ಬಡತನದ ವಿರುದ್ಧ ಸಂಘಟಿತ ಹೋರಾಟಕ್ಕೆ ಕರೆ**

ಮೈಸೂರು, ಮೇ 4– ಧರ್ಮ, ಭಾಷೆ ಮೊದಲಾದ ಭೇದಗಳನ್ನು ಮರೆತು ಬಡತನದ ವಿರುದ್ಧ ಹೋರಾಟ ನಡೆಸಲು ಒಗ್ಗಟ್ಟಿನಿಂದ ಮುನ್ನುಗ್ಗಲು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಜನತೆಗೆ ಕರೆ ನೀಡಿದರು.

ಬ್ರಿಟಿಷರ ವಿರುದ್ಧ ಹೋರಾಡುತ್ತಾ ಅಸುನೀಗಿದ ಟಿಪ್ಪು ಸುಲ್ತಾನನ ನೆನಪಿನ ಅಂಗವಾಗಿ ಶ್ರೀರಂಗಪಟ್ಟಣದ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಪ್ರಧಾನಿಯವರು ಮಾತನಾಡಿದರು.

• **ಶೋಷಕ ವರ್ಗಕ್ಕಿಂತ ಜನಸಾಮಾನ್ಯರು, ರೈತರ ಹಿತದೃಷ್ಟಿ ಮುಖ್ಯ: ಡಿ.ಪಿ.ಧರ್**

ಬೆಂಗಳೂರು, ಮೇ 4– ಯಾವುದೇ ನೀತಿ ನಿಯಮ ಇಲ್ಲದ ಕಾಳಸಂತೆಕೋರರು ಮತ್ತು ಅಕ್ರಮ ದಾಸ್ತಾನುಕಾರರ ಕೃಪಾಕಟಾಕ್ಷಕ್ಕೆ ಬಿಟ್ಟು ಸುಮ್ಮನೆ ಕೂರಬೇಕೆ ಅಥವಾ ಈ ಪರಾವಲಂಬಿ ಜೀವಿಗಳ ಶೋಷಣೆಯನ್ನು ಅಂತ್ಯಗೊಳಿಸಬೇಕೆ ಎಂಬ ಸವಾಲನ್ನು ಎದುರಿಸುವುದೇ ಧಾನ್ಯದ ಸಗಟು ವ್ಯಾಪಾರ ರಾಷ್ಟ್ರೀಕರಣ ನೀತಿಯ ಸತ್ವವಾಗಿದೆ ಎಂದು ಯೋಜನಾ ಸಚಿವ ಶ್ರೀ ಡಿ.ಪಿ.ಧರ್ ಅವರು ಇಂದು ಇಲ್ಲಿ ವಿವರಿಸಿದರು.

ಲಾಲ್ಬಾಗ್ ಗಾಜಿನ ಮನೆಯಲ್ಲಿ ದಕ್ಷಿಣ ವಲಯ ಕಾಂಗ್ರೆಸ್ ಸಮ್ಮೇಳನದಲ್ಲಿ ಮಾತನಾಡಿದ ಅವರು, ಐದನೇ ಯೋಜನೆಯ ಮಾರ್ಗಸೂಚಿಯನ್ನು ವಿವರವಾಗಿ ಪ್ರಸ್ತಾಪಿಸಿ, ಆಹಾರ ರಂಗದಲ್ಲಿ ಜನಸಾಮಾನ್ಯರು ಹಾಗೂ ಉತ್ಪಾದನೆ ಮಾಡುವ ರೈತರ ಹಿತದೃಷ್ಟಿ ಅಲ್ಪ ಸಂಖ್ಯಾತರಾದ ಶೋಷಕ ವರ್ಗದವರ ಹಿತಕ್ಕಿಂತ ಮುಖ್ಯ ಎಂದರು.

ಪ್ರಬುದ್ಧ ಜನತಂತ್ರ ವ್ಯವಸ್ಥೆಗಳಲ್ಲಿ ಇರುವವರಿಗೆ ಅವರನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಆಗುತ್ತಿಲ್ಲ

ಯಾರ ಹಾದಿಯಲ್ಲಿ ನಡೆವರು ಮೋದಿ?

ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಪ್ರಧಾನಿ ನರೇಂದ್ರ ಮೋದಿ ಅವರು ಒಂದೆಡೆ, ತಮಗೆ ಎಂ.ಎಸ್. ಗೋಳವಲಕರ್ ಅವರ ಕುರಿತು ಇರುವ ಅಭಿಮಾನವನ್ನು ತೋರಿಸುತ್ತಾರೆ. ಇನ್ನೊಂದೆಡೆ, ಮಹಾತ್ಮ ಗಾಂಧಿ ಕುರಿತ ಪ್ರೀತಿಯನ್ನು ತೋರಿಸುತ್ತಾರೆ. ಇದೊಂದು ಬಹಳ ದೊಡ್ಡ ವಿರೋಧಾಭಾಸ. ಮಹಾತ್ಮ ಮತ್ತು ಗೋಳವಲಕರ್ ಬಹಳ ಭಿನ್ನ ನಾಯಕರು. ಮೋದಿ ಅವರ ಯೌವನದ ದಿನಗಳನ್ನು ರೂಪಿಸಿದ್ದು ಆರ್‌ಎಸ್‌ಎಸ್. ಅವರು ಆರ್‌ಎಸ್‌ಎಸ್ ಪ್ರಚಾರಕರಾಗಿದ್ದರು. ಆರ್‌ಎಸ್‌ಎಸ್ ಅನ್ನು ರಾಷ್ಟ್ರ ಮಟ್ಟದಲ್ಲಿ ಶಕ್ತಿಶಾಲಿಯಾಗಿ ಬೆಳೆಸಿದ, ಅದರ ಎರಡನೆಯ ಸರಸಂಘಚಾಲಕರಾಗಿದ್ದ ಗೋಳವಲಕರ್ ಅವರು ಮೋದಿ ಅವರ ಮೇಲೆ ಬಹಳ ಪ್ರಭಾವ ಬೀರಿದ್ದಾರೆ. ಮೋದಿ ಅವರು ಆರ್‌ಎಸ್‌ಎಸ್‌ನಲ್ಲಿ ಇದ್ದಾಗ, ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ಪ್ರಧಾನಿಯಾದ ನಂತರದಲ್ಲಿ ಗೋಳವಲಕರ್ ಅವರ ಹಿಂದುತ್ವ ತಾತ್ವಿಕತೆಗೆ ಬದ್ಧತೆ ತೋರಿದ್ದರು.

ಕುತೂಹಲದ ಹಾಗೂ ವ್ಯಂಗ್ಯದ ವಿಷಯವೊಂದು ಇಲ್ಲಿದೆ. ಹಿಂದುತ್ವ ಮತ್ತು ಹಿಂದೂ ರಾಷ್ಟ್ರದ ಮೂಲ ಪರಿಕಲ್ಪನೆಯನ್ನು ಕಟ್ಟಿದ ವಿ.ಡಿ. ಸಾವರ್ಕರ್ ಅವರಿಂದ ಗೋಳವಲಕರ್ ಪ್ರಭಾವಿತರಾಗಿದ್ದರು. ಸಾವರ್ಕರ್ ನಾಸ್ತಿಕರಾಗಿದ್ದರು. ಅವರು ಆರ್‌ಎಸ್‌ಎಸ್ ಸದಸ್ಯರಾಗಿರಲಿಲ್ಲ, ಹಿಂದೂ ಮಹಾಸಭಾ ಸದಸ್ಯರಾಗಿದ್ದರು. ಇಸ್ಲಾಮಿಕ್ ಮೂಲಭೂತವಾದದ ಬೆಳವಣಿಗೆ; ನೆರೆ ದೇಶಗಳು, ಮಧ್ಯಪ್ರಾಚ್ಯ ಹಾಗೂ ಉತ್ತರ ಆಫ್ರಿಕಾ-ದಲ್ಲಿನ ಸಾಮ್ರಾಟರನ್ನು ಉರುಳಿಸಿ ಅಲ್ಲಿ ಇಸ್ಲಾಮಿಕ್ ಸಾಮ್ರಾಜ್ಯಗಳು ತಲೆ ಎತ್ತಿದ್ದು, ಕಾಂಗ್ರೆಸ್ ನೇತೃತ್ವದಲ್ಲಿ ಹಲವು ಪಕ್ಷಗಳು ಮತಕ್ಕಾಗಿ ಅಲ್ಪಸಂಖ್ಯಾತರನ್ನು ತುಷ್ಟೀಕರಿಸಿದ್ದು ಆರ್‌ಎಸ್‌ಎಸ್‌ಗೆ, ತನ್ನ ಉದ್ದೇಶ ಸಾಧನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂಗಳನ್ನು ಒಗ್ಗೂಡಿಸಲು ನೆರವು ನೀಡಿದವು. ಬಹುಸಂಖ್ಯಾತ ಸಮುದಾಯವು ಅಲ್ಪಸಂಖ್ಯಾತರಿಂದ, ಅದರಲ್ಲೂ ಮುಖ್ಯವಾಗಿ ಇಸ್ಲಾಂನಿಂದ ಬೆದರಿಕೆ ಎದುರಿಸುತ್ತಿದೆ ಎಂಬ ವಾದವು ಹಲವರಿಗೆ ಸರಿಯೆನಿಸಿತು. ಇದು ಬಿಜೆಪಿಗೆ ಕೇಂದ್ರದಲ್ಲಿ ಹಾಗೂ ಹಲವು ರಾಜ್ಯಗಳಲ್ಲಿ ಅಧಿಕಾರ ಹಿಡಿಯಲು ನೆರವಾಯಿತು.

ಮೋದಿ ಅವರು ಗೋಳವಲಕರ್ ಅವರ ಸಿದ್ಧಾಂತವನ್ನು ನಂಬುತ್ತಾರೆ, ಸಾವರ್ಕರ್ ಅವರನ್ನು ಆರಾಧಿಸುತ್ತಾರೆ. ಅದೇ ಹೊತ್ತಿನಲ್ಲಿ ಮಹಾತ್ಮ ಗಾಂಧಿ ಅವರನ್ನೂ ನೆನೆಯುತ್ತಾರೆ. ಗಾಂಧೀಜಿ ನೀಡಿದ ಸಂದೇಶವು ಗೋಳವಲಕರ್ ಹಾಗೂ ಸಾವರ್ಕರ್ ನಿಲುವುಗಳಿಗೆ ಹೊಂದಿಕೆಯಾಗುವುದೇ ಇಲ್ಲ. ಗೋಳವಲಕರ್ ಪಾಲಿಗೆ, ದೇವರ ಎದುರು ಎಲ್ಲರೂ ಸಮಾನರಾದರೂ, ಕಾನೂನಿನ ಮುಂದೆ ಎಲ್ಲರೂ ಸಮಾನರಲ್ಲ. ಹಿಂದೂ ಹಿರಿಮೆಯು ಸಂಘದ ಪಾಲಿಗೆ ಮೂಲ ನಂಬಿಕೆ. ಗಾಂಧೀಜಿಗೆ ಎಲ್ಲ ಭಾರತೀಯರು, ಎಲ್ಲ ಮನುಷ್ಯರು ಕಾನೂನು ಮತ್ತು ದೇವರ ಎದುರು ಸಮಾನರು.

ಗಾಂಧೀಜಿ ಪಾಲಿಗೆ ಅಹಿಂಸೆಯೇ ಉಸಿರು. ಸಾವರ್ಕರ್ ಅವರಲ್ಲಿ ಹಿಂಸೆಗೆ ಸಮರ್ಥನೆಯಿತ್ತು. ಅಹಿಂಸೆಯು ನಮಗೆ ಸ್ವಾತಂತ್ರ್ಯ ತಂದುಕೊಡುವು-ದಿಲ್ಲ ಎಂದು ಅವರು ಹೇಳಿದ್ದರು ಕೂಡ. ಮೋದಿ ಅವರು ಮಿಶ್ರ ಸಂದೇಶಗಳನ್ನು ರವಾನಿಸುವಲ್ಲಿ ಸಿದ್ಧಹಸ್ತರು. ಅವರು ಗೋಳವಲಕರ್ ಮತ್ತು ಸಾವರ್ಕರ್ ಅವರ ಸಂದೇಶಗಳನ್ನು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮತ್ತು ಚುನಾವಣಾ ರ್‍ಯಾಲಿಗಳಲ್ಲಿ ಉತ್ಸಾಹದಿಂದ ಹೇಳುತ್ತಾರೆ. ಅದೇ ರೀತಿ, ಗಾಂಧೀಜಿಯ ಸಾಬರಮತಿ ಆಶ್ರಮವನ್ನು ವಿದೇಶಗಳ ಮುಖ್ಯಸ್ಥರಿಗೆ ಉತ್ಸಾಹದಿಂದ ತೋರಿಸುತ್ತಾರೆ. ಸಾವರ್ಕರ್ ಅವರ ಭಾವಚಿತ್ರವನ್ನು ಸಂಸತ್ತಿನಲ್ಲಿ ಹೆಮ್ಮೆಯಿಂದ ಅನಾವರಣ ಮಾಡುತ್ತಾರೆ. ರಾಜ್‌ಘಾಟ್‌ನಲ್ಲಿರುವ ಮಹಾತ್ಮನ ಸಮಾಧಿಗೆ ಗೌರವ ಸಲ್ಲಿಸುತ್ತಾರೆ. ಗಾಂಧೀಜಿ ಜಾಗತಿಕ ಐಕಾನ್ ಎಂಬುದು ಅವರಿಗೆ ಗೊತ್ತು.

ಮೋದಿ ಅವರಲ್ಲಿ ವಿರೋಧಾಭಾಸಗಳು ಹಲವಿವೆ. ಆಧುನಿಕ ಮಾರ್ಕೆಟಿಂಗ್ ತಂತ್ರಗಾರಿಕೆಗಳಲ್ಲಿ ಅವರು ತರಬೇತಿ ಪಡೆದವರಲ್ಲ. ಆದರೆ, ಜನಸಮೂಹದ ಮನಸ್ಸನ್ನು ಸೂರೆಗೈಯುವುದರಲ್ಲಿ ಅವರು ಅದ್ಭುತ ಶಕ್ತಿ ಹೊಂದಿದ್ದಾರೆ. ಗೋಳವಲಕರ್ ಅವರನ್ನು ಅಪ್ಪಿಕೊಳ್ಳುತ್ತಲೇ ಮೋದಿ ಅವರು ಭಾರತದಲ್ಲಿನ ಸ್ವಚ್ಛತೆಯ ಕೊರತೆಯು, ಇಲ್ಲಿನ ಬಯಲು ಮಲವಿಸರ್ಜನೆಯು ರಾಷ್ಟ್ರೀಯ ಅವಮಾನದ ರೂಪದಲ್ಲಿ ಇವೆ ಎಂಬುದನ್ನು ಅರ್ಥ ಮಾಡಿಕೊಂಡರು. ಸ್ವಚ್ಛ ಭಾರತ ಅಭಿಯಾನದ ಪ್ರಚಾರಕ್ಕೆ ಅವರು ಆಯ್ಕೆ ಮಾಡಿಕೊಂಡಿದ್ದು ಗಾಂಧೀಜಿ ಹೆಸರನ್ನು. ಗಾಂಧೀಜಿಗೆ ಸ್ವಚ್ಛತೆಯೇ ದೇವರ ಉಪಾಸನೆಗೆ ಸಮವಾಗಿತ್ತು. ಮೋದಿ ಅವರಲ್ಲಿ ಇನ್ನೂ ಹಲವು ವಿರೋಧಾಭಾಸಗಳು ಇವೆ. ಅವು ಕುತೂಹಲ ಹುಟ್ಟಿಸುವಂತೆ ಇವೆ.

ಮೋದಿ ಅವರು ಬಹಳ ಆಧುನಿಕ ಮನುಷ್ಯ. ಹಾಗೆಯೇ ಅವರಲ್ಲಿ ಮೂಢನಂಬಿಕೆಗಳೂ ಇವೆ. ಸೌರಶಕ್ತಿ, ರಫೇಲ್ ಯುದ್ಧವಿಮಾನ ಮತ್ತು ಡಿಜಿಟಲ್ ಇಂಡಿಯಾ ಬಗ್ಗೆ ಪ್ರಚಾರ ಮಾಡುತ್ತಲೇ ಅವರು ಕೋವಿಡ್‌ಗೆ ಕಾರಣವಾಗುವ ವೈರಾಣುವನ್ನು ಹೊಡೆದೋಡಿಸಲು ಶಂಖ ಊದುವಂತೆ, ಜಾಗಟೆ ಬಾರಿಸುವಂತೆ ಜನರಿಗೆ ಕರೆ ನೀಡುತ್ತಾರೆ ಕೂಡ. ಭಾರತವು ಜಗತ್ತಿನಲ್ಲಿ ಅತಿದೊಡ್ಡ ಲಸಿಕೆ ಉತ್ಪಾದಕ ದೇಶ ಎಂದು ಕೊಂಡಾಡುತ್ತಾರೆ. ಆದರೆ ತಮ್ಮ ಸಂಪುಟದ ಸಹೋದ್ಯೋಗಿಗಳು ವೈದ್ಯಕೀಯ ಆಧಾರವಿಲ್ಲದ, ಒಬ್ಬ ಬಾಬಾ ಸಿದ್ಧಪಡಿಸಿದ ಔಷಧವನ್ನು ಬಿಡುಗಡೆ ಮಾಡಿದಾಗ ಅವರನ್ನು ಖಂಡಿಸುವ ಕೆಲಸ ಮಾಡುವುದಿಲ್ಲ. ಮೋದಿ ಅವರು ಮೂಢನಂಬಿಕೆಗಳನ್ನು ಬಿಟ್ಟುಕೊಡದೆ, ಆಧುನಿಕತೆಯನ್ನು ಅಪ್ಪಿಕೊಳ್ಳುವ ಅಸಂಖ್ಯಾತ ಭಾರತೀಯರಂತೆಯೇ.

ಮೋದಿ ಅವರ ವಿರೋಧಾಭಾಸಗಳು ಅವರ ಬೆಂಬಲಿಗರ ಪಾಲಿಗೆ ಸಮಸ್ಯೆಯಲ್ಲ. ಅವರ ಬೆಂಬಲಿಗರಲ್ಲಿ ಯಾವ ಗೊಂದಲವೂ ಇಲ್ಲ. ಮೋದಿ ಅವರ ಪಾಲಿಗೆ ದೇವದೂತ. ಅವರು ಹಿಂದೂ ಹಿರಿಮೆಯನ್ನು ಮತ್ತೆ ಮತ್ತೆ ಹೇಳುವುದು, ಅವರ ಪಕ್ಷವು ಮುಸ್ಲಿಮರನ್ನು ಕೆಟ್ಟದ್ದಾಗಿ ಚಿತ್ರಿಸುವುದು, ಮೋದಿ ಅವರ ಅರ್ಭಟದ ರಾಷ್ಟ್ರೀಯವಾದ, ಹೊಸ ಕಾಲದ ಉದ್ಯಮಿಗಳನ್ನು ಉದ್ದೇಶಿಸಿರುವ ಸ್ಟಾರ್ಟ್‌ಅಪ್ ಇಂಡಿಯಾ ಅಭಿಯಾನ, ಬಹಳ ಜಾಗರೂಕತೆಯಿಂದ ಮೋದಿ ಅವರು ತಮ್ಮ ಬಗ್ಗೆ ಕಟ್ಟಿಕೊಂಡಿರುವ 'ಬಲಿಷ್ಠ ನಾಯಕ' ಎಂಬ ಚಿತ್ರಣ, ಪಾಕಿಸ್ತಾನದ ಬಗ್ಗೆ ಅವರು ಮಾಡುವ ವಾಗ್ದಾಳಿಗಳು... ಇವೆಲ್ಲ ಅವರ ಪಾಲಿಗೆ ಕಟ್ಟಾ ಅನುಯಾಯಿಗಳನ್ನು ಸೃಷ್ಟಿ ಮಾಡಿಕೊಟ್ಟಿವೆ. ನಮಗೆ ದೊಡ್ಡ ಬೆದರಿಕೆಯಾಗಿರುವ ಚೀನಾ ದೇಶವು ಗಡಿಯಲ್ಲಿ ನಡೆಸುತ್ತಿರುವ ಒಳನುಸುಳುವಿಕೆಗಳ ಹಾಗೂ ಮೋದಿ ಅವರ ಮೇಲಿರುವ ಇತರ ಹಲವು ವೈಫಲ್ಯಗಳಿಗೆ ಸಂಬಂಧಿಸಿದ ಆರೋಪಗಳನ್ನು ಅನುಯಾಯಿಗಳು ಸುಲಭವಾಗಿ ಉಪೇಕ್ಷಿಸುತ್ತಾರೆ.

ಇನ್ನೊಂದೆಡೆ, ಅಲ್ಪಸಂಖ್ಯಾತರಲ್ಲಿ ಮೋದಿ ಅವರ ಬಗ್ಗೆ ಭಯ ಇದೆ. ಅವರು ಮೋದಿ ಅವರನ್ನು, 'ಹಿಂದೂ ರಾಷ್ಟ್ರೀಯವಾದಿ'ಯಾಗಿ ಮಾತ್ರ ಕಾಣುತ್ತಾರೆ. ದನದ ಮಾಂಸ ತಿಂದವರ ವಿರುದ್ಧ ಕೆಲವರು ಕಾನೂನು ಕೈಗೆತ್ತಿಕೊಂಡಾಗ, ತಮ್ಮ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ನಡೆದಾಗ, ಕೋಮು ಗಲಭೆಗಳು ನಡೆದ ನಂತರದಲ್ಲಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ 'ಬುಲ್ಡೋಜರ್ ನ್ಯಾಯ ಪದ್ಧತಿ' ಜಾರಿಗೆ ಬಂದಾಗ ಮೋದಿ ಅವರು ಮೌನವಾಗಿ ಉಳಿಯುವುದನ್ನು ಕಂಡು ಅಲ್ಪಸಂಖ್ಯಾತರಲ್ಲಿ ಅಭದ್ರತೆಯ ಭಾವನೆ ಮೂಡುತ್ತದೆ. ಉದಾರವಾದಿಗಳು, ಬುದ್ಧಿಜೀವಿಗಳು ಮತ್ತು ಎಡಪಂಥೀಯರು ಮೋದಿ ಅವರನ್ನು ಮತಾಂಧ ವ್ಯಕ್ತಿಯಂತೆ ಕಾಣುತ್ತಾರೆ. ಹಿಂದೂ ಹಿರಿಮೆಯ ಬಹುಸಂಖ್ಯಾತವಾದಿ ರಾಜಕಾರಣದ ಮೂಲಕ ಸಮಾಜವನ್ನು ಧರ್ಮದ ಆಧಾರದಲ್ಲಿ ಒಡೆಯುತ್ತಿರುವ ವ್ಯಕ್ತಿಯನ್ನಾಗಿ ಕಾಣುತ್ತಾರೆ.

ಆದರೆ ಮಧ್ಯಮ ಮಾರ್ಗವನ್ನು ಅನುಸರಿಸುತ್ತಿ-ರುವ ಜನರ ಗುಂಪು ಬಹಳ ದೊಡ್ಡದಾಗಿದೆ. ಅವರು ಎಡಪಂಥೀಯರೂ ಅಲ್ಲ, ಬಲಪಂಥೀಯರೂ ಅಲ್ಲ. ಇವರಿಗೆ ಹಾಗೂ ಜಗತ್ತಿನ ಬೇರೆ ಕಡೆಗಳಲ್ಲಿ ಇರುವವರಿಗೆ, ಅದರಲ್ಲೂ ಮುಖ್ಯವಾಗಿ ಪ್ರಬುದ್ಧ ಜನತಂತ್ರ ವ್ಯವಸ್ಥೆಗಳಲ್ಲಿ ಇರುವವರಿಗೆ, ಮೋದಿ ಅವರನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಆಗುತ್ತಿಲ್ಲ.

ದೇಶದಲ್ಲಿ ವಿರೋಧ ಪಕ್ಷಗಳು ಹರಿದು ಹಂಚಿಹೋಗಿವೆ. ದೇಶದಾದ್ಯಂತ ಜನರ ಮೇಲೆ ಪ್ರಭಾವ ಬೀರಬಲ್ಲ ಒಬ್ಬ ನಾಯಕ ವಿರೋಧ ಪಕ್ಷಗಳ ನಡುವೆ ಇಲ್ಲ. ಹೀಗಾಗಿ, 2024ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರು ಮತ್ತೆ ಗೆಲುವು ಸಾಧಿಸುವ ಸಾಧ್ಯತೆ ಹೆಚ್ಚಿದೆ. ಭಾರತ ಮಾತ್ರವೇ ಅಲ್ಲ, ವಿಶ್ವದಲ್ಲಿ ಅತಿಹೆಚ್ಚಿನ ಜನಸಂಖ್ಯೆ ಹೊಂದಿರುವ ಭಾರತದ ಭವಿಷ್ಯದ ಪ್ರಧಾನಿಯೂ ಆಗಿರುವ ಮೋದಿ ಅವರು ಕೂಡ ಕವಲು ದಾರಿಯಲ್ಲಿ ನಿಂತಿರುತ್ತಾರೆ. ಮೋದಿ ಅವರು ಯಾರ ಹಾದಿಯಲ್ಲಿ ಭಾರತವನ್ನು ಮುನ್ನಡೆಸುತ್ತಾರೆ? ಮೋದಿ ಅವರು ಯಾವ ರೀತಿಯಲ್ಲಿ ತಮ್ಮ ಹೆಸರನ್ನು ಉಳಿಸಿಹೋಗುತ್ತಾರೆ? ಅವರು ಗೋಳವಲಕರ್ ಮತ್ತು ಸಾವರ್ಕರ್ ನಡೆದ ಹಾದಿಯಲ್ಲಿ ಸಾಗುವರೋ ಅಥವಾ ಗಾಂಧೀಜಿ ನಡೆದ ಮಹಾತ್ಮಸದೃಶ ಹಾದಿಯಲ್ಲಿ ನಡೆಯುವರೋ?

ಚುರುಮುರಿ



ಮೆನ್ ಸಪ್ಲೈ!

• ಬಿ.ಎನ್.ಮಲ್ಲೇಶ್

'ಮಂಜಮ್ಮ, ಇವತ್ತು ಖರ್ಚೆಲ್ಲ ನಂದೇ, ಎಲ್ರಿಗೂ ಮಂಡಕ್ಕಿ ಮೆಣ್ಸಿನ್ಕಾಯಿ, ಚಾ ಕೇಳಿದಷ್ಟು ಕೊಡು' ಎಂದ ಗುಡ್ಡೆ.

'ಅರೆ ವ್ಹಾ, ಕ್ಯಾ ಗುಡ್ಡೆ ಬೈ, ಲಾಟ್ರಿ ಗೀಟ್ರಿ ಹೊಡೀತು ಕ್ಯಾ?' ಗೌಸ್‌ಗೆ ಆಶ್ಚರ್ಯ.

'ಲಾಟ್ರಿ ಅಲ್ಲ ಗೌಸು, ಸಪ್ಲೈ ಮಾಡ್ತಿದೀನಿ, ಪುರುಸತ್ತಿಲ್ಲ...'

'ಸಪ್ಲೈನಾ? ಅದೇನು ನಮಗೂ ಸ್ವಲ್ಪ ಬಿಡಿಸಿ ಹೇಳಲೆ' ದುಬ್ಬೀರ ಕೇಳಿದ.

'ಎಲೆಕ್ಷನ್ ಪ್ರಚಾರ ಸಭೆಗಳಿಗೆ ಮೆನ್ ಸಪ್ಲೈ ಮಾಡ್ತೀನಿ. ಬೆಳಿಗ್ಗೆ ಒಂದು ಪಕ್ಷ, ಸಂಜೀಕೊಂದು ಪಕ್ಷ'.

'ಏನು ಹಂಗಂದ್ರೆ?'

'ನಾವು ಶಾಮಿಯಾನ ಸಪ್ಲೈ, ಫುಡ್ ಸಪ್ಲೈ ಅಂತವು ಕೇಳಿದ್ವಿ, ಇದ್ಯಾವುದು ಮೆನ್ ಸಪ್ಲೈ?' ತೆಪರೇಸಿಗೂ ಕುತೂಹಲ.

'ಒಳ್ಳೆ ದಡ್ಡರ ಸಾವಾಸ ಆತಪ. ಮೆನ್ ಸಪ್ಲೈ ಅಂದ್ರೆ ಎಲೆಕ್ಷನ್ ಸಭೆಗಳಿಗೆ ಜನರನ್ನ ಕರ್ಕೊಂಡ್ ಹೋಗ್ತೀನಿ, ಆಯಾ ಪಕ್ಷದೋರ ಬಾವುಟ ಹಿಡ್ಕಂಡು, ಅವರಿಗೇ ಜೈ ಅನ್ಕಂಡು, ಅವರು ಕೊಟ್ಟಿದ್ದು ತಿನ್ಕಂಡು ಬರ್ತೀವಿ. ಸಾಯಂಕಾಲ ಇನ್ನೊಂದ್ ಪಕ್ಷ, ಇನ್ನೊಂದ್ ಬಾವುಟ'.

'ಅದ್ರಿಂದ ನಿಂಗೇನ್ ಲಾಭ?'

'ಒಂದ್ ಸಭೆಗೆ, ಒಬ್ಬನಿಗೆ ಸಾವಿರ ರೂಪಾಯಿ ತಗಾತೀನಿ. ಐನೂರು ಅವನಿಗೆ ಕೊಟ್ಟು ಐನೂರು ನಾನಿಟ್ಕೋತೀನಿ. ಮಿನಿಮಮ್ ನೂರು ಜನ ಕರ್ಕೊಂಡ್ ಹೋಗ್ತೀನಿ'.

'ಅರೆ ಅಬ್ಬಾ, ಏಕ್ ರ್‍ಯಾಲಿ ಗಯೇತೋ ಐವತ್ ಸಾವ್ರ ಇನ್‌ಕಮ್ಮು?' ಗೌಸು ಇಷ್ಟಗಲ ಬಾಯಿಬಿಟ್ಟ.

'ಅಲ್ಲೋ ಅಟಾಕಂದು ಜನ ನಿಂಗೆಲ್ಲಿ ಸಿಕ್ತಾರೆ?' ದುಬ್ಬೀರ ಕೇಳಿದ.

'ಬಾಳ ಕಷ್ಟ ಕಣಲೆ, ರೊಕ್ಕ ಜಾಸ್ತಿ ಕೇಳ್ತಾರೆ, ರಾತ್ರಿ ಗುಂಡು ಕೇಳ್ತಾರೆ. ಜನ ಸಿಗಾದೇ ಕಷ್ಟ'.

'ಸರಿ, ನಿನ್ನ ಮುಂದಿನ ಸಭೆಗೆ ನೂರಾಐದು ಜನ ಬರ್ಲಾ'.

'ನೂರಾಐದಾ? ಯಾಕೆ?'

'ಯಾಕಂದ್ರೆ? ನಾವೂ ಐದು ಜನ ಬರ್ತೀವಿ. ಆದ್ರೆ ಒಂದು ಕಂಡೀಶನ್...'

'ಏನು?'

'ಸಾವಿರ ರೂಪಾಯಿ ಪೂರಾ ನಮಗೇ ಕೊಡಬೇಕು, ರಾತ್ರಿ ವ್ಯವಸ್ಥೆ ಲೆಕ್ಕ ಬೇರೆ...'

ಗುಡ್ಡೆ ಪಿಟಿಕ್ಕನ್ನಲಿಲ್ಲ.

ಸಂಗತ

ಬುದ್ಧನೆಂಬ ಪ್ರಬುದ್ಧ ಧನ್ವಂತರಿ

ಮನುಕುಲಕ್ಕೆ ದಯೆ, ಅನುಕಂಪವನ್ನು ಹೇಳಿಕೊಟ್ಟ ಬುದ್ಧ, ಮನುಷ್ಯಸಂತತಿ ಅಸ್ತಿತ್ವದಲ್ಲಿ ಇರುವವರೆಗೆ ಸಂಗತವಾಗಿ ಇರುತ್ತಾನೆ

• ಯೋಗಾನಂದ

'ಎಲ್ಲ ಸಂಗತಿಗಳೂ ತಮ್ಮ ಅಸ್ತಿತ್ವಕ್ಕಾಗಿ ಅಂತರವಲಂಬಿಯಾಗಿವೆ'- ಬುದ್ಧನ ಈ ಗ್ರಹಿಕೆ ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ. ಏಕೆಂದರೆ, ನಮ್ಮ ಜಗತ್ತಿನ ಅನ್ಯೋನ್ಯಾಶ್ರಯ ಗುಣ ಹಾಗೂ ನಮ್ಮ ಕ್ರಿಯೆಗಳಿಂದ ಪರರಿಗೆ ಮತ್ತು ಪರಿಸರಕ್ಕೆ ಆಗುವ ಪ್ರಭಾವವನ್ನು ಅದು ಎತ್ತಿಹಿಡಿಯುತ್ತದೆ.

ನಾವು ಈ ಕ್ಷಣದಲ್ಲಿದ್ದು, ನಮ್ಮ ಆಲೋಚನೆಗಳಲ್ಲಿ, ಭಾವನೆಗಳಲ್ಲಿ ಹಾಗೂ ಕ್ರಿಯೆಗಳಲ್ಲಿ ಜಾಗೃತರಾಗಿ ಇರಬೇಕೆಂದು 2,500 ವರ್ಷಗಳಿಗೂ ಹಿಂದೆ ಗೌತಮ ಬುದ್ಧ ಬೋಧಿಸಿದ. ನಾವು ವೃಥಾ ಗುರಿಯಾಗಿರುವ ಒತ್ತಡವನ್ನು ನಿಭಾಯಿಸುವಲ್ಲಿ, ನಮ್ಮ ಭೌತಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಿಟ್ಟು-ಕೊಳ್ಳುವಲ್ಲಿ ಆತನ ನುಡಿ ಸಾರ್ವಕಾಲಿಕವಾದುದು. ಬುದ್ಧ ತನ್ನೆಲ್ಲ ರಾಜವೈಭೋಗವನ್ನು ತ್ಯಜಿಸಿ ಬದುಕಿನ ಮೂಲ ಉದ್ದೇಶದ ಶೋಧಕ್ಕೆ ಮುಂದಾದ.

ಜಗತ್ತಿನಾದ್ಯಂತ ಎಲ್ಲ ಸಮಾಜಗಳು ತಮಗೆ ಹಿತವಾದ್ದನ್ನು, ಒಗ್ಗುವುದನ್ನು ಇಷ್ಟಪಡುತ್ತವೆ, ಸುಖ ಮತ್ತು ಸಂತೋಷಕ್ಕಾಗಿ ಹಂಬಲಿಸುತ್ತವೆ. ಆದರೆ ಆಧ್ಯಾತ್ಮಿಕ ಮೌಲ್ಯಗಳನ್ನು ಕಡೆಗಣಿಸಿ ಬರೀ ವಸ್ತುವಾದ, ಐಹಿಕ ಪ್ರವೃತ್ತಿಯ ಬೆನ್ನೇರಿದರೆ ನೆಮ್ಮದಿ ಗಗನ ಕುಸುಮವಾಗುತ್ತದೆ. ದುಃಖಕ್ಕೆ ಕಾರಣವಾದುದು ಆಸೆ. ಕಂಡಿದ್ದನ್ನೆಲ್ಲ ಹೊಂದಬೇಕು, ಹೊಂದಿದವುಗಳ ಮೇಲೆ ಹಿಡಿತ ಸಾಧಿಸಬೇಕು ಎನ್ನುವ ತೀರದ ಬಯಕೆ ಮನುಷ್ಯನನ್ನು ಅಧೋಗತಿಗೆ ತಲುಪಿಸುತ್ತದೆ. ಅವನು ಸುಖಿಯಾಗುವ ಬದಲು ದಿಕ್ಕೆಟ್ಟು ವ್ಯಸನಿಯಾಗುತ್ತಾನೆ. ಪ್ರಯತ್ನ, ಜೀವನೋಪಾಯ, ಸಾವಧಾನಶೀಲತೆ, ಏಕಾಗ್ರತೆ, ದೃಷ್ಟಿ, ಉದ್ದೇಶ, ಮಾತು ಮತ್ತು ನಡೆ- ಈ ಎಂಟು ಮಾರ್ಗಗಳನ್ನು ಉದಾತ್ತಗೊಳಿಸಿಕೊಂಡರೆ ಜೀವನ ಹಸನಾಗುವುದೆಂದು ಬುದ್ಧ ಪ್ರತಿಪಾದಿಸಿದ. ನಿಷ್ಕಳಂಕ ಪ್ರೀತಿ ಮತ್ತು ತೆರೆದ ಮನಸ್ಸಿನಲ್ಲಿ ಅವನ ಉಪದೇಶಗಳು ಸಾಂದ್ರಗೊಂಡಿವೆ. ಚಕ್ರವು ಎತ್ತಿನ ಪಾದವನ್ನು ಹಿಂಬಾಲಿಸಿದಂತೆ ದುಷ್ಟ ಆಲೋಚನೆಯ ಮಾತು ಮತ್ತು ಕೃತಿಯನ್ನು ನೋವು ಹಿಂಬಾಲಿಸುತ್ತದೆ.

ಎಂತಹ ನಕಾರಾತ್ಮಕ ಶಕ್ತಿ ನಮ್ಮಲ್ಲಿ ಪುಟಿದರೂ ಅದು ಪ್ರೀತಿಗೆ ಸೋಲುತ್ತದೆ. ಮನುಕುಲಕ್ಕೆ ದಯೆ, ಅನುಕಂಪ ಹೇಳಿಕೊಟ್ಟ ಬುದ್ಧ, ಮನುಷ್ಯಸಂತತಿ ಅಸ್ತಿತ್ವದಲ್ಲಿ ಇರುವವರೆಗೆ ಸಂಗತವಾಗಿರುತ್ತಾನೆ. ಮಹಾನ್ ಪ್ರಾಮಾಣಿಕನಾಗಿದ್ದ ಆತ ಜಗತ್ತಿಗೆ ಮೊದಲಿಗೆ ಸಂಪೂರ್ಣ ನೀತಿ ಸಂಹಿತೆಯನ್ನು ಕೊಟ್ಟ ಧೀಮಂತ.

ಅನಗತ್ಯವನ್ನು ಅಗತ್ಯವೆಂದು, ಅಗತ್ಯವನ್ನು ಅನಗತ್ಯವೆಂದು ಭ್ರಮಿಸುವುದೇ ಬದುಕು ಗೊಂದಲಮಯವಾಗಲು ಕಾರಣ. ಇದರ ಫಲ ಅಗತ್ಯವಾದ್ದು ನಮಗೆ ಲಭಿಸದು. ಅಂಗಡಿ, ಮಳಿಗೆ, ಉದ್ಯಾನವನ... ಎಲ್ಲವೂ ಮನೆಗೆ ಹತ್ತಿರದಲ್ಲೇ ಇರುತ್ತವೆ, ನಡಿಗೆಯಲ್ಲಿ-ಹೋಗಿಬರಬಹುದು. ಆದರೂ ಇರಲೊಂದು ಕಾರು ಎನ್ನುವ ಬೀಗು. ಅಗತ್ಯಗಳನ್ನು ಸೃಷ್ಟಿಸಿಕೊಳ್ಳುವುದೆಂದರೆ ಇದೇ ಅಲ್ಲವೆ? ಕೊಳ್ಳುಬಾಕತನ ಪರಿಸರವನ್ನು ಪರೋಕ್ಷವಾಗಿ ಇನ್ನಷ್ಟು ಬಳಲಿಸಿರುತ್ತದೆ. ಅಭಿವೃದ್ಧಿ ಬೇಡ ಎಂದಲ್ಲ, ಆದರೆ ಗೊತ್ತು, ಗುರಿ ಸ್ಪಷ್ಟವಾಗಿರಬೇಕು.

ವೈಜ್ಞಾನಿಕ ಚಿಂತನೆ ಮತ್ತು ಮುಕ್ತ ವಿಚಾರ-ವಾದವನ್ನು ಉತ್ತೇಜಿಸಿದ ಬುದ್ಧ, ಧರ್ಮವೆಂದರೆ ಸತ್ಯ ಎಂಬ ಸರಳ ಪಾಠವನ್ನು ಪ್ರಚುರಪಡಿಸಿದ. ಧರ್ಮವು ಕ್ಷಮೆ, ಸೃಜನಶೀಲತೆಯನ್ನು ಉತ್ತೇಜಿಸುವ ಚಲನಶೀಲ ಬಲವಾಗಬೇಕೆಂದು ಅವನು ಆಶಿಸಿದ. ನಾವೆಲ್ಲರೂ ಬೌದ್ಧ ಧರ್ಮದ ಅನುಯಾಯಿಗಳು ಎನ್ನುವುದಕ್ಕಿಂತ ನಾವು ಒಬ್ಬೊಬ್ಬರೂ ಬುದ್ಧರಾಗ-ಬೇಕಿದೆ. ಇದು ಯಾವುದೇ ಸತ್ವಯುತ ಧರ್ಮಕ್ಕೂ ಅನ್ವಯಿಸುತ್ತದೆ. ತಾನು ಹೇಳಿದಂತೆ ನಡೆದುಕೊಳ್ಳಬೇಕೆಂದು ಬುದ್ಧ ಒತ್ತಾಯಿಸಲಿಲ್ಲ. ಆಲೋಚಿಸಿ, ಸಂದೇಹಗಳುಂಟಾದರೆ ಪ್ರಶ್ನಿಸಿ, ಸರಿಯೆನ್ನಿಸಿದರೆ ಮಾತ್ರವೇ ಪಾಲಿಸಿ ಎಂದ ಸಂಪನ್ನ ಸಂತ ಆತ. ಅವನ ಹಿತನುಡಿಯು ಸಂಪೂರ್ಣ, ಗಹನ, ದೋಷರಹಿತ ಮತ್ತು ಪ್ರಾಯೋಗಿಕ. ಬುದ್ಧ ಅಂಧಶ್ರದ್ಧೆ, ಮೌಢ್ಯಕ್ಕೆ ಕಿಂಚಿತ್ತೂ ಸೊಪ್ಪು ಹಾಕದ ವಿಚಾರ ಗಾರುಡಿಗ. ಅವನ ಬೋಧನೆಗಳಿಗೆ ಆಕರವಾಗಿದ್ದು ಅವನ ನಂಬಿಕೆ, ಚಿಂತನೆಗಳಲ್ಲ. ಬದಲಿಗೆ ಅವನು ಪಟ್ಟ ಅನುಭವಗಳು.



ಬುದ್ಧನ ಸಮಕಾಲೀನರು ಅವನು ಸರ್ವದಾ ಹಸನ್ಮುಖಿ ಎಂದು ಬಣ್ಣಿಸಿದ್ದಾರೆ. ಅವನಿಗೆ ಮಂದಸ್ಮಿತ ಪ್ರಾಪ್ತವಾಗಿದ್ದು ಆತನ ಅಂತರಂಗದ ಗಾಢ ಚಿತ್ತಶಾಂತಿಯಿಂದ. ಬುದ್ಧ ಆದಿವಿಚಾರವಾದಿ, ಆದಿವಿಜ್ಞಾನಿ. ಮನುಷ್ಯನ ಪರಿತಾಪ ಮತ್ತು ಭಾವಾವೇಶವನ್ನು ಸಮರ್ಥವಾಗಿ ಅರಿತಿದ್ದ ಧೀಮಂತ. ಒಂದು ಉಪಮೆ ಅತ್ಯಂತ ಸಮಂಜಸವಾಗಿದೆ. ಅಸತ್ಯವೆಂಬ ವ್ಯಾಧಿಗೆ ಬುದ್ಧನೆಂಬ ಉತ್ತಮ ವೈದ್ಯ ಬೇಕು. ಆತನೊಂದಿಗೆ ಧರ್ಮ ಎಂಬ ಉತ್ತಮ ಔಷಧಿ, ಸಂಘವೆಂಬ ಉತ್ತಮ ದಾದಿ ಇರಬೇಕು.

ಬುದ್ಧ ಜನಿಸಿದ ಕಾಲಕ್ಕೆ ಭಾರತ ಸಿರಿವಂತ ದೇಶವಾಗಿತ್ತು, ಜನಸಂಖ್ಯೆ ಎರಡು ಕೋಟಿ ಮೀರಿರಲಿಲ್ಲ. ಸರ್ವ ಭೋಗ, ಸವಲತ್ತು, ಸುಭಿಕ್ಷ ತಾಂಡವವಾಡುತ್ತಿದ್ದವು. ಇಷ್ಟಾದರೂ ಮನಸ್ಸಿಗೆ ಏನೋ ಅಸಮಾಧಾನ, ಕಸಿವಿಸಿ. ಹಾಗಾಗಿ ಜನ ಪ್ರಶ್ನಿಸಲಾರಂಭಿಸಿದರು. ಭವರೋಗ ಚಿಕಿತ್ಸೆಗೆ ಬುದ್ಧನಂತಹ ಆಧ್ಯಾತ್ಮಿಕ ಧನ್ವಂತರಿಯೇ ಬೇಕಾಯಿತು. ಕುವೆಂಪು ಅವರ 'ಬುದ್ಧದೇವ' ಕವಿತೆಯ ಕೆಲ ಹೃದಯಸ್ಪರ್ಶಿ ಸಾಲುಗಳಿವು:

'ಹೇ ಬುದ್ಧದೇವ, ನಿನ್ನತುಲ ಬುದ್ಧಿಸ್ಫೂರ್ತಿ
ಮಾನವನ ಮೂರ್ಖತೆಯ ದಹಿಸುವ ಮಹಾಜ್ವಾಲೆ
...ಹೇ ಪುಣ್ಯಮತಿಮೂರ್ತಿ, ಮತದ
ಮತಿಹೀನತೆಯು ಸಾಕೆಮಗೆ,
ಬೇಕು ಸನ್ಮತಿಯ ನಾಗರಿಕತೆಯು
ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ?'

ಅಂದಹಾಗೆ, ಇಂದು (ಮೇ 5) ಬುದ್ಧ ಜಯಂತಿ.

ವಾಚಕರ ವಾಣಿ

'ನಾಗರಿಕ ಜವಾಬ್ದಾರಿ' ದಿನ ಘೋಷಿಸಿ

ಮತದಾನದ ದಿನವನ್ನು 'ನಾಗರಿಕ ಜವಾಬ್ದಾರಿ ದಿನ'ವನ್ನಾಗಿ ಘೋಷಣೆ ಮಾಡಬೇಕು. ಆ ಮೂಲಕ ಪ್ರಮುಖ ಪ್ರವಾಸಿ ತಾಣಗಳನ್ನು ಒಂದು ದಿನದ ಮಟ್ಟಿಗೆ ಬಂದ್ ಮಾಡಿಸಿ, ಜನರು ಚುನಾವಣಾ ರಜಾ ದಿನವನ್ನು ಸದ್ಬಳಕೆ ಮಾಡಿಕೊಳ್ಳಲು ಪ್ರೇರೇಪಿಸಬೇಕು. ಮತದಾನದ ಪ್ರಾಮುಖ್ಯವನ್ನು ಎತ್ತಿ ಹಿಡಿದು, ಶೇಕಡಾವಾರು ಮತದಾನದ ಪ್ರಮಾಣವನ್ನು ವೃದ್ಧಿಸುವಲ್ಲಿ ಸರ್ಕಾರಗಳು ಪ್ರಯತ್ನಿಸಬೇಕು.

ಕರಿಯಪ್ಪ ಆರ್., ಕಲ್ಲಹಳ್ಳಿ

ಹಿರಿಯರಿಗೆ ಬೇಡ ಜಿಎಸ್‌ಟಿ ಬರೆ

ಹಿರಿಯ ನಾಗರಿಕರಿಗೆ ಬರುವ ಪಿಂಚಣಿಯಲ್ಲಿ ಮೆಡಿಕ್ಲೈಮ್ ಪ್ರೀಮಿಯಂ ಖಟಾವುಗೊಳ್ಳುತ್ತಿದೆ. ಇವರ ಇಳಿವಯಸ್ಸಿನ ಜೀವನಕ್ಕೆ ಪಿಂಚಣಿಯೇ ಆಧಾರ. ಜೊತೆಗೆ ಮೆಡಿಕ್ಲೈಮ್ ಅತ್ಯವಶ್ಯಕ. ಆದರೆ ಜಿಎಸ್‌ಟಿಯು ಈ ಹಿರಿಯ ನಾಗರಿಕರಿಗೆ ಹೆಚ್ಚಿನ ಹೊರೆಯಾಗಿದೆ. ಏಪ್ರಿಲ್ 1ರಿಂದ ಇವರ ಮೆಡಿಕ್ಲೈಮ್ ಪ್ರೀಮಿಯಂಗೆ ಶೇಕಡ 18 ಸೇವಾ ತೆರಿಗೆ ಹಾಕಲಾಗಿದೆ. ಮೊದಲೇ ಜೀವನವೆಚ್ಚ ದುಬಾರಿಯಾಗಿರುವುದರಿಂದ ಬೇಸತ್ತ ಹಿರಿಯ ನಾಗರಿಕರು ಈಗ ಜಿಎಸ್‌ಟಿ ಎಂಬ ಬರೆ ಎಳೆಸಿಕೊಂಡು ನರಳುತ್ತಿದ್ದಾರೆ. ಇವರ ಮುಸ್ಸಂಜೆ ಬದುಕಲ್ಲಿ ಸರ್ಕಾರ ಆಶ್ರಯದಾತನಾಗಿ ವರ್ತಿಸಲಿ.

ಅಶೋಕ ಪ. ಹೊನಕೇರಿ, ಧಾರವಾಡ

ಎತ್ತಿಹಿಡಿಯಬೇಕಿದೆ ಪತ್ರಿಕಾ ಸ್ವಾತಂತ್ರ್ಯ

ಪತ್ರಿಕೆಗಳು ಪ್ರಜಾಪ್ರಭುತ್ವದ ಜೀವನಾಡಿ. ಜನರ ಸಮಸ್ಯೆಗಳನ್ನು, ಆಡಳಿತದ ನ್ಯೂನತೆಗಳನ್ನು ಯಥಾವತ್ತಾಗಿ ಬಿಂಬಿಸಿ, ಸರ್ಕಾರದ ಕಣ್ಣು ತೆರೆಸುವ ಕೆಲಸವನ್ನು ಮಾಧ್ಯಮಗಳು ಮಾಡುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಪತ್ರಿಕೆಗಳು ಸರ್ಕಾರದ ಕೈಗೊಂಬೆಯಾಗಿವೆಯೇ ಅನ್ನುವ ಅನುಮಾನ ಕಾಡುತ್ತದೆ. ಜಾಗತಿಕ ಮಟ್ಟದ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತವು 180 ರಾಷ್ಟ್ರಗಳ ಪೈಕಿ 161ನೇ ಸ್ಥಾನಕ್ಕೆ ಕುಸಿದಿರುವುದಂತೂ ಗಂಭೀರವಾಗಿ ಯೋಚಿಸಬೇಕಾದ ವಿಷಯ.

ನಮ್ಮ ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ಪತ್ರಿಕೆಗಳೇ ಸರ್ಕಾರದ ಕೈಗೊಂಬೆಯಾದರೆ ಪ್ರಜಾ-ಪ್ರಭುತ್ವದಲ್ಲಿ ಸರ್ವಾಧಿಕಾರಿ ಧೋರಣೆ ಪ್ರಾರಂಭವಾಗುವುದರಲ್ಲಿ ಸಂಶಯವಿಲ್ಲ. ಈ ದಿಸೆಯಲ್ಲಿ ಪತ್ರಿಕಾ ಮಾಧ್ಯಮದ ಮೇಲೆ ಸರ್ಕಾರದ ಪ್ರಭಾವ ಇಲ್ಲದಂತೆ ನೋಡಿಕೊಳ್ಳಬೇಕಾಗಿದೆ.

ಸಾಗರ್ ದ್ರಾವಿಡ್, ಹಿರಿಯೂರು

ಭ್ರಷ್ಟ ಶಾಸಕ ರೂಪಿಸುವ ಶಾಸನ ಹೇಗಿರಬಹುದು?

ರಾಜ್ಯ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿರುವ ಪ್ರಮುಖ ಪಕ್ಷಗಳ ಅಭ್ಯರ್ಥಿಗಳಲ್ಲಿ ಪ್ರತಿಶತ 39ರಷ್ಟು ಮಂದಿ ಅಪರಾಧದ ನಂಟು ಹೊಂದಿರುವ ಸುದ್ದಿ ತಿಳಿದು (ಪ್ರ.ವಾ., ಮೇ 4) ನಿಜಕ್ಕೂ ಮೈ ನಡುಗಿತು. ನಮ್ಮದು ಪ್ರಜಾಪ್ರಭುತ್ವ, ಶ್ರೇಷ್ಠ ಸಂವಿಧಾನ ಎಂದು ಬೀಗುವ ನಮ್ಮಲ್ಲಿ ಇಂತಹ ವಿದ್ಯಮಾನ ಶೋಭೆ ತರುವಂತಹದ್ದಲ್ಲ. ಈ ಕುರಿತು ಸಂವಿಧಾನಕ್ಕೆ ತುರ್ತು ತಿದ್ದುಪಡಿಯ ಅವಶ್ಯಕತೆ ಇದೆ. ಈ ದಿಸೆಯಲ್ಲಿ ನಮ್ಮ ರಾಷ್ಟ್ರಪತಿ ಮತ್ತು ಸುಪ್ರೀಂ ಕೋರ್ಟ್ ಒಂದು ತೀರ್ಮಾನ ಕೈಗೊಳ್ಳಲೇಬೇಕು. ಈಗಾಗಲೇ ಅಪರಾಧ ಪ್ರಕರಣದ ನಂಟು ಹೊಂದಿರುವ ಅನೇಕ ಸಂಸದರು, ಶಾಸಕರು ಭಾರತದಲ್ಲಿದ್ದಾರೆ. ಮುಂದೆ ಇಂತಹವರ ಸಂಖ್ಯೆ ಹೆಚ್ಚಾಗಿ ಆಡಳಿತ ಅವರ ಕೈ ಸೇರಿದರೆ ಭವ್ಯ ಭಾರತದ ಗತಿಯೇನು? ಶಾಸನ ರೂಪಿಸುವವರೇ ಭ್ರಷ್ಟರಾಗಿದ್ದರೆ ಇನ್ನು ಶಾಸನಗಳು ಹೇಗೆ ರೂಪುಗೊಳ್ಳಬಹುದು?

ಅಪರಾಧದ ನಂಟು ಹೊಂದಿರುವ ಯಾವುದೇ ವ್ಯಕ್ತಿಯು ಚುನಾವಣೆಯಲ್ಲಿ ಸ್ಪರ್ಧೆಗಿಳಿಯದಂತೆ ಪ್ರಬಲ ಕಾನೂನು ಜಾರಿಯಾಗಬೇಕಿದೆ. ಇಲ್ಲವಾದರೆ ಕಳ್ಳರ ಕೈಗೆ ಮನೆ ಬೀಗದ ಕೈ ಕೊಟ್ಟಂತೆ ಆಗುತ್ತದೆ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ವಯೋವೃದ್ಧರಿಗೆ ಮನೆ: ಆದ್ಯತೆಯಾಗಲಿ

ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ, 80 ವರ್ಷ ಮೀರಿದ ವೃದ್ಧರಿಗೆ ಮನೆಯಲ್ಲಿಯೇ ಮತದಾನ ಮಾಡುವ ವ್ಯವಸ್ಥೆ ಕಲ್ಪಿಸಿರುವ ಚುನಾವಣಾ ಆಯೋಗದ ಕಾರ್ಯ ಸ್ತುತ್ಯರ್ಹ. ಈ ದಿಸೆಯಲ್ಲಿ, 104 ವರ್ಷದ ವೃದ್ಧೆಯೊಬ್ಬರು ಮತದಾನ ಮಾಡಿದ ಮತ್ತು ಬಹುಶಃ ಅವರಷ್ಟೇ ವಯಸ್ಸಿನ, ಕುಸಿದುಬೀಳುವ ಸ್ಥಿತಿಯಲ್ಲಿರುವ ಅವರ ಗುಡಿಸಲಿನ ಚಿತ್ರವನ್ನು ಕೊಡಗಿನ ಜಿಲ್ಲಾಧಿಕಾರಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ತಮ್ಮ ಕರ್ತವ್ಯದ ಒಂದು ಭಾಗವಾಗಿ ಹಂಚಿಕೊಂಡಿದ್ದು, ಕಡಿಮೆ ಅವಧಿಯಲ್ಲಿಯೇ ಹಲವಾರು ಮಂದಿಯಿಂದ ಟೀಕೆಗೊಳಗಾಗಿದ್ದಾರೆ (ಪ್ರ.ವಾ., ಮೇ 3). ಈ ಚಿತ್ರವನ್ನು ಗಮನಿಸಿದಾಗ, ಜಿಲ್ಲಾಧಿಕಾರಿಯು ಎರಡು ಕಾರ್ಯಗಳನ್ನು ಬಿಂಬಿಸಿದಂತಿದೆ. ಒಂದು, ವಯೋವೃದ್ಧೆಯಿಂದ ಮತದಾನ ಮಾಡಿಸಿದ ಕರ್ತವ್ಯನಿಷ್ಠೆ. ಮತ್ತೊಂದು, ಆ ವೃದ್ಧೆಗೆ ಸುಸ್ಥಿತಿಯಲ್ಲಿರುವ ಮನೆಯನ್ನು ಒದಗಿಸಲಾಗದ ಜಿಲ್ಲಾಡಳಿತದ ವೈಫಲ್ಯ. ಕನಿಷ್ಠಪಕ್ಷ ಈ ಬಗೆಯ ಮತದಾನದ ವ್ಯವಸ್ಥೆಯಿಂದಲಾದರೂ ಇಂತಹ ಕುಟುಂಬಗಳು ಇವೆ ಎಂಬುದು ಗಮನಕ್ಕೆ ಬರುವಂತೆ ಆಗಿದೆ.

ಈಗ ಮತದಾನಕ್ಕಾಗಿ ಸಿದ್ಧಪಡಿಸಿರುವ ವಯೋವೃದ್ಧರ ಪಟ್ಟಿಯನ್ನು ಆಧರಿಸಿ, ನಿಜವಾಗಿಯೂ ಅಸಹಾಯಕವಾಗಿರುವ ಇಂತಹ ಕುಟುಂಬಗಳ ಸ್ಥಿತಿಗತಿಯನ್ನು ಪರಿಶೀಲಿಸಿದ ನಂತರ ವಾಸಯೋಗ್ಯ ಮನೆಗಳನ್ನು ನಿರ್ಮಿಸಿ ಕೊಡಬಹುದಾಗಿದೆ. ಈ ಸೌಲಭ್ಯವು ಬಳಿಕ ದುರುಪಯೋಗ ಆಗಬಹುದು ಎಂದು ಅಂದಾಜಿಸುವ ಪ್ರಕರಣ-ಗಳಲ್ಲಿ, ವೃದ್ಧರು ಜೀವಂತವಾಗಿ ಇರುವವರೆಗೆ ಮಾತ್ರ ಅನ್ವಯವಾಗುವಂತೆ ನಿವೇಶನ ಮಂಜೂರು ಮಾಡಿ, ಮನೆಯನ್ನು ನಿರ್ಮಿಸಿಕೊಟ್ಟು, ಅವರ ಮರಣದ ನಂತರ ಸರ್ಕಾರದ ವಶಕ್ಕೆ ಪಡೆದು ಅರ್ಹರಿಗೆ ಮರು ಮಂಜೂರು ಮಾಡಬಹುದಾಗಿದೆ.

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ದಿ ಕೇರಳ ಸ್ಟೋರಿ' 32,000 ಯುವತಿಯರ ಮತಾಂತರ ಅದೆಷ್ಟು ಸತ್ಯ?

ಶುಕ್ರವಾರ ಬಿಡುಗಡೆಯಾಗಲಿರುವ 'ದಿ ಕೇರಳ ಸ್ಟೋರಿ' ಚಲನಚಿತ್ರದ ಪ್ರದರ್ಶನಕ್ಕೆ ಕೇರಳದಲ್ಲಿ ಅವಕಾಶ ಮಾಡಿಕೊಡಬಾರದು ಎಂದು ಕೇರಳದ ವಿರೋಧ ಪಕ್ಷಗಳು ಮತ್ತು ಆಡಳಿತಾರೂಢ ಮೈತ್ರಿಕೂಟವು ಒತ್ತಾಯಿಸುತ್ತಿವೆ. ಸುಪ್ರೀಂ ಕೋರ್ಟ್‌ನಲ್ಲಿ ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿ ವಜಾ ಆಗಿದೆ. ಈ ಚಲನಚಿತ್ರಕ್ಕೆ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ಚಲನಚಿತ್ರದಲ್ಲಿ ಸುಳ್ಳು-ಸುಳ್ಳೇ ಮಾಹಿತಿಗಳನ್ನು ನೀಡಲಾಗಿದೆ, ಸತ್ಯವನ್ನು ತಿರುಚಲಾಗಿದೆ ಎಂಬ ಆರೋಪವಿದೆ. ಚಲನಚಿತ್ರದ ನಿರ್ದೇಶಕ ಸುದೀಪ್ತೊ ಸೇನ್ ನೀಡುತ್ತಿರುವ ಮಾಹಿತಿಯ ಬಗ್ಗೆ ಆಲ್ಟ್ ನ್ಯೂಸ್ ಸುದೀರ್ಘವಾದ ಫ್ಯಾಕ್ಟ್‌ಚೆಕ್ ಪ್ರಕಟಿಸಿತ್ತು. ಸುದೀಪ್ತೊ ಸೇನ್ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು 'ದಿ ಹಿಂದೂ' ವರದಿ ಪ್ರಕಟಿಸಿತ್ತು. ಇದರ ಮಧ್ಯೆಯೂ ಚಲನಚಿತ್ರದ ಟ್ರೇಲರ್ ಬಿಡುಗಡೆಯಾಗಿ ಐದೇ ದಿನದಲ್ಲಿ 1.6 ಕೋಟಿಗೂ ಹೆಚ್ಚು ಜನರು ಅದನ್ನು ವೀಕ್ಷಿಸಿದ್ದಾರೆ

ಯೂಟ್ಯೂಬ್ ವಿವರಣೆ ಬದಲು

'ದಿ ಕೇರಳ ಸ್ಟೋರಿ' ಟ್ರೇಲರ್ ಅನ್ನು ಮೇ 1ರಂದು ಬಿಡುಗಡೆ ಮಾಡಲಾಗಿತ್ತು. ಆಗ ಟ್ರೇಲರ್ ಜತೆಗೆ ನೀಡಿದ್ದ ವಿವರಣೆಯಲ್ಲಿ, 32,000 ಅಮಾಯಕ ಯುವತಿಯರ ಕತೆ ಎಂದು ಹೇಳಲಾಗಿತ್ತು. ಚಲನಚಿತ್ರದ ಬಿಡುಗಡೆಗೆ ತಡೆ ಕೋರಿದ್ದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆದ ದಿನ, ಯೂಟ್ಯೂಬ್‌ನಲ್ಲಿ ಈ ವಿವರಣೆಯನ್ನು ಬದಲಿಸಲಾಗಿತ್ತು. ಮೂವರು ಅಮಾಯಕ ಯುವತಿಯರ ಕತೆ ಎಂದು ವಿವರಣೆಯನ್ನು ತಿದ್ದಲಾಗಿತ್ತು. ಆದರೆ ಯೂಟ್ಯೂಬ್ ವಿವರಣೆಯ ಎರಡನೇ ಪ್ಯಾರಾದಲ್ಲಿ, 'ಸಾವಿರಾರು ಅಮಾಯಕ ಮಹಿಳೆಯರನ್ನು ಅತ್ಯಂತ ವ್ಯವಸ್ಥಿತವಾಗಿ ಮತಾಂತರ ಮಾಡಲಾಗಿದೆ' ಎಂಬುದನ್ನು ಉಳಿಸಿಕೊಳ್ಳಲಾಗಿದೆ.

ಪ್ರಜಾವಾಣಿ ವಾರ್ತೆ

'ನನ್ನಂತಹ, ಕೇರಳದ 32,000 ಯುವತಿಯರು ಇರಾಕ್ ಮತ್ತು ಯಮನ್‌ನ ಮರಳುಗಾಡುಗಳಲ್ಲಿ ಹೂತುಹೋಗಿದ್ದಾರೆ' ದಿ ಕೇರಳ ಸ್ಟೋರಿ ಚಲನಚಿತ್ರದ ಟೀಸರ್‌ನಲ್ಲಿ ಫಾತಿಮಾ ಎಂಬ ಪಾತ್ರ ಹೇಳಿರುವ ಮಾತು ಇದು. ವಾರದ ಹಿಂದಷ್ಟೇ ಬಿಡುಗಡೆಯಾಗಿರುವ ಚಿತ್ರದ ಟ್ರೇಲರ್‌ನಲ್ಲೂ ಈ ಮಾತನ್ನು ಉಳಿಸಿಕೊಳ್ಳಲಾಗಿದೆ. ಜತೆಗೆ, ಹತ್ತು ವರ್ಷಗಳಲ್ಲಿ ಕೇರಳದ 32,000 ಹಿಂದೂ ಮತ್ತು ಕ್ರೈಸ್ತ ಯುವತಿಯರನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಲಾಗಿದೆ ಎಂಬ ಮಾಹಿತಿಯನ್ನು ಟ್ರೇಲರ್‌ನಲ್ಲಿ ನೀಡಲಾಗಿದೆ. ಈಗ ತೀವ್ರ ಆಕ್ಷೇಪಕ್ಕೆ ಗುರಿಯಾಗಿರುವ ಅಂಶವೂ ಇದೇ ಆಗಿದೆ.

ದಿ ಕೇರಳ ಸ್ಟೋರಿ ಚಲನಚಿತ್ರದ ಈ ಪ್ರತಿಪಾದನೆಯು ವಿವಾದಕ್ಕೆ ಗುರಿಯಾಗಿದ್ದು ಇದೇ ಮೊದಲಲ್ಲ. ಚಿತ್ರದ ಮುಖ್ಯ ಭೂಮಿಕೆಯಲ್ಲಿ ನಟಿಸಿರುವ ನಟಿ ಅದಾ ಶರ್ಮಾ ಅವರು ಚಿತ್ರದ ಮೊದಲ ಟೀಸರ್ ಅನ್ನು 2022ರ ನವೆಂಬರ್‌ನಲ್ಲಿ ಟ್ವೀಟ್ ಮಾಡಿದ್ದರು. 'ನನ್ನಂತಹ, ಕೇರಳದ 32,000 ಯುವತಿಯರು ಇರಾಕ್ ಮತ್ತು ಯಮನ್‌ನ ಮರಳುಗಾಡುಗಳಲ್ಲಿ ಹೂತುಹೋಗಿದ್ದಾರೆ' ಎಂಬ ಮಾತು ಆ ಟೀಸರ್‌ನಲ್ಲಿ ಇತ್ತು. ಅದೇ ಟೀಸರ್ ಅನ್ನು ಚಿತ್ರದ ನಿರ್ದೇಶಕ ಸುದೀಪ್ತೊ ಸೇನ್ ಸಹ ಟ್ವೀಟ್ ಮಾಡಿದ್ದರು. ಕೆಲವೇ ಗಂಟೆಗಳಲ್ಲಿ ಐದು ಲಕ್ಷಕ್ಕೂ ಹೆಚ್ಚು ಬಾರಿ ವೀಕ್ಷಣೆಗೆ ಒಳಗಾಗಿದ್ದ ಟೀಸರ್‌ಗೆ, ಅಷ್ಟೇ ದೊಡ್ಡ ಮಟ್ಟದ ವಿರೋಧವೂ ವ್ಯಕ್ತವಾಗಿತ್ತು. ಕೇರಳದ 32,000 ಹಿಂದೂ-ಕ್ರೈಸ್ತ ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ ಎಂಬ ಮಾಹಿತಿಯ ಅಧಿಕೃತತೆ ಏನು ಎಂದು ಸಿನಿಮಾದ ನಿರ್ದೇಶಕ ಸುದೀಪ್ತೊ ಸೇನ್ ಅವರನ್ನು ಹಲವರು ಕೇಳಿದ್ದರು. ಸುದ್ದಿ ಸಂಸ್ಥೆಗಳು, ಸುದ್ದಿ ವಾಹಿನಿಗಳೂ ಸುದಿಪ್ತೊ ಎದುರು ಈ ಪ್ರಶ್ನೆ ಇರಿಸಿದ್ದವು. ಆದರೆ ಆ ಪ್ರಶ್ನೆಗಳಿಗೆ ಸೇನ್ ನೀಡಿದ್ದ ಉತ್ತರಗಳು ಲೇವಡಿಗೆ ಗುರಿಯಾಗಿದ್ದವು.



'ಕೇರಳದ ಮುಖ್ಯಮಂತ್ರಿಯಾಗಿದ್ದ ಉಮ್ಮನ್ ಚಾಂಡಿ ಅವರು, ರಾಜ್ಯದಲ್ಲಿ ಪ್ರತಿ ವರ್ಷ 2,800-3,200 ಯುವತಿಯರು ಇಸ್ಲಾಂಗೆ ಮತಾಂತರವಾಗುತ್ತಿದ್ದಾರೆ ಎಂದು ಹೇಳಿದ್ದರು. ಅದನ್ನು ಲೆಕ್ಕಹಾಕಿ, 10 ವರ್ಷದಲ್ಲಿ 32,000 ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ ಎಂಬ ಲೆಕ್ಕಾಚಾರಕ್ಕೆ ಬಂದೆ. ಅದನ್ನೇ ದಿ ಕೇರಳ ಸ್ಟೋರಿಯಲ್ಲಿ ಹೇಳಿದ್ದೇನೆ' ಎಂದು ಸುದಿಪ್ತೊ ಹೇಳಿದ್ದರು. 'ಫೆಸ್ಟಿವಲ್ ಆಫ್ ಭಾರತ್' ಎಂಬ ಯೂಟ್ಯೂಬ್ ವಾಹಿನಿಯಲ್ಲಿ ಈ ಸಂದರ್ಶನ ಪ್ರಸಾರವಾಗಿತ್ತು.

ಸುದೀಪ್ತೊ ಸೇನ್ ನೀಡಿದ್ದ ಈ ಮಾಹಿತಿಯ ಬಗ್ಗೆ ಆಲ್ಟ್ ನ್ಯೂಸ್ ಸುದೀರ್ಘವಾದ ಫ್ಯಾಕ್ಟ್‌ಚೆಕ್ ಪ್ರಕಟಿಸಿತ್ತು. ಸುದೀಪ್ತೊ ಸೇನ್ ಸುಳ್ಳು ಮಾಹಿತಿ ನೀಡುತ್ತಿದ್ದಾರೆ ಎಂದು 'ಬಿಬಿಸಿ' ವರದಿ ಪ್ರಕಟಿಸಿತ್ತು. 'ಇದು ನನ್ನ ಲೆಕ್ಕಾಚಾರ ಅಲ್ಲ. ಕೇರಳದ ಅಂದಿನ ಮುಖ್ಯಮಂತ್ರಿ ನೀಡಿದ್ದ ಲೆಕ್ಕಾಚಾರ. ಅದು ಟೈಮ್ಸ್ ಆಫ್ ಇಂಡಿಯಾದಲ್ಲೂ ಪ್ರಕಟವಾಗಿತ್ತು' ಎಂದು ಸುದಿಪ್ತೊ, ಆಲ್ಟ್ ನ್ಯೂಸ್‌ಗೆ ಮಾಹಿತಿ ನೀಡಿದ್ದರು. ಆ ದಾಖಲೆಗಳನ್ನು ನೀಡಿ ಎಂದು ಆಲ್ಟ್‌ನ್ಯೂಸ್ ಪ್ರತಿನಿಧಿಗಳು ಅವರನ್ನು ಕೇಳಿದ್ದರು. ಅದಕ್ಕೆ ನಿರಾಕರಿಸಿದ್ದ ಅವರು, 'ನನ್ನ ಚಲನಚಿತ್ರದ ಬಗ್ಗೆ ಕುತೂಹಲ ಇರುವುದೇ 32,000 ಯುವತಿಯರು ಮತಾಂತರವಾಗಿ ನಾಪತ್ತೆಯಾಗಿದ್ದಾರೆ ಎಂಬುವುದರಲ್ಲಿ. ಆ ಬಗ್ಗೆ ಈಗಲೇ ದಾಖಲೆ ನೀಡಿದರೆ, ಚಲನಚಿತ್ರಕ್ಕೆ ಜನ ಏಕೆ ಬರುತ್ತಾರೆ. ಚಲನಚಿತ್ರ ಬಿಡುಗಡೆಯಾದ ಮೇಲೆ ಆ ದಾಖಲೆಗಳನ್ನು ನೀಡುತ್ತೇನೆ' ಎಂದು ಹೇಳಿದ್ದರು ಎಂದು ಆಲ್ಟ್ ನ್ಯೂಸ್ ವರದಿ ಮಾಡಿತ್ತು.

ಈಗ 'ದಿ ಕೇರಳ ಸ್ಟೋರಿ' ಬಿಡುಗಡೆಯಯಾಗಲಿದೆ. ಈ ಚಲನಚಿತ್ರವು ಸುಳ್ಳು ಮಾಹಿತಿಗಳ ಮೂಲಕ, ಒಂದು ಧರ್ಮದ ಜನರನ್ನು ಬೇರೊಂದು ಧರ್ಮದ ಜನರ ವಿರುದ್ಧ ಪ್ರಚೋದಿಸುತ್ತಿದೆ. ಈ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಲು ಯತ್ನಿಸುತ್ತಿದೆ. ಹೀಗಾಗಿ ಎಲ್ಲರೂ ಈ ಚಲನಚಿತ್ರವನ್ನು ಬಹಿಷ್ಕರಿಸಬೇಕು ಎಂದು ಕೇರಳದ ಬಹುತೇಕ ಎಲ್ಲ ರಾಜಕೀಯ ಪಕ್ಷಗಳೂ ಒತ್ತಾಯಿಸುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲೂ ಒತ್ತಾಯ ನಡೆಯುತ್ತಿದೆ. ಚಲನಚಿತ್ರ ಬಿಡುಗಡೆಗೆ ತಡೆ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಚಲನಚಿತ್ರಕ್ಕೆ ಪ್ರಮಾಣಪತ್ರ ನೀಡಿರುವ, ಸೆನ್ಸಾರ್ ಮಂಡಳಿಯಲ್ಲಿ ಪ್ರಶ್ನಿಸಿ ಎಂದು ಅರ್ಜಿದಾರರಿಗೆ ಸಲಹೆ ನೀಡಿದೆ. ಇದರ ಮಧ್ಯೆ ಈ ಚಲನಚಿತ್ರದ ವಿರುದ್ಧ ಕೇರಳ ಹೈಕೋರ್ಟ್ ಮತ್ತು ಮದ್ರಾಸ್ ಹೈಕೋರ್ಟ್‌ನಲ್ಲಿ ಹೊಸ ಅರ್ಜಿಗಳು ಸಲ್ಲಿಕೆಯಾಗಿವೆ.

ಹಿಂದೆ ಬೇರೆ ಲೆಕ್ಕಾಚಾರ ಹೇಳಿದ್ದ ನಿರ್ದೇಶಕ

ಕೇರಳ ಮತ್ತು ಕರ್ನಾಟಕದ 32,000 ಹಿಂದೂ ಮತ್ತು ಕ್ರೈಸ್ತ ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ. ಅವರು ಇಸ್ಲಾಮಿಕ್ ಸ್ಟೇಟ್ ಸೇರಿದ್ದಾರೆ ಎಂದು 2018ರಲ್ಲಿ ಸುದೀಪ್ತೊ ಹೇಳಿದ್ದರು. 2018ರಲ್ಲಿ ಅವರ ನಿರ್ದೇಶನದ 'ಇನ್ ದಿ ನೇಮ್ ಆಫ್ ಲವ್' ಸಾಕ್ಷ್ಯಚಿತ್ರ ಬಿಡುಗಡೆಯಾಗಿತ್ತು. 52 ನಿಮಿಷಗಳ ಈ ಸಾಕ್ಷ್ಯಚಿತ್ರದಲ್ಲಿ, '2009ರಿಂದ ಕೇರಳದ 17,000 ಮತ್ತು ಮಂಗಳೂರಿನ 15,000 ಹಿಂದೂ-ಕ್ರೈಸ್ತ ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ. ಅವರು ಸಿರಿಯಾ, ಲೆಬನಾನ್, ಅಫ್ಗಾನಿಸ್ತಾನಕ್ಕೆ ಹೋಗಿದ್ದಾರೆ. ಅವರನ್ನು ಇಸ್ಲಾಮಿಕ್ ಸ್ಟೇಟ್ ಮತ್ತು ತಾಲಿಬಾನ್ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ನಿಯೋಜನೆ ಮಾಡಲಾಗಿದೆ' ಎಂದು ವಿವರಿಸಲಾಗಿತ್ತು.

ಆದರೆ ಈಗ ಬಿಡುಗಡೆಯಾಗಬೇಕಿರುವ 'ದಿ ಕೇರಳ ಸ್ಟೋರಿ' ಚಲನಚಿತ್ರದಲ್ಲಿ, ಕೇರಳ ಒಂದರಿಂದಲೇ 32,000 ಹಿಂದೂ-ಕ್ರೈಸ್ತ ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಸುದೀಪ್ತೊ ಸೇನ್

ಉಮ್ಮನ್ ಚಾಂಡಿ ಹೇಳಿದ್ದೇ ಬೇರೆ...

2012ರಲ್ಲಿ ಕೇರಳದ ಮುಖ್ಯಮಂತ್ರಿಯಾಗಿದ್ದ ಉಮ್ಮನ್ ಚಾಂಡಿ ಅವರು, ರಾಜ್ಯದಲ್ಲಿನ ಮತಾಂತರದ ಬಗ್ಗೆ ವಿಧಾನಸಭೆಗೆ ಮಾಹಿತಿ ನೀಡಿದ್ದರು. 2012ರ ಜೂನ್ 25ರಂದು ವಿಧಾನಸಭೆಯಲ್ಲಿ ಮಾತನಾಡಿದ್ದ ಚಾಂಡಿ, '2006ರಿಂದ 2012ರವರೆಗೆ ರಾಜ್ಯದಲ್ಲಿ ಒಟ್ಟು 2,667 ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ' ಎಂದು ಮಾಹಿತಿ ನೀಡಿದ್ದರು. ಚಾಂಡಿ ಅವರು ತಮ್ಮ ಮಾತಿನಲ್ಲಿ ಎಲ್ಲಿಯೂ 'ಪ್ರತಿ ವರ್ಷ' ಎಂಬ ಪದಗಳನ್ನು ಬಳಸಿರಲಿಲ್ಲ. ಜತೆಗೆ ವಾರ್ಷಿಕವಾಗಿ ಎಷ್ಟು ಯುವತಿಯರು ಇಸ್ಲಾಂಗೆ ಮತಾಂತರವಾಗುತ್ತಿದ್ದಾರೆ ಎಂಬ ಪ್ರತ್ಯೇಕ ದತ್ತಾಂಶವನ್ನೂ ನೀಡಿರಲಿಲ್ಲ. ಈ ಬಗ್ಗೆ ಇಂಡಿಯಾ ಟುಡೇ, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಪ್ರಕಟಿಸಿದ್ದವು.

ಆದರೆ, ಚಾಂಡಿ ಅವರು ನೀಡಿದ್ದ ಮಾಹಿತಿಯನ್ನು ಚಲನಚಿತ್ರದ ನಿರ್ದೇಶಕ ಸಂಪೂರ್ಣವಾಗಿ ತಿರುಚಿದ್ದಾರೆ. 'ಪ್ರತಿ ವರ್ಷ 2,800ರಿಂದ 3,200 ಜನರೆಂದರೆ, 10 ವರ್ಷಕ್ಕೆ 32,000 ಯುವತಿಯರಾದರು. ಅದನ್ನೇ ನಾನು 32,000 ಎಂದು ಅಂದಾಜಿಸಿದ್ದೇನೆ' ಎಂದು ಸುದಿಪ್ತೊ ಹೇಳಿದ್ದಾರೆ. ಹೀಗೆ ಅವರು ತಪ್ಪು-ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಆಲ್ಟ್‌ನ್ಯೂಸ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ. ಬಿಬಿಸಿ ಸಹ ತನ್ನ ವರದಿಯಲ್ಲಿ ಇದೇ ಮಾತನ್ನು ಹೇಳಿದೆ.

'2016ರಲ್ಲಿ ಕೇರಳದ 21 ಜನರು ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆ ಸೇರಲು ದೇಶ ತೊರೆದಿದ್ದರು. ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆದ ನಂತರ ತನ್ನ ನೆಲದಲ್ಲಿದ್ದ ಇಸ್ಲಾಮಿಕ್ ಸ್ಟೇಟ್ ಉಗ್ರರನ್ನು ಜೈಲಿಗೆ ಹಾಕಿತ್ತು. ಅವರಲ್ಲಿ ಭಾರತದ ನಾಲ್ವರು ಯುವತಿಯರೂ ಇದ್ದರು. ಕೇರಳದಿಂದ ಈವರೆಗೆ 15-16 ಯುವತಿಯರು ಇಸ್ಲಾಮಿಕ್ ಸ್ಟೇಟ್ ಸೇರಲು ಮತಾಂತರವಾಗಿರಬಹುದು. ಆದರೆ, 32,000 ಯುವತಿಯರು ಮತಾಂತರವಾಗಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ಮಾತು' ಎಂದು ಕೇರಳದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ ಎಂದು ಬಿಬಿಸಿ 2022ರ ನವೆಂಬರ್‌ನಲ್ಲೇ ವಿಸ್ತೃತ ವರದಿ ಪ್ರಕಟಿಸಿತ್ತು.

ಕೇರಳದಲ್ಲಿ ಬಲವಂತದ ಮತಾಂತರ ಮತ್ತು ಇಸ್ಲಾಮಿಕ್ ಸ್ಟೇಟ್‌ನ ಕೈವಾಡ ಕುರಿತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಒಟ್ಟು 89 ಪ್ರಕರಣಗಳನ್ನು ದಾಖಲಿಸಿತ್ತು. 2015-2017ರ ನಡುವೆ 89 ಅಂತರಧರ್ಮೀಯ ವಿವಾಹವಾಗಿದ್ದ ಜೋಡಿಗಳನ್ನು ಎನ್‌ಐಎ ಪ್ರಶ್ನಿಸಿತ್ತು. ದೀರ್ಘಾವಧಿಯ ವಿಚಾರಣೆಯ ನಂತರ 80 ಜೋಡಿಗಳ ವಿರುದ್ಧ ದಾಖಲಾಗಿದ್ದ ಬಲವಂತದ ಮತಾಂತರ ಮತ್ತು ವಿವಾಹದ ಪ್ರಕರಣವನ್ನು ಸ್ವತಃ ಎನ್‌ಐಎ ವಜಾ ಮಾಡಿತ್ತು. ಒಂಬತ್ತು ಪ್ರಕರಣಗಳಲ್ಲಷ್ಟೇ ಇಸ್ಲಾಮಿಕ್ ಸ್ಟೇಟ್‌ನ ನಂಟು ಇತ್ತು ಎಂದು ಎನ್‌ಐಎ ಅಧಿಕಾರಿಗಳು ಹೇಳಿದ್ದರು ಎಂದು ಬಿಬಿಸಿ ತನ್ನ ವರದಿಯಲ್ಲಿ ವಿವರಿಸಿತ್ತು.

ಭಾರತೀಯರು ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆ ಸೇರುತ್ತಿರುವ ಬಗ್ಗೆ ಎನ್‌ಐಎ, ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು. ಯುವಕರು ಮತ್ತು ಯುವತಿಯರು ಸೇರಿ, ಕೇರಳದ 100 ಮಂದಿ ಇಸ್ಲಾಮಿಕ್ ಸ್ಟೇಟ್ ಸೇರಿರಬಹುದು. ಈವರೆಗೆ ಇಸ್ಲಾಮಿಕ್ ಸ್ಟೇಟ್ ಸೇರಿದ ಭಾರತೀಯರ ಸಂಖ್ಯೆ 270 ಇರಬಹುದು ಎಂದು ಎನ್‌ಐಎ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು.

ಉಮ್ಮನ್ ಚಾಂಡಿ

ಕೇರಳದ 32,000 ಹಿಂದೂ ಮತ್ತು ಕ್ರೈಸ್ತ ಯುವತಿಯರು ಇಸ್ಲಾಂಗೆ ಮತಾಂತರವಾಗಿದ್ದಾರೆ ಮತ್ತು ಇಸ್ಲಾಮಿಕ್ ಸ್ಟೇಟ್ ಸೇರಿದ್ದಾರೆ ಎಂಬ ಮಾಹಿತಿ ರಾಜ್ಯ ಸರ್ಕಾರ ಅಥವಾ ರಾಷ್ಟ್ರೀಯ ತನಿಖಾ ಸಂಸ್ಥೆ ಅಥವಾ ಕೇಂದ್ರ ಸರ್ಕಾರದ ಯಾವ ದಾಖಲೆಯಲ್ಲೂ ಇಲ್ಲ.

ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ಆಲ್ಟ್ ನ್ಯೂಸ್

ವಾಹನಗಳ ಮಾರಾಟ ಇಳಿಕೆ

ದೇಶದಲ್ಲಿ ವಾಹನಗಳ ಚಿಲ್ಲರೆ ಮಾರಾಟವು ಈ ಏಪ್ರಿಲ್‌ನಲ್ಲಿ ಇಳಿಕೆಯಾಗಿದೆ. 2022ರ ಏಪ್ರಿಲ್‌ಗೆ ಹೋಲಿಸಿದರೆ 2023ರ ಏಪ್ರಿಲ್‌ನಲ್ಲಿ ವಾಹನಗಳ ಮಾರಾಟದಲ್ಲಿ ಶೇ 4.03ರಷ್ಟು ಇಳಿಕೆಯಾಗಿದೆ. ದ್ವಿಚಕ್ರವಾಹನ, ಪ್ರಯಾಣಿಕರ ವಾಹನ ಮತ್ತು ಲಘು ಸರಕು ಸಾಗಣೆ ವಾಹನಗಳ ಮಾರಾಟದಲ್ಲಿ ಆಗಿರುವ ಇಳಿಕೆಯಿಂದಾಗಿ ವಾಹನಗಳ ಒಟ್ಟಾರೆ ಮಾರಾಟ ಸಂಖ್ಯೆಯು ಕಡಿಮೆಯಾಗಿದೆ. ವಾಹನಗಳ ಮಾರಾಟದಲ್ಲಿ ಆಗಿರುವ ಇಳಿಕೆಯ ಬಗ್ಗೆ ಆಟೊಮೊಬೈಲ್ ಡೀಲರ್ಸ್ ಅಸೋಸಿಯೇಷನ್ಸ್‌ನ ಫೆಡರೇಷನ್ (ಫಾಡಾ) ಕಳವಳ ವ್ಯಕ್ತಪಡಿಸಿದೆ

2022ರ ಏಪ್ರಿಲ್ | 2023ರ ಏಪ್ರಿಲ್ | ಇಳಿಕೆ ಪ್ರಮಾಣ



● ದ್ವಿಚಕ್ರವಾಹನಗಳ ಚಿಲ್ಲರೆ ಮಾರಾಟವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. 2022ರ ಏಪ್ರಿಲ್‌ಗೆ ಹೋಲಿಸಿದರೆ, 2023ರ ಏಪ್ರಿಲ್‌ನಲ್ಲಿ ಮಾರಾಟವಾದ ದ್ವಿಚಕ್ರವಾಹನಗಳ ಸಂಖ್ಯೆಯಲ್ಲಿ ಶೇ 7.3ರಷ್ಟು ಇಳಿಕೆಯಾಗಿದೆ



● ಪ್ರಯಾಣಿಕರ ವಾಹನಗಳ ಮಾರಾಟದಲ್ಲೂ ತುಸು ಇಳಿಕೆಯಾಗಿದೆ. ಬೆಲೆ ಏರಿಕೆ, ಹಣದುಬ್ಬರ ಪ್ರಯಾಣಿಕರ ವಾಹನಗಳ ಮಾರಾಟದಲ್ಲಿನ ಇಳಿಕೆಗೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ



● ಲಘು ಸರಕು ಸಾಗಣೆ ವಾಹನಗಳ (ಎಲ್‌ಸಿವಿ) ಮಾರಾಟವು ದೇಶದ ಆರ್ಥಿಕತೆಯ ಪ್ರಗತಿಯನ್ನು ಸೂಚಿಸುತ್ತದೆ. 2022ರ ಏಪ್ರಿಲ್‌ಗೆ ಹೋಲಿಸಿದರೆ, 2023ರ ಏಪ್ರಿಲ್‌ನಲ್ಲಿ ಮಾರಾಟವಾದ ಎಲ್‌ಸಿವಿಗಳ ಸಂಖ್ಯೆಯಲ್ಲಿ ಶೇ 8.66ರಷ್ಟು ಇಳಿಕೆಯಾಗಿದೆ. ಇದು ಯಾವುದೇ ವರ್ಗದ ವಾಹನಗಳ ಮಾರಾಟದಲ್ಲಿ ಆದ ಗರಿಷ್ಠ ಪ್ರಮಾಣದ ಇಳಿಕೆಯಾಗಿದೆ

ಆಧಾರ: ಫಾಡಾ ಮಾಸಿಕ ಮಾರಾಟ ವರದಿ, ಪಿಟಿಐ



● 2023ರ ಏಪ್ರಿಲ್‌ನಲ್ಲಿ ದೇಶದಾದ್ಯಂತ ಮಾರಾಟವಾದ ಎಲ್ಲಾ ಸ್ವರೂಪದ ವಾಹನಗಳ ಒಟ್ಟು ಸಂಖ್ಯೆ 17.24 ಲಕ್ಷ. ಆದರೆ, 2022ರ ಏಪ್ರಿಲ್‌ನಲ್ಲಿ 17.97 ಲಕ್ಷ ವಾಹನಗಳು ಮಾರಾಟವಾಗಿದ್ದವು. ವರ್ಷದ ಹಿಂದಕ್ಕೆ ಹೋಲಿಸಿದರೆ, ಈ ಏಪ್ರಿಲ್‌ನಲ್ಲಿ ಮಾರಾಟವಾದ ವಾಹನಗಳ ಸಂಖ್ಯೆಯಲ್ಲಿ 73,000ದಷ್ಟು ಕಡಿಮೆಯಾಗಿದೆ

ಜಿಎಸ್‌ಟಿ ಇಳಿಸಿ: ಫಾಡಾ ಒತ್ತಾಯ

ದ್ವಿಚಕ್ರ ವಾಹನಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಡಿತ ಮಾಡಬೇಕು ಎಂದು ಜಿಎಸ್‌ಟಿ ಮಂಡಳಿಯನ್ನು ಫಾಡಾ ಒತ್ತಾಯಿಸಿದೆ. ದ್ವಿಚಕ್ರ ವಾಹನಗಳ ಮೇಲೆ ಶೇ 28ರಷ್ಟು ಗರಿಷ್ಠ ಜಿಎಸ್‌ಟಿ ವಿಧಿಸುತ್ತಿರುವುದರಿಂದಲೇ ಅವುಗಳ ಮಾರಾಟಕ್ಕೆ ತೊಡಕಾಗಿದೆ. ಹೀಗಾಗಿ ದ್ವಿಚಕ್ರವಾಹನಗಳ ಮೇಲಿನ ಜಿಎಸ್‌ಟಿಯನ್ನು ಶೇ 28ರಿಂದ ಶೇ 18ಕ್ಕೆ ಇಳಿಸಬೇಕು. ಆಗ ಅವುಗಳ ಮಾರಾಟ ಬೆಲೆಯಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಲಿದ್ದು, ಆನ್‌ರೋಡ್ ಬೆಲೆ ಸಹ ಇಳಿಕೆಯಾಗಲಿದೆ. ಇದರಿಂದ ಅವುಗಳ ಮಾರಾಟ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಫಾಡಾ ತನ್ನ ಮಾಸಿಕ ವರದಿಯಲ್ಲಿ ಒತ್ತಾಯಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'250ಕ್ಕೂ ಹೆಚ್ಚು ಸ್ಥಳೀಯ ಮುಸ್ಲಿಮರು ಕೋಲ್ಕತ್ತದ ದುಬಾರಿ ಕ್ವೆಸ್ಟ್ ಮಾಲ್‌ಗೆ ನುಗ್ಗಿ ಗೂಂಡಾಗಿರಿ ಪ್ರದರ್ಶಿಸಿದ್ದಾರೆ. ನಗರದಲ್ಲಿ 43 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇದ್ದಿದ್ದರಿಂದ ಅದರಿಂದ ಪಾರಾಗಲು ಮಾಲ್‌ನಲ್ಲಿ ಆಶ್ರಯ ಪಡೆದಿದ್ದಾರೆ' ಎಂದು ಹೇಳಲಾಗುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಮಾಲ್‌ನ ಒಳಗೆ ನುಗ್ಗಿದ ಅವರು ಉಚಿತವಾಗಿ ಊಟ ನೀಡುವಂತೆ ಅಲ್ಲಿ ಫುಡ್‌ಕೋರ್ಟ್ ನಡೆಸುವವರನ್ನು ಬೆದರಿಸಿದ್ದಾರೆ. ತಮಗೆ ಈದ್ ಉಡುಗೊರೆ ನೀಡುವಂತೆ ಅಲ್ಲಿನ ಅಂಗಡಿಯವರಿಗೆ ಬೇಡಿಕೆ ಇಟ್ಟಿದ್ದಾರೆ. ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ. ಮಾಲೀಕ ಸಂಜೀವ್ ಗೊಯೆಂಕಾ ಏನೂ ಮಾಡಲಾಗದೆ ಅಸಹಾಯಕರಾಗಿದ್ದಾರೆ. ಇದು ಕೋಲ್ಕತ್ತದ ನೈಜ ಸ್ಥಿತಿ. ಇಂದು ಮಾಲ್‌ಗೆ ಬಂದಿರುವ ಈ ಸ್ಥಿತಿಯು ನಾಳೆ ಜನವಸತಿ ಪ್ರದೇಶಗಳಿಗೂ ಬರಬಹುದು' ಎಂದು ಟ್ವಿಟರ್ ಹಾಗೂ ಫೇಸ್‌ಬುಕ್‌ನಲ್ಲಿ ಬರೆಯಲಾಗಿದೆ. ಆದರೆ ಇದು ತಿರುಚಲಾದ ಮಾಹಿತಿ.

ಮಾಲ್‌ನ ಮಾಲೀಕರೂ ಆಗಿರುವ ಸಂಜೀವ್ ಗೊಯೆಂಕಾ ಅವರ ಸಿಇಎಸ್‌ಇ ಸಂಸ್ಥೆಯು ನಗರಕ್ಕೆ ವಿದ್ಯುತ್ ಪೂರೈಸುತ್ತಿದೆ. ಕೋಲ್ಕತ್ತದಲ್ಲಿ ಏಪ್ರಿಲ್ 16 ಹಾಗೂ 17ರಂದು 12 ಗಂಟೆ ವಿದ್ಯುತ್ ವ್ಯತ್ಯಯವಾಗಿತ್ತು. 25 ಸ್ಥಳೀಯರು ಸೆಕೆ ತಾಳಲಾರದೆ ಮಧ್ಯರಾತ್ರಿಯ ವೇಳೆ ಮಾಲ್ ಪ್ರವೇಶಿಸಿದ್ದಾರೆ. ಆದರೆ 250ಕ್ಕೂ ಹೆಚ್ಚು ಜನರು ಮಾಲ್‌ಗೆ ನುಗ್ಗಿದ್ದರು ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಮಧ್ಯರಾತ್ರಿ ಆಗಿದ್ದರಿಂದ ಮಾಲ್‌ನ ಅಂಗಡಿಗಳೆಲ್ಲವೂ ಬಂದ್ ಆಗಿದ್ದವು. ಊಟ ಮತ್ತು ಉಡುಗೊರೆಗೆ ಅವರು ಬೇಡಿಕೆ ಇಟ್ಟಿದ್ದರು ಎಂಬುದರಲ್ಲಿಯೂ ಸತ್ಯಾಂಶವಿಲ್ಲ. ಅಲ್ಲಿ ಯಾವ ಗಲಾಟೆಯೂ ನಡೆದಿಲ್ಲ, ಮಾಲ್‌ಗೆ ಹಾನಿಯೂ ಆಗಿಲ್ಲ. ಪೊಲೀಸರು ಅವರನ್ನೆಲ್ಲಾ ಹೊರಗೆ ಕಳುಹಿಸಿದ್ದಾರೆ. ಈ ಬಗ್ಗೆ ಮಾಲ್‌ನ ಉಪಾಧ್ಯಕ್ಷ ಸಂಜೀವ್ ಮೆಹ್ರಾ ಅವರು ಹೇಳಿಕೆ ನೀಡಿದ್ದು, ಸುಳ್ಳು ಸುದ್ದಿ ಹರಡುವವರ ವಿರುದ್ಧ ಸೈಬರ್ ಪೊಲೀಸರಿಗೆ ದೂರು ನೀಡಿದ್ದಾರೆ. ಮಾಲ್‌ಗೆ ನುಗ್ಗಿದ್ದವರೆಲ್ಲಾ ಮುಸ್ಲಿಮರೇ ಎಂಬುದು ದೃಢಪಟ್ಟಿಲ್ಲ ಎಂದೂ ಆಲ್ಟ್ ನ್ಯೂಸ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಪೂರ್ಣಿಮಾ ಗಂ. 23-04 ನಕ್ಷತ್ರ: ಸ್ವಾತಿ ಗಂ. 21.39 ಯೋಗ: ಸಿದ್ಧಿ(ಆಸ್ರಿಕ್) ಗಂ. 09-16, ಕರಣ: ವಿಷ್ಟಿ ಗಂ. 11-28, ಮೇಷ ಮಾಸದ 21 ನೇ ದಿನ, ಮಳೆನಕ್ಷತ್ರ: ಭರಣಿ 3. ರಾಹುಕಾಲ : ಬೆಳಿಗ್ಗೆ 10-30 – 12-00 ಸೂರ್ಯೋದಯ : 06-11 ಸೂರ್ಯಾಸ್ತ : 06-43 ಮುಸ್ಲಿಂ ದಿನಾಂಕ : 14 ಶವ್ವಾಲ್, ದಿನ ವಿಶೇಷ : ವೈಶಾಖಿ ಪೂರ್ಣಿಮಾ, ಬುದ್ಧಪೂರ್ಣಿಮಾ ಅದೃಷ್ಟ ಸಂಖ್ಯೆ : 5, 8

ಮೇಷ: ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಸಾಂಸಾರಿಕ ಅಭಿವೃದ್ಧಿಯ ವಿಷಯದಲ್ಲಿ ಶುಭ ವಾರ್ತೆ ಕೇಳುವಿರಿ. ನ್ಯಾಯಾಂಗ ವಿಭಾಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಆಸಕ್ತಿ ಮೂಡುವುದು.

ವೃಷಭ: ಬಹುದಿನದ ನಿವೇಶನ ಕೊಳ್ಳುವ ಕನಸು ನನಸಾಗಲಿದೆ. ಮನೆಯ ಖರ್ಚಿನಲ್ಲಿ ಹಿಡಿತವಿರಲಿ. ರಾಜಕೀಯ ವರ್ಗದವರು ರಾಜಕಾರಣದ ತಂತ್ರಗಾರಿಕೆ ನಡೆಸುವುದು ಅಗತ್ಯವೆನಿಸುತ್ತದೆ. ಈಶ್ವರನನ್ನು ಆರಾಧಿಸಿರಿ.

ಮಿಥುನ: ವಿದ್ಯಾಭ್ಯಾಸದಲ್ಲಿ ನಿಮ್ಮ ನಿರೀಕ್ಷೆಗೂ ಮೀರಿದ ಫಲಿತಾಂಶ ಹೊಂದುತ್ತೀರಿ. ವೃತ್ತಿರಂಗದಲ್ಲಿ ಹೊಸ ಹೆಜ್ಜೆ ಇಡುವವರಿಗೆ ವಿದ್ಯಾರ್ಹತೆಗಿಂತ ನಿಮ್ಮ ಸ್ವ ಪ್ರತಿಭೆ ಬಹಳ ಮುಖ್ಯವಾದದ್ದು ಎಂಬುವುದು ಅರಿವಾಗುವುದು.

ಕರ್ಕಾಟಕ: ಆನುವಂಶಿಕವಾದ ಬಹುಕಾಲದ ಬೇಡಿಕೆಯೊಂದು ಈಡೇರುವುದರಿಂದ ಕೊಂಚ ನೆಮ್ಮದಿ ಸಿಗಲಿದೆ. ಪ್ರಯಾಣದಲ್ಲಿ ವಂಚನೆ, ಚರ್ಯ, ನಷ್ಟದ ಪ್ರಸಂಗಗಳಿದೆ ಎಚ್ಚರಿಕೆಯಿಂದಿರಿ.

ಸಿಂಹ: ನೀವು ಮಾಡಿದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯಾಗುವ ಯೋಗವಿದೆ. ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ ವೃತ್ತಿಯಲ್ಲಿ ಬಡ್ತಿ, ಸನ್ಮಾನಗಳು ದೊರಕಲಿದೆ. ಕೈತಪ್ಪಿ ಹೋದ ಹಣ ಪುನಃ ಕೈ ಸೇರುವುದು.

ಕನ್ಯಾ: ಉದ್ಯೋಗದಲ್ಲಿ ಸಿಗುವಂತಹ ವರ್ಗಾವಣೆಯ ಅವಕಾಶಗಳನ್ನು ಬಿಟ್ಟುಕೊಳ್ಳಬೇಡಿ. ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು. ನ್ಯಾಯಾಲಯದದ ಮೊರೆ ಹೋಗುವಂತಹ ಕೃತ್ಯಗಳು ನಡೆಯಲಿದೆ.

ತುಲಾ: ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ. ಭವಿಷ್ಯದ ದೃಷ್ಟಿಯಿಂದ ದೊಡ್ಡದು ಸಣ್ಣದು ಎಂಬ ಬೇಧ ಮಾಡದೇ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ.

ವೃಶ್ಚಿಕ: ವ್ಯವಹಾರಸ್ಥರಿಗೆ ಈ ದಿನ ಲಾಭ ಸಿಗಲಾರದು ಹಾಗೆಯೇ ನಷ್ಟವೂ ಇರಲಾರದು. ಅರೋಗ್ಯ ಸ್ಥಿತಿಯಲ್ಲಿ ಸುಧಾರಣೆ ಕಂಡು ಬರುತ್ತದೆ. ನಿರುದ್ಯೋಗಿಗಳಿಗೆ ಹಲವಾರು ಉದ್ಯೋಗಾವಕಾಶ ದೊರಕುತ್ತದೆ.

ಧನು: ಸಂಗಾತಿಯ ಸಲಹೆಗಳಿಗೆ ಗಮನ ಕೊಡಿ. ಸ್ನೇಹಿತರಲ್ಲಿ ಹಣಕಾಸಿನ ವಿಚಾರಕ್ಕೆ ಮನಸ್ತಾಪ ಬರದಂತೆ ಜಾಗರೂಕರಾಗಿರಿ. ಮಕ್ಕಳ ಮಾತುಗಳು ಗೊಂದಲಗಳನ್ನು ಸೃಷ್ಟಿಸಬಹುದು. ಮನೆ ದೇವರ ದರ್ಶನ ಶುಭ ತರುತ್ತದೆ.

ಮಕರ: ವಸ್ತ್ರ ವಿನ್ಯಾಸ, ಚಿತ್ರಕಲೆ, ಕಥೆ-ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ. ಮಲ್ಲಿಕಾರ್ಜುನನ ಅನುಗ್ರಹ ಸಂಪಾದಿಸಿದಲ್ಲಿ ಮತ್ತಷ್ಟು ಸಿಹಿ ಫಲಗಳನ್ನು ಅನುಭವಿಸುವ ಯೋಗವಿದೆ.

ಕುಂಭ: ಪೊಲೀಸ್ ಸಿಬ್ಬಂದಿಗೆ ಹೆಚ್ಚಿನ ಕೆಲಸವಿರಲಿದೆ. ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆಯು ಉತ್ತಮ ರೀತಿಯಲ್ಲಿ ಸಹಾಯಕಾರಿ ಆಗುವುದು. ಮನೆಯಲ್ಲಿ ಶುಭ ಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು.

ಮೀನ: ಶ್ರದ್ಧೆ, ತಾಳ್ಮೆಯಿಂದ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠದಿಂದ ಕಾರ್ಯಸಿದ್ಧಿಯಾಗುವುದು. ನೇಕಾರರಿಗೆ ಉತ್ತಮ ಆದಾಯ ಇರಲಿದೆ. ಕುಲದೇವರ ಆರಾಧನೆಯಿಂದ ಶುಭವಾಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ನವೀಕರಣಕ್ಕೆ ಮಿತಿ

ಮತಿವಂತರಿದ್ದರಲ ನಮ್ಮ ಹಿಂದೆಯುಮಿಲ್ಲಿ |
ಹಿತಚಿಂತಕರು ಜನಕೆ, ಕೃತಪರಿಶ್ರಮರು ? ||
ಅತಿವೈದ್ಯದಿಂದ ಹೊಸರುಜಿನಕೆಡೆಯಾದೀತೊ |
ಮಿತಿಯಿಂ ನವೀಕರಣ – ಮಂಕುತಿಮ್ಮ || 877 ||

ಪದ-ಅರ್ಥ: ಮತಿವಂತರಿದ್ದರಲ = ಮತಿವಂತರು + ಇದ್ದರಲ, ಹಿಂದೆಯುಮಿಲ್ಲಿ = ಹಿಂದೆಯೂ + ಇಲ್ಲಿ, ಕೃತಪರಿಶ್ರಮರು = ಶ್ರಮಿಸಿದವರು, ಅತಿವೈದ್ಯದಿಂದ = ಅತಿಯಾದ ಚಿಕಿತ್ಸೆಯಿಂದ, ಹೊಸರುಜಿನಕಡೆಯಾದೀತೊ = ಹೊಸ + ರುಜಿನಕೆ(ರೋಗಕ್ಕೆ) + ಎಡೆ(ಅವಕಾಶ) + ಆದೀತೊ, ಮಿತಿಯಿಂ = ಮತಿಯಿಂದ.

ವಾಚ್ಯಾರ್ಥ: ಪ್ರಪಂಚದಲ್ಲಿ ನಮಗಿಂತ ಹಿಂದೆ ಬುದ್ಧಿವಂತರು, ಹಿತಚಿಂತಕರು, ಶ್ರಮಿಸಿದವರು ಇದ್ದರಲ್ಲವೆ? ಅತಿಯಾದ ಚಿಕಿತ್ಸೆಯಿಂದ ಹೊಸ ರೋಗ ಬಂದೀತು. ನವೀಕರಣ ಮಿತಿಯಾಗಿರಲಿ.

ವಿವರಣೆ: ನನ್ನಜ್ಜ ಒಂದು ಹಳ್ಳಿಯ ಶಾಲೆಯ ಮುಖ್ಯೋಪಾಧ್ಯಾಯನಾಗಿದ್ದ. ಅವನು ವೈದ್ಯನೂ ಹೌದು. ಅವನ ಔಷಧಿಗಳಿಗೆ ಬಹಳ ಜನ ಬರುತ್ತಿದ್ದರು. ಅವನು ಯಾರಿಂದಲೂ ಒಂದು ಪೈಸೆಯನ್ನೂ ಪಡೆದವನಲ್ಲ. ಒಂದು ದಿನ ಆ ಊರಿನ ಗೌಡರು ತಮ್ಮ ಮಗನನ್ನು ಕರೆದುಕೊಂಡು ಬಂದರಂತೆ. ಆ ಹುಡುಗ ಸೊಣಕಲ, ಮುಖದಲ್ಲಿ ತೇಜವೇ ಇಲ್ಲ. ಅಜ್ಜ ಅವನನ್ನು ಪರೀಕ್ಷೆ ಮಾಡಿ, ಹುಡುಗನಿಗೆ ರಕ್ತದ ಕೊರತೆ ಇದೆ, ಆರೋಗ್ಯವೃದ್ಧಿಗೆ ದಿನಾಲೂ ಬಾದಾಮಿ, ದ್ರಾಕ್ಷಿಗಳನ್ನು ತಿನ್ನಿಸಿ, ಮನೆಯಲ್ಲಿ ಹೈನಕ್ಕೇನು ಕೊರತೆ, ಮಗನಿಗೆ ಸ್ವಲ್ಪ ಬೆಣ್ಣೆ ಮೊಸರು ತಿನ್ನಿಸಿ ಎಂದು ಹೇಳಿದ. ಆಮೇಲೆ ಸ್ವರ್ಣಭಸ್ಮವನ್ನು ಕೊಟ್ಟು, ಸೂಜಿಯನ್ನು ಅದ್ದಿ ಅದಕ್ಕೆ ಅಂಟಿದ್ದನ್ನು ಮಾತ್ರ ಹಾಲಿನಲ್ಲಿ ಹಾಕಿಕೊಡಿ ಎಂದು ತಿಳಿಸಿ ಕಳುಹಿಸಿದ. ಮೂರು ದಿನಗಳ ನಂತರ ಆ ಹುಡುಗನನ್ನು ನಾಲ್ಕು ಜನ ಹೊತ್ತುಕೊಂಡೇ ಬಂದರಂತೆ. ಆತ ಕುಸಿದು ಹೋಗಿ, ನಿತ್ರಾಣನಾಗಿ, ಕಣ್ಣಲ್ಲೇ ಜೀವ ಹಿಡಿದಿದ್ದ. ಅಜ್ಜ ಗಾಬರಿಯಿಂದ ಏನಾಯಿತು ಎಂದು ಕೇಳಿದ. ಅವನಿಗೆ ತಿಳಿದದ್ದು ಇಷ್ಟು, ಗೌಡರು ಮಗನ ಆರೋಗ್ಯ ಬೇಗನೇ ಸುಧಾರಿಸಲೆಂದು ನಿತ್ಯ ಕಾಲು ಕಿಲೋ ಬೆಣ್ಣೆ ತಿನ್ನಿಸಿದರು, ಸಿಕ್ಕಾಪಟ್ಟೆ ಬಾದಾಮಿ ಸೇವನೆಯಾಯಿತು. ಬರೀ ಸೂಜಿಯ ಮೊನೆಗೆ ಹತ್ತಿದ ಸ್ವರ್ಣಭಸ್ಮ ಹೇಗೆ ಸಾಕಾದೀತು ಎಂದು ಅರ್ಧ ಚಮಚೆ ಹಾಕಿ ಹಾಲು ಕುಡಿಸಿದರು. ಬಡಜೀವ ಈ ಆಹಾರದಾಳಿಯನ್ನು ಹೇಗೆ ತಡೆದೀತು? ಅತಿಸಾರವಾಗಿ ಹುಡುಗ ಈ ಸ್ಥಿತಿಗೆ ಬಂದಿದ್ದ. ಇದೇ ಅತಿವೈದ್ಯದಿಂದಾದ ಅನಾಹುತ. ನಮ್ಮಲ್ಲಿ ಕೆಲವು ಸಮಾಜೋದ್ಧಾರಕರ ಮನಸ್ಥಿತಿಯೂ ಇದೇ. ಪ್ರಪಂಚವನ್ನು ತೀವ್ರವಾಗಿ ಬದಲಾಯಿಸಬೇಕು. ನವೀಕರಣ ತ್ವರಿತವಾಗಿ ಜರುಗಬೇಕು ಎಂಬುದು ಅವರ ಯೋಚನೆ. ಆದರೆ ಜಗತ್ತು ಅಷ್ಟು ಬೇಗ ಬದಲಾಗುವುದಿಲ್ಲ. ನಾವು ಬಹುದೊಡ್ಡ ಸಮಾಜ ಚಿಂತಕರೆಂದು ಭಾವಿಸುವಾಗ ಹಿಂದೆಯೂ ಅನೇಕ ಬುದ್ಧಿವಂತರು, ಸಮಾಜಚಿಂತಕರು, ಸದಾ ಶ್ರಮಿಸಿದವರು ಇದ್ದರು ಎಂಬುದನ್ನು ನೆನಪಿಡಬೇಕು. ಯಾವ ಬದಲಾವಣೆಯೂ ರೋಷಾವೇಶದಿಂದ ಆಗದು. ಸಮಾಜ ಚರಿತ್ರೆಯ ಆಳವಾದ ಅಧ್ಯಯನ, ಮನುಷ್ಯ ಸ್ವಭಾವದ ತಿಳಿವಳಿಕೆ ಇವುಗಳನ್ನು ತಿಳಿಯದೆ ಮಾಡಿದ ಬದಲಾವಣೆ ಭಯಂಕರವಾದ ಹೊಸರೋಗವಾಗಿ ಕಾಡೀತು. ಆದ್ದರಿಂದ ನಾವು ಭಾವಿಸಿದ ನವೀಕರಣ ತಕ್ಷಣವೇ ಆಗಲಿಲ್ಲವೆಂದು ಸಂಕಟಪಡುವುದು ನ್ಯಾಯವಲ್ಲ. ಅದು ಒಂದು ಮಿತಿಯಲ್ಲಿ, ನಿಧಾನವಾಗಿ ಆಗುವಂಥದ್ದು. ಅದಕ್ಕೆ ಕಾಲಾವಕಾಶಬೇಕು. ಮುಖ್ಯವಾಗಿ ತಾಳ್ಮೆ ಬೇಕು.

ಪದಬಂಧ 5309

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರೇಮಿಗಳ ಹುಸಿಜಗಳವಿದು (6)
4.ದ್ರವದಿಂದ ತುಂಬಿದುದು (4)
5.ಕವಚ ಧರಿಸಿ ಕುಳಿತಿರುವ ಓದುಗ (3)
7.ಇದು ಸ್ಥಿರವಾದುದು (3)
10.ಭಾಗಲಬ್ಧ ಕಲಿಯುತ್ತಿರುವ ಜಿಪುಣ! (3)
12.ಬಳ್ಳಿ ಇಲ್ಲಿ ಹಬ್ಬಿದೆ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಕಣ್ಣಿಗೆ ಕಾಣುವ ಸಾಕ್ಷಿ (6)

ಮೇಲಿಂದ ಕೆಳಕ್ಕೆ

1.ಎದುರಾಳಿ ಇಲ್ಲಿದಾನೆ (4)
2.ಹಮ್ಮೀರನಿಗೊಲಿದಿಹ ಶಿವ! (2)
3.ಆಯಾ ಮಾಡಿರುವ ಕ್ಷೌರ! (4)
6.ಬೈರಾಗಿಗಳು ಬಳಸುವ ನೀರಿನ ಪಾತ್ರೆ (4)
7.ಈತ ಪ್ರತಿಷ್ಠಾಪಿಸುವವನು (4)
8.ನೆತ್ತರು ಸುರಿಯುವಿಕೆ (4)
9.ಹೂವಿನ ಶರವಿದು (4)
11.ವಿಷ್ಣುವಿನ ಮುಂದಿರಿಸಿದ ಅಗಲವಾದ ತಟ್ಟೆ (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



5308ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವರಕವಿ 3.ನಿವಾರಣೆ 5.ಸತತ 8.ವಿಲೋಮ 10.ಪಾಯಸ 12.ಸಹಗಮನ 13.ಮರಣ 15.ಕಲಹ 17.ತಕಲಿ 19.ತತ್ವಜ್ಞಾನಿ 20.ತಲೆನೋವು

ಮೇಲಿಂದ ಕೆಳಕ್ಕೆ: 2.ವಿಲಾಸ 3.ನಿಶ್ಚಿತ 4.ಭಿಲೋ 6.ತಲೆಗಡಿಕ 7.ಕ್ಷಯ 8.ವಿರಾಮ 9.ಮಸಣ 10.ಪಾನಕ 11.ಸನ್ನಾಹ 14.ರಥ 16.ಲಜ್ಜೆ 17.ತರ್ಜನಿ 18.ಲಿಖಿತ

ಸುಡೊಕು 5695

				8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5694 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಅಮೆರಿಕದಲ್ಲಿ 4 ಲಕ್ಷ ಉದ್ಯೋಗ ಸೃಷ್ಟಿಸಿದ ಭಾರತದ ಕಂಪನಿಗಳು

ವಾಷಿಂಗ್ಟನ್ (ಪಿಟಿಐ): ಭಾರತದ 163 ಕಂಪನಿಗಳು ಅಮೆರಿಕದಲ್ಲಿ ಒಟ್ಟು 40 ಬಿಲಿಯನ್ ಡಾಲರ್ (ಅಂದಾಜು ₹ 3.27 ಲಕ್ಷ ಕೋಟಿ) ಹೂಡಿಕೆ ಮಾಡಿವೆ. ಇದರಿಂದಾಗಿ ಅವು ಅಲ್ಲಿ ಸುಮಾರು 4.25 ಲಕ್ಷ ಉದ್ಯೋಗ ಸೃಷ್ಟಿಸಿವೆ ಎಂದು ಸಮೀಕ್ಷೆಯೊಂದು ಹೇಳಿದೆ.

ಭಾರತೀಯ ಕೈಗಾರಿಕಾ ಮಹಾಸಂಘ (ಸಿಐಐ) ಸಿದ್ಧಪಡಿಸಿರುವ ಸಮೀಕ್ಷಾ ವರದಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಅಮೆರಿಕದಲ್ಲಿ ಭಾರತದ ಕಂಪನಿಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ 185 ಮಿಲಿಯನ್ ಡಾಲರ್ (₹ 1,512 ಕೋಟಿ) ವೆಚ್ಚ ಮಾಡಿವೆ. ಶೇ 85ರಷ್ಟು ಕಂಪನಿಗಳು ಮುಂದಿನ ಕೆಲವು ವರ್ಷಗಳಲ್ಲಿ ಅಮೆರಿಕದಲ್ಲಿ ಇನ್ನಷ್ಟು ಹೂಡಿಕೆ ಮಾಡಲು ಆಲೋಚಿಸಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com or
Scan QR code to access booking form

12ನೇ ವರ್ಷದ ಪುಣ್ಯಸ್ಮರಣೆ

ಬಿ. ಮರಿಯಪ್ಪನವರು
(ಐಟಿಐ–ನಿವೃತ್ತ)
ನಿಧನ: 05–05–2011
ಕವಿತಾ ಪ್ರಿಂಟರ್ಸ್ ಸೆಂಟರ್
ವಿಜಯನಗರ, ಬೆಂಗಳೂರು–560040
ನಿಮ್ಮ ಪ್ರೀತಿ, ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಆಶಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಧರ್ಮಪತ್ನಿ– ಶ್ರೀಮತಿ ಹೆಚ್. ಎಸ್. ಜಯಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು. ಫೋ: 23154164

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಸಿ. ಅಂಕಪ್ಪರೆಡ್ಡಿ
ಬೆಳ್ಳಂದೂರು ನಿಧನ: 05.05.2021
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳು ಕಳೆದರೂ, ನಿಮ್ಮ ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಪ್ರತಿದಿನವೂ ನಿಮ್ಮ ನೆನಪಿನಲ್ಲಿರುವ...
ಶ್ರೀಮತಿ ಶಾಂತಮ್ಮ ಮತ್ತು ಚಂದ್ರ ಶೇಖರ್ ವಿ. ಹಾಗೂ ಕುಟುಂಬದವರು, ಬೆಳ್ಳಂದೂರು

ಚಿರಸ್ಮರಣೆ



ಶ್ರೀ ಬಿ.ಎಂ. ಮಂಚಯ್ಯ
ನಿಧನ : 05.05.2021
ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ (ನಿ), ಬಿಬಿಎಂಪಿ ಹಾಗೂ
ನಿರ್ದೇಶಕರು – ಶ್ರೀ ಸತ್ಯನಾರಾಯಣ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ
ಸದಾ ಸ್ಮರಿಸುವ : ಕುಟುಂಬ ವರ್ಗದವರು

LOOKING FOR JOB OPPORTUNITY
Refer Classifieds on Wednesday

ಷೇರುಪೇಟೆ ವಹಿವಾಟು	556
ಹಿಂದಿನ ಅಂತ್ಯ	61,193
ಇಂದಿನ ಅಂತ್ಯ	61,749



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	18,089
ಇಂದಿನ ಅಂತ್ಯ	18,255
	166
ದಿನದ ಗರಿಷ್ಠ	18,267

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹957 (955)
ಸೂರ್ಯಕಾಂತಿ (ರಿಫೈನ್ಡ್)	₹1000 (1000)
ಪಾಮೊಲಿನ್	₹935 (830)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹146
ಗುಡ್ ಲಾಟ್	₹133

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹271-459
ದ್ವಿತಳಿ (ಬಿ.ವಿ)	₹233-621

ಸ್ಯಾಮ್ಸಂಗ್‌ನಿಂದ ನಿಯೊ ಕ್ಯುಎಲ್‌ಇಡಿ ಟಿವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಮ್ಸಂಗ್ ಕಂಪನಿಯು ಭಾರತದ ಮಾರುಕಟ್ಟೆಗೆ ಹೊಸ ನಿಯೊ ಕ್ಯುಎಲ್‌ಇಡಿ ಟಿ.ವಿ.ಗಳನ್ನು ಬಿಡುಗಡೆ ಮಾಡಿದೆ. ಇವುಗಳ ಗಾತ್ರವು 50 ಇಂಚುಗಳಿಂದ 98 ಇಂಚುಗಳವರೆಗೆ ಇದೆ.

ಸ್ಮಾರ್ಟ್ ಸಾಧನಗಳನ್ನು ಸ್ವಯಂಚಾಲಿತವಾಗಿ ಪತ್ತೆ ಮಾಡಿ ಟಿವಿಯೊಂದಿಗೆ ಸಂಪರ್ಕಿಸುವ 'ಐಓಟಿ ಹಬ್' ವೈಶಿಷ್ಟ್ಯವನ್ನು ಈ ಟಿ.ವಿ.ಗಳು ಹೊಂದಿವೆ.

ನಿಯೊ ಕ್ಯುಎಲ್‌ಇಡಿ 8ಕೆ ಟಿವಿ ಬೆಲೆಯು ₹3,14,990ರಿಂದ ಆರಂಭ ಆಗುತ್ತದೆ. 4ಕೆ ಟಿವಿ ಬೆಲೆ ₹1,41,990ರಿಂದ ಆರಂಭ ಆಗುತ್ತದೆ.

ದ್ವಿಪಕ್ಷೀಯ ವಹಿವಾಟು ವೇಳೆ ಭಾರತದ ಕರೆನ್ಸಿ ಬಳಕೆ: ಅಮಾನತಿನಲ್ಲಿ ಮಾತುಕತೆ

ರೂಪಾಯಿಯಲ್ಲಿ ಪಾವತಿ: ಒಪ್ಪದ ರಷ್ಯಾ

ನವದೆಹಲಿ/ಮುಂಬೈ (ರಾಯಿಟರ್ಸ್): ದ್ವಿಪಕ್ಷೀಯ ವಹಿವಾಟುಗಳ ಸಂದರ್ಭದಲ್ಲಿ ರೂಪಾಯಿ ಮೂಲಕ ಹಣ ಪಾವತಿ ಮಾಡುವ ಬಗ್ಗೆ ನಡೆಯುತ್ತಿದ್ದ ಮಾತುಕತೆಗಳನ್ನು ಭಾರತ ಮತ್ತು ರಷ್ಯಾ ಅಮಾನತಿನಲ್ಲಿ ಇರಿಸಿವೆ. ರೂಪಾಯಿಯಲ್ಲಿ ಹಣ ಸ್ವೀಕರಿಸಲು ರಷ್ಯಾ ಒಪ್ಪದ ಕಾರಣದಿಂದಾಗಿ ಈ ತೀರ್ಮಾನಕ್ಕೆ ಬರಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ.

ಇದು, ಕಡಿಮೆ ಬೆಲೆಗೆ ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವ ಭಾರತದ ತೈಲ ಸಂಸ್ಕರಣ ಕಂಪನಿಗಳಿಗೆ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಭಾರತ ಮತ್ತು ರಷ್ಯಾ ನಡುವಿನ ವಹಿವಾಟಿನಲ್ಲಿ, ರಷ್ಯಾದಿಂದ ಭಾರತಕ್ಕೆ ಪೂರೈಕೆಯಾಗುವ ಸರಕು, ಉತ್ಪನ್ನಗಳ ಪಾಲು ಹೆಚ್ಚಿದೆ. ರೂಪಾಯಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು ಅಪೇಕ್ಷಣೀಯವಲ್ಲ ಎಂಬುದು ರಷ್ಯಾದ ನಿಲುವು ಎಂದು ಮೂಲಗಳು ವಿವರಿಸಿವೆ.

ಮುಖ್ಯಾಂಶಗಳು
- ಭಾರತದ ಕರೆನ್ಸಿಯನ್ನು ಹೆಚ್ಚು ಸಂಗ್ರಹಿಸಿಕೊಳ್ಳಲು ಒಪ್ಪದ ರಷ್ಯಾ
- ಭಾರತದ ಕರೆನ್ಸಿಯ ಪರಿವರ್ತನೆ ಸುಲಭವಲ್ಲ
- ರಷ್ಯಾದಿಂದ ಹೊರಗಡೆಯೂ ನಡೆಯುತ್ತಿದೆ ಪಾವತಿ

ಕೇಂದ್ರ ಹಣಕಾಸು ಸಚಿವಾಲಯ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ರಷ್ಯಾದ ಅಧಿಕಾರಿಗಳಿಂದ ಈ ಕುರಿತು ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಜಾಗತಿಕ ಮಟ್ಟದಲ್ಲಿ ಸರಕುಗಳ ರಫ್ತಿನಲ್ಲಿ ಭಾರತದ ಪಾಲು ಶೇಕಡ 2ರಷ್ಟು ಇದೆ. ಅಲ್ಲದೆ ಭಾರತದ ರೂಪಾಯಿಯನ್ನು ಬೇರೆ ದೇಶಗಳ ಕರೆನ್ಸಿಗಳಿಗೆ ಅಥವಾ ಚಿನ್ನಕ್ಕೆ ಬಹಳ ಸುಲಭವಾಗಿ ಪರಿವರ್ತಿಸಿಕೊಳ್ಳಲು ಆಗುವುದಿಲ್ಲ. ಈ ಕಾರಣಗಳಿಂದಾಗಿ, ಬೇರೆ ದೇಶಗಳಿಗೆ ಭಾರತದ ರೂಪಾಯಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಇರಿಸಿಕೊಳ್ಳುವ ಅಗತ್ಯ ಇರುವುದಿಲ್ಲ.

ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಭಾರತವು ರಷ್ಯಾ ಜೊತೆಗಿನ ವಹಿವಾಟಿನಲ್ಲಿ ರೂಪಾಯಿಯನ್ನು ಪಾವತಿಗೆ ಬಳಸಿಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸಲು ಆರಂಭಿಸಿತು. ಆದರೆ ರೂಪಾಯಿ ಮೂಲಕ ವಹಿವಾಟು ನಡೆದಿರುವ ಬಗ್ಗೆ ವರದಿಗಳು ಇಲ್ಲ. ಬಹುತೇಕ ವಹಿವಾಟುಗಳನ್ನು ಡಾಲರ್‌ನಲ್ಲಿ, ಒಂದಿಷ್ಟು ವಹಿವಾಟುಗಳನ್ನು ಯುಎಇ ದೇಶದ ದಿರ್ಹಮ್‌ನಲ್ಲಿ ನಡೆಸಲಾಗುತ್ತಿದೆ.

ಚೀನಾದ ಕರೆನ್ಸಿ ಯುವಾನ್ ಮೂಲಕ ಅಥವಾ ಇತರ ದೇಶಗಳ ಕರೆನ್ಸಿ ಮೂಲಕ ಹಣ ಪಾವತಿಸಬೇಕು ಎಂದು ರಷ್ಯಾ ಬಯಸುತ್ತಿದೆ. ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳು, ಸರಕುಗಳ ಆಮದು ಮೊತ್ತವು ಐದು ಪಟ್ಟು ಹೆಚ್ಚಾಗಿದೆ.

ಭಾರತದ ವರ್ತಕರು ಕೆಲವು ಪಾವತಿಗಳನ್ನು ರಷ್ಯಾದಿಂದ ಹೊರಗಡೆ ಮಾಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಕಾಗ್ನಿಜೆಂಟ್: 3,500 ಮಂದಿ ವಜಾ?

ನವದೆಹಲಿ (ಪಿಟಿಐ): ವೆಚ್ಚ ಕಡಿತ, ಕಾರ್ಯಾಚರಣೆ ಸುಲಭಗೊಳಿಸಲು ಮತ್ತು ಕಾರ್ಪೊರೇಟ್ ಕಾರ್ಯವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿ ಆಗಿಸಲು ಹೊರಟಿರುವುದರಿಂದ ಅಂದಾಜು 3,500 ಉದ್ಯೋಗಿಗಳ ಮೇಲೆ ಪರಿಣಾಮ ಆಗಲಿದೆ ಎಂದು ಐ.ಟಿ. ಸೇವೆಗಳ ಕಂಪನಿ ಕಾಗ್ನಿಜೆಂಟ್ ಹೇಳಿದೆ.

2023ರ ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯ ಒಟ್ಟು ಸಿಬ್ಬಂದಿ ಸಂಖ್ಯೆ 3.51 ಲಕ್ಷ. 2022ರ ನಾಲ್ಕನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಸಿಬ್ಬಂದಿ ಸಂಖ್ಯೆ 3,800ರಷ್ಟು ಕಡಿಮೆ ಆಗಿದೆ. 2022ರ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ ಸಿಬ್ಬಂದಿ ಸಂಖ್ಯೆಯಲ್ಲಿ 11,110 ಏರಿಕೆ ಕಂಡಿದೆ.

ಕಂಪನಿಯು ಜನವರಿಯಿಂದ–ಡಿಸೆಂಬರ್ ಅವಧಿಯನ್ನು ಹಣಕಾಸು ವರ್ಷವಾಗಿ ಪರಿಗಣಿಸುತ್ತದೆ. ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ವರಮಾನ ಶೇ 3ರಷ್ಟು ಹೆಚ್ಚಾಗಿದ್ದು ₹4,756 ಕೋಟಿಗೆ ತಲುಪಿದೆ.

ಎ.ಐ. ಆಧಾರಿತ ಬಿಂಗ್ ಬಳಕೆಗೆ ಮುಕ್ತ

ಬೆಂಗಳೂರು (ರಾಯಿಟರ್ಸ್): ಮೈಕ್ರೊಸಾಫ್ಟ್ ಕಾರ್ಪೊರೇಷನ್ ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಬಿಂಗ್ ಸರ್ಚ್ ಎಂಜಿನ್ ಅನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಿದೆ.

ಪಠ್ಯದ ಮೂಲಕ ಮಾತ್ರ ನಡೆಸುವ ಶೋಧ ಮತ್ತು ಚಾಟ್‌ಗೆ ಬದಲಾಗಿ ಇಮೇಜ್ ಮತ್ತು ವಿಡಿಯೊ ಮೂಲಕವೂ ಹುಡುಕಾಟ ನಡೆಸುವಂತೆ ಸೇವೆಯಲ್ಲಿ ಬದಲಾವಣೆ ಮಾಡಲಾಗುತ್ತಿದೆ ಎಂದು ಕಂಪನಿಯು ಗುರುವಾರ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

4-5-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	875 (870)
ಪಾಮ್ ವಾರದ ಡೆಲಿವರಿ	933 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (890)

ಚಿನ್ನ–ಬೆಳ್ಳಿ (ಜಿಎಸ್‌ಟಿ ಸೇರಿದ್ದು)

ಅಪರಂಜಿ ಚಿನ್ನ 10ಗ್ರಾಂ 61,300 (60,850)
ಬೆಳ್ಳಿ ಕೆ.ಜಿ. 76,500 (75,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹರಳಿಡ್ಡು	1200-1300
ಹಸಿರು ಸಾಧಾರಣ	800-1000
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	470

ಅಡಿಕೆ ಕಾರ್ಕಳ	
ಹೊಸತು	30000-39500
ಹಳತು	40000-53000
ಕುಮಟಾ	
ಚಿಪ್ಪು	26569-32696
ಕೋಕ	17099-30189
ಹಸಿಅಡಿಕೆ	34299-39299
ಹೊಸಚಾಲಿ	33759-36559
ಸಾಗರ	

ಬಿಳೆಗೋಟು	23099-30470
ಚಾಲಿ	29799-36636
ಕೋಕ	16699-33899
ಕೆಂಪುಗೋಟು	26389-38609
ರಾಶಿ	36899-48629
ಸಿಪ್ಪೆಗೋಟು	5079-21399
ಶಿವಮೊಗ್ಗ	
ಬೆಟ್ಟೆ	47509-53219
ಗೊರಬಲು	28099-34699
ರಾಶಿ	34019-48759
ಸರಕು	51659-82103
ಶಿರಸಿ	

ಬೆಟ್ಟೆ	35899-42899
ಬಿಳೆಗೋಟು	25889-32412
ಚಾಲಿ	33299-36799
ಕೆಂಪುಗೋಟು	25199-32689
ರಾಶಿ	42009-44899
ಯಲ್ಲಾಪುರ	
ಬಿಳೆಗೋಟು	25212-32931
ಚಾಲಿ	33812-38411
ಕೋಕ	16899-31312
ಕೆಂಪುಗೋಟು	26999-34899
ರಾಶಿ	41619-48869
ತಟ್ಟಿಬೆಟ್ಟೆ	3639-94410

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ದನಾ	ಪ್ಲಾಂಟೇಷನ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15400	15375	185.50 ಸೆಂಟ್ಸ್
ಆರ್‌ಪಿ	7980	7600	7700	
ಆರ್‌ಪಿ	10500	10600	10400	ಲಂಡನ್
ಆರ್‌ಸಿ	5830	228 ಎಂಟಿ	5650	2424 ಡಾಲರ್ಸ್

ರಿಲಯನ್ಸ್‌ನಿಂದ ಹಣಕಾಸು ಸೇವೆ ಪ್ರತ್ಯೇಕಿಸಲು ಷೇರುದಾರರ ಒಪ್ಪಿಗೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನಿಂದ ಹಣಕಾಸು ಸೇವೆಗಳ ವಹಿವಾಟನ್ನು ಪ್ರತ್ಯೇಕಗೊಳಿಸಲು ಷೇರುದಾರರು ಮತ್ತು ಸಾಲದಾತರು ಒಪ್ಪಿಗೆ ನೀಡಿದ್ದಾರೆ.

ರಿಲಯನ್ಸ್ ಸ್ಟ್ರಾಟಜಿಕ್ ವೆಂಚರ್ಸ್ ಲಿಮಿಟೆಡ್ (ಆರ್‌ಎಸ್‌ಐಎಲ್) ರಿಲಯನ್ಸ್‌ನ ಅಂಗಸಂಸ್ಥೆ ಆಗಿದ್ದು, ಅದನ್ನು ಪ್ರತ್ಯೇಕಿಸಲು ನಿರ್ಧರಿಸಲಾಗಿದೆ. ಪ್ರತ್ಯೇಕಗೊಂಡ ಬಳಿಕ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್ (ಜೆಎಫ್‌ಎಸ್‌ಎಲ್) ಎಂದು ಮರುನಾಮಕರಣ ಆಗಲಿದೆ.

ಮೇ 2ರಂದು ನಡೆದ ಷೇರುದಾರರ ಸಭೆಯಲ್ಲಿ ಹಣಕಾಸು ಸೇವೆಗಳ ವಹಿವಾಟನ್ನು ಪ್ರತ್ಯೇಕಿಸಲು ಶೇ 99.99ರಷ್ಟು ಮತಗಳು ಬಂದಿವೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ರಿಲಯನ್ಸ್‌ನಲ್ಲಿ ಹೊಂದಿರುವ ಪ್ರತಿ ಷೇರಿಗೆ ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ ₹ 10 ಮುಖಬೆಲೆಯ ಒಂದು ಷೇರು ಸಿಗಲಿದೆ ಎಂದು ಕಂಪನಿ ತಿಳಿಸಿದೆ.

ಹಣಕಾಸು ಸೇವೆಗಳ ವಹಿವಾಟನ್ನು ಪ್ರತ್ಯೇಕಗೊಳಿಸಲು ಆಡಳಿತ ಮಂಡಳಿಯ ಸಮೂಹವು 2022ರ ಅಕ್ಟೋಬರ್‌ನಲ್ಲಿ ಒಪ್ಪಿಗೆ ನೀಡಿತ್ತು.

ಅಡುಗೆ ಎಣ್ಣೆ ಬೆಲೆ ಇಳಿಸಿದ ಮದರ್ ಡೇರಿ

ಒಂದೊಡೆ ಪುಟದಿಂದ...

'ಸೋಯಾ ಎಣ್ಣೆ, ರೈಸ್‌ಬ್ರಾನ್ ಎಣ್ಣೆ, ಸೂರ್ಯಕಾಂತಿ ಎಣ್ಣೆ ಮತ್ತು ಶೇಂಗಾ ಎಣ್ಣೆಯ ಬೆಲೆಯನ್ನು ಇಳಿಕೆ ಮಾಡಲಾಗುತ್ತಿದೆ' ಎಂದು ಮದರ್ ಡೇರಿ ವಕ್ತಾರರು ತಿಳಿಸಿದ್ದಾರೆ.

ಧಾರಾ ರಿಫೈನ್ಡ್ ಸೋಯಾ ಎಣ್ಣೆಯ ಎಂಆರ್‌ಪಿ (1 ಲೀಟರ್ ಪೊಟ್ಟಣ) ₹170 ಇದ್ದಿದ್ದು, ₹150ಕ್ಕೆ ಇಳಿಕೆಯಾಗಿದೆ. ಧಾರಾ ರಿಫೈನ್ಡ್ ರೈಸ್‌ಬ್ರಾನ್ ಎಣ್ಣೆಯ ಎಂಆರ್‌ಪಿ ₹190 ಇದ್ದಿದ್ದು ₹170ಕ್ಕೆ ಇಳಿಕೆಯಾಗಿದೆ.

ಧಾರಾ ರಿಫೈನ್ಡ್ ಸೂರ್ಯಕಾಂತಿ ಎಣ್ಣೆಯ ಬೆಲೆಯು ₹175 ಇದ್ದಿದ್ದು ₹160ಕ್ಕೆ ಇಳಿಕೆ ಆಗಿದೆ. ಧಾರಾ ಶೇಂಗಾ ಎಣ್ಣೆಯ ಎಂಆರ್‌ಪಿ ₹255 ಇದ್ದಿದ್ದು ₹240ಕ್ಕೆ ಬಂದಿದೆ. ಅಡುಗೆ ಎಣ್ಣೆಗಳ ಎಂಆರ್‌ಪಿ ಇಳಿಕೆ ಮಾಡುವಂತೆ ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ತನ್ನ ಸದಸ್ಯರಿಗೆ ಸಲಹೆ ನೀಡಿತ್ತು.

'ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯು ದೇಶದಲ್ಲಿ ಅಡುಗೆ ಎಣ್ಣೆ ಬೆಲೆಯನ್ನು ಕಾಲಕಾಲಕ್ಕೆ ಪರಿಶೀಲಿಸುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆಯು ಆರು ತಿಂಗಳಿನಲ್ಲಿ ತೀವ್ರ ಕುಸಿತ ಕಂಡಿದೆ. ಶೇಂಗಾ, ಸೋಯಾ ಮತ್ತು ಸಾಸಿವೆ ಬೆಳೆ ಹೆಚ್ಚಾಗಿದ್ದರೂ ಸ್ಥಳೀಯ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆಯು ಇಳಿಕೆಯಾಗಿಲ್ಲ' ಎಂದು ಎಸ್‌ಇಎ ಹೇಳಿತ್ತು.

'ಬಹುತೇಕ ಬ್ರ್ಯಾಂಡ್‌ಗಳು ಎಂಆರ್‌ಪಿಯನ್ನು ತಗ್ಗಿಸಿದ್ದರೂ, ತಗ್ಗಿಸಿರುವ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಗೆ ಅನುಗುಣವಾಗಿ ಇಲ್ಲ' ಎಂದು ಕೂಡ ಎಸ್‌ಇಎ ಹೇಳಿತ್ತು. ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು, ಅಡುಗೆ ಎಣ್ಣೆಗಳ ಬೆಲೆ ಇಳಿಕೆ ಮಾಡಿ, ಗ್ರಾಹಕರಿಗೆ ಅನುಕೂಲ ಕಲ್ಪಿಸುವಂತೆ ಸದಸ್ಯರಿಗೆ ಸೂಚಿಸಬೇಕು ಎಂದು ಎಸ್‌ಇಎಗೆ ಸಲಹೆ ನೀಡಿತ್ತು.

ವಿಶೇಷ ನ್ಯಾಯಮಂಡಳಿ ರಚಿಸಲು ಝೆಲೆನ್‌ಸ್ಕಿ ಆಗ್ರಹ

ದಿ ಹೇಗ್/ಪ್ಯಾರಿಸ್ (ಎಪಿ/ಎಎಫ್‌ಪಿ): ಉಕ್ರೇನ್ ಮೇಲಿನ ಆಕ್ರಮಣಕ್ಕೆ ಮತ್ತು ಯುದ್ಧ ಅಪರಾಧಗಳಿಗೆ ರಷ್ಯಾವನ್ನು ಹೊಣೆಯಾಗಿಸಲು ವಿಶೇಷ ನ್ಯಾಯಮಂಡಳಿ ರಚಿಸಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಗುರುವಾರ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯವನ್ನು (ಐಸಿಸಿ) ಒತ್ತಾಯಿಸಿದರು.

ಯುದ್ಧಾಪರಾಧಗಳಿಗಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವಿರುದ್ಧ ಬಂಧನ ವಾರಂಟ್ ಹೊರಡಿಸಿರುವ ಐಸಿಸಿಗೆ ಅವರು ಗುರುವಾರ ದಿಢೀರ್ ಭೇಟಿ ನೀಡಿದರು.

'ರಷ್ಯಾ ಆಕ್ರಮಿತ ಉಕ್ರೇನ್ ಪ್ರದೇಶಗಳಿಂದ ಮಕ್ಕಳ ಗಡೀಪಾರು ಹಾಗೂ ಮಕ್ಕಳನ್ನು ಕಾನೂನುಬಾಹಿರವಾಗಿ ರಷ್ಯಾ ಒಕ್ಕೂಟಕ್ಕೆ ವರ್ಗಾಯಿಸಿರುವ ಯುದ್ಧಾಪರಾಧಗಳಿಗೆ ಪುಟಿನ್ ಮತ್ತು ಅವರ ಅಧಿಕಾರಿಗಳು ಹೊಣೆ' ಎಂದು ಐಸಿಸಿಯ ನ್ಯಾಯಮೂರ್ತಿಗಳು ಕಳೆದ ತಿಂಗಳು ಪ್ರಕಟಿಸಿದ್ದರು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಡಚ್ ಪ್ರಧಾನಿ ಮಾರ್ಕ್ ರುಟ್ಟೆ ಅವರನ್ನು ನೆದರ್‌ಲೆಂಡ್‌ನ ಹೇಗ್‌ನಲ್ಲಿ ಗುರುವಾರ ಭೇಟಿ ಮಾಡಿದರು – ಎಪಿ/ಪಿಟಿಐ ಚಿತ್ರ

ಪುಟಿನ್ ವಿರುದ್ಧ ಐಸಿಸಿಯಲ್ಲಿ ವಿಚಾರಣೆ ನಡೆಯುವ ಸಾಧ್ಯತೆಗಳು ತೀರಾ ವಿರಳ. ಏಕೆಂದರೆ, ಪುಟಿನ್ ವಿರುದ್ಧದ ವಾರಂಟ್ ಜಾರಿಗೊಳಿಸಲು ಐಸಿಸಿ ಪೊಲೀಸ್ ಬಲ ಹೊಂದಿಲ್ಲ. ಪುಟಿನ್ ಅವರ ಹತ್ಯೆಯ ಉದ್ದೇಶದಿಂದ ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಗುರಿಯಾಗಿಸಿ ಬುಧವಾರ ನಸುಕಿನಲ್ಲಿ ಉಕ್ರೇನ್ ಎರಡು ಡ್ರೋನ್ ದಾಳಿ ನಡೆಸಿದೆ ಎಂದು ಆರೋಪಿಸಿರುವ ರಷ್ಯಾ, ಇದಕ್ಕೆ ಕಠಿಣ ಪ್ರತ್ಯುತ್ತರ ನೀಡುವ ಎಚ್ಚರಿಕೆ ಕೊಟ್ಟಿದೆ.

ಪಾಕಿಸ್ತಾನ: ಗುಂಡಿಟ್ಟು 8 ಮಂದಿ ಶಿಕ್ಷಕರ ಹತ್ಯೆ

ಪೆಶಾವರ(ಪಿಟಿಐ): ವಾಯವ್ಯ ಪಾಕಿಸ್ತಾನದ ಬುಡಕಟ್ಟು ಜಿಲ್ಲೆಯಾದ ಕುರ್ರಂ ಪರಚಿನಾರ್ ಪ್ರದೇಶದಲ್ಲಿ ಗುರುವಾರ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಎಂಟು ಮಂದಿ ಶಿಕ್ಷಕರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುರ್ರಂನಲ್ಲಿರುವ ತೇರಿ ಮೇಂಗಲ್ ಹೈಸ್ಕೂಲ್‌ಗೆ ನುಗ್ಗಿದ ದುಷ್ಕರ್ಮಿಯೊಬ್ಬ ಪರೀಕ್ಷಾ ಕರ್ತವ್ಯದಲ್ಲಿದ್ದ ಏಳು ಮಂದಿ ಶಿಕ್ಷಕರನ್ನು ಹತ್ಯೆ ಮಾಡಿ ಪರಾರಿಯಾಗಿದ್ದಾನೆ ಎಂದು ವಿವರಿಸಿದ್ದಾರೆ.

ಪರಾಚಿನಾರ್‌ನಲ್ಲಿರುವ ಶಾಲೋಜನ್ ರಸ್ತೆಯಲ್ಲಿ ಕಾರಿನಲ್ಲಿ ತೆರಳುತ್ತಿದ್ದ ಶಿಕ್ಷಕರೊಬ್ಬರನ್ನು ಇದಕ್ಕೂ ಮೊದಲು ದುಷ್ಕರ್ಮಿಗಳು ಗುಂಡಿಟ್ಟು ಸಾಯಿಸಿದ್ದರು ಎಂದೂ ಹೇಳಿದ್ದಾರೆ.

ಖೈಬರ್ ಪಖ್ತೂನ್ವಾ ಪ್ರಾಂತ್ಯದಲ್ಲಿ ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಸಂಘಟನೆಯ ಕಮಾಂಡರ್ ಅಬ್ದುಲ್ ಜಬ್ಬಾರ್ ಶಾ ಎಂಬಾತನನ್ನು ಭದ್ರತಾ ಪಡೆಗಳು ಹೊಡೆದುರುಳಿಸಿ, ಹಲವರನ್ನು ಬಂಧಿಸಿದ ಎರಡು ದಿನಗಳ ಬಳಿಕ ಈ ದಾಳಿ ನಡೆದಿದೆ.

9 ಪ್ರಕರಣಗಳಲ್ಲಿ ಇಮ್ರಾನ್‌ಗೆ ಜಾಮೀನು ವಿಸ್ತರಣೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಒಂಬತ್ತು ಪ್ರಕರಣಗಳಲ್ಲಿ ಜಾಮೀನು ವಿಸ್ತರಣೆ ಮಾಡಲಾಗಿದೆ.

ಇಮ್ರಾನ್ ಅವರು ಇಸ್ಲಾಮಾಬಾದ್ ಹೈಕೋರ್ಟ್‌ಗೆ ಖುದ್ದಾಗಿ ಹಾಜರಾದ ಬಳಿಕ ಕೋರ್ಟ್ ಜಾಮೀನು ವಿಸ್ತರಣೆ ಮಾಡಿದೆ.

ಈ ಹಿಂದೆ ಎಂಟು ಪ್ರಕರಣಗಳಲ್ಲಿ ಅವರಿಗೆ ಮೇ 3ರವರೆಗೆ ಜಾಮೀನು ವಿಸ್ತರಣೆ ಮಾಡಿ ಕೋರ್ಟ್ ಆದೇಶ ನೀಡಿತ್ತು. ವಿಚಾರಣೆಗೆ ಖುದ್ದಾಗಿ ಹಾಜರಾಗುವಂತೆ ಬುಧವಾರ ತಾಕೀತು ಮಾಡಿತ್ತು.

ಸುಡಾನ್ ಹಿಂಸಾಚಾರ ಪ್ರಚೋದಿಸಿದವರಿಗೆ ನಿರ್ಬಂಧ: ಬೈಡನ್

ವಾಷಿಂಗ್ಟನ್ (ಎಪಿ): ಆಫ್ರಿಕಾದ ದೇಶ ಸುಡಾನ್‌ನಲ್ಲಿ ಇತ್ತೀಚೆಗೆ ನೂರಾರು ಜನರನ್ನು ಬಲಿ ತೆಗೆದುಕೊಂಡ ಸೇನಾ ಸಂಘರ್ಷದ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಮತ್ತು ಅದರಲ್ಲಿ ಭಾಗಿಯಾದವರ ಮೇಲೆ ನಿರ್ಬಂಧ ಹೇರುವ ಕಾರ್ಯಾದೇಶಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಗುರುವಾರ ಸಹಿಹಾಕಿದರು.

ಸುಡಾನ್‌ನ ಶಾಂತಿ, ಭದ್ರತೆ ಮತ್ತು ಸ್ಥಿರತೆಗೆ ಬೆದರಿಕೆಯೊಡ್ಡುವುದು, ಸುಡಾನ್‌ನ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಲು ಯತ್ನಿಸುವುದು, ನಾಗರಿಕರ ಮೇಲೆ ಹಿಂಸಾಚಾರ ನಡೆಸುವುದು ಅಥವಾ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆ ಮಾಡುವುದರಲ್ಲಿ ಕಾರಣವಾದವರನ್ನು ವ್ಯಕ್ತಿಗತ ಹೊಣೆಯಾಗಿಸಿ ಅಮೆರಿಕದ ನಿರ್ಬಂಧದ ಪಟ್ಟಿಗೆ ಸೇರಿಸಲು ಬೈಡನ್ ಆದೇಶ ಹೊರಡಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Pilgrimage Tours

ಊಟ, ಏಸಿ ರೂಂ ನೊಂದಿಗೆ 26.06.2023: ಕಾಶಿ, ದೆಹಲಿ ವಿಮಾನ ಪ್ರವಾಸ, 07.07.2023 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಮಧ್ಯಪ್ರದೇಶ ವಿಮಾನ ಪ್ರವಾಸ, 25.07.2023 ರಾಜಸ್ಥಾನ ಪ್ರವಾಸ. ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್, ತುಮಕೂರು. 8496044942, 8277409101

05.06.2023, ಕಾಶಿ,ಪ್ರಯಾಗರಾಜ್,ಅಯೋಧ್ಯ 16,500/-. 14.06.2023,ಕಾಶಿ,ಗಯಾ, ಪ್ರಯಾಗರಾಜ್,ಅಯೋಧ್ಯ 26,000/-. 08.06.2023,ಚಾರ್ ದಾಮ್ ಯಾತ್ರ, ಅನ್ನಪೂರ್ಣಯಾತ್ರ. 9880079351

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್, 08/06 ಚಾರ್‌ಧಾಮ್, ಕೇದಾರನಾಥ, ಬದ್ರಿನಾಥ್, ಯಮುನೋತ್ರಿ, 22/06 ಅಮರನಾಥ ಯಾತ್ರೆ, 17/05 ಕಾಶಿ, ಅಯೋಧ್ಯ. 9964527782,95910177 82

ಕಾಶಿ ಗಯಾ ಪ್ರಯಾಗ ಪುರಿ,ಕೊನಾರ್ಕ್,ಭುವನೇಶ್ವರ್ 22.05.2023 ರಿಂದ 10 ದಿನಗಳು. ಕ್ಯಾಲ್ ಗುಲ್ ಮಾರ್ಗ್,ಪೆಲ್‌ಗಾಂವ್ ವೈಷ್ಣೋದೇವಿ. 08.06.2023 15.06.2023 ರಿಂದ 9 ದಿನಗಳು. ನೇಪಾಳ,ಮುಕ್ತಿನಾಥ್,ಕಾಶಿ 23.06.2023 ರಿಂದ 10 ದಿನಗಳು. ಸ್ವಯಂಭೂ ಅಮರನಾಥ ಕ್ಯಾಲ್,ವೈಷ್ಣೋದೇವಿ. 05.07.2023 12.07.2023 ರಿಂದ 9 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀತೃಪ್ತಿ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು.18

07.07.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 15.06.2023 10.07.2023 ಭೂತಾನ್ 8 ದಿನಗಳು. 10.06.2023 18.07.2023 ನೇಪಾಳ 9 ದಿನಗಳು. 29.05.2023 ಅಸ್ಸಾಂ,ಮೇಘಾಲಯ, ಅರುಣಾಚಲಪ್ರದೇಶ 9 ದಿನಗಳು. 16.05.2023 25.06.2023 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್,ಮಲ್ಲೇಶ್ವರಂ, ಬೆಂಗಳೂರು.03 9448402248 7022547922

Travel

1.6.2023 ಚಾರ್‌ಧಾಮ್,ವೈಷ್ಣೋದೇವಿ, ಅಮೃತಸರ್, ಹರಿದ್ವಾರ, ಅಯೋಧ್ಯಾ,ಕಾಶಿ 11.6.2023 ಯಮುನೋತ್ರಿ,ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ, ನೈಮಿಶಾರಣ್ಯ, ಅಯೋಧ್ಯಾ,ಕಾಶಿ 29-6-2023 ಅಮರನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಉದ್ಯೋಗಾವಕಾಶ

Wanted

ಬೆಂಗಳೂರಿನಲ್ಲಿ ಮನೆ ಕೆಲಸ ಮಾಡುವವರು, ಮಕ್ಕಳನ್ನು ನೋಡಿ ಕೊಳ್ಳುವವರು (ಮಹಿಳೆ) ಬೇಕಾಗಿದ್ದಾರೆ. ಸಂಬಳ :10k ರಿಂದ 15k ಉಚಿತ ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ: 8296577964

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ M.R.S.ಕಂಪನಿಗೆ ಆಫೀಸ್ ಕೆಲಸಕ್ಕೆ ಮಹಿಳೆಯರು PUC,BA,BCom,BSc, BBM, MA, M.Com, MSc, G.N.M., A.N.M, BSc/MSc Nursing ಆಗಿರುವಂತಹ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ-ವಸತಿ ಸಂಬಳ 15,000 ರಿಂದ 17,000/- ಬೆಂಗಳೂರು-56 ತಕ್ಷಣ ಸಂಪರ್ಕಿಸಿ 7349463892, 8904463086

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೊಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

Part-Time Jobs

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯುಳ್ಳದ್ದಾಗಿದೆ. ಸಂಬಳ 16,000- 80,000. 7760014526, 7795199673

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಕೆಲಸ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತಪರಿಹಾರ ಸ್ತ್ರೀ-ಪುರುಷ ವಶೀಕರಣ/ಪರ್ಸನಲ್ ಪ್ರಾಬ್ಲಂ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ವಿಚಿತ್ರ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

Hotel

ಪುರುಷ ಸಹಾಯಕರು ಬೇಕಾಗಿದ್ದಾರೆ ದಾವಣಗೆರೆ ಬಳಿಯಿರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ. ಸಂಪರ್ಕಿಸಿ: 9945935638/ 9738386489

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಆಯಾಗಳು, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಉಚಿತ ವಸತಿ ಇದೆ.12,000 - 17,000. 8951315839, 9880120052

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾಗುವ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ಜಾತಿ ಗಣತಿಗೆ ಹೈಕೋರ್ಟ್ ತಡೆ

ಪಟ್ನಾ (ಪಿಟಿಐ): ಬಿಹಾರ ಸರ್ಕಾರವು ಕೈಗೊಂಡಿದ್ದ ಜಾತಿ ಗಣತಿಗೆ ಪಟ್ನಾ ಹೈಕೋರ್ಟ್ ಗುರುವಾರ ತಡೆ ನೀಡಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಹಾಗೂ ನ್ಯಾಯಮೂರ್ತಿ ಮಧುರೇಶ್ ಪ್ರಸಾದ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಜಾತಿ ಆಧಾರಿತ ಗಣತಿಯನ್ನು ಕೂಡಲೇ ನಿಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

‘ಈಗಾಗಲೇ ಕಲೆಹಾಕಲಾಗಿರುವ ದತ್ತಾಂಶಗಳು ಸುರಕ್ಷಿತವಾಗಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಿ. ಪೀಠವು ಅಂತಿಮ ತೀರ್ಪು ಪ್ರಕಟಿಸುವವರೆಗೂ ಈ ದತ್ತಾಂಶಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ’ ಎಂದೂ ಸರ್ಕಾರಕ್ಕೆ ತಾಕೀತು ಮಾಡಿದೆ.

‘ಅರ್ಜಿದಾರರು ದತ್ತಾಂಶದ ಸಮಗ್ರತೆ ಹಾಗೂ ಸುರಕ್ಷತೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಕುರಿತು ರಾಜ್ಯ ಸರ್ಕಾರವು ವಿವರವಾದ ಮಾಹಿತಿ ಒದಗಿಸಬೇಕಾಗಿದೆ’ ಎಂದು ಪೀಠ ಹೇಳಿದೆ.

‘ಸದ್ಯ ಅನುಸರಿಸುತ್ತಿರುವ ಮಾದರಿಯಲ್ಲಿ ಜಾತಿ ಗಣತಿ ಕೈಗೊಳ್ಳುವುದಕ್ಕೆ ರಾಜ್ಯ ಸರ್ಕಾರಕ್ಕೆ ಯಾವುದೇ ಅಧಿಕಾರ ಇಲ್ಲ. ಇದು ಜನಗಣತಿಗೆ ಸಮಾನವಾಗಿದ್ದು, ಸಂಸತ್ತಿನ ಶಾಸನಾತ್ಮಕ ಅಧಿಕಾರದ ಮೇಲೆ ಪರಿಣಾಮ ಉಂಟುಮಾಡುತ್ತದೆ’ ಎಂದಿದೆ.

ಕ್ಷಮಾ ಅರ್ಜಿ ತಿರಸ್ಕರಿಸಿದ ಮುರ್ಮು

ನವದೆಹಲಿ (ಪಿಟಿಐ): ನಾಲ್ಕು ವರ್ಷದ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ ನಡೆಸಿ, ಮಗುವನ್ನು ಕಲ್ಲಿನಿಂದ ಜಜ್ಜಿ ಹತ್ಯೆ ಮಾಡಿದ ಅಪರಾಧಿ ಸಲ್ಲಿಸಿದ್ದ ಕ್ಷಮಾ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆ. ಘಟನೆಯು 2008ರಲ್ಲಿ ಮಹಾರಾಷ್ಟ್ರದಲ್ಲಿ ನಡೆದಿತ್ತು.

ಗಲ್ಲು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದನ್ನು ಮರುಪರಿಶೀಲಿಸಬೇಕು ಎಂದು ಕೋರಿ ವಸಂತ ಸಂಪತ್ ದುಪಾರೆ ಸಲ್ಲಿಸಿದ್ದ ಅರ್ಜಿಯನ್ನು 2017ರಲ್ಲಿ ಸುಪ್ರೀಂ ಕೋರ್ಟ್ ವಜಾ ಮಾಡಿತ್ತು.

‘ಕ್ಷಮಾದಾನದ ನೀಡುವ ಕುರಿತು ಕೇಂದ್ರ ಗೃಹ ಇಲಾಖೆಯು ಇದೇ ಮಾರ್ಚ್ 28ರಂದು ಶಿಫಾರಸು ಮಾಡಿತ್ತು’ ಎಂದು ರಾಷ್ಟ್ರಪತಿಭವನದ ಕಾರ್ಯದರ್ಶಿಯು ತಿಳಿಸಿದ್ದಾರೆ.

ಇನ್ನು ಎಐಆರ್ ಬದಲು 'ಆಕಾಶವಾಣಿ'

ನವದೆಹಲಿ (ಪಿಟಿಐ): ಪ್ರಸಾರ ಭಾರತಿಯು ತನ್ನ ರೇಡಿಯೊ ಸೇವೆಗಳಲ್ಲಿ ‘ಆಲ್ ಇಂಡಿಯಾ ರೇಡಿಯೊ’ (ಎಐಆರ್) ಬದಲು ‘ಆಕಾಶವಾಣಿ’ ಎಂದು ಉಲ್ಲೇಖಿಸಲು ನಿರ್ಧರಿಸಿದೆ.

ಎಐಆರ್ ಅನ್ನು ಆಕಾಶವಾಣಿ ಎಂದು ಬದಲಿಸಿರುವ ಶಾಸನಬದ್ಧ ನಿಬಂಧನೆಯು ತಕ್ಷಣದಿಂದ ಜಾರಿಯಾಗಬೇಕು ಎಂದು ಆಕಾಶವಾಣಿ ಮಹಾನಿರ್ದೇಶಕಿ ವಸುಧಾ ಗುಪ್ತಾ ಅವರು ಹೊರಡಿಸಿರುವ ಆಂತರಿಕ ಆದೇಶದಲ್ಲಿ ಹೇಳಲಾಗಿದೆ.

‘ಇದು ಸರ್ಕಾರದ ತುಂಬಾ ಹಿಂದಿನ ನಿರ್ಧಾರವಾಗಿದ್ದು, ಕಾರ್ಯರೂಪಕ್ಕೆ ಬಂದಿರಲಿಲ್ಲ. ಈಗ ನಾವು ಜಾರಿಗೆ ತರುತ್ತಿದ್ದೇವೆ’ ಎಂದು ಪ್ರಸಾರ ಭಾರತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೌರವ್ ದ್ವಿವೇದಿ ಹೇಳಿದ್ದಾರೆ.

ನೆಟ್ಟಾರು ಹತ್ಯೆ: ಪೂರಕ ಆರೋಪ ಪಟ್ಟಿ ಸಲ್ಲಿಸಿದ ಎನ್ಐಎ

ಎಂ.ಎಚ್. ತುಫೈಲ್

ನವದೆಹಲಿ (ಪಿಟಿಐ): ‘ಬಿಜೆಪಿ ಯುವ ಮೋರ್ಚಾ ಮಂಗಳೂರು ಜಿಲ್ಲಾ ಘಟಕದ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಷೇಧಿತ ಪಾಪುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಸಂಘಟನೆಯ ಇಬ್ಬರು ಸದಸ್ಯರ ವಿರುದ್ಧ ಕೇಂದ್ರೀಯ ತನಿಖಾ ಸಂಸ್ಥೆಯು (ಎನ್ಐಎ) ಗುರುವಾರ ವಿಶೇಷ ನ್ಯಾಯಾಲಯಕ್ಕೆ ಪೂರಕ ಆರೋಪ ಪಟ್ಟಿ ಸಲ್ಲಿಸಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಪಿಎಫ್ಐನ ಪ್ರಮುಖ ಶಸ್ತ್ರಾಸ್ತ್ರ ತರಬೇತುದಾರನಾಗಿದ್ದ ಎಂ.ಎಚ್. ತುಫೈಲ್ ಮತ್ತು ಮೊಹಮ್ಮದ್ ಜುಬೈರ್ ಎಂಬುವರ ವಿರುದ್ಧ ಐಪಿಸಿಯ ವಿವಿಧ ಕಲಂ ಹಾಗೂ ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಪೂರಕ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಎನ್ಐಎ ವಕ್ತಾರರೊಬ್ಬರು ಹೇಳಿದ್ದಾರೆ.

‘ಪ್ರವೀಣ್ ಹತ್ಯೆಯ ಬಳಿಕ ತುಫೈಲ್ ತಲೆಮರೆಸಿಕೊಂಡಿದ್ದ. ಎನ್ಐಎ ಅಧಿಕಾರಿಗಳು ಇತ್ತೀಚೆಗೆ ಆತನನ್ನು ಬೆಂಗಳೂರಿನಲ್ಲಿ ಬಂಧಿಸಿದ್ದರು. ದೋಷಾರೋಪ ಪಟ್ಟಿಯಲ್ಲಿ ಒಟ್ಟು 21 ಮಂದಿ ಆರೋಪಿಗಳ ಹೆಸರನ್ನು ಉಲ್ಲೇಖಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಜೊತೆ ಜೈಶಂಕರ್ ಮಾತುಕತೆ

ಗಡಿ ಬಿಕ್ಕಟ್ಟು ಶಮನಕ್ಕೆ ಒತ್ತು

ಬೆನೌಲಿಂ (ಗೋವಾ), (ಪಿಟಿಐ): ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಅವರೊಂದಿಗೆ ಗುರುವಾರ ಇಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಶಾಂಘೈ ಸಹಕಾರ ಒಕ್ಕೂಟದ (ಎಸ್‌ಸಿಒ) ವಿದೇಶಾಂಗ ಸಚಿವರ ಸಮಾವೇಶದಲ್ಲಿ ಪಾಲ್ಗೊಳ್ಳುವ ಸಲುವಾಗಿ ಗಾಂಗ್ ಅವರು ಭಾರತಕ್ಕೆ ಭೇಟಿ ನೀಡಿದ್ದಾರೆ. ಸಮಾವೇಶಕ್ಕೂ ಮುನ್ನಾದಿನ ಇಲ್ಲಿನ ರೆಸಾರ್ಟ್‌ನಲ್ಲಿ ಉಭಯ ಸಚಿವರು ಮುಖಾಮುಖಿಯಾಗಿದ್ದು, ಹಲವು ವಿಚಾರಗಳ ಕುರಿತು ಚರ್ಚಿಸಿದ್ದಾರೆ.

‘ಉಭಯ ದೇಶಗಳ ನಡುವಣ ದ್ವಿಪಕ್ಷೀಯ ಬಾಂಧವ್ಯವನ್ನು ವೃದ್ಧಿಸುವ ವಿಚಾರವಾಗಿ ಗಾಂಗ್ ಅವರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದೇನೆ. ಇದಕ್ಕಾಗಿ ಪೂರ್ವ ಲಡಾಖ್‌ನಲ್ಲಿನ ಗಡಿ ಬಿಕ್ಕಟ್ಟನ್ನು ಶಮನಗೊಳಿಸುವುದು ಹಾಗೂ ವಾಸ್ತವ ನಿಯಂತ್ರಣ ರೇಖೆಯ (ಎಲ್ಎಸಿ) ಉದ್ದಕ್ಕೂ ಶಾಂತಿ ಮರುಸ್ಥಾಪಿಸುವುದು ಬಹಳ ಮುಖ್ಯ ಎಂಬುದನ್ನೂ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ’ ಎಂದು ಜೈಶಂಕರ್ ಗುರುವಾರ ಟ್ವೀಟ್ ಮಾಡಿದ್ದಾರೆ.

‘ಎಸ್‌ಸಿಒ, ಬ್ರಿಕ್ಸ್ ಹಾಗೂ ಜಿ–20 ಗುಂಪಿಗೆ ಸಂಬಂಧಿಸಿದ ಹಲವು ವಿಚಾರಗಳ ಕುರಿತಾಗಿಯೂ ನಾವು ಮಾತುಕತೆ ನಡೆಸಿದ್ದೇವೆ’ ಎಂದೂ ಅವರು ಹೇಳಿದ್ದಾರೆ.

‘ಪೂರ್ವ ಲಡಾಖ್‌ನ ಗಡಿಯಲ್ಲಿ ಬಿಕ್ಕಟ್ಟು ಉದ್ಭವಿಸಿದ್ದರಿಂದಾಗಿ ಉಭಯ ದೇಶಗಳ ನಡುವಣ ಬಾಂಧವ್ಯವು ಹಳಸಿದೆ’ ಎಂಬ ವಿಚಾರವನ್ನೂ ಜೈಶಂಕರ್ ಅವರು ಗಾಂಗ್ ಗಮನಕ್ಕೆ ತಂದಿದ್ದಾರೆ. ಕಳೆದ ಎರಡು ತಿಂಗಳಲ್ಲಿ ಉಭಯ ಸಚಿವರು ಎರಡನೇ ಬಾರಿಗೆ ಪರಸ್ಪರ ಮುಖಾಮುಖಿಯಾಗಿದ್ದಾರೆ. ಗಾಂಗ್ ಅವರು ಜಿ–20 ಗುಂಪಿನ ವಿದೇಶಾಂಗ ಸಚಿವರ ಸಮಾವೇಶದಲ್ಲಿ ಭಾಗವಹಿಸುವ ಉದ್ದೇಶದಿಂದ ಈ ವರ್ಷದ ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಆಗ ಕೂಡ ಉಭಯರು ಸಮಾಲೋಚನೆ ನಡೆಸಿದ್ದರು.

ರಷ್ಯಾ ಸಚಿವರೊಂದಿಗೆ ಚರ್ಚೆ: ಜೈಶಂಕರ್ ಅವರು ರಷ್ಯಾದ ವಿದೇಶಾಂಗ ಸಚಿವ ಸರ್ಗಿ ಲಾವರೊವ್ ಅವರೊಂದಿಗೂ ಗುರುವಾರ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

‘ಸುಮಾರು ಒಂದು ಗಂಟೆ ಕಾಲ ಸಭೆ ನಡೆದಿದೆ. ಈ ವೇಳೆ ಉಭಯ ದೇಶಗಳ ನಡುವಣ ಬಾಂಧವ್ಯ ಗಟ್ಟಿಗೊಳಿಸುವುದಕ್ಕಾಗಿ ನ್ಯಾಯಯೋಚಿತವಾದಂತಹ ಬಹು ಧ್ರುವೀಯ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಒಗ್ಗೂಡಿ ಕೆಲಸ ಮಾಡುವುದಕ್ಕೆ ಪರಸ್ಪರರು ಒಪ್ಪಿಗೆ ಸೂಚಿಸಿದ್ದಾರೆ’ ಎಂದು ರಷ್ಯಾದ ಪ್ರಕಟಣೆ ತಿಳಿಸಿದೆ.

ವ್ಯಾಪಾರ ಸಂಬಂಧಿತ ವಿಚಾರಗಳ ಕುರಿತು ಉಭಯ ಸಚಿವರು ಮಾತುಕತೆ ನಡೆಸಿದ್ದಾರೆಯೇ ಇಲ್ಲವೇ ಎಂಬುದು ಗೊತ್ತಾಗಿಲ್ಲ.

ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಅವರೊಂದಿಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಗುರುವಾರ ಮಾತುಕತೆ ನಡೆಸಿದರು

–ಪಿಟಿಐ ಚಿತ್ರ

ಗೋವಾಕ್ಕೆ ಬಂದಿಳಿದ ಬಿಲಾವಲ್ ಭುಟ್ಟೊ

ಬೆನೌಲಿಂ: ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಅವರು ಗುರುವಾರ ಗೋವಾಕ್ಕೆ ಬಂದಿಳಿದಿದ್ದಾರೆ. ಪಾಕಿಸ್ತಾನದ ಸಚಿವರೊಬ್ಬರು 2011ರ ಬಳಿಕ ಇದೇ ಮೊದಲ ಬಾರಿಗೆ ಭಾರತಕ್ಕೆ ಬಂದಿದ್ದು, ಭುಟ್ಟೊ ಅವರು ಇಲ್ಲಿ ನಿಗದಿಯಾಗಿರುವ ವಿದೇಶಾಂಗ ಸಚಿವರ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

‘ಭುಟ್ಟೊ ಹಾಗೂ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ದ್ವಿಪಕ್ಷೀಯ ಮಾತುಕತೆ ನಡೆಸುವ ಸಾಧ್ಯತೆ ಇಲ್ಲ. ಈ ನಿಟ್ಟಿನಲ್ಲಿ ಪಾಕಿಸ್ತಾನವೂ ಆಸಕ್ತಿ ತೋರಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ಗೋವಾಕ್ಕೆ ಭೇಟಿ ನೀಡಿರುವುದಕ್ಕೆ ಖುಷಿಯಾಗಿದೆ. ಈ ಸಮಾವೇಶವು ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ. ಭೇಟಿಯ ಅವಧಿಯಲ್ಲಿ ಎಸ್‌ಸಿಒ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳೊಂದಿಗೆ ಸೌಹಾರ್ದಯುತ ನೆಲೆಯಲ್ಲಿ ಮಾತುಕತೆ ನಡೆಸುವತ್ತ ಮಾತ್ರ ಗಮನ ಹರಿಸುತ್ತೇನೆ’ ಎಂದು ಭುಟ್ಟೊ ಹೇಳಿದ್ದಾರೆ.

ಪಾಕ್‌ನ ಬದ್ಧತೆಗೆ ಸಾಕ್ಷಿ (ಇಸ್ಲಾಮಾಬಾದ್ ವರದಿ): ‘ಎಸ್‌ಸಿಒ ವಿದೇಶಾಂಗ ಸಚಿವರ ಸಮಾವೇಶದಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ನಮ್ಮ ಸಚಿವರು ಭಾರತಕ್ಕೆ ಭೇಟಿ ನೀಡಿದ್ದಾರೆ. ಈ ನಿಲುವು ನಮ್ಮ ಬದ್ಧತೆಗೆ ಸಾಕ್ಷಿಯಾಗಿದೆ’ ಎಂದು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಶರೀಫ್ ಗುರುವಾರ ತಿಳಿಸಿದ್ದಾರೆ.

ಮೈತ್ರಿ ಕರುಣೆಗಳ ಬುದ್ಧಪಥ

• ಎಸ್. ಸೂರ್ಯಪ್ರಕಾಶ ಪಂಡಿತ್


ಇಂದು ಬುದ್ಧ ಪೂರ್ಣಿಮಾ

ಬುದ್ಧ ಹುಟ್ಟಿದ್ದು, ಸಂಬೋಧಿಯನ್ನು (ಎಂದರೆ, ಜ್ಞಾನೋದಯವನ್ನು) ಪಡೆದದ್ದು ಮತ್ತು ಪರಿನಿರ್ವಾಣವನ್ನು(ಶರೀರತ್ಯಾಗ) ಹೊಂದಿದ್ದು – ಈ ಮೂರು ಘಟನೆಗಳು ನಡೆದದ್ದು ವೈಶಾಖದ ಹುಣ್ಣಿಮೆಯಂದೇ ಹೌದು. ಹುಣ್ಣಿಮೆ ಎಂಬುದು ತಂಪಿಗೂ ಆನಂದಕ್ಕೂ ಸಂಕೇತ. ತಂಪಿಗೂ ಆನಂದಕ್ಕೂ ಮೂಲವಾಗತಕ್ಕದ್ದು ಜ್ಞಾನವೇ ಹೌದು – ಎಂಬುದನ್ನು ಬುದ್ಧನ ಈ ಜೀವನಚಕ್ರ ಹೇಳುವಂತಿದೆ.

ಬುದ್ಧನ ಮೊದಲ ಹೆಸರು ‘ಸಿದ್ಧಾರ್ಥ’; ಅವನು ರಾಜಪುತ್ರನಾಗಿ ಜನಿಸಿದವನು. ಆದರೆ ಅವನು ತನಗೆ ಸಹಜವಾಗಿ ಪ್ರಾಪ್ತವಾಗಿದ್ದ ರಾಜ್ಯವನ್ನು ತ್ಯಾಗ ಮಾಡಿದ; ನಾಡನ್ನು ತೊರೆದು ಕಾಡನ್ನು ಸೇರಿದ; ತಪಸ್ಸನ್ನು ಆಚರಿಸಿದ; ಅರಿವನ್ನು ಸಂಪಾದಿಸಿ ‘ಬುದ್ಧ’ ಎನಿಸಿಕೊಂಡ; ಲೋಕಗುರುವಾದ. ಸಿದ್ಧಾರ್ಥನು ಬುದ್ಧನಾದದ್ದು ಅಧಿಕಾರವನ್ನು ತೊರೆದು, ತಪಸ್ವಿಯಾದಾಗಲೇ.

ಸಿದ್ಧಾರ್ಥನು ಬುದ್ಧನಾಗುವ ಮೊದಲು ತಪಸ್ಸಿಗೆ ಕುಳಿತಿದ್ದನಷ್ಟೆ. ಆಗ ಮಾರ, ಎಂದರೆ ಮನ್ಮಥನು ಅವನ ಮೇಲೆ ನಿರಂತರವಾಗಿ ದಾಳಿ ಮಾಡುತ್ತಾನೆ; ಆಮಿಷಗಳ ಮಳೆಯನ್ನೇ ಅವನು ಸಿದ್ಧಾರ್ಥನ ಮೇಲೆ ಸುರಿಸುತ್ತಾನೆ. ಆದರೆ ಸಿದ್ಧಾರ್ಥ ಅವುಗಳಿಂದ ಆಕರ್ಷಿತನಾಗುವುದಿಲ್ಲ; ಎಚ್ಚರವನ್ನು ತಪ್ಪುವುದಿಲ್ಲ; ಸಂಕಲ್ಪದಿಂದ ಕದಲುವುದೂ ಇಲ್ಲ. ಸಿದ್ಧಾರ್ಥನು ಮಾರನ ಸೈನ್ಯವನ್ನು ಚೆನ್ನಾಗಿಯೇ ಗುರುತಿಸುತ್ತಾನೆ. ಕಾಮ, ದ್ವೇಷ, ಹಸಿವು, ನೀರಡಿಕೆ, ಲೋಭ, ಆಲಸ್ಯ, ಸಂದೇಹ, ಕೃತಜ್ಞತೆ–ಕಠೋರತೆ, ಲಾಭ–ಮಾನ–ಸನ್ಮಾನ–ಕ್ಷುಲ್ಲಕ ಪ್ರಸಿದ್ಧಿ ಮತ್ತು ಆತ್ಮಪ್ರಶಂಸೆ–ಪರನಿಂದೆ – ಇವೇ ಮಾರನ ಹತ್ತು ಸೈನ್ಯಗಳು. ಇವುಗಳ ವಿರುದ್ಧ ಹೋರಾಡಿ ಜಯವನ್ನು ಸಂಪಾದಿಸಿದವನೇ ‘ಬುದ್ಧ’. ಈ ವಿವರವೂ ರೂಪಕವಾಗಿ ಒದಗುತ್ತದೆ; ನಮ್ಮನ್ನು ಅರಿವಿನ ಹಾದಿಯಿಂದ ವಿಮುಖಮಾಡುವಂಥ ಸಂಗತಿಗಳೇ ‘ಮಾರನ ಸೈನ್ಯ’.

ಸಿದ್ಧಾರ್ಥನಿಗೆ ಬುದ್ಧತ್ವ ಒದಗಿದಾಗ ಅವನಿಗೆ ಉಂಟಾದ ಅರಿವಿನ ಅನುಭವವನ್ನು ಹೀಗೆ ಉದ್ಗರಿಸಿದ್ದಾನೆ:

‘ಜನನಮರಣಗಳ ರೂಪದಲ್ಲಿರುವ ಸಂಸಾರದ ಕಾರಣವನ್ನು ಹುಡುಕುತ್ತ ದುಃಖಮಯವಾದ ಅಸಂಖ್ಯಾತ ಜನ್ಮಗಳನ್ನು ದಾಟಿ ತೊಳಲಿದುದಾಯಿತು. ದೇಹರೂಪದ ಹಲವು ಸೆರೆಮನೆಗಳಲ್ಲಿ ಬಳಲಿದುದೂ ಆಯಿತು. ಇಂಥ ಶರೀರರೂಪದ ಬವಣೆಗಳನ್ನು ನಿರ್ಮಿಸುವ ಗೃಹಕಾರಕ ತತ್ತ್ವವೇ! ಈಗ ನಿನ್ನನ್ನು ತಿಳಿದುಕೊಂಡಿರುವೆ. ಹೀಗಾಗಿ ಇನ್ನು ನೀನು ಮನೆಗಳನ್ನು ನಿರ್ಮಿಸಿ, ಅದರಲ್ಲಿ ನನ್ನನ್ನು ಬಂಧನದಲ್ಲಿಡಲು ಆಗದು. ನಿನ್ನ ಕಟ್ಟುಗಳೆಲ್ಲವೂ ಕಳಚಿಹೋದವು. ನಿನ್ನ ಮೂಲಸ್ತಂಭವೇ ಮುರಿದುಹೋಯಿತು. ನನ್ನ ಚಿತ್ತವು ವಿಸಂಸ್ಕಾರವಾಯಿತು. ತೃಷ್ಣೆಯು ನಾಶವಾಯಿತು.’

‘ಈಗ ನಾನು ಮನೆಯಿಲ್ಲದವನಾದೆ’ ಎಂದು ಬುದ್ಧನ ಈ ಮಾತುಗಳನ್ನು ಸಂಗ್ರಹಿಸಬಹುದು. ‘ಮನೆ’ ಎಂದರೆ ಸ್ವಾರ್ಥ, ಅಹಂಕಾರ, ಬಯಕೆ – ಹೀಗೆ ಮಾರನ ಸೈನ್ಯಕ್ಕೆ ಇವೆಲ್ಲವೂ ನೆಲೆ. ಇಂಥ ರೋಗಗಳಿಂದ ಬಿಡುಗಡೆಯನ್ನು ಸಾಧಿಸಿ ಲೋಕೋತ್ತರವಾದ ಪ್ರಜ್ಞೆಯಲ್ಲಿ ಸ್ಥಿರವಾಗುವುದೇ ಬುದ್ಧತ್ವ.

ಹಾಗಾದರೆ ಎಲ್ಲರೂ ಸಿದ್ಧಾರ್ಥನಂತೆ ಬುದ್ಧತ್ವವನ್ನು ಸಂಪಾದಿಸಬಹುದೆ? ತಾತ್ವಿಕವಾಗಿ ಹೌದು; ಆದರೆ ಇದು ಸುಲಭವೇನೂ ಅಲ್ಲ. ಬುದ್ಧತ್ವವನ್ನು ಸಂಪಾದಿಸಲು ಅನುಸರಿಸಬೇಕಾದ ನೀತಿ–ನಿಯಮಗಳನ್ನು ಬುದ್ಧ ಸಾಕಷ್ಟು ಉಪದೇಶಿಸಿದ್ದಾನೆ. ‘ಆರ್ಯಸತ್ಯಗಳ ಮನನ’ ಮತ್ತು ‘ಆರ್ಯಾಷ್ಟಾಂಗಿಕ ಮಾರ್ಗದಲ್ಲಿ ಗಮನ’ – ಬುದ್ಧನ ಎಲ್ಲ ಉಪದೇಶಗಳನ್ನೂ ಈ ಎರಡು ಒಕ್ಕಣೆಗಳಲ್ಲಿ ಪ್ರತಿಪಾದಿಸಬಹುದು. ಈ ಎರಡು ತತ್ತ್ವಮಹಾವೃಕ್ಷಗಳ ಅರ್ಥಾನುಸಂಧಾನದಲ್ಲಿ ಮುಂದೆ ಹಲವು ರೆಂಬೆಕೊಂಬೆಗಳು ಮೂಡಿಕೊಂಡವು. ಪ್ರತಿಯೊಂದು ಜೀವಿಯನ್ನೂ ಬುದ್ಧತ್ವದ ದಡಕ್ಕೆ ಮುಟ್ಟಿಸುವ ಹೊಣೆಗಾರಿಕೆಯನ್ನು ಜ್ಞಾನಿಗಳ ಹೆಗಲಿಗೆ ಏರಿಸಲಾಯಿತು. ಅವರ ಈ ಮಹಾಯಾನದಲ್ಲಿ ಮೈತ್ರಿ–ಕರುಣೆಗಳೇ ಬುತ್ತಿಗಳಾದವು; ಶೀಲ–ಅಪ್ರಮಾದಗಳೇ ಸಂಗಾತಿಗಳಾದವು; ಧರ್ಮವೇ ದಾರಿದೀಪವಾಯಿತು. ಬೋಧಿಸತ್ವದ ಈ ಲೋಕೋತ್ತರತತ್ತ್ವವೇ ಸನ್ಯಾಸಿಗಳನ್ನು ಮಾತ್ರವಲ್ಲದೆ, ರಾಜರನ್ನು ಪ್ರಜೆಗಳನ್ನೂ ವರ್ತಕರನ್ನೂ ಗೃಹಸ್ಥರನ್ನೂ – ಎಂದರೆ ಒಟ್ಟು ಸಮುದಾಯವನ್ನು ಮುನ್ನಡೆಸಬಲ್ಲ ಧರ್ಮಚಕ್ರರಥದ ಅರಿವಿನ ಪಥವಾಗಬೇಕು ಎಂಬುದೇ ಬುದ್ಧನ ಜೀವನದರ್ಶನ. ❖

ವ್ಯಾಪಕ ಹಿಂಸಾಚಾರ, ಮಣಿಪುರ ಉದ್ವಿಗ್ನ

ಮೈತೇಯಿ –ಬುಡಕಟ್ಟು ಸಮುದಾಯದವರ ಘರ್ಷಣೆ • ಭದ್ರತೆಗೆ ಸೇನೆ, ಅಸ್ಸಾಂ ರೈಫಲ್ಸ್‌ನ 55 ತುಕಡಿ

ಹಿಂಸಾತ್ಮಕ ಘಟನೆಗಳು ನಡೆದ ಮಣಿಪುರದ ಚುರ್ಚಾಂಡ್‌ಪುರ್ ಜಿಲ್ಲೆಯಲ್ಲಿ ಅಂಗಡಿ, ಮಳಿಗೆಗಳಿಗೆ ಬೆಂಕಿ ಹಚ್ಚಿರುವ ಸ್ಥಳವೊಂದರಲ್ಲಿ ಜನರು ಗುಂಪುಗೂಡಿರುವುದು (ಎಡಚಿತ್ರ) ನಾಗರಿಕರನ್ನು ಸೇನೆ ಸಿಬ್ಬಂದಿ ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುತ್ತಿರುವುದು –ಪಿಟಿಐ ಚಿತ್ರಗಳು

ಇಂಫಾಲ್ (ಪಿಟಿಐ/ಎಎಫ್‌ಪಿ): ಘರ್ಷಣೆ, ಹಿಂಸಾಚಾರದ ಘಟನೆಗಳಿಂದಾಗಿ ಈಶಾನ್ಯ ರಾಜ್ಯ ಮಣಿಪುರದಲ್ಲಿ ಉದ್ವಿಗ್ನ ಪರಿಸ್ಥಿತಿಯು ಮೂಡಿದ್ದು, ಘರ್ಷಣೆಯಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ.

ಪರಿಸ್ಥಿತಿ ನಿಯಂತ್ರಿಸಲು ಬಾಧಿತ ಜಿಲ್ಲೆಗಳಲ್ಲಿ ಗುರುವಾರ ಹೆಚ್ಚಿನ ಸಂಖ್ಯೆಯಲ್ಲಿ ಸೇನೆ ಮತ್ತು ಅಸ್ಸಾಂ ರೈಫಲ್ಸ್‌ನ ತುಕಡಿಗಳನ್ನು ನಿಯೋಜಿಸಲಾಗಿದೆ. ‘ಕಂಡಲ್ಲಿ ಗುಂಡು’ ಆದೇಶವನ್ನು ನೀಡಲಾಗಿದೆ.

ಬುಡಕಟ್ಟುಯೇತರ ಮೈತೇಯಿ ಸಮುದಾಯವು ಹೆಚ್ಚಿರುವ ಇಂಫಾಲ್ ಪಶ್ಚಿಮ, ಕಾಕ್‌ಚಿಂಗ್, ಥೌಬಾಲ್, ಜಿರಿಬಾಮ್, ಬಿಷ್ಣುಪುರ ಜಿಲ್ಲೆಗಳು, ಬುಡಕಟ್ಟು ಜನರು ಹೆಚ್ಚಿರುವ ಚುರ್ಚಾಂದ್‌ಪುರ, ಕಾಂಗ್‌ಪೊಕ್ಪಿ, ತೆಂಗ್‌ನೌಪಾಲ್ ಜಿಲ್ಲೆಗಳಲ್ಲಿ ಕರ್ಫ್ಯೂ ಅನ್ನು ಜಾರಿಗೊಳಿಸಲಾಗಿದೆ.

‘ಆರು ಮಂದಿ ಮೃತಪಟ್ಟಿದ್ದಾರೆ. ಕರ್ಫ್ಯೂ ಜಾರಿಗೊಳಿಸಲಾಗಿದೆ. ಸದ್ಯ ಉದ್ವಿಗ್ನ ಸ್ಥಿತಿ ಇದ್ದರೂ ಪರಿಸ್ಥಿತಿ ನಿಯಂತ್ರಣದಲ್ಲಿದೆ’ ಎಂದು ಸಚಿವ ಅವಾಂಗ್‌ಬೌ ನ್ಯೂಮೈ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಗಲಭೆಪೀಡಿತ ಚುರ್ಚಾಂದ್‌ಪುರ್‌ನಿಂದ 5,000, ಇಂಫಾಲ್ ಕಣಿವೆಯಿಂದ 2,000 ಮತ್ತು ಗಡಿಯ ಪಟ್ಟಣ ಮೊರೆಹ್‌ನಿಂದ 2,000 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಜನರಿಗೆ ರಕ್ಷಣೆಯ ಭರವಸೆ ನೀಡಲು ಸೇನೆಯ ತುಕಡಿಗಳು ವಿವಿಧೆಡೆ ಪಥಸಂಚಲನವನ್ನು ನಡೆಸಿವೆ ಎಂದು ತಿಳಿಸಿದರು.

ಶಾ ಚರ್ಚೆ: ಮಣಿಪುರ, ನೆರೆಯ ನಾಗಾಲ್ಯಾಂಡ್ ಮುಖ್ಯಮಂತ್ರಿಗಳ ಜೊತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಚರ್ಚಿಸಿ, ವಿವರ ಪಡೆದರು. ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಮತ್ತು ನಾಗಾಲ್ಯಾಂಡ್ ಮುಖ್ಯಮಂತ್ರಿ ನೇಫಿಯು ರಿಯೊ ಅವರು ವಸ್ತುಸ್ಥಿತಿ ವಿವರಿಸಿದರು.

ಹಿಂಸಾಚಾರ ಬಾಧಿತ ಪ್ರದೇಶಗಳಿಂದ 9,000 ಜನರನ್ನು ಸಿಬ್ಬಂದಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ. ಚುರ್ಚಾಂದಪುರ್, ಟೆನು ಗೋಪಾಲ್ ಜಿಲ್ಲೆಯ ಮೊರೆಹ್‌ನಲ್ಲಿ ಹಿಂಸೆ ತೀವ್ರಗೊಂಡಿತ್ತು.

ಇಂಟರ್‌ನೆಟ್ ಸ್ಥಗಿತ: ರಾಜ್ಯದಾದ್ಯಂತ ಮೊಬೈಲ್ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಿದೆ. ಭಯಬೀತ 500 ನಿವಾಸಿಗಳು ಇಂಫಾಲ್ ಪಶ್ಚಿಮದ ಲಂಗೋಲ್ ವಲಯದಿಂದ ಮನೆಗಳಿಂದ ಓಡಿದ್ದು, ಪ್ರಸ್ತುತ ಲಾಂಫೆಲ್‌ಪಾಟ್‌ನಲ್ಲಿ ಸಿಆರ್‌ಪಿಎಫ್ ಶಿಬಿರದಲ್ಲಿ ಆಶ್ರಯ ಪಡೆದಿದ್ದಾರೆ.

ಇಂಫಾಲ್ ಕಣಿವೆಯಲ್ಲಿ ಕುಕಿ ಬುಡಕಟ್ಟು ಸಮುದಾಯವರ ಮನೆಗಳನ್ನು ಗುರಿಯಾಗಿಸಿ ದಾಂದಲೆ ನಡೆಸಲಾಗಿದೆ. ಮೋಟ್‌ಬಂಗ್‌ನಲ್ಲಿ 20 ಮನೆಗಳಿಗೆ ಬೆಂಕಿ ಹಚ್ಚಲಾಗಿದೆ.

ಕಾರಣ ಏನು?: ರಾಜ್ಯದಲ್ಲಿ ಸುಮಾರು ಶೇ 53ರಷ್ಟಿರುವ ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು ಎಂಬ ಬೇಡಿಕೆ ಇತ್ತು. ಈ ಕುರಿತು ಕೇಂದ್ರ ಸರ್ಕಾರಕ್ಕೆ ನಾಲ್ಕು ವಾರಗಳಲ್ಲಿ ಶಿಫಾರಸು ಕಳುಹಿಸುವಂತೆ ರಾಜ್ಯ ಸರ್ಕಾರಕ್ಕೆ ಮಣಿಪುರ ಹೈಕೋರ್ಟ್ ಇತ್ತೀಚೆಗೆ ಸೂಚಿಸಿತ್ತು.

ಆದರೆ, ಶೇ 40ರಷ್ಟಿರುವ ಬುಡಕಟ್ಟು ಸಮುದಾಯಗಳಿಂದ ಈ ಬೇಡಿಕೆಗೆ ತೀವ್ರ ಆಕ್ಷೇಪವಿತ್ತು. ಅಖಿಲ ಭಾರತ ಮಣಿಪುರ ವಿದ್ಯಾರ್ಥಿ ಸಂಘಟನೆ (ಎಟಿಎಸ್‌ಯುಎಂ) ನೇತೃತ್ವದಲ್ಲಿ ನಾಗಾ ಮತ್ತು ಕುಕಿ ಬುಡಕಟ್ಟು ಸಮುದಾಯದವರು ಪ್ರತಿಭಟನೆ ಹಾಗೂ ‘ಬುಡಕಟ್ಟು ಜನರ ಏಕತಾ ಜಾಥಾ’ವನ್ನು ಬುಧವಾರ ಆಯೋಜಿಸಿದ್ದರು.

ಜಾಥಾ ನಡೆಯುವಾಗಲೇ ಚುರ್ಚಾಂದ್‌ಪುರ ಜಿಲ್ಲೆಯ ತೊರ್ಬುಂಗ್ ಪ್ರದೇಶದಲ್ಲಿ ಶಸ್ತ್ರಸಜ್ಜಿತ ಗುಂಪೊಂದು ಮೈತೇಯಿ ಸಮುದಾಯಕ್ಕೆ ಸೇರಿದ ಕೆಲವರ ಮೇಲೆ ಹಲ್ಲೆ ನಡೆಸಿತ್ತು. ಇದು ದ್ವೇಷದ ಕಿಡಿಯನ್ನು ಹೊತ್ತಿಸಿತು. ಇದಕ್ಕೆ ಪ್ರತೀಕಾರವಾಗಿ ಎಂಟು ಜಿಲ್ಲೆಗಳಲ್ಲಿ ಹಲ್ಲೆ ಘಟನೆಗಳು ನಡೆದವು.

ಹಿಂಸೆ ಹೆಚ್ಚಿದಂತೆ ಸೇನೆ, ಅಸ್ಸಾಂ ರೈಫಲ್‌ಗೆ ಸೇರಿದ ಹಲವು ತುಕಡಿಗಳನ್ನು ರಾತ್ರಿಯೇ ಕರೆಸಿಕೊಳ್ಳಲಾಯಿತು. ಸೇನೆ, ಅಸ್ಸಾಂ ರೈಫಲ್ ತುಕಡಿಗಳ ನಿಯೋಜನೆಯಾದ ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ ಎಂದು ಸೇನೆ ವಕ್ತಾರರು ತಿಳಿಸಿದ್ದಾರೆ.

‘ರಾಜ್ಯ ಉರಿಯುತ್ತಿದೆ, ಸಹಾಯ ಮಾಡಿ’

ಇಂಫಾಲ್ (ಪಿಟಿಐ): ಬಾಕ್ಸಿಂಗ್ ಪಟು ಎಂ.ಸಿ.ಮೇರಿ ಕೋಮ್ ಅವರೂ ರಾಜ್ಯದಲ್ಲಿ ಶಾಂತಿ ರಕ್ಷಣೆಗೆ ಮನವಿ ಮಾಡಿದ್ದಾರೆ. ‘ನನ್ನ ರಾಜ್ಯ ಉರಿಯುತ್ತಿದೆ, ಸಹಾಯ ಮಾಡಿ’ ಎಂದು ಕೋರಿದ್ದಾರೆ.

ಈ ಕುರಿತ ಟ್ವೀಟ್ ಅನ್ನು ಅವರು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಮಣಿಪುರದಲ್ಲಿ ಶಾಂತಿ ಸ್ಥಾಪಿಸಲು ಪ್ರಧಾನಿ ಕ್ರಮವಹಿಸಲಿ. ಇಂದು, ನಾವು ಮನುಷ್ಯತ್ವವನ್ನು ಸುಟ್ಟುಹಾಕಿದರೆ, ನಾಳೆ ನಾವು ಮನುಷ್ಯರಾಗಿ ಉಳಿಯುವುದಿಲ್ಲ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಶಾಂತಿ ಕಾಯ್ದುಕೊಳ್ಳಲು ಸಿ.ಎಂ ಮನವಿ

ಇಂಫಾಲ್ (ಪಿಟಿಐ): ಹಿಂಸಾತ್ಮಕ ಘಟನೆಗಳು ದುರದೃಷ್ಟಕರ. ಹಲವರ ಆಸ್ತಿಗಳಿಗೆ ಹಾನಿಯಾಗಿದೆ. ಜನತೆ ಶಾಂತಿ ಕಾಯ್ದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಮನವಿ ಮಾಡಿದ್ದಾರೆ.

‘ಜನರಲ್ಲಿನ ತಪ್ಪುಗ್ರಹಿಕೆ ಹಿಂಸೆಗೆ ಕಾರಣ. ಕಾನೂನು ರಕ್ಷಣೆ, ಭದ್ರತೆಗೆ ಒತ್ತು ನೀಡಿದ್ದು, ಗಲಭೆ ನಿರತರ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಬಿಜೆಪಿಯ ದ್ವೇಷ ರಾಜಕಾರಣ ಕಾರಣ’

ನವದೆಹಲಿ (ಪಿಟಿಐ): ‘ಮಣಿಪುರ ಹೊತ್ತಿ ಉರಿಯುತ್ತಿದೆ. ಹಿಂಸೆಗೆ ಬಿಜೆಪಿಯ ದ್ವೇಷ ರಾಜಕಾರಣವೇ ಕಾರಣ. ಶಾಂತಿ ಸ್ಥಾಪಿಸಲು ಪ್ರಧಾನಿ ಒತ್ತು ನೀಡಬೇಕು’ ಎಂದು ಕಾಂಗ್ರೆಸ್ ಪಕ್ಷ ಆಗ್ರಹಪಡಿಸಿದೆ.

‘ಬಿಜೆಪಿಯು ಸಮುದಾಯಗಳ ನಡುವೆ ಬಿರುಕು ಮೂಡಿಸುತ್ತಿದೆ. ಬಿಜೆಪಿಯ ಅಧಿಕಾರ ಲಾಲಸೆ, ದ್ವೇಷ ರಾಜಕಾರಣ ಈ ಗೊಂದಲಕ್ಕೆ ಕಾರಣ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟ್ವೀಟ್ ಮಾಡಿದ್ದಾರೆ. ರಾಜ್ಯದಲ್ಲಿ ಶಾಂತಿ ರಕ್ಷಣೆಗೆ ಜನರು ಆದ್ಯತೆ ನೀಡಬೇಕು ಎಂದೂ ಮನವಿ ಮಾಡಿದ್ದಾರೆ.

ಪಕ್ಷದ ನಾಯಕ ರಾಹುಲ್‌ಗಾಂಧಿ ಅವರೂ ಟ್ವೀಟ್ ಮಾಡಿದ್ದು, ಜನರು ಶಾಂತಿ ಕಾಯ್ದುಕೊಳ್ಳಬೇಕು. ಸಹಜ ಸ್ಥಿತಿ ಸ್ಥಾಪಿಸಲು ಪ್ರಧಾನಿ ಒತ್ತು ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಮತ್ತೊಬ್ಬ ಗ್ಯಾಂಗ್‌ಸ್ಟರ್‌ನ ಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಕೊಲೆ, ಸುಲಿಗೆ, ಅಪಹರಣ ಸೇರಿದಂತೆ ಹಲವು ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಗ್ಯಾಂಗ್‌ಸ್ಟರ್ ಅನಿಲ್ ದುಜಾನ ಅವರನ್ನು ಉತ್ತರ ಪ್ರದೇಶ ಪೊಲೀಸರ ವಿಶೇಷ ತನಿಖಾ ತಂಡವು (ಎಸ್‌ಟಿಎಫ್) ಮೀರತ್‌ನಲ್ಲಿ ಗುರುವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಅನಿಲ್‌ನನ್ನು ಬಂಧಿಸಲು ಮೀರತ್‌ನ ಭೋಲಾ ಜಾಲ್ ಪ್ರದೇಶಕ್ಕೆ ತೆರಳಿದ್ದ ಎಸ್‌ಟಿಎಫ್ ತಂಡ ಆತನಿದ್ದ ಸ್ಥಳವನ್ನು ಸುತ್ತುವರಿದು, ಶರಣಾಗುವಂತೆ ಸೂಚಿಸಿದೆ. ಆದರೆ ಆತ ಮತ್ತು ಆತನ ತಂಡದ ಸದಸ್ಯರು ಪೊಲೀಸರತ್ತ ಗುಂಡಿನ ದಾಳಿ ನಡೆಸಿದ್ದಾರೆ. ಪ್ರತಿದಾಳಿ ನಡೆಸಿ ಆತನನ್ನು ಹತ್ಯೆ ಮಾಡಲಾಗಿದೆ’ ಎಂದೂ ವಿವರಿಸಿದ್ದಾರೆ.

ಜಾಮೀನಿನ ಮೇಲೆ ಹೊರಬಂದಿದ್ದ ಅನಿಲ್, ತನ್ನ ವಿರುದ್ಧದ ಕೊಲೆ ಪ್ರಕರಣವೊಂದರ ಸಾಕ್ಷಿಗಳಿಗೆ ಜೀವ ಬೆದರಿಕೆಯೊಡ್ಡಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

18 ಕೊಲೆ ಪ್ರಕರಣಗಳು ಸೇರಿದಂತೆ ಅನಿಲ್ ವಿರುದ್ಧ 60 ಪ್ರಕರಣಗಳು ದಾಖಲಾಗಿದ್ದವು. ಈಚೆಗಷ್ಟೆ ತಿಹಾರ್ ಜೈಲಿನಿಂದ ಹೊರ ಬಂದಿದ್ದ ಆತ ತನ್ನ ತಂಡವನ್ನು ಮತ್ತೆ ಸಕ್ರಿಯಗೊಳಿಸಲು ಪ್ರತ್ನಿಸುತ್ತಿದ್ದ ಎಂದೂ ಹೇಳಿವೆ.

‘ನೀಟ್’ ದಿನವೇ ರೋಡ್ ಶೋ

ಒಂದನೇ ಪುಟದಿಂದ...

ಪ್ರಧಾನಿ ಮೋದಿಯವರ ಕಾರ್ಯಕ್ರಮವಲ್ಲದೇ, ಕಾಂಗ್ರೆಸ್ ನೇತಾರರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಕೂಡ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ರಾಹುಲ್–ಪ್ರಿಯಾಂಕಾ ಜೋಡಿ ಬೆಂಗಳೂರಿನಲ್ಲಿ ರೋಡ್ ಶೋ, ಪ್ರಚಾರ ಸಭೆ ನಡೆಸಲಿದ್ದಾರೆ. ಅವರ ಕಾರ್ಯಕ್ರಮಗಳ ಸಮಯ ಇನ್ನೂ ನಿಗದಿಯಾಗಿಲ್ಲ.

‘ನಿಗದಿತ ಪರೀಕ್ಷಾ ಕೇಂದ್ರ ತಲುಪಲು ತಾವು ನಿತ್ಯವೂ ಓಡಾಡುವ ದಾರಿಯಲ್ಲಿ ಹೋಗುವುದು ರೋಡ್ ಶೋನಿಂದಾಗಿ ಭಾನುವಾರ ಕಷ್ಟವಾಗುವ ಸಂಭವ ಇದೆ. ಎರಡು ಗಂಟೆ ಮೊದಲೇ ಪರೀಕ್ಷಾ ಇರಬೇಕಾದರೆ, ಅದಕ್ಕಿಂತ 2–3 ಗಂಟೆ ಮೊದಲು ಮಕ್ಕಳನ್ನು ಮನೆಯಿಂದ ಹೊರಡಿಸಬೇಕಾಗುತ್ತದೆ’ ಎಂದು ಪೋಷಕರು ಅಳಲು ತೋಡಿಕೊಂಡಿದ್ದಾರೆ.

‘ನಮ್ಮದು ಇಂದಿರಾನಗರ. ನನ್ನ ಪರೀಕ್ಷಾ ಕೇಂದ್ರ ಮಲ್ಲೇಶ್ವರದಲ್ಲಿದೆ. ಬೆಳಿಗ್ಗೆ 11.45ಕ್ಕೆ ಮೊದಲು ಹಾಜರಿರಬೇಕಿದ್ದರೆ ಬೆಳಿಗ್ಗೆ 10ಕ್ಕೆ ಮನೆಯಿಂದ ಹೊರಡಬೇಕು. ರ‍್ಯಾಲಿಯ ಕಾರಣ ಮಾರ್ಗ ಬದಲಾವಣೆಯಾದರೆ ಮತ್ತಷ್ಟು ಬೇಗ ಮನೆ ಬಿಡಬೇಕಾಗುತ್ತದೆ’ ಎಂದು ವಿದ್ಯಾರ್ಥಿನಿಯೊಬ್ಬರು ಆತಂಕ ವ್ಯಕ್ತಪಡಿಸಿದರು.

‘ರ‍್ಯಾಲಿಗಳನ್ನು ರದ್ದು ಮಾಡಬೇಕು. ಇಲ್ಲವೇ, ಪರೀಕ್ಷೆ ಮುಂದೂಡಬೇಕು’ ಎಂದು ಹಲವು ಪೋಷಕರು ಒತ್ತಾಯಿಸಿದ್ದಾರೆ.

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ಆತಂಕ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧೀನದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕೆಲ ವಿಷಯಗಳ ಸೆಮಿಸ್ಟರ್ ಪರೀಕ್ಷೆಗಳು ಮೇ 6ರಂದು (ಶನಿವಾರ) ನಡೆಯುತ್ತಿದ್ದು, ಅಂದು ಆಯೋಜಿಸಿರುವ ರ‍್ಯಾಲಿಗಳಿಂದಲೂ ಪರೀಕ್ಷೆಗೆ ಹಾಜರಾಗಲು ಅಡಚಣೆಯಾಗಬಹುದು ಎಂದು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಸೇನಾ ಹೆಲಿಕಾಪ್ಟರ್ ಪತನ

ಜಮ್ಮು (ಪಿಟಿಐ): ‘ತಾಂತ್ರಿಕ ದೋಷದಿಂದಾಗಿ ಜಮ್ಮು ಮತ್ತು ಕಾಶ್ಮೀರದ ಕಿಸ್ತ್‌ವಾಡಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಗುರುವಾರ ಸೇನಾ ಹೆಲಿಕಾಪ್ಟರ್ ಪತನಗೊಂಡಿದ್ದು, ತಾಂತ್ರಿಕ ಸಿಬ್ಬಂದಿಯೊಬ್ಬರು ಅಸುನೀಗಿದ್ದಾರೆ. ಇಬ್ಬರು ಪೈಲಟ್‌ಗಳು ಗಾಯಗೊಂಡಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸೇನೆಯ ಅತ್ಯಾಧುನಿಕ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಧ್ರುವ, ಕಾರ್ಯಾಚರಣೆಗೆ ನಿಯೋಜನೆಗೊಂಡಿತ್ತು. ಭಾರಿ ಪ್ರಮಾಣದಲ್ಲಿ ಹಿಮ ಸುರಿಯುತ್ತಿದ್ದುದರಿಂದಾಗಿ ಜಿಲ್ಲಾ ಕೇಂದ್ರದಿಂದ ಸಂಪರ್ಕ ಕಡಿದುಕೊಂಡಿತ್ತು. ಮುಂಜಾಗ್ರತಾ ದೃಷ್ಟಿಯಿಂದ ಪೈಲಟ್‌ಗಳು ಕಿಸ್ತ್‌ವಾಡಾ ಪ್ರದೇಶದಲ್ಲಿನ ಮರುವಾ ನದಿ ದಂಡೆಯ ಮೇಲೆ ಅದನ್ನು ಇಳಿಸಲು ಪ್ರಯತ್ನಿಸಿದ್ದರು. ಬೆಳಿಗ್ಗೆ 11.15ರ ಸುಮಾರಿಗೆ ಹೆಲಿಕಾಪ್ಟರ್ ಪತನಗೊಂಡಿದೆ’ ಎಂದು ಉತ್ತರ ಕಮಾಂಡ್ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಶರದ್ ಪವಾರ್ ಸ್ಥಾನದಲ್ಲಿ ನೇಮಕವಾಗುವ ಹೊಸ ಅಧ್ಯಕ್ಷರ ನೇತೃತ್ವದಲ್ಲಿಯೂ ಎನ್‌ಸಿಪಿ ರಾಷ್ಟ್ರ ರಾಜಕಾರಣದಲ್ಲಿ ತನ್ನ ಪ್ರಸ್ತುತತೆ ಉಳಿಸಿಕೊಳ್ಳಲಿದೆ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

‘ಮದುವೆ ಮಾಡಿಸುತ್ತೇವೆ’

ಒಂದನೇ ಪುಟದಿಂದ...

ಅವರಿಗೆ ವಿವಾಹವಾಗಿದೆ. 9ನೇ ತರಗತಿ ಓದಿರುವ ಸಹೋದರ ಪುಂಡಲಿಕ ಅವರ ವಿವಾಹ ಆಗಬೇಕಿದೆ.

‘ಹೆಣ್ಣು ಸಿಗದೆ ಪರದಾಡುತ್ತಿದ್ದ ಹಲವರ ವಿವಾಹವನ್ನು ಈ ಹಿಂದೆಯೂ ಮಾಡಿಸಿದ್ದೇನೆ. ನಾನು ಆಯ್ಕೆಯಾದ ನಂತರ, ಎಲ್ಲ ಸಮುದಾಯದ ವಧು–ವರರ ಸಮಾವೇಶ ಆಯೋಜಿಸುತ್ತೇನೆ. ಸಡಗರದಿಂದ ಮದುವೆಯನ್ನೂ ಮಾಡಿಸುತ್ತೇನೆ. ಮತದಾರರು, ವಿಶೇಷವಾಗಿ ಯುವಕರು ನನಗೆ ಮತ ನೀಡಬೇಕು’ ಎಂದು ಕೋರಿದರು.

‘ಚಹಾ ಮಾರುತ್ತಿದ್ದ ವ್ಯಕ್ತಿ (ನರೇಂದ್ರ ಮೋದಿ) ಪ್ರಧಾನಿಯಾಗಿದ್ದಾರೆ. ಬಾಲ್ಯದಲ್ಲಿ ಕುರಿ ಕಾದಿದ್ದ ವ್ಯಕ್ತಿ (ಸಿದ್ದರಾಮಯ್ಯ) ಮುಖ್ಯಮಂತ್ರಿಯಾಗಿದ್ದಾರೆ. ಹೀಗಿರುವಾಗ, ಪದವೀಧರನಾದ ನಾನೇಕೆ ಶಾಸಕನಾಗಬಾರದು? ಹಾಗಾಗಿ, ಚುನಾವಣೆಗೆ ಸ್ಪರ್ಧಿಸಿದ್ದೇನೆ’ ಎನ್ನುತ್ತಾರೆ.

ಯುವಕರಿಗೆ ಕಂಕಣ ಭಾಗ್ಯದ ಜತೆಗೆ, ಒಂಬತ್ತು ಅಂಶಗಳು ಈ ಸಹೋದರರ ಪ್ರಣಾಳಿಕೆಯಲ್ಲಿವೆ. ರೈತರಿಗೆ ಉಚಿತವಾಗಿ ಕೊಳವೆಬಾವಿ ಕೊರೆಯಿಸಿಕೊಡುವುದು, ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗ, ವಸತಿರಹಿತರಿಗೆ ಸ್ವಂತ ಸೂರು, ಸ್ತ್ರೀಶಕ್ತಿ ಸಂಘಗಳ ಸಾಲ ಮನ್ನಾ ಭರವಸೆಗಳಿಂದ ಮತದಾರರ ಮನ ಗೆಲ್ಲಲು ಮುಂದಾಗಿದ್ದಾರೆ.

‘ಮೃದಂಗ ಸಾರ್ವಭೌಮ’ ಇನ್ನು ಬರೀ ನೆನಪು

• ಉಮಾ ಅನಂತ್

ನುಡಿ ನಮನ

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮೃದಂಗ ಪಕ್ಕವಾದ್ಯಕ್ಕೆ ಒಂದು ವಿಶಿಷ್ಟ ಸ್ಥಾನಮಾನ ತಂದುಕೊಟ್ಟು ‘ಮೃದಂಗ ಸಾರ್ವಭೌಮ’ ಎಂದು ಹೆಸರಾದವರು ಕಾರೈಕುಡಿ ಮಣಿ.

ಚೆನ್ನೈಯಲ್ಲಿ ಘಟಾನುಘಟಿ ಸಂಗೀತಗಾರರೇ ಕಾರೈಕುಡಿ ಅವರನ್ನು ‘ಎನ್‌ಸೈಕ್ಲೊಪೀಡಿಯ ಆಫ್ ರಿದಮ್ಸ್’ ಎಂದೇ ಕರೆಯುತ್ತಿದ್ದರು. ಲಯವಾದ್ಯದಲ್ಲಿ ಅವರು ಇಟ್ಟುಕೊಂಡಿದ್ದ ಪ್ರೀತಿ, ನುಡಿಸಾಣಿಕೆಯಲ್ಲಿ ಶ್ರದ್ಧೆ, ಬೆರಳುಗಳ ಚಮತ್ಕಾರ, ಹೊಸ ಬಾನಿ, ಮೆರುಗು, ಸೃಜನಶೀಲತೆ ಇವರಿಗೆ ವಿಶ್ವಮಟ್ಟದಲ್ಲಿ ಅತ್ಯುತ್ತಮ ವಾದಕ ಎಂಬ ಹೆಸರು ತಂದುಕೊಟ್ಟವು.

1945 ಸೆ. 11ರಂದು ತಮಿಳುನಾಡಿನ ಕಾರೈಕುಡಿಯಲ್ಲಿ ಜನಿಸಿದರು. ಮೂರನೇ ವಯಸ್ಸಿಗೆ ಸಂಗೀತ ಕಲಿಯಲಾರಂಭಿಸಿ ಹತ್ತನೇ ವಯಸ್ಸಿಗೆ ಮೃದಂಗ ನುಡಿಸಾಣಿಕೆ ಆರಂಭಿಸಿದರು. ಚೆನ್ನೈಯ ಹರಿಹರ ಶರ್ಮ ಅವರ ಬಳಿ ವಾದ್ಯದ ಬಗ್ಗೆ ಹೆಚ್ಚಿನ ಮಾರ್ಗದರ್ಶನ ಪಡೆದರು. ತಮ್ಮ ಹದಿನೆಂಟನೆ ವಯಸ್ಸಿಗೇ (1958) ರಾಷ್ಟ್ರಪತಿ ಅವರಿಂದ ಪ್ರಶಸ್ತಿ ಪಡೆದರು.

ಅದು 1960ರ ದಶಕ. ಚೆನ್ನೈಯಲ್ಲಿ ಪಳನಿ ಸುಬ್ರಮಣ್ಯ ಪಿಳ್ಳೈ, ವಿದ್ವಾನ್ ಮಣಿ ಅಯ್ಯರ್ ದೊಡ್ಡ ಕಲಾವಿದರು. ಇವರಿಬ್ಬರ ಜೊತೆ ಜೊತೆಗೆ ತಮ್ಮದೇ ಆದ ಹೊಸ ಶೈಲಿ ರೂಢಿಸಿಕೊಂಡು ಲಯವಾದ್ಯ ನಿಪುಣ ಎನಿಸಿಕೊಂಡದ್ದು ಕಡಿಮೆ ಸಾಧನೆಯಲ್ಲ.

ಕಾರೈಕುಡಿ ಮಣಿ ನಿಧನ

ಚೆನ್ನೈ (ಪಿಟಿಐ): ಮೃದಂಗ ಮಾಂತ್ರಿಕ ಎಂದೇ ಪ್ರಸಿದ್ಧರಾಗಿದ್ದ ವಿದ್ವಾನ್ ಕಾರೈಕುಡಿ ಮಣಿ (77) ಅವರು ಗುರುವಾರ ನಿಧನರಾಗಿದ್ದಾರೆ.

ಮಣಿ ಅವರು ಅವಿವಾಹಿತರಾಗಿದ್ದರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಅನಾರೋಗ್ಯದ ಕಾರಣ 2022ರ ಡಿಸೆಂಬರ್ ಬಳಿಕ ಅವರು ಸಾರ್ವಜನಿಕವಾಗಿ ಎಲ್ಲಿಯೂ ಕಾಣಿಸಿಕೊಂಡಿರಲಿಲ್ಲ. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮಣಿ ಅವರು ವಿಶಿಷ್ಟ ಛಾಪು ಮೂಡಿಸಿದ್ದರು.

ತನಿಯಾವರ್ತನದ ಸೊಬಗು: ಸಂಗೀತ ಕಛೇರಿಗಳಲ್ಲಿ ತನಿಯಾವರ್ತನ ಬಹುಮುಖ್ಯ ಭಾಗ. ಗಾಯಕರು ತನಿ ಬಿಟ್ಟಾಗ ವಾದಕರ ಕೈಚಳಕಕ್ಕೆ ಸುವರ್ಣಾವಕಾಶ. ಕಾರೈಕುಡಿ ಅವರ ಬೆರಳುಗಳ ಚಮತ್ಕಾರ ನೋಡಲೆಂದೇ ಕೇಳುಗರು ಕಾದು ಕುಳಿತು ಲಯವಾದ್ಯದ ಸೊಬಗನ್ನು ಆಸ್ವಾದಿಸುತ್ತಿದ್ದರು.

‘ಕಾರೈಕುಡಿ ಒಬ್ಬ ಸಂಗೀತ ಸನ್ಯಾಸಿ’ ಎಂದು ವಿಶ್ಲೇಷಿಸುತ್ತಾರೆ ಸಂಗೀತ ವಿದ್ವಾಂಸ ಆರ್.ಕೆ.ಪದ್ಮನಾಭ. ‘ಮೃದಂಗ ನುಡಿಸುವಾಗ ‘ಧೃತ ಕಾಲ’ದಲ್ಲಿ ನುಡಿಸುತ್ತಿದ್ದ ಅಪರೂಪದ ಸಾಧಕ’ ಎನ್ನುವ ಅವರು, ‘ಕಾರೈಕುಡಿ ಅವರಿಗೆ ನುಡಿಸಾಣಿಕೆ ಎಂಬುದು ತಪಸ್ಸಾಗಿತ್ತು. ಇವರೊಬ್ಬ ವಿರಳಾತಿ ವಿರಳ ಸಾಧಕ’ ಎನ್ನುತ್ತಾರೆ.

ಪರಿಪೂರ್ಣ ವಾದ್ಯನಿಪುಣ: ‘ಕಾರೈಕುಡಿ ಒಬ್ಬ ಪರ್ಫೆಕ್ಷನಿಸ್ಟ್ ಆಗಿದ್ದರು’ ಎಂದು ಹೇಳುತ್ತಾರೆ ಖ್ಯಾತ ಕೊಳಲುವಾದಕ ಶಶಾಂಕ್ ಸುಬ್ರಮಣ್ಯ. ‘1990ರಲ್ಲಿ ಅವರೊಂದಿಗೆ ಚೆನ್ನೈಯಲ್ಲಿ ಮೊದಲ ಕಛೇರಿ. ಅದಾಗಿ ವಿಶ್ವವೇದಿಕೆಗಳ ಹಲವಾರು ಕಛೇರಿಗಳಲ್ಲಿ ಜೊತೆಯಾಗಿ ನುಡಿಸಿದ್ದೇವೆ. ಲಯದಲ್ಲಿ ಅವರ ಜ್ಞಾನ ಅಮೇಜಿಂಗ್’ ಎಂದು ಕೊಂಡಾಡುತ್ತಾರೆ ಅವರು.

ಅಂತರರಾಷ್ಟ್ರೀಯ ಮಟ್ಟದ ಲಯವಾದ್ಯಗಾರರೊಂದಿಗೆ ಅವರು ನಡೆಸಿದ ‘ಫ್ಯೂಷನ್ ಎನ್‌ಸೆಂಬಲ್’ ಕಾರೈಕುಡಿ ಅವರಿಗೆ ಜಾಗತಿಕ ಮಟ್ಟದಲ್ಲಿ ಹೆಸರು ತಂದುಕೊಟ್ಟಿದೆ ಎಂದು ನೆನಪಿಸುತ್ತಾರೆ ಶಶಾಂಕ್.

ಸುಮಾರು ಆರು ದಶಕಗಳ ಕಾಲ ಸಂಗೀತ ಪ್ರಪಂಚದಲ್ಲಿ ಧ್ರುವತಾರೆಯಂತೆ ಮೆರೆದ ಕಾರೈಕುಡಿ ಇನ್ನು ಬರೀ ನೆನಪು. ❖

ರಿಂಕು–ನಿತೀಶ್ ರಾಣಾ ಉತ್ತಮ ಬ್ಯಾಟಿಂಗ್ •ಬೌಲರ್‌ಗಳ ಮಿಂಚು •ಹೈದರಾಬಾದ್‌ಗೆ ನಿರಾಸೆ

ಕೋಲ್ಕತ್ತ ನೈಟ್ ರೈಡರ್ಸ್ ಜಯಭೇರಿ

ಹೈದರಾಬಾದ್ (ಪಿಟಿಐ): ಕೈಯಲ್ಲಿ ಮೂರು ವಿಕೆಟ್‌ಗಳಿದ್ದರೂ ಕೊನೆಯ ಎಂಟು ಎಸೆತಗಳಲ್ಲಿ 10 ರನ್ ಗಳಿಸುವಲ್ಲಿ ವಿಫಲವಾದ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಐಪಿಎಲ್ ಟೂರ್ನಿಯಲ್ಲಿ ಆರನೇ ಸೋಲು ಎದುರಾಯಿತು.

ಅಂತಿಮ ಓವರ್‌ನಲ್ಲಿ ಕೈಚಳಕ ಮೆರೆದ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಗೆಲುವಿಗೆ ಕಾರಣರಾದರು. ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ನಿತೀಶ್ ರಾಣಾ ಬಳಗ ಐದು ರನ್‌ಗಳಿಂದ ಗೆದ್ದು ‘ಪ್ಲೇ ಆಫ್’ ಪ್ರವೇಶದ ಕನಸು ಜೀವಂತವಾಗಿರಿಸಿಕೊಂಡಿತು.

ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 171 ರನ್ ಗಳಿಸಿತು. ನಾಯಕ ರಾಣಾ (42; 31ಎ) ಮತ್ತು ರಿಂಕು ಸಿಂಗ್ (46; 35ಎ) ಅವರು ಉಪಯುಕ್ತ ಕಾಣಿಕೆ ನೀಡಿದರು.

ಸನ್‌ರೈಸರ್ಸ್ ತಂಡದ ಹೋರಾಟ 8 ವಿಕೆಟ್ ನಷ್ಟಕ್ಕೆ 166 ರನ್‌ಗಳಿಗೆ ಕೊನೆಗೊಂಡಿತು. ವರುಣ್ (20ಕ್ಕೆ 1) ಅಲ್ಲದೆ ವೈಭವ್ ಅರೋರ (32ಕ್ಕೆ 2) ಮತ್ತು ಶಾರ್ದೂಲ್ ಠಾಕೂರ್ (23ಕ್ಕೆ 2) ಬಿಗುವಾದ ಬೌಲಿಂಗ್ ಮೂಲಕ ಗಮನ ಸೆಳೆದರು.

ಸಾಧಾರಣ ಗುರಿ ಬೆನ್ನಟ್ಟಿದ ಹೈದರಾಬಾದ್, 54 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಒತ್ತಡಕ್ಕೆ ಸಿಲುಕಿತು. ನಾಯಕ ಏಡನ್ ಮರ್ಕರಂ (41 ರನ್, 40 ಎ.) ಮತ್ತು ಹೆನ್ರಿಚ್ ಕ್ಲಾಸೆನ್ (36 ರನ್, 20 ಎ.) ಐದನೇ ವಿಕೆಟ್‌ಗೆ 70 ರನ್ ಸೇರಿಸಿದರು.

ಆದರೆ ಇವರಿಬ್ಬರು ಔಟಾದ ಬಳಿಕ ಕೆಕೆಆರ್ ಬೌಲರ್‌ಗಳು ಹಿಡಿತ ಬಿಗಿಗೊಳಿಸಿದರು. ವರುಣ್ ಬೌಲ್ ಮಾಡಿದ ಕೊನೆಯ ಓವರ್‌ನಲ್ಲಿ 9 ರನ್‌ಗಳು ಬೇಕಿದ್ದವು. ಅಬ್ದುಲ್ ಸಮದ್ ಆ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರೆ, ಭುವನೇಶ್ವರ್ ಕುಮಾರ್, ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ವಿಫಲರಾದರು.



ವರುಣ್ ಚಕ್ರವರ್ತಿ (ಎಡ) ಅವರು ರೆಹಮಾನುಲ್ಲಾ ಗುರ್ಬಾಜ್ ಜತೆ ಸಂಭ್ರಮಿಸಿದರು –ಪಿಟಿಐ ಚಿತ್ರ

ರಾಣಾ– ರಿಂಕು ಆಸರೆ: ಟಾಸ್ ಗೆದ್ದ ಕೋಲ್ಕತ್ತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ವೇಗಿ ಮಾರ್ಕೊ ಜೆನ್ಸನ್ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಬಲವಾದ ಪೆಟ್ಟುಕೊಟ್ಟರು. ರೆಹಮಾನುಲ್ಲಾ ಗುರ್ಬಾಜ್ ಮತ್ತು ವೆಂಕಟೇಶ್ ಅಯ್ಯರ್ ವಿಕೆಟ್ ಉರುಳಿಸಿದರು. ಜೇಸನ್ ರಾಯ್ ಐದನೇ ಓವರ್‌ನಲ್ಲಿ ಔಟಾದರು.

ಈ ಹಂತದಲ್ಲಿ ಜೊತೆಯಾದ ರಾಣಾ ಮತ್ತು ರಿಂಕು ಸಿಂಗ್ ಇನಿಂಗ್ಸ್‌ಗೆ ಬಲ ತುಂಬಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು. ರಾಣಾ ಮೂರು ಬೌಂಡರಿ ಹಾಗೂ ಮೂರು ಸಿಕ್ಸರ್‌ಗಳನ್ನು ಸಿಡಿಸಿದರು.

ರಿಂಕು ನಾಲ್ಕು ಬೌಂಡರಿ ಹಾಗೂ ಒಂದು ಸಿಕ್ಸರ್ ಹೊಡೆದರು. ಆದರೆ ಇವರಿಬ್ಬರಿಗೂ ಅರ್ಧಶತಕ ಪೂರೈಸಲು ಬೌಲರ್‌ಗಳು ಬಿಡಲಿಲ್ಲ.

ಸನ್‌ರೈಸರ್ಸ್ ನಾಯಕ ಏಡನ್ ಮರ್ಕರಂ ತಮ್ಮದೇ ಬೌಲಿಂಗ್‌ನಲ್ಲಿ ನಿತೀಶ್ ಕ್ಯಾಚ್ ಪಡೆಯುವಲ್ಲಿ ಯಶಸ್ವಿಯಾದರು.

ಎಡಗೈ ವೇಗಿ ನಟರಾಜನ್ ಬೌಲಿಂಗ್‌ನಲ್ಲಿ ರಿಂಕು ಅವರು ಅಬ್ದುಲ್ ಸಮದ್ ಪಡೆದ ಕ್ಯಾಚ್‌ಗೆ ಔಟಾದರು. ಆ್ಯಂಡ್ರೆ ರಸೆಲ್ ಎರಡು ಸಿಕ್ಸರ್ ಸಿಡಿಸಿದರು. ಆದರೆ 24 ರನ್ ಗಳಿಸಿದ್ದ ಅವರು ಮಯಂಕ್ ಮಾರ್ಕಂಡೆ ಬೌಲಿಂಗ್‌ನಲ್ಲಿ ಔಟಾದರು. ಈ ಹಂತದಿಂದ ಬೌಲರ್‌ಗಳು ಹಿಡಿತ ಸಾಧಿಸಿದರು.

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 9ಕ್ಕೆ171 (20 ಓವರ್‌ಗಳಲ್ಲಿ)
ಜೇಸನ್ ಸಿ ಮಯಂಕ್ ಬಿ ಕಾರ್ತಿಕ್ 20 (19ಎ, 4X4)
ಗುರ್ಬಾಜ್ ಸಿ ಬ್ರೂಕ್ ಬಿ ಮಾರ್ಕೊ 0(1ಎ)
ವೆಂಕಟೇಶ್ ಸಿ ಕ್ಲಾಸನ್ ಬಿ ಮಾರ್ಕೊ 7 (4ಎ, 4X1)
ರಾಣಾ ಸಿ ಮತ್ತು ಬಿ ಮರ್ಕರಂ 42 (31ಎ, 4X3, 6X3)
ರಿಂಕುಸಿಂಗ್ ಸಿ ಸಮದ್ ಬಿ ನಟರಾಜನ್ 46 (35ಎ, 4X4, 6X1)
ರಸೆಲ್ ಸಿ ನಟರಾಜ್ ಬಿ ಮಾರ್ಕಂಡೆ 24 (15ಎ, 4X1, 6X2)
ಸುನಿಲ್ ಸಿ ಮಯಂಕ್ ಬಿ ಭುವನೇಶ್ವರ್ 1 (2ಎ) ಶಾರ್ದೂಲ್ ಸಿ ಸಮದ್ ಬಿ ನಟರಾಜನ್ 8 (6ಎ, 4X1)
ಅನುಕೂಲ್ ಔಟಾಗದೆ 13 (7ಎ, 4X2)
ಹರ್ಷಿತ್ ರಾಣಾ ರನ್‌ಔಟ್ (ಕ್ಲಾಸನ್/ ನಟರಾಜನ್) 0 (1ಎ)
ವೈಭವ್ ಔಟಾಗದೆ 2 (1ಎ)
ಇತರೆ: 8 (ಲೆಗ್‌ಬೈ 1, ವೈಡ್ 5, ನೋಬಾಲ್ 2)
ವಿಕೆಟ್ ಪತನ: 1–8 (ರೆಹಮಾನುಲ್ಲಾ ಗುರ್ಬಾಜ್; 1.1), 2–16 (ವೆಂಕಟೇಶ್ ಅಯ್ಯರ್; 1.6), 3–35 (ಜೇಸನ್ ರಾಯ್; 4.4), 4–96 (ನಿತೀಶ್ ರಾಣಾ; 11.2), 5–127 (ಆ್ಯಂಡ್ರೆ ರಸೆಲ್; 14.2), 6–130 (ಸುನಿಲ್ ನಾರಾಯಣ್; 15.3), 7–151 (ಶಾರ್ದೂಲ್ ಠಾಕೂರ್; 17.3), 8–168 (ರಿಂಕು ಸಿಂಗ್; 19.2), 9–168 (ಹರ್ಷಿತ್ ರಾಣಾ; 19.3)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–33–1, ಮಾರ್ಕೊ ಜೆನ್ಸನ್ 3–0–24–2, ಕಾರ್ತಿಕ್ ತ್ಯಾಗಿ 2–0–30–1, ಏಡನ್ ಮರ್ಕರಂ 3–0–24–1, ಟಿ ನಟರಾಜನ್ 4–0–30–2, ಮಯಂಕ್ ಮಾರ್ಕಂಡೆ 4–0–29–1

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 166 (20 ಓವರ್)
ಅಭಿಷೇಕ್ ಸಿ ರಸೆಲ್ ಬಿ ಠಾಕೂರ್ 9 (10ಎ, 4X1)
ಅಗರವಾಲ್ ಸಿ ಗುರ್ಬಾಜ್ ಬಿ ಹರ್ಷಿತ್ 18 (11ಎ, 4X2, 6X1)
ತ್ರಿಪಾಠಿ ಸಿ ವೈಭವ್ ಬಿ ರಸೆಲ್ 20 (9ಎ, 4X3, 6X1)
ಮರ್ಕರಂ ಸಿ ಸಿಂಗ್ ಬಿ ಅರೋರ 41 (40 ಎ., 4X4)
ಬ್ರೂಕ್ ಎಲ್‌ಬಿಡಬ್ಲ್ಯು ಬಿ ಅನುಕೂಲ್ 0 (4ಎ)
ಕ್ಲಾಸೆನ್ ಸಿ ರಸೆಲ್ ಬಿ ಠಾಕೂರ್ 36 (20ಎ, 4X1, 6X3)
ಸಮದ್ ಸಿ ರಾಯ್ ಬಿ ವರುಣ್ 21 (18 ಎ., 4X3)
ಜೆನ್ಸನ್ ಸಿ ಗುರ್ಬಾಜ್ ಬಿ ಅರೋರ 1 (4 ಎ.)
ಭುವನೇಶ್ವರ್ ಔಟಾಗದೆ 5 (5 ಎ., 4X1) ಮಾರ್ಕಂಡೆ ಔಟಾಗದೆ 1 (2 ಎ)
ಇತರೆ: 14 (ಬೈ 1, ಲೆಗ್‌ಬೈ 6, ನೋಬಾಲ್ 3, ವೈಡ್ 4)
ವಿಕೆಟ್ ಪತನ: 1–29 (ಮಯಂಕ್ ಅಗರವಾಲ್; 2.5), 2–37 (ಅಭಿಷೇಕ್ ಶರ್ಮಾ; 3.5), 3–53 (ರಾಹುಲ್ ತ್ರಿಪಾಠಿ; 5.3), 4– 54 (ಹ್ಯಾರಿ ಬ್ರೂಕ್; 6.2), 5–124 (ಹೆನ್ರಿಚ್ ಕ್ಲಾಸೆನ್; 14.1), 6–145 (ಏಡನ್ ಮರ್ಕರಂ; 16.5), 7–152 (ಮಾರ್ಕೊ ಜೆನ್ಸನ್; 18.1), 8–165 (ಸಮದ್; 19.3)
ಬೌಲಿಂಗ್: ಹರ್ಷಿತ್ ರಾಣಾ 4–0–27–1, ವೈಭವ್ ಅರೋರ 3–0–32–2, ಶಾರ್ದೂಲ್ ಠಾಕೂರ್ 3–0–23–2, ಆ್ಯಂಡ್ರೆ ರಸೆಲ್ 1–0–15–1, ಅನುಕೂಲ್ ರಾಯ್ 3–0–26–1, ಸುನಿಲ್ ನಾರಾಯಣ 2–0–16–0, ವರುಣ್ ಚಕ್ರವರ್ತಿ 4–0–20–1
ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 5 ರನ್ ಗೆಲುವು

ರಾಯಲ್ಸ್– ಟೈಟನ್ಸ್ ಮುಖಾಮುಖಿ

ಲೀಗ್ ಅಗ್ರಸ್ಥಾಕ್ಕೇರಲು ಉಭಯ ತಂಡಗಳ ಪೈಪೋಟಿ

ಜೈಪುರ (ಪಿಟಿಐ): ಅಸ್ಥಿರ ಪ್ರದರ್ಶನ ನೀಡುತ್ತಿರುವ ರಾಜಸ್ಥಾನ ರಾಯಲ್ಸ್ ತಂಡ, ಅಗ್ರಸ್ಥಾನದಲ್ಲಿರುವ ಗುಜರಾತ್ ಟೈಟನ್ಸ್ ತಂಡವನ್ನು ಶುಕ್ರವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ. ಎರಡೂ ತಂಡಗಳ ನಡುವೆ ಉತ್ತಮ ಪೈಪೋಟಿ ಏರ್ಪಡುವ ನಿರೀಕ್ಷೆಯಿದೆ.

ಈ ಹಿಂದಿನ ಪಂದ್ಯದಲ್ಲಿ ಸೋಲುಂಡಿರುವ ಈ ಎರಡೂ ತಂಡಗಳು ಗೆಲುವಿನ ಲಯಕ್ಕೆ ಮರಳಲು ಕಾತರದಿಂದ ಇವೆ. ತಳದಲ್ಲಿರುವ ದೆಹಲಿ ಕ್ಯಾಪಿಟಲ್ಸ್ ವಿರುದ್ಧ ಕಳೆದ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಬಳಗ ಐದು ರನ್‌ಗಳಿಂದ ಸೋತಿದ್ದರೂ, ಅಗ್ರಸ್ಥಾನ ಕಾಪಾಡಿಕೊಂಡಿದೆ.

ಸಂಜು ಸಾಮ್ಯನ್ಸ್ ಬಳಗ 10 ಪಾಯಿಂಟ್ಸ್ ಸಂಗ್ರಹಿಸಿದ್ದು ತಂಡ ನಾಲ್ಕನೇ ಸ್ಥಾನದಲ್ಲಿದೆ. ಉತ್ತಮ ನಿವ್ವಳ ರನ್‌ರೇಟ್ (+0.800) ಹೊಂದಿರುವ ರಾಯಲ್ಸ್ ತಂಡ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಗೆದ್ದರೆ ಅಗ್ರಸ್ಥಾನಕ್ಕೇರಲಿದೆ.

ಕೊನೆಯ ಆರು ಪಂದ್ಯಗಳಲ್ಲಿ ಮೂರು ಸೋತು, ಮೂರು ಗೆದ್ದಿರುವುದು ರಾಯಲ್ಸ್ ಕಾಣುತ್ತಿರುವ ಏರಿಳಿತಕ್ಕೆ ನಿದರ್ಶನ. ಉತ್ತಮ ಬೌಲಿಂಗ್ ಘಟಕ ಹೊಂದಿದ್ದರೂ ಮುಂಬೈ ವಿರುದ್ಧ ಕೊನೆಯ ಪಂದ್ಯದಲ್ಲಿ 212 ರನ್‌ಗಳ ದೊಡ್ಡ ಮೊತ್ತವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

ವೇಗದ ಬೌಲರ್ ಟ್ರೆಂಟ್ ಬೌಲ್ಟ್, ಆಲ್‌ರೌಂಡರ್ ಜೇಸನ್ ಹೋಲ್ಡರ್, ಸ್ಪಿನ್ನರ್‌ಗಳಾದ ಯಜುವೇಂದ್ರ ಚಾಹಲ್ ಮತ್ತು ಕುಲದೀಪ್ ಸೇನ್ ಎಲ್ಲರೂ ದುಬಾರಿಯಾಗಿದ್ದರು. ಈಗ ತವರಿನಂಗಳದಲ್ಲಿ ಬೌಲರ್‌ಗಳು ಉತ್ತಮ ನಿರ್ವಹಣೆಯ ನಿರೀಕ್ಷೆಯಲ್ಲಿದ್ದಾರೆ. ಋತುವಿನ ಆರಂಭದಲ್ಲಿ ಗುಜರಾತ್ ಮೇಲೆ ಸಾಧಿಸಿದ್ದ ಗೆಲುವು ರಾಯಲ್ಸ್‌ಗೆ ಸ್ಥೈರ್ಯ ತುಂಬಲಿದೆ.

ಯಶಸ್ವಿ ಜೈಸ್ವಾಲ್ ಉತ್ತಮ ಲಯದಲ್ಲಿದ್ದಾರೆ. ಜೋಸ್ ಬಟ್ಲರ್, ಸಂಜು ಸ್ಯಾಮ್ಸನ್ ಮತ್ತು ಹೆಟ್ಮೆಯರ್ ಅವರೂ ಬಿರುಸಿನ ಆಟವಾಡುವ ಸಮರ್ಥರು.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	9	6	3	0	12	0.532
ಲಖನೌ	10	5	4	1	11	0.639
ಚೆನ್ನೈ	10	5	4	1	11	0.329
ರಾಜಸ್ಥಾನ	9	5	4	0	10	0.800
ಬೆಂಗಳೂರು	9	5	4	0	10	-0.030
ಮುಂಬೈ	9	5	4	0	10	-0.373
ಪಂಜಾಬ್	10	5	5	0	10	-0.472
ಕೋಲ್ಕತ್ತ	10	4	6	0	8	-0.103
ಹೈದರಾಬಾದ್	9	3	6	0	6	-0.540
ಡೆಲ್ಲಿ	9	3	6	0	6	-0.768

ಗುರುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	17

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	466

ಜಂತರ್ ಮಂಥರ್‌ನಲ್ಲಿ ಪೊಲೀಸ್– ಪ್ರತಿಭಟನಾನಿರತ ಕುಸ್ತಿಪಟುಗಳ ಸಂಘರ್ಷ

ನಿಂದಿಸಿ ಎಳೆದಾಡಿದ ಖಾಕಿ: ಪೈಲ್ವಾನರ ಅಳಲು

• ಮಂಜುನಾಥ ಹೆಬ್ಬಾರ್

ನವದೆಹಲಿ: ‘ದೆಹಲಿ ಪೊಲೀಸರು ನನ್ನನ್ನು ನಿಂದಿಸಿದರು, ತಳ್ಳಿದರು ಹಾಗೂ ಎಳೆದಾಡಿದರು. ಆಗ ಮಹಿಳಾ ಪೊಲೀಸ್ ಸಿಬ್ಬಂದಿ ಇರಲೇ ಇಲ್ಲ. ನಮ್ಮನ್ನು ಕೊಲ್ಲಲು ಬಯಸಿದರೆ ಈ ಕೆಲಸವನ್ನೂ ಮಾಡಿ ಬಿಡಿ. ಈ ದಿನವನ್ನು ನೋಡಲು ನಾವು ದೇಶಕ್ಕಾಗಿ ಪದಕಗಳನ್ನು ಗೆದ್ದಿದ್ದೇವೆಯೇ...?’

– ಹೀಗೆಂದು ಆಕ್ರೋಶದಿಂದ ಪ್ರಶ್ನಿಸಿದರು ಒಲಿಂಪಿಯನ್ ಕುಸ್ತಿಪಟು ವಿನೇಶಾ ಫೋಗಟ್. ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಕೋಚ್‌ಗಳನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ಜಂತರ್ ಮಂಥರ್‌ನಲ್ಲಿ ಏಪ್ರಿಲ್ 23ರಿಂದ ಧರಣಿನಿರತರಾಗಿರುವ ಕುಸ್ತಿಪಟುಗಳು ಹಾಗೂ ದೆಹಲಿ ಪೊಲೀಸರ ನಡುವೆ ಬುಧವಾರ ರಾತ್ರಿ ಸಂಘರ್ಷ ನಡೆಯಿತು.

ಈ ಜಟಾಪಟಿಯಿಂದ ದುಷ್ಯಂತ್ ಫೋಗಟ್ ಸೇರಿದಂತೆ ಕೆಲವು ಕುಸ್ತಿಪಟುಗಳು ಗಾಯಗೊಂಡಿದ್ದಾರೆ. ಎಎಪಿಯ ಮುಖಂಡರು ಸೇರಿದಂತೆ ಕೆಲವರನ್ನು ಪೊಲೀಸರು ಬಂಧಿಸಿದರು. ಪ್ರತಿಭಟನನಿರತರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂಬುದು ಕುಸ್ತಿಪಟುಗಳ ಆರೋಪ. ಆದರೆ, ಪೊಲೀಸರು ಇದನ್ನು ನಿರಾಕರಿಸಿದ್ದಾರೆ. ಜಟಾಪಟಿಯ ನಂತರ ಜಂತರ್ ಮಂತರ್‌ನಲ್ಲಿ ಇನ್ನಷ್ಟು ಬ್ಯಾರಿಕೇಡ್‌ಗಳನ್ನು ಹಾಕಿ ಪೊಲೀಸ್ ಭದ್ರತೆಯನ್ನು ಹೆಚ್ಚಿಸಲಾಗಿದೆ. ಇತರ ಕುಸ್ತಿಪಟುಗಳ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ.

‘ನಾವು ಊಟವನ್ನೂ ಮಾಡಿರಲಿಲ್ಲ. ಮದ್ಯಪಾನ ಮಾಡಿದ್ದ ಕೆಲವು ಪೊಲೀಸರು ನನ್ನನ್ನು ತಳ್ಳಿದರು. ಆ ಪೊಲೀಸರು ಬಂದೂಕು ಹಿಡಿದಿದ್ದರು. ಅವರು ನಮ್ಮನ್ನು ಕೊಲ್ಲಲೂ ಬಹುದು. ಮಹಿಳೆಯರನ್ನು ನಿಂದಿಸುವ ಹಕ್ಕನ್ನು ಪುರುಷರಿಗೆ ಕೊಟ್ಟವರು ಯಾರು’ ಎಂದೂ ಅವರು ಕೋಪದಿಂದ ಕೇಳಿದರು.

‘ಹಲವು ಕ್ರೀಡಾಕೂಟಗಳಲ್ಲಿ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದವರು. ನಾವೇನೂ ಅಪರಾಧಿಗಳೇ’ ಎಂದು ಅವರು ಪ್ರಶ್ನಿಸಿದರು.

ಸಂಘರ್ಷ ನಡೆದ ಬೆನ್ನಲ್ಲೇ ಕುಸ್ತಿಪಟು ಬಜರಂಗ್ ಪೂನಿಯಾ, ‘ರೈತರು ಹಾಗೂ ಸಾರ್ವಜನಿಕರು ಕೂಡಲೇ ಜಂತರ್ ಮಂಥರ್‌ಗೆ ಧಾವಿಸಿ ನಮ್ಮ ನೆರವಿಗೆ ನಿಲ್ಲಬೇಕು’ ಎಂದು ಮನವಿ ಮಾಡಿದರು. ‘ದೆಹಲಿ ಪೊಲೀಸರ ದೌರ್ಜನ್ಯವನ್ನು ಇನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ರೈತರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತೆ ಆಹ್ವಾನ ನೀಡುತ್ತಿದ್ದೇನೆ. ಟ್ರ್ಯಾಕ್ಟರ್ ಅಥವಾ ಟ್ರಾಲಿ ಅಥವಾ ಯಾವುದೇ ವಾಹನ ಸಿಕ್ಕಿದರೂ ಅದರಲ್ಲಿ ಇಲ್ಲಿಗೆ ಬನ್ನಿ. ಈಗ ಅಲ್ಲದಿದ್ದರೆ ಮತ್ತೆ ಯಾವಾಗ ಹೋರಾಟ? ಇದು ಹೆಣ್ಣು ಮಕ್ಕಳ ಘನತೆಯ ಪ್ರಶ್ನೆ’ ಎಂದು ಅವರು ಬೇಸರದಿಂದ ಹೇಳಿದರು.

ಸ್ವಲ್ಪ ಸಮಯದ ಬಳಿಕ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ ಅವರು, ‘ನಾವು ಮೂವರೂ (ಬಜರಂಗ್, ವಿನೇಶಾ ಹಾಗೂ ಸಾಕ್ಷಿ) ಚೆನ್ನಾಗಿದ್ದೇವೆ. ಸಂಘರ್ಷದ ವೇಳೆ ಗಾಯಗೊಂಡವರು ಸುಧಾರಿಸಿಕೊಂಡಿದ್ದಾರೆ. ಪೊಲೀಸರೊಂದಿಗೆ ಯಾರೂ ಅನುಚಿತವಾಗಿ ವರ್ತಿಸಬಾರದು. ನೀವು ಇಲ್ಲಿಗೆ ಬರುವ ವೇಳೆ ಪೊಲೀಸರು ಬಂಧಿಸಬಹುದು. ಪೊಲೀಸರು ತಡೆದರೂ ಅಲ್ಲಿಯೇ ಸುಮ್ಮನೆ ಕುಳಿತುಕೊಳ್ಳಿ. ಜಗಳವಾಡದೇ ತಾಳ್ಮೆಯಿಂದ ಇರಿ’ ಎಂದು ಹೇಳಿದರು.

ಅಧಿಕಾರ ವಹಿಸಿಕೊಂಡ ಸಮಿತಿ: ಭಾರತ ಕುಸ್ತಿ ಫೆಡರೇಷನ್‌ನ ದೈನಂದಿನ ಆಡಳಿತ ನೋಡಿಕೊಳ್ಳಲು ಐಒಎ ನೇಮಕ ಮಾಡಿರುವ ಅಡ್‌ಹಾಕ್ ಸಮಿತಿಯು ಗುರುವಾರ ಅಧಿಕಾರ ವಹಿಸಿಕೊಂಡಿತು.

‘ಅಧಿಕಾರ ವಹಿಸಿಕೊಳ್ಳುವ ಔಪಚಾರಿಕ ಪ್ರಕ್ರಿಯೆ ಮಾತ್ರ ಗುರುವಾರ ನಡೆದಿದೆ. ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ’ ಎಂದು ಸಮಿತಿಯ ಸದಸ್ಯರಾದ ಭೂಪಿಂದರ್ ಸಿಂಗ್ ತಿಳಿಸಿದರು.

ನವದೆಹಲಿಯಲ್ಲಿ ಪ್ರತಿಭಟನೆ ಮಾಡುತ್ತಿರುವ ಕುಸ್ತಿಪಟುಗಳನ್ನು ಬೆಂಬಲಿಸಿದ ವಿದ್ಯಾರ್ಥಿನಿಯೊಬ್ಬರನ್ನು ಪೊಲೀಸರು ಎಳೆದೊಯ್ಯುತ್ತಿರುವುದು –ಪಿಟಿಐ ಚಿತ್ರ

ಅರ್ಜಿ ವಿಲೇವಾರಿ ಮಾಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳ ನೀಡಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಏಳು ಮಂದಿ ಮಹಿಳಾ ಕುಸ್ತಿಪಟುಗಳು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಿಲೇವಾರಿ ಮಾಡಿದೆ.

ಅರ್ಜಿಯಲ್ಲಿ ಕೋರಿರುವಂತೆ ಎಫ್‌ಐಆರ್ ದಾಖಲಿಸಲಾಗಿದೆ. ಏಳು ಮಂದಿ ದೂರುದಾರರಿಗೆ ಸೂಕ್ತ ಭದ್ರತೆಯನ್ನು ಒದಗಿಸಲಾಗಿದೆ ಎಂಬುದನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ವೈ.ವಿ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲಾ ಅವರಿದ್ದ ಪೀಠ ಅರ್ಜಿ ವಿಚಾರಣೆ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ನಿರ್ಧರಿಸಿತು.

ಹಿನ್ನಡೆಯಲ್ಲ: ‘ಸುಪ್ರೀಂ ಕೋರ್ಟ್ ಆದೇಶ ಹಿನ್ನಡೆಯಲ್ಲ. ನಾವು ಪ್ರತಿಭಟನೆಯನ್ನು ಮುಂದುವರಿಸುತ್ತೇವೆ’ ಎಂದು ಕುಸ್ತಿಪಟುಗಳು ಹೇಳಿದ್ದಾರೆ. ‘ಬೇರೆ ಆಯ್ಕೆಗಳೂ ನಮ್ಮ ಮುಂದಿವೆ. ಹಿರಿಯರ ಜೊತೆ ಚರ್ಚಿಸಿ ಕೆಳಹಂತದ ಅಥವಾ ಹೈಕೋರ್ಟ್ ಮೊರೆ ಹೋಗಬೇಕೇ ಎಂಬ ಬಗ್ಗೆ ನಿರ್ಧರಿಸುತ್ತೇವೆ’ ಎಂದಿದ್ದಾರೆ.

ಪ್ರತಿಭಟನಾ ಸ್ಥಳದಲ್ಲಿ ಬಿಗಿ ಬಂದೋಬಸ್ತ್, ಹೆಚ್ಚಿದ ಕಣ್ಗಾವಲು

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕುಸ್ತಿಪಟುಗಳು ನಡೆಸುತ್ತಿರುವ ಪ್ರತಿಭಟನೆಯ ಸ್ಥಳಕ್ಕೆ ರೈತರು ಪ್ರವೇಶಿಸುವುದನ್ನು ತಡೆಯಲು ದೆಹಲಿ ಪೊಲೀಸರು ಗುರುವಾರ ಬಂದೋಬಸ್ತ್ ವ್ಯವಸ್ಥೆ ಹೆಚ್ಚಿಸಿದ್ದಾರೆ. ಭದ್ರತಾ ಸಿಬ್ಬಂದಿಯನ್ನು ಹೆಚ್ಚಿಸಲಾಗಿದ್ದು, ಸ್ಥಳದಲ್ಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಸಿಟಿವಿ ಕಣ್ಗಾವಲು ಹಾಕಲಾಗಿದೆ.

ಬೆಂಬಲ ಸೂಚಿಸಿ ಪ್ರತಿಭಟನಾ ಸ್ಥಳಕ್ಕೆ ಬರುವಂತೆ ಬುಧವಾರ ರಾತ್ರಿ ಬಜರಂಗ್ ಪೂನಿಯಾ ರೈತರಿಗೆ ಮನವಿ ಮಾಡಿದ್ದರು. ಅಹಿತಕರ ಘಟನೆಗಳು ಅನೇಕ ಕಡೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ. ಎಚ್ಚರಿಕೆಯಿಂದ ಇರುವಂತೆ ಎಲ್ಲ ವಲಯಗಳ ಪೊಲೀಸ್ ಮುಖ್ಯಸ್ಥರಿಗೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೀತಾ ಅಳಲು: ಗುರುವಾರ ಬೆಳಿಗ್ಗೆ ಪ್ರತಿಭಟನಾ ಸ್ಥಳಕ್ಕೆ ತೆರಳುತ್ತಿದ್ದ ತಮ್ಮನ್ನು ಮತ್ತು ಪತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ವಿನೇಶಾಳ ಸೋದರಿ, ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತೆ ಗೀತಾ ಫೋಗಟ್ ಟ್ವೀಟ್ ಮಾಡಿದ್ದಾರೆ.

‘ಗೀತಾ ಸೇರಿ ಇಬ್ಬರು–ಮೂವರನ್ನು ವಶಕ್ಕೆ ಪಡೆದಿರುವುದು ನಿಜ. ಅವರನ್ನು ಜಹಾಂಗೀರ್‌ಪುರಿಯಲ್ಲಿ ಇರಿಸಿದ್ದು, ಬಿಡುಗಡೆ ಪ್ರಕ್ರಿಯೆ ನಡೆದಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ವಿನೇಶಾಳನ್ನು ಭೇಟಿಯಾಗಲು ಪ್ರತಿಭಟನಾ ಸ್ಥಳಕ್ಕೆ ಬಿಡಬೇಕೆಂದು ಪೊಲೀಸ್ ಅಧಿಕಾರಿಗಳಿಗೆ ಬೇಡಿಕೊಳ್ಳುತ್ತಿರುವ ದೃಶ್ಯದ ವಿಡಿಯೊ ತುಣುಕನ್ನು ಗೀತಾ ಟ್ವೀಟ್ ಮಾಡಿದ್ದರು.

ಪ್ರಿ ಕ್ವಾರ್ಟರ್‌ಗೆ ಗೋವಿಂದ್, ದೀಪಕ್; ಥಾಪಾಗೆ ಆಘಾತ

ಬಾಕ್ಸಿಂಗ್: ಎಂಟರ ಘಟ್ಟಕ್ಕೆ ನರೇಂದರ್

ತಾಷ್ಕೆಂಟ್ (ಪಿಟಿಐ): ಭಾರತದ ನರೇಂದರ್ ಬೆರ್ವಾಲ್ ಅವರು ವಿಶ್ವ ಬಾಕಿಂಗ್ಸ್ ಚಾಂಪಿಯನ್‌ನ ಪ್ಲಸ್ 92 ಕೆ.ಜಿ. ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಪ್ರಮುಖ ಬಾಕ್ಸರ್ ಶಿವ ಥಾಪಾ ಆಘಾತ ಅನುಭವಿಸಿದರು.

ಗುರುವಾರ ನಡೆದ ಹಣಾಹಣಿಯಲ್ಲಿ ನರೇಂದರ್, 4–1 ರಲ್ಲಿ ತಜಿಕಿಸ್ತಾನದ ಮುಹಮ್ಮದ್ ಅಬ್ರೊರಿದಿನೊವ್ ಅವರನ್ನು ಮಣಿಸಿದರು.2022ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದ ಇಬ್ಬರು ಬಾಕ್ಸರ್‌ಗಳ ನಡುವಣ ಜಿದ್ದಾಜಿದ್ದಿನ ಹೋರಾಟ ನಡೆಯಿತು.

ಪ್ರಬಲ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ನರೇಂದರ್, ಮೊದಲ ಸುತ್ತಿನಲ್ಲಿ ಮೇಲುಗೈ ಪಡೆದರು. ಎರಡು ಮತ್ತು ಮೂರನೇ ಸುತ್ತುಗಳಲ್ಲೂ ಆಕ್ರಮಣಕಾರಿ ಪ್ರದರ್ಶನ ನೀಡಿದರಲ್ಲದೆ, ಅಬ್ರೊರಿದಿನೊವ್ ಅವರಿಗೆ ತಿರುಗೇಟು ಕೊಡಲು ಅವಕಾಶ ನೀಡಲಿಲ್ಲ.


ನರೇಂದರ್ ಬೆರ್ವಾಲ್

ಥಾಪಾ ಅವರು 63.5 ಕೆ.ಜಿ. ವಿಭಾಗದಲ್ಲಿ 3–4 ರಲ್ಲಿ ಬ್ರೆಜಿಲ್‌ನ ಡಾಸ್ ರೀಸ್ ಯುರಿ ಕೈಯಲ್ಲಿ ಪರಾಭವಗೊಂಡದ್ದು ಭಾರತಕ್ಕೆ ಹಿನ್ನಡೆ ಉಂಟುಮಾಡಿತು.

ಗೋವಿಂದ್ ಸಹಾನಿ (48 ಕೆ.ಜಿ.) ಮತ್ತು ದೀಪಕ್ ಕುಮಾರ್ (51 ಕೆ.ಜಿ.) ಅವರು ಮೊದಲ ಸುತ್ತಿನ ಹಣಾಹಣಿ ಜಯಿಸಿ ಪ್ರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಈ ಋತುವಿನಲ್ಲಿ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದ ಗೋವಿಂದ್, 5–0 ರಲ್ಲಿ ತಜಿಕಿಸ್ತಾನದ ಮೆಹ್ರೊನ್ ಶಫೀವ್ ವಿರುದ್ಧ ಗೆದ್ದರು. ಮುಂದಿನ ಸುತ್ತಿನಲ್ಲಿ ಅವರು ಅಗ್ರ ಶ್ರೇಯಾಂಕದ ಬಾಕ್ಸರ್ ಜಾರ್ಜಿಯದ ಸಖಿಲ್ ಅಲಖ್‌ವೆರ್ದೊವಿ ಅವರನ್ನು ಎದುರಿಸುವರು.

ಆಕ್ರಮಣಕಾರಿ ಪ್ರದರ್ಶನ ನೀಡಿದ ದೀಪಕ್, ಈಕ್ವಡರ್‌ನ ಲೂಯಿಸ್ ಡೆಲ್ಗಾಡೊ ಅವರನ್ನು ಪರಾಭವಗೊಳಿಸಿದರು. ಅತ್ಯುತ್ತಮ ತಾಂತ್ರಿಕ ನೈಪುಣ್ಯತೆ ತೋರಿದ ಅವರು ಸುಲಭ ಗೆಲುವು ಸಾಧಿಸಿದರು.

ಮೊಹಮ್ಮದ್ ಹುಸಾಮುದ್ದೀನ್, ಆಶೀಶ್ ಚೌಧರಿ ಮತ್ತು ನವೀನ್ ಕುಮಾರ್ ಅವರು ಶುಕ್ರವಾರ ಪ್ರೀ ಕ್ವಾರ್ಟರ್ ಫೈನಲ್ ಬೌಟ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಜೂನಿಯರ್ ಏಷ್ಯಾ ಕಪ್ ಹಾಕಿ: ಪೂವಣ್ಣ, ಮೋಹಿತ್‌ಗೆ ಸ್ಥಾನ

ಬೆಂಗಳೂರು: ಕರ್ನಾಟಕದ ಗೋಲ್‌ಕೀಪರ್ ಮೋಹಿತ್ ಗೌಡ ಹಾಗೂ ಮಿಡ್‌ಫೀಲ್ಡರ್ ಸಿ.ಬಿ. ಪೂವಣ್ಣ ಅವರು ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಜೂನಿಯರ್ ಏಷ್ಯಾ ಕಪ್ ಟೂರ್ನಿಯು ಮೇ 23ರಿಂದ ಜೂನ್ 1ರವರೆಗೆ ಒಮನ್ ದೇಶದ ಸಲಾಲದಲ್ಲಿ ನಡೆಯಲಿದೆ. ಈ ವರ್ಷದ ಡಿಸೆಂಬರ್‌ನಲ್ಲಿ ಮಲೇಷ್ಯಾದಲ್ಲಿ ನಡೆಯಲಿರುವ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಸ್ಥಾನ ಪಡೆಯಲು ಏಷ್ಯಾಕಪ್ ಟೂರ್ನಿ ಅರ್ಹತಾ ವೇದಿಕೆಯಾಗಿದೆ.

ಮೋಹಿತ್ ಗೌಡ ಅವರು ಹಾಸನದ ಚೆನ್ನರಾಯಪಟ್ಟಣದವರು ಮತ್ತು ಪೂವಣ್ಣ ಕೊಡಗು ಜಿಲ್ಲೆಯ ವಿರಾಜಪೇಟೆಯವರು. ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ವಸತಿ ನಿಲಯದಲ್ಲಿ ನಡೆಯುತ್ತಿರುವ ಶಿಬಿರದಲ್ಲಿ ಅವರು ತರಬೇತಿ ಪಡೆಯುತ್ತಿದ್ದಾರೆ.

‘ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾಗಿರುವುದು ಸಂತಸ ತಂದಿದೆ. ಈ ಹಿಂದೆ ಜೋಹರ್ ಕಪ್ ಹಾಕಿ ಟೂರ್ನಿಯಲ್ಲಿಯೂ ನಾನು ಹಾಗೂ ಪೂವಣ್ಣ ಆಡಿದ್ದೆವು. ಲಭಿಸಿರುವ ಅವಕಾಶದಲ್ಲಿ ಉತ್ತಮ ಸಾಧನೆ ಮಾಡುವ ವಿಶ್ವಾಸವಿದೆ‘ ಎಂದು ಮೋಹಿತ್ ’ಪ್ರಜಾವಾಣಿ‘ಯೊಂದಿಗೆ ಸಂತಸ ಹಂಚಿಕೊಂಡರು.

ಮೋಹಿತ್ ಗೌಡ

ಸಿ.ಬಿ. ಪೂವಣ್ಣ

ಭಾರತ ಜೂನಿಯರ್ ತಂಡವು ಎ ಗುಂಪಿನಲ್ಲಿದೆ. ಪಾಕಿಸ್ತಾನ, ಜಪಾನ್, ಥಾಯ್ಲೆಂಡ್ ಮತ್ತು ಚೈನಿಸ್ ತೈಪೆ ತಂಡಗಳೊಂದಿಗೆ ಪೈಪೋಟಿ ನಡೆಸಲಿದೆ.

ತಂಡ: ಫಾರ್ವರ್ಡ್ಸ್: ಉತ್ತಮ್ ಸಿಂಗ್ (ನಾಯಕ), ಬಾಬಿ ಸಿಂಗ್ ಧಾಮಿ (ಉಪನಾಯಕ), ಸುದೀಪ್ ಚಿರ್ಮಾಕೊ, ಅಂಗದ್ ವೀರ್ ಸಿಂಗ್, ಅರೈಜೀತ್ ಸಿಂಗ್ ಹುಂಡಾಲ್, ಆದಿತ್ಯ ಲಾಳಗೆ. ಗೋಲ್‌ಕೀಪರ್ಸ್: ಮೋಹಿತ್ ಗೌಡ, ಹಿಮವಾನ್ ಸಿಹಾಗ್. ಡಿಫೆಂಡರ್ಸ್: ಶಾರದಾನಂದ ತಿವಾರಿ, ರೋಹಿತ್ ಅಮನದೀಪ್ ಲಾಕ್ರಾ, ಅಮೀರ್ ಅಲಿ, ಯೋಗೆಂಬರ್ ರಾವತ್. ಮಿಡ್‌ಫೀಲ್ಡರ್ಸ್: ವಿಷ್ಣುಕಾಂತ ಸಿಂಗ್, ರಾಜಿಂದರ್ ಸಿಂಗ್, ಸಿ.ಬಿ. ಪೂವಣ್ಣ, ಅಮನದೀಪ್, ಸುನಿತ್ ಲಾಕ್ರಾ.

ಕಬಡ್ಡಿ: ಚುನಾವಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್ ಚುನಾವಣಾ ಅಧಿಸೂಚನೆಗೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಮೇ ತಿಂಗಳಿನಲ್ಲಿ ಚುನಾವಣೆ ನಡೆಸುವುದಾಗಿ ಫೆಡರೇಷನ್ (ಎಕೆಎಫ್‌ಐ) ಏಪ್ರಿಲ್ 22ರಂದು ಅಧಿಸೂಚನೆ ಹೊರಡಿಸಿತ್ತು. ಮತಚಲಾಯಿಸುವ ಸದಸ್ಯರ ಪಟ್ಟಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಮನೋಜನ್ ರಾಜನ್, ಸಿ. ಹೊನ್ನಪ್ಪ, ರಾಜಿರತ್ನಂ ಹಾಗೂ ಕೆ.ಪಿ. ರಾವ್ ಅವರು ರಿಟ್ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿ ಪುರಷೇಂದ್ರ ಕುಮಾರ್ ಕೌರವ್ ಅವರು ಮುಖ್ಯಸ್ಥರಾಗಿದ್ದ ನ್ಯಾಯಪೀಠವು ಈ ಅರ್ಜಿಯನ್ನು ಪರಿಶೀಲಿಸಿತು. ಕ್ರೀಡಾ ಚಟುವಟಿಕೆಯಲ್ಲಿ ಇಲ್ಲದ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಿರುವ ಕ್ರಮ ಮೇಲ್ನೋಟಕ್ಕೇ ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಪ್ರತಿವಾದಿಗಳಾದ ಎಕೆಎಫ್‌ಐಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠವು ಆದೇಶಿಸಿದೆ. ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಜುಲೈ 24ರವರೆಗೆ ಮುಂದೂಡಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಸಿ.ಮೋಹನ್ ರಾವ್ ಮತ್ತು ವಕೀಲ ಶ್ರವಣ್ ಕುಮಾರ್ ವಾದ ಮಂಡಿಸಿದರು.

ದೋಹಾ ಡೈಮಂಡ್ ಲೀಗ್ ಕೂಟದಲ್ಲಿ ಸ್ಪರ್ಧೆ ಇಂದು

ನೀರಜ್ ಚೋಪ್ರಾ ಮೇಲೆ ಚಿತ್ತ

ದೋಹಾ (ಪಿಟಿಐ): ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಶುಕ್ರವಾರ ನಡೆಯಲಿರುವ ದೋಹಾ ಡೈಮಂಡ್ ಲೀಗ್ ಕೂಟದ ಮೂಲಕ ಸ್ಪರ್ಧಾ ಋತು ಆರಂಭಿಸಲಿದ್ದು, ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

25 ವರ್ಷದ ಚೋಪ್ರಾ ಅವರು ‘ಡೈಮಂಡ್ ಲೀಗ್ ಚಾಂಪಿಯನ್’ ಆಗಿದ್ದುಕೊಂಡು ಸ್ಪರ್ಧಿಸಲಿರುವ ಮೊದಲ ಕೂಟ ಇದಾಗಿದೆ. ಕಳೆದ ಋತುವಿನಲ್ಲಿ ಡೈಮಂಡ್ ಲೀಗ್ ಕೂಟದ ಫೈನಲ್‌ನಲ್ಲಿ ಅವರು ಚಿನ್ನ ಗೆದ್ದಿದ್ದರು.

2022ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಜಯಿಸಿದ್ದಅವರಿಗೆ ಕತಾರ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯಲಿರುವ ಸ್ಪರ್ಧೆಯಲ್ಲಿ ವಿಶ್ವದ ಪ್ರಮುಖ ಅಥ್ಲೀಟ್‌ಗಳಿಂದ ಪ್ರಬಲ ಪೈಪೋಟಿ ಎದುರಾಗಲಿದೆ.

ಹಾಲಿ ವಿಶ್ವ ಚಾಂಪಿಯನ್ ಆಗಿರುವ ಗ್ರೆನೇಡಾದ ಆ್ಯಂಡರ್ಸನ್ ಪೀಟರ್ಸ್ ಮತ್ತು ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಜೆಕ್ ರಿಪಬ್ಲಿಕ್‌ನ ಯಾಕುಬ್ ವದ್ಲೇಚ್ ಅವರು ಕಣದಲ್ಲಿದ್ದಾರೆ.

ನೀರಜ್ ಚೋಪ್ರಾ

ಚೋಪ್ರಾ ಅವರು ದೋಹಾದಲ್ಲಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ 2018 ರಲ್ಲಿ ಮಾತ್ರ ಪಾಲ್ಗೊಂಡಿದ್ದರು. ಅಂದು 87.43 ಮೀ. ಸಾಧನೆಯೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡಿದ್ದರು. ಫಿಟ್‌ನೆಸ್ ಸಮಸ್ಯೆಯ ಕಾರಣ 2022ರ ಕೂಟದಲ್ಲಿ ಸ್ಪರ್ಧಿಸಿರಲಿಲ್ಲ.

ನೀರಜ್ ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನ 89.94 ಮೀಟರ್ ದೂರ ಆಗಿದೆ. ಪೀಟರ್ಸ್ ಮತ್ತು ವದ್ಲೇಚ್ ಅವರು ಕ್ರಮವಾಗಿ 93.07 ಮೀ. ಹಾಗೂ 90.88 ಮೀ. ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದ್ದಾರೆ. ವದ್ಲೇಚ್ ಅವರ ಸಾಧನೆ ಕಳೆದ ವರ್ಷ ಇದೇ ತಾಣದಲ್ಲಿ ಮೂಡಿಬಂದಿತ್ತು.

‘ಇದು ಈ ಋತುವಿನಲ್ಲಿ ನನ್ನ ಮೊದಲ ಸ್ಪರ್ಧೆಯಾಗಿದ್ದು, ಪ್ರಬಲ ಎದುರಾಳಿಗಳು ಇರುವುದು ಒಳ್ಳೆಯ ವಿಚಾರ’ ಎಂದು ಚೋಪ್ರಾ ಪ್ರತಿಕ್ರಿಯಿಸಿದ್ದಾರೆ.

‘ವದ್ಲೇಚ್ ಈ ಋತುವಿನಲ್ಲಿ ಈಗಾಗಲೇ 88.38 ಮೀ. (ಏ.18 ರಂದು ದಕ್ಷಿಣ ಆಫ್ರಿಕಾದಲ್ಲಿ ನಡೆದ ಸ್ಪರ್ಧೆ) ಸಾಧನೆ ಮಾಡಿದ್ದಾರೆ. ಆದ್ದರಿಂದ ಶುಕ್ರವಾರ ಪ್ರಬಲ ಪೈಪೋಟಿ ನಿರೀಕ್ಷಿಸುತ್ತಿದ್ದೇನೆ’ ಎಂದಿದ್ದಾರೆ.

ಈ ಋತುವಿನಲ್ಲಿ 90 ಮೀ. ದಾಟುವ ವಿಶ್ವಾಸವನ್ನು ಚೋಪ್ರಾ ಹೊಂದಿದ್ದಾರೆ.

ಟೈಗರ್ ಕಪ್ ಕ್ರಿಕೆಟ್: ಮಿಂಚಿದ ಅಖಿಲೇಶ್

ಬೆಂಗಳೂರು: ಅಖಿಲೇಶ್ ಪ್ರಧಾನ್ (93, 95 ಎ) ಅವರ ಉತ್ತಮ ಬ್ಯಾಟಿಂಗ್ ನೆರವಿನಿಂದ ಸೌತ್ ಕ್ರಿಕೆಟರ್ಸ್ ತಂಡ, ಟೈಗರ್ ಕಪ್ (12 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಗುರುವಾರ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ಮೇಲೆ 20 ರನ್‌ಗಳ ಜಯ ಪಡೆಯಿತು.

ಸ್ಕೋರುಗಳು: ಸೌತ್ ಕ್ರಿಕೆಟರ್ಸ್: 30 ಓವರುಗಳಲ್ಲಿ 5 ವಿಕೆಟ್‌ಗೆ 163 (ಅಖಿಲೇಶ್ ಪ್ರಧಾನ್ 93); ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ: 28.4 ಓವರುಗಳಲ್ಲಿ 143 (ಸಿದ್ಧಾರ್ಥ ರಾಮನಾರಾಯಣ್ 49; ಕೇಶವ್ ಅರುಣ್ 22 ಕ್ಕೆ4).

ಮಾವೆರಿಕ್ ಮಾಸ್ಟರ್ ಕ್ರಿಕೆಟ್ ಅಕಾಡೆಮಿ: 23 ಓವರುಗಳಲ್ಲಿ 6 ವಿಕೆಟ್‌ಗೆ 110 (ದೀಕ್ಷ ಎಸ್ 26); ಮಾಗಡಿ ಕ್ರಿಕೆಟ್ ಅಕಾಡೆಮಿ: 10.5 ಓವರುಗಳಲ್ಲಿ 2 ವಿಕೆಟ್‌ಗೆ 111 (ಸಂಜಿತ್ ಸತೀಶ್ 62, ಟಿ.ಕೆಶುವಾ 25, ನಿಹಾಲ್ ಖಾನ್ 12ಕ್ಕೆ2). ಮಾಗಡಿ ಕ್ರಿಕೆಟ್ ಅಕಾಡೆಮಿಗೆ 8 ವಿಕೆಟ್ ಜಯ.

ವಿಶ್ವ ಆರ್ಚರಿ: 10 ಫೈನಲ್‌ಗೆ ಭಾರತ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಏಷ್ಯಾಕಪ್ ಎರಡನೇ ಲೆಗ್ ವಿಶ್ವ ರ್‍ಯಾಂಕಿಂಗ್ ಆರ್ಚರಿಯಲ್ಲಿ ಭಾರತದ ಸ್ಪರ್ಧಿಗಳ ಪಾರಮ್ಯ ಮುಂದುವರಿದಿದ್ದು, ಎಲ್ಲ 10 ವಿಭಾಗಗಳಲ್ಲಿ ಫೈನಲ್ ಪ್ರವೇಶಿಸಿದ್ದು ಚಿನ್ನದ ಪದಕದ ಮೇಲೆ ಕಣ್ಣಿಟ್ಟಿದ್ದಾರೆ.

ಗುರುವಾರ ನಡೆದ ರಿಕರ್ವ್ ಮತ್ತು ಕಾಂಪೌಂಡ್ ಮಿಶ್ರ ತಂಡ ವಿಭಾಗಗಳಲ್ಲಿ ಭಾರತದ ಸ್ಪರ್ಧಿಗಳು ಪ್ರಶಸ್ತಿ ಸುತ್ತು ತಲುಪಿದರು. ರಿಕರ್ವ್ ವಿಭಾಗದ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಜೋಡಿ ಮೃಣಾಲ್ ಚೌಹಾಣ್– ಸಂಗೀತಾ ಅವರು 6–0 ರಲ್ಲಿ (37-32, 34-33, 36-34) ಹಾಂಕಾಂಗ್‌ನ ಎದುರಾಳಿಗಳನ್ನು ಮಣಿಸಿದರು.

ಚಿನ್ನದ ಪದಕಕ್ಕಾಗಿ ಶುಕ್ರವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡ, ಚೀನಾ ವಿರುದ್ಧ ಪೈಪೋಟಿ ನಡೆಸಲಿದೆ.

ಕಾಂಪೌಂಡ್ ಮಿಶ್ರ ವಿಭಾಗದ ನಾಲ್ಕರಘಟ್ಟದ ಹಣಾಹಣಿಯಲ್ಲಿ ಅಭಿಷೇಕ್ ವರ್ಮಾ– ಪರ್ಣೀತ್ ಕೌರ್ 152–151 ರಲ್ಲಿ ಇರಾಕ್ ತಂಡವನ್ನು ಸೋಲಿಸಿದರು.

ಏಕದಿನ ಕ್ರಿಕೆಟ್: ಪಾಕ್‌ಗೆ ಜಯ

ಕರಾಚಿ: ಪ್ರಮುಖ ಬ್ಯಾಟರ್‌ಗಳ ಉತ್ತಮ ಆಟದ ನೆರವಿನಿಂದ ಪಾಕಿಸ್ತಾನ ಬುಧವಾರ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 26 ರನ್‌ಗಳಿಂದ ಸೋಲಿಸಿತು. ಐದು ಪಂದ್ಯಗಳ ಸರಣಿಯಲ್ಲಿ ಪಾಕಿಸ್ತಾನ 3–0 ಯಿಂದ ಗೆಲುವಿನ ಮುನ್ನಡೆ ಪಡೆದಿದೆ.

ಆರಂಭ ಆಟಗಾರ ಇಮಾಮ್ ಉಲ್ ಹಕ್ (90, 107ಎ) ಮತ್ತು ನಾಯಕ ಬಾಬರ್ ಆಜಂ (54) ಅವರ ಕೊಡುಗೆಗಳ ನೆರವಿನಿಂದ ಪಾಕಿಸ್ತಾನ 6 ವಿಕೆಟ್‌ಗೆ 287 ರನ್ ಗಳಿಸಿತು. ವಿಕೆಟ್ ಕೀಪರ್ ಟಾಮ್ ಬ್ಲಂಡೆಲ್ (65) ಮತ್ತು ಕೊನೆಯಲ್ಲಿ ಕೋಲ್ ಮೆಕ್‌ಕೊಂಚಿಸ್ (ಅಜೇಯ 64) ಹೋರಾಡಿದರೂ ನ್ಯೂಜಿಲೆಂಡ್ 261 ರನ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು.